BROWN BOOK

TIGHT BINDING

UNIVERSAL
LIBRARY
OU_200497
UNIVERSAL
LIBRARY

ಶ್ರೀ ಗೋಸ್ವಾಮಿ—

# ಮಹಾತ್ಮಾ ತುಳಸೀದಾಸ.

ಲೇಖಕರು—

ಶಂಕರರಾವ ಕುಲಕರ್ಣಿ, ಸಾಲಿಗಿ.

ಪ್ರಕಾಶಕರು—

ಘೇ. ಪ. ಶಾಸ್ತ್ರಿ,

ವ್ಯ. ಶ್ರೀ ಕೇದಾರಾಚಲ ಗ್ರಂಥಮಾಲೆ,

[illegible]

ಫೆಬ್ರುವರಿ ೧೯೩೦

ಬೆಲೆ ೧॥ ರೂ.

# ಪ್ರಕಾಶಕನ ವಿಜ್ಞಾಪನೆ.

ಶ್ರೀ ಗೋಸ್ವಾಮಿ ಮಹಾತ್ಮಾ ತುಳಸೀದಾಸರ ಚರಿತ್ರೆಯ [illegible] ಮನೋಹರವಾದ ಈ ಪುಸ್ತಕವನ್ನು ನಮ್ಮ ಮಿತ್ರ ಶ್ರೀಯುತ ಅಣ್ಣಾಜಿ ಕುಲಕರ್ಣಿ ನೂಲ್ವಿ, ಇವರು ಬರೆದು ನಮ್ಮ ಶ್ರೀ [illegible] ಗ್ರಂಥಮಾಲೆಯಲ್ಲಿ ಪ್ರಸಿದ್ಧಿಪಡಿಸಲಿಕ್ಕಾಗಿ ಕೊಟ್ಟಿದ್ದಕ್ಕಾಗಿ [illegible] ಬಗ್ಗೆ ನಾವು ಇವರನ್ನು ಅತ್ಯಂತ [illegible] ರಾಮಾಯಣ ಮಾಹಾತ್ಮ್ಯ-ಲೋಕ [illegible] ಮಹಾಕವಿಗಳ ಹೃದ್ಗತವು [illegible] ಪುಸ್ತಕವನ್ನು ಹೇಗೆ [illegible] ಪಾತ್ರವಾದೀತೆಂಬ [illegible] ಆದುದರಿಂದಲೇ ಈ [illegible] ಬರೆದ ಎಲ್ಲ [illegible] ಗಳೂ ಚಿತ್ರೀಕರಿಸುವ ಕಲೆಗಳೂ ಲೋಕಾದರಕ್ಕೆ ಪಾತ್ರವಾಗಿರು[illegible]

ಸ್ವಯಂಸೇವ [illegible] ಮನೋಹರವಾಗಿರುವ ಈ ಬೋಧಪ್ರದ ಪುಸ್ತಕಕ್ಕೆ ಮಹಾತ್ಮರ ಹಾಗು ಇತರ ಮಹನೀಯ ಚಿತ್ರಗಳನ್ನು [illegible] ಮತ್ತಿಷ್ಟು ಮನೋಹರವಾಗುವಂತೆ ಪ್ರಯತ್ನಿಸಿರುತ್ತದೆ.

ಪ್ರಿಯ ಕನ್ನಡ ವಾಚಕರು ನಮ್ಮ ಗ್ರಂಥಮಾಲೆಯ ಈ ಹೊ[illegible] ಪುಸ್ತಕಗಳಿಗೆ ಉದಾರಾಶ್ರಯವನ್ನಿತ್ತಂತೆ, ಇದಕ್ಕೂ ಕೊಟ್ಟು ಸ[illegible] ಮಾಡಬೇಕೆಂದು ಕೋರುವೆನು.

ಆನಂದವನ, ತಾ|| ೧೦-೨-೩೦ ಪ್ರಕಾಶಕ

# ನಿವೇದನ.

—( ೦ )—

ಇದು ಜೀವನ ಚರಿತ್ರೆಯಲ್ಲ. ಮಹಾ ಭಗವದ್ಭಕ್ತನಾದ ತುಳಸೀದಾಸನ ಚರಿತ್ರೆಯು ಇದರಲ್ಲಿ ಕಾದಂಬರಿಯ ತೆರನಾಗಿ ವರ್ಣಿಸಲ್ಪಟ್ಟಿದೆ. ಇದರಲ್ಲಿ ಅನೇಕ ಪ್ರಸಂಗಗಳು ಮನೋರಂಜಕವೂ, ಬೋಧಪ್ರದವೂ ಆಗಿವೆ. ಆದದರಿಂದ ಈ ಪುಸ್ತಕವು ಸಾಮಾನ್ಯ ಜನರ ಪ್ರೀತಿಯನ್ನು ಸಂಪಾದಿಸುವದೆಂದು ನಂಬಿದ್ದೇನೆ.

ಇದು ಯಾವುದೊಂದು ಪುಸ್ತಕದ ಭಾಷಾಂತರವಲ್ಲ; ರೂಪಾಂತರವೂ ಅಲ್ಲ. ಬೇರೆ ಭಾಷೆಗಳಲ್ಲಿರುವ ಪುಸ್ತಕಗಳನ್ನೋದಿ, ಅವುಗಳಲ್ಲಿಯ ಕೆಲವು ಪ್ರಸಂಗಗಳನ್ನು ಆರಿಸಿಕೊಂಡು, ಸರಿದೋರಿದ ರೀತಿಯಲ್ಲಿ ಸಂವಿಧಾನಕ್ಕೆ ಹೊಂದಿಸಿದ್ದೇನೆ. ಹೇಗಾಗಿದೆಯೆಂಬುದನ್ನು ಹೇಳುವ ಕೆಲಸವು ನನ್ನದಲ್ಲ; ಅದು ನಿಷ್ಪಕ್ಷಪಾತರಾದ ವಾಚಕರ ಕೆಲಸವು.

ಭಕ್ತಿರಸಪ್ರಧಾನವಾದ ಹಾಗೂ ಆಸ್ತಿಕ ಬುದ್ಧಿಯಿಂದ ಬರೆಯಲ್ಪಟ್ಟ ಈ ಪುಸ್ತಕವು ವಾಚಕರ ಆದರಕ್ಕೆ ಪಾತ್ರವಾದರೆ, ಇಂಥ ಬೇರೆ ಒಂದೆರಡು ಪುಸ್ತಕಗಳನ್ನು ಬರೆಯುವ ಮನಸ್ಸಿದೆ.

[illegible], ತಾ|| ೨೮-೮-೧೯೩೭ ಶಂಕರರಾವ ಕುಲಕರ್ಣಿ.

# ಅನುಕ್ರಮಣಿಕೆ.


| | ವಿಷಯ | ಪುಟ |
|---|---|---|
| ೧ | ವರಪ್ರದಾನ | ೧ |
| ೨ | ವಿವಾಹ | ೧೦ |
| ೩ | ಗೃಹಸ್ಥಾಶ್ರಮ | ೨೪ |
| ೪ | ಅದೊಂದು ವೇಳೆ | ೩೭ |
| ೫ | ಕಾಶಿಯಲ್ಲಿ | ೫೦ |
| ೬ | ಸಾಧನೆ | ೫೮ |
| ೭ | ಮಾರ್ಗದಲ್ಲಿ | ೭೧ |
| ೮ | ಪತಿವಿರಹಿಣಿಯಾದ ಸತಿ | ೭೮ |
| ೯ | ವಿವಿಧತೆಯಲ್ಲಿ ಏಕತ್ವ | ೮೯ |
| ೧೦ | ದೇಶಾಂತರದಲ್ಲಿ ಶ್ರೀರಾಮ | ೯೬ |
| ೧೧ | ಉದ್ಧಾರ | ೧೦೯ |
| ೧೨ | ಮಾರುತಿಯ ಮಂದಿರದಲ್ಲಿ | ೧೨೧ |
| ೧೩ | ರಾಮಾಯಣ ರಚನೆ | ೧೩೨ |
| ೧೪ | ಸಾಧಕರು | ೧೪೨ |
| ೧೫ | ಪುನರ್ಜೀವನ | ೧೪೭ |
| ೧೬ | ಪತಿತಪಾವನ | ೧೫೪ |
| ೧೭ | ಸೇರಿಗೆ ಸವ್ವಾಸೇರು | ೧೬೮ |
| ೧೮ | ಮಹಾತ್ಮಾ | ೧೭೮ |
| ೧೯ | ಪರೀಕ್ಷೆ | ೧೯೨ |
| ೨೦ | ಉಪಸಂಹಾರ | ೨೦೫ |

ಚಿತ್ರಗಳು:— ೧ ಶ್ರೀ ಗೋಸ್ವಾಮಿ ಮಹಾತ್ಮಾ ತುಳಸೀದಾಸ
೨ ರತ್ನಾವಳಿ (ಮೂರು ಬಣ್ಣದ್ದು)



ಶ್ರೀ ಗೋಸ್ವಾಮಿ ಮಹಾತ್ಮಾ ತುಳಸೀದಾಸ.

C. S. P. P.

ಶ್ರೀ ಗೋಸ್ವಾಮೀ-

# ಮಹಾತ್ಮಾ ತುಳಸೀದಾಸ.

## ೧ ವರಪ್ರದಾನ.

ಪ್ರಯಾಗವು ಹಿಂದೂಜನರ ಪರಮ ಪವಿತ್ರ ಕ್ಷೇತ್ರವು. ತ್ರಿವೇಣೀ ಸಂಗಮ ಸ್ಥಾನವು. ತವರು ಮನೆಯಾದ ಹಿಮಗಿರಿಯಿಂದ ಪತಿ ಕುಲವನ್ನು ಸೇರ ಬಯಸಿ, ಭಿನ್ನ ಮಾರ್ಗಗಳಿಂದ ಭರದಿಂದ ಹೊರಟ ಶ್ವೇತ ವಸನೆಯಾದ ಗಂಗೆಯೂ, ಕಪ್ಪು ಬಣ್ಣದ ಬಟ್ಟೆಯನ್ನುಟ್ಟಿದ್ದ ಯಮುನೆಯೂ ಬಹು ದಿವಸಗಳ ತರುವಾಯ ದಣಿದವರಾಗಿ ಈ ಸ್ಥಾನದಲ್ಲಿ ಮಿಲಿತರಾಗಿರುತ್ತಾರೆ. ಅಕ್ಕ-ತಂಗಿಯರ ಈ ಮಿಲನಕ್ಕೆ ಸಾಕ್ಷಿಯ ಅವಶ್ಯಕತೆಯೇನೂ ಇರಲಿಲ್ಲ; ಆದರೆ ಭಿನ್ನ ಭಿನ್ನ ವರ್ಣಗಳ ಹಾಗು ಬೇರೆ ಬೇರೆ ಗುಣಗಳ ಈ ಸಹೋದರಿಯರ ಬಂದ ಗೂಡುವಿಕೆಗೆ ಸಾಕ್ಷಿಸ್ವರೂಪಳಾಗಿ ರಕ್ತಾಂಬರೆಯಾದ ಸರಸ್ವತಿಯೂ ಈ ಸ್ಥಾನದಲ್ಲಿ ಸಮ್ಮಿಲಿತಳಾಗಿದ್ದಾಳೆ. ಹೀಗೆ ಮೂರು ಪವಿತ್ರ ಜಲಪ್ರವಾಹಗಳ ಏಕೀಕರಣದಿಂದ ಪವಿತ್ರತಮವಾದ ಈ ಕ್ಷೇತ್ರವು ಕೇವಲ ಮಾನವರಿಗಷ್ಟೇ ಅಲ್ಲ; ದೇವತೆಗಳಿಗೂ ಕಾಮ್ಯವಾದುದು. ಯಾಕೆಂದರೆ, ಸ್ವರ್ಗದಲ್ಲಿ ಪುಣ್ಯನಾಶವಲ್ಲದೆ ಸಂಚಯವಿಲ್ಲ. ಪಾಪನಾಶನವಿಲ್ಲ. ದೇವತೆಗಳು ಗಳಿಸಿಕೊಂಡು ಹೋಗಿದ್ದ ಪುಣ್ಯ ಫಲಗಳನ್ನು ಉಪಭೋಗಿಸಿ, ಪುಣ್ಯವು ತೀರುತ್ತಲೇ ಭೂಮಿಗಿಳಿಯಬೇಕಲ್ಲದೆ, ಅಹರಹ ಘಟಿಸುತ್ತಿರುವ ಪಾಪಗಳನ್ನು ಕಳೆದು

ಕೊಂಡು ಮತ್ತಷ್ಟು ಪುಣ್ಯವನ್ನು ಗಳಿಸಿಕೊಂಡು ಹೆಚ್ಚಿನ ಫಲವನ್ನು ಪಡೆಯುವ ಅನುಕೂಲತೆಯನ್ನು ಹೊಂದಿದವರಲ್ಲ. ಆದುದರಿಂದ ದೇವತೆಗಳು ತಮಗಿರದ ಅನುಕೂಲತೆಯನ್ನು ಮಾನವರು ಭೂಲೋಕದಲ್ಲಿ ಈ ತ್ರಿವೇಣೀ ಸಂಗಮದ ಮುಖಾಂತರ ಹೊಂದಿರುವದನ್ನು ನೋಡಿ ಅಸೂಯೆಗೊಳ್ಳುತ್ತಿರುವರು; ಮತ್ತು ಮಾನವರಾಗಿ ಭೂಮಿಯಲ್ಲಿ ಅವತರಿಸುವ ಉತ್ಕಟೇಚ್ಛೆಯನ್ನು ತಳೆಯುತ್ತಿರುವರು.

ದವನದ ಹುಣ್ಣಿವೆಯ ಮಹಾ ಪರ್ವಣಿಯ ಸಮಯವು ಸಮೀಪಿಸಿದೆ. ಸಮೀಪದ ಹಾಗು ದೂರದ ಅಸಂಖ್ಯ ನರನಾರಿಯರು ತ್ರಿವೇಣೀ ಸಂಗಮದ ಸ್ನಾನಕ್ಕೋಸುಗ ಹೊರಟಿದ್ದಾರೆ. ಕೆಲವರು ಯಾನ-ವಾಹನಗಳನ್ನೇರಿ ನಡೆದಿದ್ದಾರೆ; ಬೇರೆ ಹಲವರು ನಡೆಯುತ್ತ ಸಾಗಿದ್ದಾರೆ. ಇನ್ನು ಕೆಲವರು ದೋಣಿಗಳನ್ನೇರಿ ಜಲಮಾರ್ಗದಿಂದ ಪ್ರಯಾಣ ಬಳಿಸಿದ್ದಾರೆ ಮಾರ್ಗಗಳು ಯಾನ-ವಾಹನಗಳಿಂದಲೂ ಜನರಿಂದಲೂ ಕಿಕ್ಕಿರಿದು ಹೋಗಿವೆ ನದಿಗಳ ಪಾತ್ರಗಳು ದೋಣಿಗಳಿಂದ ತುಂಬಿವೆ. ಎಲ್ಲಿ ನೋಡಿದರೂ ಗದ್ದಲವೇ ಗದ್ದಲ!

ಧರ್ಮಸಂಸ್ಥಾಪನೆಯ ಮಹತ್ಕಾರ್ಯದಲ್ಲಿ ಕೀರ್ತಿಶಾಲಿಯಾಗಿ ಪ್ರಖ್ಯಾತನಾಗಿದ್ದ ಬಾಬಾನಾನಕನು ತ್ರಿವೇಣೀ ಸಂಗಮಕ್ಕೆ ತುಸ ದೂರದಲ್ಲಿ ಗಂಗೆಯ ದಡದಲ್ಲಿ ಶಿಷ್ಯಸಮೇತ ವಾಸಿಸಿದ್ದಾನೆ. ಸಮೀಪದಲ್ಲಿಯೇ ಪುರಾತನ ಕಾಲದ ಒಂದು ವಟವೃಕ್ಷ. ರಾತ್ರಿಯ ಕಡೆಯ ಪ್ರಹರದ ಕೊನೆಯ ಸಮಯ. ಸೂರ್ಯನ ಆಗಮನವನ್ನು ಸಾರಿ ಹೇಳುವ ಉಷೆಯು ಪ್ರಪಂಚದಲ್ಲಿ ಕಾಣಿಸಿಕೊಳ್ಳುವುದರಲ್ಲಿದ್ದಳು. ಈ ಸಂಧಿಕಾಲದಲ್ಲಿ ಬಾಬಾನಾನಕನು ಶಿಷ್ಯ ಪರಿವೃತನಾಗಿ ಕುಳಿತಿದ್ದನು. ಶಿಷ್ಯರು ಜಪಜಿ(ಶೀಖರ ಧರ್ಮ ಗ್ರಂಥ)ಯಲ್ಲಿಯ ಸ್ತೋತ್ರಗಳನ್ನು ಪಠಿಸುತ್ತಿದ್ದರು. ನಾನಕನು ತನ್ನಿಂದಲೆ ರಚಿತವಾಗಿದ್ದ ಈ ಈಶಸ್ತುತಿಯ ಪದಗಳನ್ನು ಕೇಳುತ್ತ ಶಾಂತವಾಗಿದ್ದ ಪ್ರಕೃತಿದೇವಿಯ ಕಡೆಗೆ ನೋಡುತ

ಲಿದ್ದನು. ಹೀಗೆ ನೋಡುತ್ತಿದ್ದ ನಾನಕನಿಗೆ ನಡುನದಿಯಲ್ಲಿ ಯಾವುದೋ ಒಂದು ಪದಾರ್ಥವು ತೇಲಿಹೋಗುತ್ತಿರುವುದು ಕಂಡು ಬಂತು. ನಾನಕನು ಹೊಳೆಯ ಕಡೆಗೆ ಕೈ ಮಾಡಿ ತೋರಿ, ಶಿಷ್ಯರನ್ನು ಕುರಿತು:—"ಅಲ್ಲಿ ನೋಡಿರಿ, ಏನೋ ತೇಲಿ ಹೋಗುತ್ತದೆ" ಎಂದನು. ಸ್ತೋತ್ರಪಠಣವು ನಿಂತಿತು. ಎಲ್ಲರೂ ನದಿಯ ಕಡೆಗೆ ನೋಡಹತ್ತಿದರು.

ಮುಖ್ಯ ಶಿಷ್ಯನಾದ ಲಹನಾನು ಗುರುವಿಗೆ ಕೈಮುಗಿದು "ಅಪ್ಪಣೆಯಾದರೆ, ಹೋಗಿ ನೋಡಿ ಬರುವೆನು" ಎಂದು ಬಿನ್ನಯಿಸಿಕೊಂಡನು.

"ಆ ಪದಾರ್ಥವು ದಂಡೆಯಲ್ಲಿಲ್ಲ. ನಡುನದಿಯಲ್ಲಿ ಸಾಗಿಹೋಗುತ್ತಿದೆ. ಸದ್ಯಃ ಪ್ರಕೃತಿದೇವಿಯು ಶಾಂತಳಿದ್ದರೂ, ಗತರಾತ್ರಿಯ ಬಿರುಗಾಳಿಯನ್ನು ಜ್ಞಾಪಕಕ್ಕೆ ತಂದರೆ, ಈಗಲೂ ಹೊಳೆಯಲ್ಲಿ ಈಜಬೀಳಿಕ್ಕೆ ಮುಂದರಿವುದು ಸಮಂಜಸವೆನಿಸಲಿಕ್ಕಿಲ್ಲ!" ನಾನಕನು ಹೇಳಿದನು.

ಮಹಾರಾಜ, ಅದು ಏನೇ ಇರಲಿ, ತಮ್ಮ ಅಪ್ಪಣೆಯಾದರೆ ತೀರಿತು! ತಮ್ಮ ಆಜ್ಞಾಪಾಲನೆಯಲ್ಲಿ ಬಾಹ್ಯ ಎಡರುಗಳನ್ನು ಲೆಕ್ಕಿಸುವವನು ನಾನಲ್ಲ! ಲಹಾನನು ನುಡಿದನು.

ನಾನಕ:—ಅದು ಅರಿವೆಯಲ್ಲಿ ಮುಚ್ಚಿ ಹೋಗಿದ್ದ ಶವವಾಗಿ ತೋರುತ್ತಿದೆ!

ಲಹನಾ:—ಇರಬಹುದು.

ನಾನಕ:—ಅದು ಹೆಣವಾಗಿದ್ದರೆ, ನಿಮ್ಮಲ್ಲಿಯ ಯಾವನಾದರೂ ಅದನ್ನು ತಿನ್ನಬಹುದೆ? ನಿಮ್ಮಿಂದ ಆ ಶವವನ್ನು ತಿನ್ನಿಸಬೇಕೆಂಬ ಇಚ್ಛೆಯು ನನಗುಂಟಾಗಿದೆ!

ಶಿಷ್ಯರು ಆಶ್ಚರ್ಯಚಕಿತರಾಗಿ ಹೋದರು. ಗುರುವಿನ ಇಂಗಿತವನ್ನರಿಯದೆ, ನದಿಯ ಕಡೆಗಿದ್ದ ದೃಷ್ಟಿಯನ್ನು ತಿರುಗಿಸಿ, ಗುರುವನ್ನು ಟಕಮಕ ನೋಡಹತ್ತಿದರು. ನಾನಕನು ಶಿಷ್ಯರ ಮನೋವೃತ್ತಿಯನ್ನರಿತು ಮಂದಹಾಸವನ್ನು ತಳೆದನು.

ಮಹಾರಾಜ, ತಮ್ಮ ಅಪ್ಪಣೆಯನ್ನು ಅಕ್ಷರಶಃ ಪಾಲಿಸುವುದು ನನ್ನ ಕರ್ತವ್ಯವು. ಇದೋ ಹೊರಟೆನು, ಎಂದಂದು ಲಹನಾನು ಎದ್ದು ನಡೆದನು. ನದಿಯಲ್ಲಿ ಹಾರಿಕೊಂಡನು. ತೆರೆಗಳ ಪ್ರಚಂಡ ಆಘಾತವನ್ನು ಲೆಕ್ಕಿಸದೆ, ಭರದಿಂದ ಈಜಿ ಹೋಗಿ, ಆ ಪದಾರ್ಥವನ್ನು ಹಿಡಿದನು. ತನ್ನ ಪ್ರಚಂಡ ಶಕ್ತಿಯಿಂದ ಆ ಪದಾರ್ಥವನ್ನು ಎಳೆಯುತ್ತ ಸಾಗಿ, ದಂಡೆಯನ್ನು ಸೇರಿದನು. ಮೂಟೆಯನ್ನು ಹೊತ್ತು ತಂದು ಗುರುವಿನ ಮುಂದಿರಿಸಿ ನಮಸ್ಕಾರ ಮಾಡಿದನು. ಉಳಿದ ಶಿಷ್ಯರು ಕುತೂಹಲದಿಂದ ಆ ಗಂಟನ್ನು ನೋಡುತಲಿದ್ದರು.

ಲಹಾನನು ಗುರುವಿನ ಅನುಜ್ಞೆಯಂತೆ ಮೇಲಿನ ಬಟ್ಟೆಯನ್ನು ಬಿಚ್ಚಿದನು. ಎಲ್ಲರೂ ಆಶ್ಚರ್ಯಚಕಿತರಾಗಿ ನೋಡಿದರು. ಒಳಗೆ ಶವವಿರದೆ, ಸುಂದರವಾದ ಬೆಳ್ಳಿಯ ಪಾತ್ರೆಯಲ್ಲಿ ಉತ್ತಮವಾದ ಪಕ್ವಾನ್ನಗಳ ಸಂಗ್ರಹವಿತ್ತು. ಗುರುವಿನ ಅಗಾಧವಾದ ಶಕ್ತಿಯಿಂದ ಹೆಣವು ಸವಿಯೂಟದಲ್ಲಿ ರೂಪಾಂತರಿತವಾಗಿರುವುದನ್ನರಿತ ಶಿಷ್ಯವೃಂದದ ವಿಸ್ಮಯಕ್ಕೆ ಮೇರೆಯಿಲ್ಲದಾಯಿತು. ಅವರು ಗುರುವಿನ ಮೋರೆಯ ಕಡೆಗೆ ನೋಡಿದರು. ಶಾಂತವಾದ ಮುಖದಲ್ಲಿ ಮಿನುಗುವ ಎಳೆನಗೆಯನ್ನು ನೋಡಿ, ಪರೀಕ್ಷೆಯಲ್ಲಿ ಅನುತ್ತೀರ್ಣರಾದೆವೆಂದು ಭಾವಿಸಿದ ಅವರು ಲಜ್ಜೆಯಿಂದ ತಲೆಬಾಗಿದರು. ನಾನಕನು ಸ್ನೇಹಭರದಿಂದ ಲಹನಾನನ್ನು ಮುಂದೆ ಕರೆದು ಮೈಮೇಲೆ ಕೈಯಾಡಿಸಿ:-ಪ್ರಿಯಶಿಷ್ಯನೆ, ನಿನ್ನ ಗುರುಭಕ್ತಿಯನ್ನು ನೋಡಿ ನನಗೆ ಪರಮಾನಂದವಾಯಿತು. ಇಂದಿನಿಂದ ನಾನು ನಿನ್ನನ್ನು ಅಂಗದನೆಂದು ಕರೆಯುವೆನು. ಯಾಕಂದರೆ, ನೀನು ನನ್ನ ಅಂಗಸ್ವರೂಪನು! ಅಂದನು

ಅಂಗದನು ಗುರುವಿನ ಚರಣಗಳ ಮೇಲೆ ಹಣೆಯಿರಿಸಿ, ಭಕ್ತಿಭರದಿಂದ ವಂದಿಸಿದನು. ನಾನಕನು ಅವನನ್ನು ಹಿಡಿದೆತ್ತಿ:-ಅಂಗದ, ಅಲ್ಲಿ ನೋಡು. ಮತ್ತೆ ಯಾವುದೋ ವಸ್ತುವು ತೇಲಿ ಬರುತ್ತಿದೆ. ನಿನ್ನಿನ

ರಾತ್ರಿಯ ಬಿರುಗಾಳಿಯೂ ಬಹು ಭಯಂಕರವಾದುದು! ಎಷ್ಟು ದೋಣಿಗಳು ಮುಳುಗಿದವೋ ಏನೋ! ಎಷ್ಟು ಜನರು ಜಲಸಮಾಧಿಯನ್ನು ಹೊಂದಿರಬೇಕೆಂಬುದರ ಗಣನೆಯನ್ನು ಮಾಡುವವರಾರು? ಎಂದು ಅಂದನು.

'ಮಹಾರಾಜ, ಇದೂ ಒಂದು ಶವವೆ! ಆದರೆ ದೂರವಾಗಿಲ್ಲ. ತೀರಕ್ಕೆ ತೀರ ಸನಿಯದಲ್ಲಿದೆ.' ಲಹನಾನು ನುಡಿದನು.

'ಅಲ್ಲ. ಅದು ಶವವಲ್ಲ. ಸಾಗಿಬರುತ್ತಿರುವ ಆ ದೇಹದಲ್ಲಿ ಇನ್ನೂ ಪ್ರಾಣವಿದೆ. ಹೆಂಗಸು, ತರುಣಿ, ದಿಗಂಬರಳಾಗಿದ್ದಾಳೆ. ಭಾಯಿ ಬಾಲಾ, ನೀನು ಹೋಗಬೇಡ. ಮರ್ದಾನಾ, ನೀನೂ ಬೇಡ. ಯುವತಿಯರನ್ನು ನೀವು ಮುಟ್ಟದಿರುವದೇ ಒಳ್ಳೇದು! ಅಂಗದ, ನೀನು ಹೋಗು; ಧಡಕ್ಕೆತ್ತಿಕೊಂಡು ಬಾ. ಆರೈಕೆ ಮಾಡಿ ಅವಳ ಪ್ರಾಣವನ್ನುಳಿಸು!' ನಾನಕನು ಹೇಳಿದನು.

ಅಂಗದನು ಗುರುವಿನ ಅಪ್ಪಣೆಯಾಗುತ್ತಲೆ ಮತ್ತೆ ನದಿಯಲ್ಲಿ ಹಾರಿಕೊಂಡನು. ಈಜುತ್ತ ಹೋಗಿ, ಆ ಪದಾರ್ಥವನ್ನು ಹಿಡಿದು, ದಂಡೆಗೆ ತಂದನು. ಅದನ್ನು ತೀರದಲ್ಲಿ ಮಲಗಿಸಿ, ತನ್ನ ಉತ್ತರೀಯವನ್ನು ಹೊಚ್ಚಿ ನೋಡಿದನು. ಆ ರಮಣಿಯ ದೇಹದಲ್ಲಿ ಪ್ರಾಣವಿದ್ದ ಯಾವ ಲಕ್ಷಣವೂ ತೋರಲಿಲ್ಲ; ಆದರೆ ಅವನು ಗುರುವು ದೇಹದಲ್ಲಿ ಜೀವವಿದೆಯೆಂದು ನಿಶ್ಚಿತವಾಗಿ ಹೇಳಿದ್ದನ್ನು ಮರೆತಿರಲಿಲ್ಲ. ಅಘಟಿತ ಘಟನೆಗಳನ್ನು ಘಟಿಸುವ ಅಗಾಧ ಶಕ್ತಿಯುಳ್ಳ ಗುರುವಿನ ಚರಣಗಳಿಗೆ ಮನದಲ್ಲಿಯೇ ವಂದಿಸಿ, ಅಂಗದನು ಆ ಅಂಗನೆಯ ಶುಶ್ರೂಷಣೆಯನ್ನಾರಂಭಿಸಿದನು. ಅವನಲ್ಲಿ ದ್ವೈತಭಾವನೆಯಿರಲಿಲ್ಲ; ಸಂಕೋಚವಿರಲಿಲ್ಲ. ಬಾಲಕನು ಹಡೆದವ್ವನ ಸೇವೆಗೈವಂತೆ ಅಂಗದನು ಆ ರಮಣಿಯ ಆರೈಕೆ ಮಾಡಿದನು. ಕೆಲಹೊತ್ತಿನಮೇಲೆ ಆ ಹೆಂಗಸು ಚೇತನಗೊಳ್ಳಹತ್ತಿದಳು! ಅಂಗದನಿಗೆ ಆನಂದವಾಯಿತು. ಅವನು ಹೆಚ್ಚು ಹುರುಪಿನಿಂದ ಉಪಚಾರಮಾಡಿ

ದನು. ತುಸಹೊತ್ತಿನ ಮೇಲೆ ಆ ಯುವತಿಯು ಪೂರ್ಣವಾಗಿ ಎಚ್ಚತ್ತು ಎದ್ದು ಕುಳಿತಳು. ಅಂಗದನು ಹೊಚ್ಚಿದ್ದ ಉತ್ತರೀಯವನ್ನು ಸರಿಯಾಗಿ ಉಟ್ಟುಕೊಂಡು, ತನ್ನ ಜನ್ಮದಾತನಿಗೆ ನಮಸ್ಕಾರಮಾಡಿದಳು.

ಅಮ್ಮಾ, ನಿನ್ನ ಈ ಪುನರ್ಜನ್ಮಕ್ಕೆ ಕಾರಣನು ನಾನಲ್ಲ! ನಿನಗೆ ಜೀವದಾನವನ್ನಿತ್ತ ಮಹಾತ್ಮನು ಬೇರೊಬ್ಬನಿದ್ದಾನೆ. ಅದೊ, ಆ ವಟ ವೃಕ್ಷವು ಕಾಣುತ್ತದೆಯಲ್ಲ; ಆ ಆಲದ ಮರದಡೆಯಲ್ಲಿ ಅಗಾಧಶಕ್ತಿಯ ಆ ಮಹನೀಯನು ವಿಶ್ರಮಿಸಿದ್ದಾನೆ. ನಾನು ಆ ಪರಮಯೋಗಿಯ ದಾಸಾನುದಾಸನು ಮಾತ್ರ! ಲಹನಾನು ಹೇಳಿದನು.

ಅವನು ಯಾರು? ಆ ಹೆಂಗಸು ಕೇಳಿದಳು.

ಧರ್ಮದ ಹೆಸರಿನಿಂದ ಒಡೆದಾಡುತ್ತಿರುವ ವಿಚಾರಹೀನ ಹಿಂದೂ ಮುಸಲ್ಮಾನರಲ್ಲಿ ವಿಚಾರಜಾಗ್ರತೆಯನ್ನುಂಟುಮಾಡಿ, ಜಗತ್ತಿನ ಉದ್ಧಾರ ಮಾಡಬೇಕೆಂದು ಅವತರಿಸಿ ಬಂದ ನಾನಕನು. ಲಹನಾನು ಹೇಳಿದನು.

ಯುವತಿಯು ಬ್ರಾಹ್ಮಣ ಜಾತಿಯವಳು. ದೊಡ್ಡ ಮನೆತನದವಳು. ಅವಳ ಹೆಸರು ಹುಲಸೀದೇವಿ ಈ ಕಾಲದಲ್ಲಿ ಬಾಬಾ ನಾನಕನು ಉತ್ತರ ಹಿಂದುಸ್ಥಾನದಲ್ಲೆಲ್ಲ ಪ್ರಸಿದ್ಧನು. ಲೋಕೋಪಕಾರಕ್ಕೋಸುಗ ಸಂಚರಿಸುತ್ತಿದ್ದ ಈ ಮಹನೀಯನು ತನ್ನ ಅಸಾಧಾರಣ ಶಕ್ತಿಯಿಂದ ಸಾಮಾನ್ಯರಿಗೆ ಅಸಾಧ್ಯವಾದ ಅನೇಕ ಲೀಲೆಗಳನ್ನು ತೋರಿರುವದನ್ನು ಹಲವರು ಕಂಡವರಾಗಿದ್ದರು ಅನೇಕರು ಕರ್ಣೋಪಕರ್ಣವಾಗಿ ಕೇಳಿಕೊಂಡವರಾಗಿದ್ದರು ಹುಲಸೀದೇವಿಯು ಈ ವರೆಗೆ ನಾನಕನನ್ನು ಕಂಡವಳಾಗಿರದಿದ್ದರೂ, ಅವನ ಹೆಸರನ್ನೂ ಅದ್ಭುತಕಾರ್ಯಶಕ್ತಿಯನ್ನೂ ಕೇಳಿದವಳಾಗಿದ್ದಳು. ಕಾರಣ ಅವಳು ಸಮೀಪದಲ್ಲಿ ನಾನಕನಿರುವದನ್ನೂ, ತನ್ನ ಈ ಪುನರ್ಜನ್ಮಕ್ಕೆ ಅವನೇ ಕಾರಣನಾಗಿರುವದನ್ನೂ ಕೇಳಿ ಆನಂದಿತಳಾಗಿ, ಅಂಗದನು ತೋರಿದ ಆ ವಟವೃಕ್ಷದ ಕಡೆಗೆ ನಡೆದಳು. ನಾನಕನ ಹತ್ತಿರ ಹೋಗಿ, ಸಾಷ್ಟಾಂಗ ನಮಸ್ಕಾರಮಾಡಿದಳು.

ಅಮ್ಮಾ, ಏಳು. ಪುತ್ರವತಿಯಾಗಿ ಬಹು ಕಾಲ ದಾಳು. ನಾನಕನು ಆಶೀರ್ವಾದ ಮಾಡಿದನು.

ಹುಲಸೀದೇವಿಯು ಎದ್ದು ಕುಳಿತಳು. ನಾನಕನ ಮುಖದ ಕಡೆಗೆ ನೋಡುತ್ತ:— ಬಾಬಾ, ಆ ಸೌಭಾಗ್ಯವು ನನಗೆಲ್ಲಿ? ನಾನು ಬಹು ದುಃಖಿನಿಯು! ಅಂದಳು. ಅವಳ ಕಣ್ಣುಗಳಿಂದ ಅಶ್ರುಗಳು ಸುರಿಯು ಹತ್ತಿದವು.

ಅಮ್ಮಾ, ಅಳದೇಡ ಮಹಾಮಹಿಮನಾದ ಭಗವಂತನು ಯಾವ ಕಾಲಕ್ಕೆ ಯಾವ ಸಂಗತಿಯನ್ನೊದಗಿಸುವನೆಂಬುದರ ನಿಯಮವಿಲ್ಲ. ಆ ಪರಮೇಶ್ವರನು ನನ್ನ ಮುಖದಿಂದ ನಿನಗೆ ಆಶೀರ್ವಾದ ಮಾಡಿಸಿದ್ದಾನೆ. ನೀನದರಲ್ಲಿ ನಂಬುಗೆಯನ್ನಿರಿಸಿ ನಿಶ್ಚಿಂತಳಾಗಿರು. ನಾನಕನು ಹೇಳಿದನು.

ಮಹನೀಯರೆ, ನಾನು ನಿಮ್ಮ ಖ್ಯಾತಿಯನ್ನು ಅರಿಯದವಳಲ್ಲ. ನಿಮ್ಮ ವಚನವು ಅನ್ಯಥಾ ಎಂದೂ ಆಗದು! ಈ ವಿಶ್ವಾಸವು ನನಗಿದ್ದರೂ, ನನ್ನ ಮನಸ್ಸಿನ ದುಗುಡವು ಹೋಗಲೊಲ್ಲದು; ಸಂದೇಹವು ಅಳಿಯು ಲೊಲ್ಲದು! ಇಂದಿನ ಪರ್ವಣಿಯ ಸುಸಮಯದಲ್ಲಿ ತ್ರಿವೇಣೀ ಸಂಗಮದ ಸ್ನಾನಕ್ಕೆಂದು ಹೊರಟ ನಾವು, ನಿನ್ನಿನ ರಾತ್ರಿಯ ಬಿರುಗಾಳಿಯ ಹೊಡತ ದಲ್ಲಿ ಜಲಸಮಾಧಿಯನ್ನು ಹೊಂದಿದೆವು; ಆದರೆ ನಾನು ಭಗವಂತನ ಆಶ್ಚರ್ಯವಾದ ಲೀಲೆಯಿಂದಲೂ, ತಮ್ಮ ಕೃಪಾದೃಷ್ಟಿಯಿಂದಲೂ ಪುನರ್ಜನ್ಮ ಹೊಂದಿ ಇಲ್ಲಿರುವೆನು! ಇವರ ಅವಸ್ಥೆ ಏನಾಯಿತೋ ಏನೋ! ಅಶುಭದ ಕಲ್ಪನೆಯಿಂದ ಮನಸ್ಸು ತಳಮಳಿಸಿ ಹೋಗಿದೆ! ಈ ಸಮಯ ದಲ್ಲಿ ನೀವೇ ನನ್ನ ಮಾರ್ಗದರ್ಶಕರು ನನಗೆ ಏನೂ ತೋಚದಾಗಿದೆ! ಹುಲಸೀದೇವಿಯು ನುಡಿದಳು.

ಅಮ್ಮಾ, ಮಹಾತ್ಮರ ವಚನದಲ್ಲಿ ಸಂದೇಹಗೊಳ್ಳುವೆಯಾ? ಗುರು ಗಳ ವಚನವು ಸರ್ವಥಾ ಸುಳ್ಳಾಗದು! ಒಬ್ಬ ಶಿಷ್ಯನು ಹೇಳಿದನು.

ಅಮ್ಮಾ, ನಿನ್ನಿನ ಬಿರುಗಾಳಿಯ ವಿಪತ್ತಿನಿಂದ ನೀನು ಹೇಗೆ

ಪಾರಾಗಿರುವೆಯೋ, ಹಾಗೆಯೇ ನಿನ್ನ ಪತಿಯೂ ಸುರಕ್ಷಿತನಾಗಿರುವನು. ನೀನು ನಿಶ್ಚಿಂತಳಾಗಿ ಮನೆಗೆ ಹೋಗು. ಮತ್ತೊಂದು ಮಾತೆಂದರೆ, ನಿನ್ನುದರದಲ್ಲಿ ಜನಿಸುವ ಎರಡನೆಯ ಮಗನು ಮಹಾ ಭಗವದ್ಭಕ್ತನಾಗಿ ನಿನ್ನ ಕುಲಕೋಟಿಯನ್ನುದ್ಧರಿಸುವನು. ಇಂಥ ಪುತ್ರನ ಜನ್ಮದಾತೆಯಾಗುವುದು ಬಹು ಸುಕೃತದ ಸಂಗತಿಯು. ನಾರದನು ಹೇಳಿದನು.

ನನ್ನ ಈ ವಿಪತ್ತಿನ ವೇಳೆಯಲ್ಲಿ ತಮ್ಮ ದರ್ಶನವಾದುದು ಪರಮ ಸೌಭಾಗ್ಯದ ಸಂಗತಿಯಾಗಿದೆ. ತಮ್ಮ ಶುಭದರ್ಶನವಾದ ಬಳಿಕ ನನಗೆ ಒಳ್ಳೆಯ ದಿನಗಳು ಬರುವವೆಂಬುದು ನಿಶ್ಚಿತವಾದದ್ದು. ಮಹಾತ್ಮರೆ, ತಮ್ಮ ಉಪಕಾರವು ಬಹಳವಾಯಿತು. ಈ ಉಪಕಾರವನ್ನು ಸರಿಯಾದ ಶಬ್ದಗಳಿಂದ ಪ್ರಕಟಿಸುವ ಶಕ್ತಿಯಿಲ್ಲದ ಅಬಲೆಯಾದ ನಾನು ಉಪಕಾರವನ್ನು ತೀರಿಸುವ ಬಗೆಯೆಂತು? ನಾನು ತಮ್ಮಿಂದ ಇನ್ನೂ ಹೆಚ್ಚಾಗಿ ಉಪಕಾರವನ್ನು ಹೊಂದಬೇಕೆಂದು ಬಯಸುವವಳಲ್ಲದೆ, ಅದನ್ನು ತೀರಿಸಲಿಕ್ಕೆ ಮನಸ್ಸುಮಾಡುವವಳಲ್ಲ. ಯಾಕೆಂದರೆ ನಾನು ನಿಮ್ಮ ಮಗಳು. ನನ್ನ ಇಂದಿನ ಪುನರ್ಜನ್ಮದ ದಾತರು ನೀವು. ನಿಮ್ಮಿಂದ ಅಗಣಿತ ಉಪಕಾರವನ್ನು ಹೊಂದುವ ಅಧಿಕಾರವು ನನಗಿದ್ದಂತಾಯಿತು. ಬಾಬಾ, ನಾನು ಮನೆಗೆ ಹೇಗೆ ಹೋಗಲಿ? ಯಾರ ಸಂಗಡ ಹೋಗಲಿ? ಹುಲಸೀದೇವಿಯು ಕೇಳಿದಳು.

ಅಮ್ಮಾ, ಯಾರು ಯಾರ ಮೇಲೆ ಉಪಕಾರ ಮಾಡಬೇಕು? ಎಲ್ಲವೂ ಆ ಭಗವಂತನ ಆಟ. ಜಗತ್ತಿನ ಸಕಲ ಕಾರ್ಯಗಳು ಆ ದಯಾಮಯನ ಪ್ರೇರಣೆಯಿಂದ ನಡೆದಿವೆ. ನಿಮಿತ್ತ ಮಾತ್ರರು ನಾವು! ಅಲ್ಲದೆ ನಾನು ಮಾಡುವೆನು, ನಾನು ಮಾಡುವದಿಲ್ಲ, ಎಂಬ ಹೆಮ್ಮೆಗೆ ಎಲ್ಲೆಲ್ಲಿಯೂ ಆಸ್ಪದವಿಲ್ಲ. ನಿನ್ನನ್ನು ನಿನ್ನ ಮನೆಗೆ ಕರೆದೊಯ್ಯುವ ಕೆಲಸವನ್ನು ಕೊನೆಗಾಣಿಸಲಿಕ್ಕೆ ಆ ಲೀಲಾಮಯನು ಬೇರೊಬ್ಬನನ್ನು ಏರ್ಪಡಿಸಿದ್ದಾನೆ. ನಾರದನು ಹೇಳಿದನು.

ಬಾಬಾ, ಅವನಾರು?

ನಿನ್ನ ಪತಿಯು. ನಿನ್ನನ್ನು ಹುಡುಕುತ್ತ ಸಮೀಪದಲ್ಲಿಯೇ ಇದ್ದಾನೆ. ನೀನು ಈ ಮಾರ್ಗವಾಗಿ ಹೊರಡು. ಅಲ್ಪಾವಕಾಶದಲ್ಲಿಯೇ ನಿನ್ನ ಪತಿಯನ್ನು ಕೂಡಿಕೊಳ್ಳುವೆ. ಬಳಿಕ ನೀವು ನಿಮ್ಮ ಇಚ್ಛೆಯಂತೆ ತ್ರಿವೇಣೀ ಸಂಗಮದ ಸ್ನಾನಮಾಡಿಕೊಂಡು ಮನೆಗೆ ತೆರಳಬಹುದು. ನಾವು ಬೇಗನೆ ಈ ಸ್ಥಳವನ್ನು ಬಿಟ್ಟು ಹೊರಡತಕ್ಕವರಿದ್ದೇವೆ. ಪತಿಯ ದರ್ಶನದ ತರುವಾಯ ನೀವು ನನ್ನ ಬಳಿಗೆ ಬರಲಿಕ್ಕೆ ಮನಸ್ಸು ಮಾಡಬೇಡಿರಿ. ನಾನಕನು ಹೇಳಿದನು.

ಇವರ ಭೇಟಿಯಾಗುತ್ತಲೇ ನಾವೀರ್ವರು ನಿಮ್ಮ ದರ್ಶನಕ್ಕೋಸುಗ ಬರಬೇಕೆಂದು ನಾನು ಸಂಕಲ್ಪಮಾಡಿಕೊಂಡಿರುವೆನು; ಆದರೆ ನೀವು ಬರಬೇಡಿರೆಂದು ಹೇಳುತ್ತಿರುವಿರಿ. ಇದರ ಇಂಗಿತವನ್ನು ಮಂದಮತಿಯಾದ ನಾನು ಅರಿಯದವಳಾಗಿದ್ದೇನೆ! ಹುಲಸೀದೇವಿಯು ನುಡಿದಳು.

ಅಮ್ಮಾ, ಈಗ ಬೇಡ. ಮತ್ತೆ ಯಾವಾಗಾದರೊಮ್ಮೆ ನೀವು ನನ್ನನ್ನು ಕಾಣಲಿಕ್ಕೆ ಬರಬಹುದು. ಇಲ್ಲವೆ, ನಾನೇ ನಿಮ್ಮ ಮನೆಗೆ ಬಂದು ದರ್ಶನಕೊಡಬಹುದು. ನಾನಕನು ಹೇಳಿದನು.

ಮಹಾತ್ಮರ ಇಚ್ಛೆಯಂತಾಗಲಿ, ಎಂದು ಹುಲಸಿದೇವಿಯು ಮತ್ತೆ ನಮಸ್ಕಾರ ಮಾಡಿದಳು. ಬಾಬಾನಾನಕನ ಚರಣಧೂಳಿಯನ್ನು ಧರಿಸಿ ಹೊರಟಳು. ಕುಸ ದೂರ ಹೋಗುತ್ತಲೇ ಅವಳಿಗೆ ನಾನಕನ ಹೇಳಿಕೆಯಂತೆ ಪತಿಯ ದರ್ಶಸವಾಯಿತು. ದಂಪತಿಗಳು ಈ ಪುನರ್ಮಿಲನದಲ್ಲಿ ಪರಮಾನಂದಿತರಾಗಿ ಗತ ಸಂಗತಿಗಳನ್ನು ನೆನಿಸುತ್ತ-ಆಲೋಚಿಸುತ್ತ-ತ್ರಿವೇಣೀ ಸಂಗಮದ ಕಡೆಗೆ ನಡೆದರು.

## ೨ ವಿವಾಹ.

ಶ್ರೀ ಧರ್ಮರಾಜ ಪ್ರಯಾಗದಿಂದ ಚಿತ್ರಕೂಟ ಪರ್ವತಕ್ಕೆ ಹೋಗುವ ಮಾರ್ಗದಲ್ಲಿ ರಾಜಾಪುರ ಗ್ರಾಮವದೆ. ಇದು ದೊಡ್ಡ ಊರು. ಇಲ್ಲಿ ಬಹುಜನ ಬ್ರಾಹ್ಮಣರ ವಸತಿಯಿತ್ತು. ಗ್ರಾಮದ ಕೆಳಭಾಗದಲ್ಲಿ ಯಮುನಾ ನದಿಯು ಹರಿಯುತಲಿತ್ತು. ನೀರು ಆಳವಾಗಿದ್ದರೂ, ಪಾತ್ರವು ಪ್ರಶಸ್ತವಾದುದಲ್ಲ. ಒಂದು ದಂಡೆಯಲ್ಲಿ ನಿಂತ ಮನುಷ್ಯನನ್ನು ಬೇರೊಂದು ದಡದಲ್ಲಿಯ ಮನುಷ್ಯನು ಸಹಜವಾಗಿ ಗುರುತಿಸಬಹುದಾಗಿತ್ತು.

ರಾಜಾಪುರ ಗ್ರಾಮದಲ್ಲಿಯ ಭಾನುದತ್ತ ದುವೆ ಎಂಬವನು ಬ್ರಾಹ್ಮಣ ಜಾತಿಯವನು; ಸುಪ್ರಸಿದ್ಧ ಪಂಡಿತನು. ಇವನ ವಿದ್ವತ್ತೆಯ ಖ್ಯಾತಿಯು ಈ ಗ್ರಾಮದಲ್ಲಷ್ಟೇ ಹರಡಿತ್ತೆಂತಲ್ಲ; ಸುತ್ತುಮುತ್ತಲಿನ ಸ್ಥಳಗಳಲ್ಲಿ ಸಹ ಇವನು ವಿದ್ವಾಂಸನೆಂದು ಹೆಸರಾಗಿದ್ದನು. ಸದಾಚಾರಿಯಾದ ಇವನು ಊರವರಿಗೆಲ್ಲ ಬೇಕಾಗಿದ್ದನು. ಬಹು ಜನರು ಇವನ ಬಳಿಗೆ ವಿದ್ಯೆಗಲಿಯಲಿಕ್ಕೆಂದು ಇಲ್ಲವೆ ಶಾಸ್ತ್ರಾರ್ಥ ಕೇಳುವದಕ್ಕೆಂದು ಬರುತಲಿದ್ದರು. ಭಾನುದತ್ತನು ಪರೋಪಕಾರದ ಯಾವ ಪ್ರಸಂಗವನ್ನೂ ವ್ಯರ್ಥ ಹೋಗಗೊಡುತ್ತಿದ್ದಿಲ್ಲ. ಕಾರಣ ಗ್ರಾಮವಾಸಿಗಳು ಜಾತಿನಿರ್ವಿಶೇಷದಿಂದ ಭಾನುದತ್ತನಲ್ಲಿ ಶ್ರದ್ಧೆಯನ್ನೂ ಸ್ನೇಹವನ್ನೂ ತಳೆದವರಾಗಿದ್ದರು. ನಾವು ಮೊದಲನೇ ಪರಿಚ್ಛೇದದಲ್ಲಿ ಉಲ್ಲೇಖಿಸಿದ ಹುಲಸೀದೇವಿಯು ಈ ಭಾನುದತ್ತನ ಸಹಧರ್ಮಿಣಿಯು.

ಹುಲಸೀದೇವಿಗೆ ಈ ವರೆಗೆ ಮಕ್ಕಳಾಗಿರಲಿಲ್ಲ. ನಾನಕನ ವರಪ್ರದಾಸದ ತರುವಾಯ ಇವಳಿಗೆ ಇಬ್ಬರು ಗಂಡುಮಕ್ಕಳು ಹುಟ್ಟಿದರು. ಇವರಲ್ಲಿಯ ಹಿರಿಯ ಮಗನ ಹೆಸರು ನಂದದಾಸ. ಕಿರಿಯ ಮಗನ ಹೆಸರು

ತುಳಸೀದಾಸ. ಈ ಕಿರಿಯ ಮಗನ ನಾಮಕರಣದ ದಿವಸ ದಾದಾ ನಾನಕನು ತಾನೇ ತಾನಾಗಿ ಬಂದು ತುಳಸೀದಾಸನೆಂದು ಹೆಸರಿಟ್ಟು ಆಶೀರ್ವದಿಸಿ ಹೋಗಿದ್ದನು.

ತುಳಸೀದಾಸನ ಹುಟ್ಟಿದ ವೇಳೆಯು ಒಳ್ಳೆಯದಾಗಿರಲಿಲ್ಲ. ಕೆಲವರು ಜೋಯಿಸರು ಕುಮುಹೂರ್ತದಲ್ಲಿ ಹುಟ್ಟಿದ ಮಗನು ತಾಯಿ-ತಂದೆಗಳಿಗೆ ಕೇಡನ್ನುಂಟುಮಾಡದೆ ಬಿಡನೆಂದು ಹೇಳಿದರು. ಭಾನುದತ್ತನ ಶುಭಚಿಂತಕರಲ್ಲಿ ಹಲವರು ಒದಗಬಹುದಾದ ಅನಿಷ್ಟದಿಂದ ಪಾರಾಗಬೇಕಾದರೆ, ಮಗನನ್ನು ಎಲ್ಲಿಯಾದರೂ ಬಿಸಾಟಿಬರಬೇಕೆಂದು ಸೂಚಿಸಿದರು; ಆದರೆ ಭಾನುದತ್ತನು ಶುಭಲಕ್ಷಣಗಳಿಂದ ಶೋಭಿತನಾದ ಆ ಮಗನನ್ನು ತ್ಯಜಿಸಲಿಕ್ಕೆ ಒಪ್ಪಲಿಲ್ಲ. [illegible] ಆಗಲಿ, ತಾನು ಈ ಮಗನನ್ನು ಅರಣ್ಯದಲ್ಲಿ ಬಿಸಾಟಲಿಕ್ಕೆ ಇಲ್ಲವೆ ಹೊಳೆಯಲ್ಲಿ ಚಲ್ಲಿಕೊಡಲಿಕ್ಕೆ ಮನಸ್ಸು ಮಾಡೆನೆಂದು ನಿರ್ಧಾರದಿಂದ ಹೇಳಿದನು. ಜನರು ಭಾನುದತ್ತನ ಈ ನಿಶ್ಚಯವನ್ನು ತಿಳಿದು, ಭಾವೀ ಅನರ್ಥವನ್ನು ಚಿಂತಿಸಿ ದುಃಖಿತರಾದರೂ, ನಿರುಪಾಯದಿಂದ ಸುಮ್ಮನಿರಬೇಕಾಯಿತು.

ತುಳಸೀದಾಸನು ಎಂಟು ವರ್ಷದವನಿದ್ದಾಗ ಪಿತೃವಿಯೋಗವನ್ನು ಹೊಂದಿದನು. ಒಂಬತ್ತನೇ ವರುಷ ಉಪನಯನ ಸಂಸ್ಕಾರಹೊಂದಿದನು. ಬಳಿಕ ಇವನು ವಿದ್ಯಾಭ್ಯಾಸಕ್ಕೋಸ್ಕರ ಕಾಶಿಗೆ ಹೋಗಿ, ಅಲ್ಲಿ ನೃಸಿಂಹದಾಸನೆಂಬ ರಾಮಭಕ್ತ ಸಾಧುವಿನ ಮನೆಯಲ್ಲಿ ವಾಸವಾಗಿದ್ದು ಹನ್ನೆರಡು ವರುಷ ಅಧ್ಯಯನ ಮಾಡಿದನು. ಕಲಿಯುವಿಕೆಯು ಕೊನೆಗಂಡ ಬಳಿಕ ಇವನು ಗುರುವಿನ ಅಪ್ಪಣೆಯನ್ನು ಪಡೆದು ಹೊರಟು, ಸ್ವಗೃಹಕ್ಕೆ ಸೇರಿದನು.

ಯಮುನೆಯ ಮತ್ತೊಂದು ದಂಡೆಯಲ್ಲಿ ಒಂದು ಸಣ್ಣ ಗ್ರಾಮವಿತ್ತು. ಇದರ ಹೆಸರು ಮ್ಹಾಯಾಪುರ. ಇದಕ್ಕೂ ರಾಜಾಪುರಕ್ಕೂ ಸುಮಾರು ಹರದಾರಿಯ ಅಂತರವಿತ್ತು. ಈ ಸಣ್ಣ ಹಳ್ಳಿಯಲ್ಲಿ ಕೆಲವರು

ಬ್ರಾಹ್ಮಣರು ವಾಸವಾಗಿದ್ದರು. ಇವರಲ್ಲಿ ದೀನಬಂಧು ಪಾಠಕನೆಂಬವನು ಪ್ರಮುಖನು. ಇವನಿಗೆ ಒಬ್ಬ ಮಗಳಿದ್ದಳು. ಇವಳ ಹೆಸರು ರತ್ನಾವಳಿ. ದೀನಬಂಧುವು ತನ್ನ ಅಕ್ಕರೆಯ ಈ ಅಣುಗೆಯನ್ನು ತುಳಸೀದಾಸನಿಗೆ ಕೊಡಬೇಕೆಂದು ಬಹುದಿನಗಳ ಹಿಂದೆಯೇ ಸಂಕಲ್ಪಮಾಡಿಕೊಂಡಿದ್ದನು; ಹಾಗು ಅನುಕೂಲ ಸಮಯದ ದಾರಿಯ ಕಾಯುತಲಿದ್ದನು. ತುಳಸೀದಾಸನು ವಿದ್ಯಾಭ್ಯಾಸವನ್ನು ಮುಗಿಸಿ ಮನೆಗೆ ಬರುತ್ತಲೆ, ದೀನಬಂಧುವು ತನ್ನ ಸಂಕಲ್ಪವನ್ನು ಕಾರ್ಯರೂಪವಾಗಿ ಕೊನೆಗಾಣಿಸುವ ಪ್ರಯತ್ನಕ್ಕೆ ತೊಡಗಿದನು. ಆಪ್ತೇಷ್ಟರಿಂದಲೂ ನಂಬುಗೆಯ ಜನರಿಂದಲೂ ಹುಲಸೀದೇವಿಗೆ ಹೇಳಿಕಳುಹಿದನು. ತುಳಸೀದಾಸನ ಮನಸ್ಸನ್ನರಿತುಕೊಳಲಿಕ್ಕೆ ಹಲವು ಹಂಚಿಕೆಗಳನ್ನು ಪ್ರಯೋಗಿಸಿದನು; ಆದರೆ ಈ ಪ್ರಯತ್ನದಲ್ಲಿ ಅವನಿಗೆ ಯಶ ದೊರೆಯಲಿಲ್ಲ. ತುಳಸೀದಾಸನು ವಿವಾಹಕ್ಕೆ ಒಪ್ಪಲಿಲ್ಲ. ಇವನು ಯಾರು ಕೇಳಿದರೂ, ತನ್ನ ಹೃದಯದಲ್ಲಿ ಶ್ರೀರಾಮಚಂದ್ರನ ಹೊರತು ಅನ್ಯರಿಗೆ ಸ್ಥಳದೊರೆಯದೆಂದು ಸ್ಪಷ್ಟವಾಗಿ ಹೇಳಿಬಿಡುತ್ತಿದ್ದನು. ಕಡೆಯಲ್ಲಿ ದೀನಬಂಧುವು ಹೆರವರಿಂದ ಈ ಕಾರ್ಯವಾಗದೆಂದು ಮನಗಂಡು, ತಾನೇ ರಾಜಾಪುರಕ್ಕೆ ಹೋದನು. ಹುಲಸೀದೇವಿಗೆ ದುಂಬಾಲಬಿದ್ದನು. ಹುಲಸೀದೇವಿಯು ಮಗನಿಗೆ ಬಹುಪರಿಯಾಗಿ ಹೇಳಿದಳಾದರೂ, ಕೃತಕಾರ್ಯಳಾಗಲಿಲ್ಲ. ಉಳಿದಿದ್ದ ಒಬ್ಬನೇ ಒಬ್ಬ ಮಗನ ಮದುವೆಮಾಡಿ, ವಂಶಾಭಿವೃದ್ಧಿಯನ್ನು ಕಣ್ಮುಟ್ಟ ನೋಡಬೇಕೆಂದು ಆ ಜನನಿಯ ಉತ್ಕಟೇಚ್ಛೆ; ಆದರೆ ತುಳಸೀದಾಸನ ಒಂದೇ ಒಂದು ನಿರ್ಧಾರದ ಮಾತಿನಿಂದ ಆ ಮಾತೆಯ ಮನೋಬಯಕೆಯು ಈಡೇರುವ ಲಕ್ಷಣವಿರಲಿಲ್ಲ. ದೀನಬಂಧುವು ನಿರಾಶನಾಗಿ ಹೋದನು.

ಮುಂದೆ ಕುಸ ದಿನಗಳಲ್ಲಿ ತುಳಸೀದಾಸನು ಗೃಹತ್ಯಾಗಿಯಾಗಿ ಹೋದನು. ಎಲ್ಲಿಗೆ ಹೋದನೆಂಬುದನ್ನಾರೂ ಅರಿಯರು. ಇದರಿಂದ ಹುಲಸೀದೇವಿಗೆ ಆದ ದುಃಖವನ್ನು ವರ್ಣಿಸಲಳವಲ್ಲ! ಆ ಜನ್ಮ

ದಾತೆಯು ಇರುವ ಒಬ್ಬನೇ ಒಬ್ಬ ಮಗನು ಭಗವತ್ಪ್ರೇಮದಿಂದ ಹುಚ್ಚನಾಗಿ ಮನೆ-ಮಾರುಗಳನ್ನು ಮರೆದು, ವಿವಾಹವನ್ನು ಅಲ್ಲಗಳೆದು, ಎಲ್ಲಿಗೋ ಹೊರಟು ಹೋದುದನ್ನು ನೋಡಿ ಎದೆಯೊಡೆದುಬಿಟ್ಟಳು. ತನ್ನ ವಾಂಛಿತವು ಆಕಾಶಕುಸುಮವೆಂದೇ ಅವಳಿಗೆ ಅನಿಸಿತು.

ಈ ಸಂಗತಿಯನ್ನು ತಿಳಿದ ದೀನಬಂಧುವು ತುಳಸೀದಾಸನ ಹವ್ಯಾಸವನ್ನು ಪೂರಾ ಬಿಟ್ಟುಕೊಟ್ಟನು. ಬೇರೆ ಕಡೆಯಲ್ಲಿ ವರಾನ್ವೇಷಣ ಮಾಡಹತ್ತಿದನು. ಅಂತಿಂಥ ವರನನ್ನು ಹುಡುಕುವಂತಿರಲಿಲ್ಲ. ಒಬ್ಬಳೇ ಒಬ್ಬ ಮಗಳು. ವಿದ್ಯಾಬುದ್ಧಿ ಮಂಡಿತಳು. ಶ್ರದ್ಧಾನ್ವಿತೆಯು. ಮೇಲಾಗಿ ಅತುಲನೀಯ ರೂಪಶಾಲಿನಿಯು. ಇಂತಹ ಮಗಳನ್ನು ಸಾಮಾನ್ಯ ವರನ ಕೊರಳಲ್ಲಿ ಕಟ್ಟಿ ಉಪಯೋಗವಿಲ್ಲ. ದೀನಬಂಧುವಿಗೆ ಇಚ್ಛಿತ ವರನು ದೊರೆಯಲಿಲ್ಲ. ಇತ್ತ ಮನೆಯಲ್ಲಿ ಮಗಳು ಬೆಳೆಯುತ್ತ ನಡೆದಿದ್ದಳು. ದೀನಬಂಧುವಿನ ಚಿಂತೆಯು ಹೆಚ್ಚುತ್ತ ನಡೆಯಿತು. ತಂದೆ-ತಾಯಿಗಳು ಅಹರಹ ಹೆಚ್ಚುತ್ತ ನಡೆದಿದ್ದ ಮಗಳ ಮುಖ ಶೋಭೆಯನ್ನು ನೋಡಿ ಹಿಗ್ಗುತ್ತಲೂ, ಅನುರೂಪ ವರನಿಲ್ಲವಲ್ಲ! ಎಂದು ದುಃಖಿಸುತ್ತಲೂ ಕಾಲಯಾಪನೆ ಮಾಡಹತ್ತಿದರು. ಆಪ್ತೇಷ್ಟರ ಹಾಗು ಹಳ್ಳಿಯ ಇತರ ಬ್ರಾಹ್ಮಣರ ತಗಾದಿಯಂತೂ ಇದ್ದೇ ಇತ್ತು. ರತ್ನಾವಳಿಗೆ ಹದಿನಾರು ವರುಷಗಳು ತುಂಬಿದವು. ತಾಯಿ-ತಂದೆಗಳ ವ್ಯಸನಕ್ಕೆ ಮೇರೆಯಿಲ್ಲದಾಯಿತು. ಅವರು ತಾವು ಎಷ್ಟೇ ಯತ್ನಿಸಿದರೂ ಕೃತಕಾರ್ಯರಾಗದಿರುವುದನ್ನು ಬಗೆದು, ನಿರಾಶರಾಗಿ, ಬ್ರಹ್ಮಸಂಕಲ್ಪವಿದ್ದಂತಾಗಲಿ ಎಂದಂದುಕೊಂಡು, ದೇವರ ಮೇಲೆ ಹೊರೆ ಹಾಕಿ ಕುಳಿತು ಬಿಟ್ಟರು.

ಒಂದು ದಿನ ಸಾಯಂಕಾಲದಲ್ಲಿ ರತ್ನಾವಳಿಯು ಅಜ್ಜಿಯೊಡನೆ ಬಟ್ಟೆಗಳನ್ನೊಗೆಯಲಿಕ್ಕೆ ನದಿಗೆ ಹೋಗಿದ್ದಳು. ನದಿಯು ಮಾಯಾಪುರ ಗ್ರಾಮದಿಂದ ಕೊಂಚ ದೂರವಾಗಿತ್ತು. ಗ್ರಾಮದಲ್ಲಿಯೇ ನೀರಿನ

ವಿಪುಲತೆಯಿದ್ದುದರಿಂದ ಗ್ರಾಮವಾಸಿಗಳಲ್ಲಿ ಸ್ನಾನಕ್ಕೆಂದಾಗಲಿ ಒಗೆಯುವುದಕ್ಕೆಂದಾಗಲಿ ನದಿಗೆ ಹೋಗುವವರು ಕಡಿಮೆ. ಕಾರಣ ಈ ವೇಳೆಯಲ್ಲಿ ನದಿಯಲ್ಲಿ ಬೇರೆ ಜನರಿರಲಿಲ್ಲ. ಅಜ್ಜಿಯೂ ಮೊಮ್ಮಗಳೂ. ಅವಳು ಬಟ್ಟೆಗಳನ್ನೊಗೆಯುತ್ತ ಮೊಮ್ಮಗಳ ಸಂಗಡ ಮಾತು ನಡಿಸಿಯೇ ನಡಿಸಿದ್ದಳು.

ಅಲ್ಲಿ ನೋಡು. ಆ ಗಿಡಗಳ ಗುಂಪಿನಲ್ಲಿ ಕಾಣುವುದೇ ರಾಜಾಪುರವು. ನಿನ್ನನ್ನು ರಾಜಾಪುರದಲ್ಲಿಯ ತುಳಸೀದಾಸನಿಗೆ ಕೊಡಬೇಕೆಂಬುದು ದೀನಬಂಧುವಿನ ಪ್ರಬಲ ಇಚ್ಛೆಯು. ನನ್ನ ಮನಸ್ಸಾದರೂ ಹೀಗೆಯೇ ಇತ್ತು. ಯಾಕೆಂದರೆ, ಮನೆಯಲ್ಲಿ ನಿನ್ನ ಹೊರತು ಬೇರೆ ಹುಡಿಗೆಯಿಲ್ಲ. ನಾವೆಲ್ಲರೂ ನಿನ್ನನ್ನು ಬಹಳವಾಗಿ ಪ್ರೀತಿಸುತ್ತಿರುವೆವು. ಹೀಗಿರುವಾಗ ನಿನ್ನನ್ನು ದೂರ ದೇಶಕ್ಕೆ ಕಳುಹಿ, ನಾವು ಮನೆಯಲ್ಲಿ ನೆಮ್ಮದಿಯಿಂದಿರಲಾರೆವು. ನಿನ್ನನ್ನು ಕಡೆತನಕ ಮನೆಯಲ್ಲಿಟ್ಟುಕೊಳ್ಳಲಿಕ್ಕೆ ಸಾಧ್ಯವಿಲ್ಲ. ನಾವು ಹೆಣ್ಣುಮಗಳಾದ ನಿನ್ನನ್ನು ಹೆರವರಿಗೆ ಧಾರೆಯೆರೆಯಲೇ ಬೇಕು. ನೀನು ರಾಜಾಪುರದಲ್ಲಿದ್ದರೆ, ನಿನ್ನನ್ನು ಆಗಾಗ್ಗೆ ಕರೆಸಿಕೊಳ್ಳಲಿಕ್ಕೆ ನಮಗೆ ತೊಂದರೆಯಾಗುತ್ತಿದ್ದಿಲ್ಲ. ಬಹಳವೇನು? ನೀನು ನಮ್ಮ ಮನೆಯಲ್ಲಿಯೇ ಇದ್ದಂತಾಗುತ್ತಿತ್ತು. ಆದರೆ ಈ ಸುಖವು ನಮಗೆ ದೊರೆಯಲಿಲ್ಲ. ದೀನಬಂಧುವು ಬಹಳ ಪ್ರಯತ್ನ ಮಾಡಿದರೂ, ತುಳಸೀದಾಸನು ಲಗ್ನಕ್ಕೆ ಒಪ್ಪಲಿಲ್ಲ ಎಲ್ಲಿಯೋ ಹೋಗಿ ಬಿಟ್ಟಿರುವನಂತೆ! ಏನು ಮಾಡುವುದಿದೆ? ಎಲ್ಲವೂ ಅದೃಷ್ಟದ ಆಟ! ಅಜ್ಜಿಯು ನುಡಿದಳು.

ಅಮ್ಮಾ, ನೀನು ಇಷ್ಟೇಕೆ ಚಿಂತೆ ಹಚ್ಚಿಕೊಳ್ಳುವೆ? ಜನನ-ಮರಣ-ವಿವಾಹಾದಿ ಕಾರ್ಯಗಳು ಕೇವಲ ಈಶಸಂಕಲ್ಪದಂತೆ ಸಾಗುತ್ತಿವೆಯೆಂದೂ, ಅನ್ಯಥಾ ಮಾಡಬಯಸಿದ ಮಾನವೀಯ ಪ್ರಯತ್ನವು ನಿರರ್ಥಕವೆಂದೂ ನೀನೇ ಆಗಾಗ್ಗೆ ನನಗೆ ಹೇಳುತ್ತ ಬಂದಿರುವೆಯಲ್ಲ! ಹೀಗಿದ್ದ

ಬಳಿಕ ಹೀಗಾಗಬೇಕಿತ್ತು, ಹಾಗಾಗಬೇಕಾಗಿತ್ತು, ಹೀಗಾಗಲಿಲ್ಲ, ಹಾಗಾಗಲಿಲ್ಲ ಎಂದು ಹಳಹಳಿಸುವುದು ಬುದ್ಧಿವಂತಿಕೆಯ ಕೆಲಸವೇ? ಯಾವುದು ಮನುಷ್ಯನ ಕೈಯಲ್ಲಿಲ್ಲವೋ ಆ ಅಸಾಧ್ಯ ಕಾರ್ಯಕ್ಕೆ ಹಂಬಲಿಸುವುದೇಕೆ? ರತ್ನಾವಳಿಯು ಕೇಳಿದಳು.

ಮಗು, ನೀನಿನ್ನೂ ಚಿಕ್ಕವಳು. ಲೋಕವ್ಯವಹಾರದ ಅನುಭವವು ನಿನಗಿಲ್ಲ ಅಂತೆಯೇ ನೀನು ಹೀಗೆ ಮಾತಾಡುತ್ತಿರುವೆ. ಎಲ್ಲವೂ ದೈವಾಧೀನವೆಂಬುದು ನಿಶ್ಚಿತವಾದದ್ದು. ಆದರೂ ಮನುಷ್ಯನ ಚಿಂತೆಯು ತಪ್ಪಿದ್ದಲ್ಲ! ಮನಸ್ಸನ್ನು ಸಮಾಧಾನಪಡಿಸುವುದು ಕಠಿಣವಿದೆ. ಯಾಕಂದರೆ, ಅದು ಸಾಧ್ಯಾಸಾಧ್ಯಗಳನ್ನು ಲೆಕ್ಕಿಸುವುದಿಲ್ಲ! ಅಜ್ಜಿಯು ಹೇಳಿದಳು.

ಅಮ್ಮಾ, ಇದು ಭ್ರಾಂತಿಯಲ್ಲವೇನು? ಈ ಭ್ರಾಂತಿಯನ್ನು ತಪ್ಪಿಸಿಕೊಳ್ಳಲಿಕ್ಕೆ ಉಪಾಯವಿಲ್ಲವೇನು? ಬುದ್ಧಿವಂತನಾದ ಮಾನವನು ಭ್ರಾಂತಿಮಯ ಮನಸ್ಸಿನ ಕೈಯಲ್ಲಿ ಸಿಕ್ಕು ಒದ್ದಾಡಿ ಕೊರಗುತ್ತಿರುವುದೇಕೆ? ರತ್ನಾವಳಿಯು ಕೇಳಿದಳು.

ಮಗು, ಏನ ಹೇಳಲಿ? ಸಂಸಾರದ ಮಾಯೆಯು ಅಂಥಾದ್ದು! ಸಂಸಾರದಲ್ಲಿದ್ದು ಭ್ರಾಂತಿಯಿಂದ ಬಿಡುಗಡೆಯಾಗುವುದು ದುಸ್ತರವು! ಅಂತೆಯೇ ಸಾಧಕರು ಮನೆಬಿಟ್ಟು ಹೊರಡುವರು. ಅರಣ್ಯವನ್ನು ಸೇರುವರು. ಹಣ್ಣು-ಕಂಪಲಗಳನ್ನು ತಿಂದಿದ್ದು ಜಪ-ತಪಗಳನ್ನಾಚರಿಸುವರು. ಅಜ್ಜಿಯು ಹೇಳಿದಳು.

ಅಮ್ಮಾ, ಈ ಸಾಧನೆಯು ಯಾತಕ್ಕೆ? ಮನೆಯಲ್ಲಿದ್ದೇ ಸಾಧನೆ ಮಾಡಲಿಕ್ಕೆ ಬರುವುದಿಲ್ಲೇನು? ಮನೆಯಲ್ಲಿ ಕುಳಿತು ಜಪ-ತಪಗಳನ್ನು ಮಾಡಬಾರದೇಕೆ? ರತ್ನಾವಳಿಯು ಕೇಳಿದಳು.

ತಂಗೀ, ನೀನಿನ್ನೂ ಹುಡುಗಿ. ಅದೆಲ್ಲವೂ ನಿನಗೆ ತಿಳಿಯದು. ನಿನಗೆ ಆ ದೊಡ್ಡ ವಿಚಾರವೇಕೆ? ಆ ವೇದಾಂತದ ವಿಚಾರವನ್ನು ಮಾಡಿ

ಉಪಯೋಗವಿಲ್ಲ. ಅಜ್ಜಿಯು ಹೇಳಿದಳು.

ಅವರು ಮನೆಬಿಟ್ಟು ಹೋದದ್ದೇಕೆ? ರತ್ನಾವಳಿಯು ಕೇಳಿದಳು.

ಅವರೆಂದರೆ ಯಾರು? ಅಜ್ಜಿಯು ಕೇಳಿದಳು.

ಅಮ್ಮಾ, ನನಗೆ ಹೇಳಲಿಕ್ಕೆ ನಾಚುಗೆಯಾಗುತ್ತಿದೆ! ಇಷ್ಟು ನಿನಗೆ ತಿಳಿಯಬಾರದೆ? ರತ್ನಾವಳಿಯು ಅಂದಳು.

ಯಾರಿಗೆ ನಾಚುವೆ? ಏಕೆ ನಾಚುತ್ತಿರುವೆ? ಅವನು ಲಗ್ನವನ್ನೇ ಮಾಡಿಕೊಳ್ಳಲಿಕ್ಕೆ ಒಲ್ಲೆನೆನ್ನುತ್ತಾನೆ. ನೀನು ಲಗ್ನವಾಗುವದೆಂದಾಗಲಿ, ಲಗ್ನವಾಗಿದೆಯೆಂದಾಗಲಿ ಭಾವಿಸಿ ನಾಚುತ್ತಿರುವೆಯಾ? ಬುಬ್ಬಣಿಗಿತ್ತಿಯುಲ್ಲದೆ ಮತ್ತೇನು? ಅಜ್ಜಿಯು ಪರಿಹಾಸ ಮಾಡಿದಳು.

ಅಮ್ಮಾ, ಏನೇ ಇರಲಿ. ಅವರೇ ನನ್ನ ಪತಿಗಳು.

ತುಳಸೀದಾಸನು ತಿರುಗಿ ಮನೆಗೆ ಬರದಿದ್ದರೆ? ಬಂದರೂ ಅವನು ನಿನ್ನನ್ನು ವರಿಸದಿದ್ದರೆ? ನಾವೆಲ್ಲರೂ ಈ ವಿಷಯದಲ್ಲಿ ತುಂಬ ನಿರಾಶರಾಗಿರುವಾಗ ನಿನಗೆ ಆಶೆಯೆಲ್ಲಿಯದು? ಅಜ್ಜಿಯು ಕೇಳಿದಳು.

ಅಮ್ಮಾ, ಅವರು ಬರಲಿ-ಬಾರದಿರಲಿ, ನನ್ನನ್ನು ವರಿಸಲಿ-ವರಿಸದಿರಲಿ, ನಾನವರನ್ನು ಒಮ್ಮೆ ವರಿಸಿ ಬಿಟ್ಟಿದ್ದೇನೆ. ಅವರು ಎಲ್ಲಿದ್ದರೂ ನನ್ನ ಪತಿಗಳು. ನಾನವರ ಸತಿಯು. ರತ್ನಾವಳಿಯು ನಿರ್ಧಾರದಿಂದ ಹೇಳಿದಳು.

ಒಳ್ಳೇ ಬುದ್ಧಿಮತಿಯು ನೀನು! ವಿವಾಹವೆಂದರೇನೆಂಬುದನ್ನಾದರೂ ಒಲ್ಲೆಯಾ? ವಧುವು ಒಂದು ಸ್ಥಳದಲ್ಲಿ, ವರನು ಅವಳಿಂದ ೮ ರದಲ್ಲಿಯ ಬೇರೊಂದು ಸ್ಥಳದಲ್ಲಿ, ಹೀಗಿರುವಾಗ ಲಗ್ನ ಮಾಡಲಿಕ್ಕೆ ಬಂದೀತೆ? ವರನ ಸಮ್ಮತಿಯಿಲ್ಲದೆ ಹೇಗೆ ಲಗ್ನ ಮಾಡಲಿಕ್ಕೆ ಬರುತ್ತಿದ್ದರೆ, ನಾವು ಈ ಮೇರೆಗೆ ಚಿಂತಿಸುವ ಕಾರಣವಿತ್ತೇನು? ಅಜ್ಜಿಯು ನುಡಿದಳು.

ನನ್ನ ಹೃದಯದಲ್ಲಿ ಅವರಿರುವರಲ್ಲ! ರತ್ನಾವಳಿಯು ಅಂದಳು.

ಒಳ್ಳೆ ಭಾವನಾಪ್ರಧಾನ ಹುಡುಗಿ ನೀನು! ನೀನವನನ್ನು ಕಂಡವ

ಳಲ್ಲ. ಅವನು ನಿನ್ನನ್ನು ಮದುವೆಯಾಗಬೇಕೆಂದು ಆಶಿಸಿದವನಲ್ಲ. ಹೀಗಿರಲು ಅವನು ಒಮ್ಮೆಲೆ ನಿನ್ನ ಹೃದಯಕ್ಕೆ ಹಾರಿ ಬಂದದ್ದು ಹೇಗೆ? ಅಜ್ಜಿಯು ಹುಡುಗಾಟಿಕೆಯ ಮಾತಾಡಿದಳು.

ರತ್ನಾವಳಿಯು ಉತ್ತರಗೊಡಲಿಲ್ಲ. ಒಗೆಯುವುದು ಬೇಸರ ವಾಯಿತೆಂದು ಹೇಳಿ, ದಂಡೆಯ ಕಡೆಗೆ ಸಾಗಿದಳು. ಅಪರ ದಿಕ್ಕಿನಲ್ಲಿ ರವಿಯು ಅಸ್ತನಾಗುವುದರಲ್ಲಿದ್ದನು. ಅವನ ಹೊಂಬಣ್ಣದ ಕಿರಣಗಳು ಅಲ್ಲಲ್ಲಿ ಬಿದ್ದುದರಿಂದ ಪ್ರಕೃತಿದೇವಿಯ ಸೊಬಗು ಒಳ್ಳೇ ಮನೋಹರ ವಾಗಿತ್ತು. ರತ್ನಾವಳಿಯು ತುಸ ಹೊತ್ತು ದಂಡೆಯಲ್ಲಿ ನಿಂತು ದೂರದ ವರೆಗೆ ನೋಡಿದಳು. ಅಸ್ತಗಾಮಿಯಾದ ದಿನಪತಿಯು ಅವಳಿಗೆ ಬಹು ಮನೋಹರನಾಗಿ ಕಂಡನು.

ನೋಡುತ್ತ ನಿಂತಿದ್ದ ಅವಳಿಗೆ ತುಸ ದೂರದಲ್ಲಿ ದೊಡ್ಡ ಅತ್ತಿಯ ಗಿಡವೊಂದು ಕಾಣಿಸಿತು. ಹಾಗೆಯೇ ನೋಡುತ್ತಿರುವಲ್ಲಿ ಆ ಗಿಡದಡಿಯಲ್ಲಿ ಯೋಗಿಯೊಬ್ಬನು ಧ್ಯಾನಸ್ಥನಾಗಿ ಕುಳಿತಿರುವುದು ಕಂಡು ಬಂತು. ಅವಳಿಗೆ ಅಲ್ಲಿ ಹೋಗಿ ನೋಡುವ ಕುತೂಹಲವುಂಟಾಯಿತು. ಅಜ್ಜಿಯನ್ನು ಕೇಳಿದರೆ, ಅವಳು ಹೋಗಬೇಡವೆಂದೆನ್ನುವಳೆಂಬ ವಿಷಯದಲ್ಲಿ ರತ್ನಾವಳಿಗೆ ಸಂದೇಹವಿರಲಿಲ್ಲ. ಯಾಕಂದರೆ, ಅಜ್ಜಿಯು ಹೊತ್ತು ಬಹಳವಾಗಿದೆಯೆಂದು ಬೇಗ ಬೇಗನೆ ಒಗೆಯುವ ಕೆಲಸವನ್ನು ಮುಗಿಸುವದರಲ್ಲಿದ್ದಳು. ರತ್ನಾವಳಿಯು ಅಜ್ಜಿಗೆ ಹೇಳದ ಹಾಗೆಯೆ ಹೊರಟಳು. ಅವಳು ಸಮೀಪಕ್ಕೆ ಹೋದ ಹೋದಂತೆ ಆ ಧ್ಯಾನಸ್ಥ ಮೂರ್ತಿಯು ಹೆಚ್ಚು ಸ್ಪಷ್ಟವಾಗಿ ಕಾಣಹತ್ತಿತು.

ತುಳಸೀದಾಸನು ಗಿಡದ ಬುಡದಲ್ಲಿ ಧ್ಯಾನಸ್ಥನಾಗಿ ಕುಳಿತಿದ್ದನು. ಹತ್ತಿರ ಜೋಳಿಗೆ ಲೋಟಾ-ಸೋಟಾ-ಲಂಗೋಟಾ ಮೊದಲಾದ ನಿತ್ಯೋಪಯುಕ್ತ ಸಾಮಾನುಗಳು ಬಿದ್ದುಕೊಂಡಿದ್ದವು. ರತ್ನಾವಳಿಯು ಸಮೀಪಕ್ಕೆ ಹೋಗಿ ನೋಡುತ್ತ ನಿಂತಳು. ಆ ಸುಂದರ ಧ್ಯಾನಮಗ್ನ

ಮೂರ್ತಿಯನ್ನು ಎಷ್ಟು ನೋಡಿದರೂ ಅವಳ ಮನಸ್ಸು ತಣಿಯಲಿಲ್ಲ. ರತ್ನಾವಳಿಗೆ ಮೊದಲು ಆವನಾರೆಂಬುದು ಹೊಳೆಯಲಿಲ್ಲ. ಗೇನಿಕಿ ಹಾಕುತ್ತಿರಲು ಇವನೇ ತುಳಸೀದಾಸನೆಂಬ ವಿಷಯದಲ್ಲಿ ಅವಳಿಗೆ ಸಂದೇಹವಿಲ್ಲದಾಯಿತು. ರತ್ನಾವಳಿಯು ತುಳಸೀದಾಸನನ್ನು ಒಮ್ಮೆ ಕನಸಿನಲ್ಲಿ ಮಾತ್ರ ಕಂಡವಳಾಗಿದ್ದಳು. ಆದರೂ ಸ್ಪಷ್ಟದೃಷ್ಟ ಆ ಪ್ರತಿಮೆಯನ್ನು ಹೃದಯದಲ್ಲಿ ಪ್ರಸ್ಥಾಪಿಸಿಕೊಂಡ ಅವಳಿಗೆ ತುಳಸೀದಾಸನನ್ನು ಗುರುತಿಸಲಿಕ್ಕೆ ವಿಲಂಬವಾಗಲಿಲ್ಲ.

ಅಲ್ಪಾವಕಾಶದಲ್ಲಿ ತುಳಸೀದಾಸನು ಧ್ಯಾನದಿಂದೆಚ್ಚತ್ತನು. ಎದುರಿನಲ್ಲಿ ಸಾಕ್ಷಾಲ್ಲಕ್ಷ್ಮಿಯಂತೆ ನಿಂತಿದ್ದ ಮಾನಸ ಪ್ರತಿಮೆಯನ್ನು ನೋಡಿದನು. ರತ್ನಾವಳಿಯು ದೃಷ್ಟಿ ಸಮ್ಮೀಲನವಾಗುತ್ತಲೆ, ನಾಚಿ ತಲೆಬಾಗಿದಳು. ಲಜ್ಜೆಯಿಂದ ಆರಕ್ತವಾದ ಅವಳ ಮುಖವು ತುಳಸೀದಾಸನಿಗೆ ಮತ್ತಷ್ಟು ಮನೋಹರವಾಗಿ ತೋರಿತು ಅವನು ಆವೇಗ ಭರದಿಂದ ಇಂತು ನುಡಿದನು:--ಸುಂದರಿ, ನೀನು ಇಲ್ಲಿಗೆ ಹೇಗೆ ಬಂದೆ? ನಾನು ಬಹು ದಿನಗಳಿಂದ ಯಾವಳನ್ನು ನನ್ನ ಆರಾಧ್ಯ ದೇವತೆಯೆಂದು ಭಾವಿಸಿ, ಹೃದಯದಲ್ಲಿ ಸ್ಥಾಪಿಸಿ ಪೂಜಿಸುತ್ತ ಬಂದೆನೋ ಅವಳೇ ನೀನು! ದೇವಿ, ಹೇಳು; ನೀನು ಇಲ್ಲಿಗೆ ಹೇಗೆ ಬಂದೆ?

ರತ್ನಾವಳಿಯು ಮಾತಾಡಲಿಲ್ಲ. ಅವಳಿಗೆ ಏನು ಮಾತಾಡಬೇಕೆಂಬುದು ತೋಚಲಿಲ್ಲ. ತುಳಸೀದಾಸನೇ ಮತ್ತೆ ಮಾತಾಡಹತ್ತಿದನು: 'ಮಾತಾಡು. ಹೀಗೆ ಸುಮ್ಮನೆ ನಿಲ್ಲಬೇಡ. ನೀನು ನನ್ನನ್ನು ಹುಡುಕಿಕೊಂಡು ಇಲ್ಲಿಗೆ ಬಂದಿರಬೇಕು! ಇಲ್ಲವಾದರೆ ನೀನು ಏಕಾಂಗಿಯಾಗಿ ಈ ವೇಳೆಯಲ್ಲಿ ಈ ಸ್ಥಳಕ್ಕೆ ಬರುತ್ತಿದ್ದೆಯಾ? ಮಾನಿನಿಯೆ, ಯಾರ ಪ್ರೇರಣೆಯಿಂದ ನೀನಿಲ್ಲಿಗೆ ಬಂದೆ? ನಿನಗೆ ದಾರಿಯನ್ನು ತೋರಿದವರಾರು? ಇದೆಲ್ಲವೂ ದಯಾಮಯನಾದ ಆ ರಘುರಾಮನ ಆಟ!'

ರತ್ನಾವಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಆದರೂ

ಆವಳು ಅದನ್ನು ಹೊರಗೆ ತೋರಗೊಡದೆ, ಧೈರ್ಯದಿಂದ ಮಾತಾಡ ತೊಡಗಿದಳು. "ನಿಮ್ಮ ಮಾತುಗಳು ನನಗೆ ವಿಚಿತ್ರವೆನಿಸುತ್ತಿವೆ ನಿಮ್ಮ ಆರಾಧ್ಯ ದೇವತೆ ಯಾರು? ನಿಮ್ಮನ್ನು ಹುಡುಕಿಕೊಂಡು ಬಂದವರಾರು? ಒಗೆಯಲಿಕ್ಕೆಂದು ನದಿಗೆ ಬಂದವಳು ನಾನು! ದೂರದಿಂದ ನಿಮ್ಮನ್ನು ನೋಡಿ, ನಮಸ್ಕಾರ ಮಾಡಿ ಹೋಗಬೇಕೆಂದು ಬಂದೆನು. ನೀವು ನನ್ನನ್ನು ನೋಡಿ ಮನಬಂದಂತೆ ಮಾತಾಡಹತ್ತಿರುವಿರಿ. ಅಪರಿಚಯದ ಹರೆಯದ ಹೆಂಗಸರಿಗೆ ಹೀಗೆ ಮಾತಾಡುವದು ಸರಿಯೋ? ನಿಮ್ಮ ಮಾತು ಗಳಿಂದ ನೀವು ನಿಜವಾದ ಸಾಧುಗಳಲ್ಲವೆಂಬುದು ನನಗೆ ಹೊಳೆಯಿತು. ವೇಷಧಾರಿಗಳು ನೀವು! ಪ್ರೇಮಪರಿಹಾಸದಿಂದ ತಲೆಕೆಟ್ಟವರಾಗಿ ಈ ವೇಷವನ್ನು ಧರಿಸಿರುವಂತೆ ಕಾಣುತ್ತಿದೆ!

ಸುಂದರೀ, ನೀನು ಹೀಗೆ ಮಾತಾಡಿದರೂ, ನನಗೆ ಕೋಪವಿಲ್ಲ. ನಾನು ನಿಜವಾಗಿ ಹೇಳುತ್ತೇನೆ ಕೇಳು, ಕಪಟಸಾಧುವು ನಾನಲ್ಲ! ತುಳಸೀ ದಾಸನು ಹೇಳಿದನು.

ಹೀಗಿದ್ದರೆ, ನಿಮ್ಮಲ್ಲಿ ಸ್ತ್ರೀ-ಸಂಬಂಧವಾದ ವಿಚಾರಗಳೇಕೆ? ಸಾಧು ಗಳಾದ ನಿಮ್ಮನ್ನು ಕಾಣಲಿಕ್ಕೆ ಹಲವರು ಹೆಂಗಳೆಯರು ಬರಬಹುದು. ಅವರಿಗೆಲ್ಲ ಹೀಗೆ ಮಾತಾಡುವದು ಸಾಧುಕಾರ್ಯವೇ? ರತ್ನಾವಳಿಯು ಕೇಳಿದಳು.

ಕಂಡಕಂಡ ರಮಣಿಯರಿಗೆ ಹೀಗೆ ಹೇಗೆ ಮಾತಾಡಲಿಕ್ಕೆ ಆದೀತು? ನಾನೇನು ಭ್ರಾಂತಿಷ್ಟನೇ? ತುಳಸೀದಾಸನು ಕೇಳಿದನು.

ನನ್ನನ್ನು ಕಾಣುತ್ತಲೇ ಹಾಗೇಕೆ ಮಾತಾಡಿದಿರಿ? ಅರ್ಜುನನು ಸುಭದ್ರೆಯ ಪ್ರಾಪ್ತಿಗಾಗಿ ತ್ರಿದಂಡೀ ಸಂನ್ಯಾಸವನ್ನು ಗ್ರಹಿಸಿದ ಸಂಗತಿ ಯನ್ನು ನಾನು ಓದಿರುವೆನು. ಹಾಗೆಯೇ ನೀವು ನನ್ನ ಪ್ರಾಪ್ತಿಗಾಗಿ ಈ ವೇಷವನ್ನು ಧರಿಸಿರುವಿರಾ? ರತ್ನಾವಳಿಯು ಕೇಳಿದಳು.

ಈ ವೇಷವನ್ನು ಧರಿಸಿದ ತರುವಾಯದಲ್ಲಿ ನನಗೆ ನಿನ್ನ ಅವಶ್ಯಕತೆ

ಯುಂಟಾಯಿತು! ಅಲ್ಲದೆ, ನಿನ್ನ ಸಂಗಡ ಕಪಟಾಚರಣೆ ಮಾಡಲೋಸುಗ ಈ ವೇಷವನ್ನು ಧರಿಸಿದವನು ನಾನಲ್ಲ! *ತುಳಸೀದಾಸನು ಹೇಳಿದನು.

ವಿಚಿತ್ರವೇ ಸರಿ! ಮೊದಲು ನಾನು ನಿಮಗೆ ಬೇಕಾಗಿರಲಿಲ್ಲವೆ? ಈ ವೇಷವನ್ನು ಹಾಕಿಕೊಂಡ ಬಳಿಕ ಬೇಕಾದೆನೆ? ಹೀಗಿದ್ದರೆ, ಈ ವೇಷವನ್ನು ಬಿಸಾಟಿ, ಮೊದಲಿನಂತಾಗಿಬಿಡಿರಿ. ನಾನೂ ಮೊದಲಿನಂತೆ ಬೇಡಾಗಿ ಹೋಗುವೆನು! ರತ್ನಾವಳಿಯು ಹೇಳಿದಳು.

ಚದುರೆಯೇ, ಪರಿಹಾಸದ ಸಮಯವಿದಲ್ಲ. ನಾನು ನಿನ್ನನ್ನು ನೋಡುತ್ತಲೇ ಆವೇಗಭರದಿಂದ ಹಾಗೆ ಮಾತಾಡಿದ್ದಕ್ಕೆ ನೀನು ವಿಕಲ್ಪವನ್ನು ತಿಳಕೊಂಡಿರುವೆ! ನಾನೀಗ ನಿನ್ನ ವಿಕಲ್ಪವನ್ನು ಹೋಗಲಾಡಿಸುವೆನು. ಅಲ್ಲಿ ಕಾಣುತ್ತದೆ ನೋಡು, ಅದು ರಾಜಾಪುರ ಗ್ರಾಮವು. ನಾನು ಆ ಗ್ರಾಮದ ನಿವಾಸಿಯು. ನನ್ನ ಹೆಸರು ತುಳಸೀದಾಸ. ಭಗವತ್ಪ್ರೇಮದ ಹೊರತು ಅನ್ಯರ ಪ್ರೇಮವನ್ನು ಆಶಿಸುವವನು ನಾನಲ್ಲ. ಈ ಭಗವಂತನನ್ನು ಕಾಣಬಯಸಿದ ನಾನು ವಿವಾಹವನ್ನು ಮಾಡಿಕೊಳ್ಳದೆ ಈ ವೇಷವನ್ನು ಧರಿಸಿ, ಶ್ರೀ ರಾಮನ ಶೋಧಕ್ಕೆ ಹೊರಟೆನು; ಆದರೆ ಆ ರಘುರಾಮನು ನನ್ನನ್ನು ತನ್ನ ಪದರಿನಲ್ಲಿ ಹಾಕಿಕೊಳ್ಳಲಿಲ್ಲ. ಅವನು ನನಗೆ ನಿನ್ನನ್ನು ತೋರಿದನು. ನಿನ್ನ ಬೆನ್ನ ಹತ್ತಲಿಕ್ಕೆ ಹೇಳಿದನು. ಹಾಗೆ ನಾನು ನಿನ್ನನ್ನು ಹುಡುಕುತ್ತಿರುವಾಗ್ಗೆ ಇಂದು ನೀನೇ ನನ್ನ ಬಳಿಗೆ ಬಂದೆ. ಆನಂದಿತನಾದ ನಾನು ಮರ್ಯಾದೆ ಮೀರಿ ಮಾತಾಡಿರಬಹುದು. ಕ್ಷಮಿಸು. ತುಳಸೀದಾಸನು ನುಡಿದನು.

ನಿಮಗೆ ಶ್ರೀರಾಮನು ಕಾಣಿಸಿಕೊಂಡನೆ? ಅವನ ದರ್ಶನದ ತರುವಾಯದಲ್ಲಿ ನನ್ನನ್ನು ಅಪೇಕ್ಷಿಸಿದಿರಾ? ಕಲ್ಪವೃಕ್ಷವನ್ನಾಶ್ರಯಿಸಿ ಮಾವಿನ ಹಣ್ಣನ್ನು ಯಾಚನೆ ಮಾಡುವುದೆ? ರತ್ನಾವಳಿಯು ಕೇಳಿದಳು.

ನಾನು ಜಾಗ್ರತಾವಸ್ಥೆಯಲ್ಲಿ ಶ್ರೀರಾಮನನ್ನು ಕಂಡವನಲ್ಲ. ಆ

ದಯಾಮಯನು ಸ್ವಪ್ನಾವಸ್ಥೆಯಲ್ಲಿ ನನಗೆ ದರ್ಶನ ಕೊಟ್ಟನು; ಹಾಗೆ ನಿನ್ನನ್ನು ತಂದು ನನ್ನ ಮುಂದೆ ನಿಲ್ಲಿಸಿ, ಇವಳು ನಿನ್ನ ಸಹಧರ್ಮಿಣಿಯು, ಎಂದು ಹೇಳಿ ಅದೃಶ್ಯನಾದನು. ಎಚ್ಚತ್ತ ತರುವಾಯ ನಾನು ಶ್ರೀರಾಮನ ಶೋಧವನ್ನು ಬಿಟ್ಟು, ನಿನ್ನ ಶೋಧಕ್ಕೆ ತೊಡಗಿದೆನು. ತುಳಸೀದಾಸನು ಹೇಳಿದನು.

ಅದೇಕೆ? ಶ್ರೀರಾಮನನ್ನು ಹುಡುಕುವ ಹವ್ಯಾಸವನ್ನೇಕೆ ಬಿಟ್ಟಿರಿ? ರತ್ನಾವಳಿಯು ಕೇಳಿದಳು.

ಆ ಮಹಾಮಹಿಮನ ಅಪ್ಪಣೆಯನ್ನು ಉಲ್ಲಂಘಿಸಲಿಕ್ಕೆ ಪಾಮರನಾದ ನನಗೆ ಸಾಧ್ಯವೆ? ಆ ಲೀಲಾಮಯನು ಗೃಹಸ್ಥಾಶ್ರಮಿಯಾಗೆಂದು ನನಗೆ ಅನುಜ್ಞೆ ಮಾಡುತ್ತಿರುವಾಗ ನಾನು ಒಲ್ಲೆನೆಂದು ಹಟ ಹಿಡಿಯುಲಿಯಾ? ಬುದ್ಧಿವಂತೆಯೆ, ವಿಚಾರಿಸಿ ನೋಡು. ಪ್ರಾಚೀನ ಕರ್ಮಫಲವನ್ನು ನಾವು ಈ ಜನ್ಮದಲ್ಲಿ ಉಪಭೋಗಿಸಲೇಬೇಕು. ಆ ಕರ್ಮಸೂತ್ರಕ್ಕನುಸರಿಸಿ ಸೃಷ್ಟಿಕರ್ತನು ನನಗಾಗಿ ನಿನ್ನನ್ನು-ನಿನಗಾಗಿ ನನ್ನನ್ನು ಸೃಷ್ಟಿಸಿದ್ದಾನೆ. ನಾನು ಈ ಈಶ್ವರೀಯ ಸಂಕೇತವನ್ನು ಅನ್ಯಥಾ ಮಾಡಲಿಕ್ಕೆ ಸಮರ್ಥನಾದೇನೆ? ಬಾಲ್ಯ ಕಾಲದಲ್ಲಿಯೇ ಸಂನ್ಯಾಸವನ್ನು ಗ್ರಹಿಸಿ ಪರಮಪದ ಪ್ರಾಪ್ತಿಗಾಗಿ ಪ್ರಯತ್ನಿಸುತ್ತಿದ್ದ ಅದ್ವೈತಾಚಾರ್ಯರು ಕೆಲವು ಕಾಲದ ವರೆಗಾದರೂ ಅಮರುಕರಾಜನ ದೇಹದಲ್ಲಿ ವಾಸಿಸಿ ಮಹಿಷಿಯರೊಡನೆ ವಿಷಯಸುಖೋಪಭೋಗದಲ್ಲಿ ಇರಬೇಕಾಗಲಿಲ್ಲವೆ? ಹಾಗೆಯೆ ಸಂನ್ಯಾಸವನ್ನು ಗ್ರಹಿಸಲಿಕ್ಕೆ ಸಿದ್ಧನಾಗಿ, ಗೃಹತ್ಯಾಗಿಯಾಗಿ ಹೊರಟಿದ್ದ ನಾನೂ ನಿನ್ನೊಡನೆ ಕೆಲಕಾಲ ವಿಷಯ ಸುಖಗಳನ್ನು ಉಪಭೋಗಿಸಬೇಕೆಂಬುದು ಬ್ರಹ್ಮಸಂಕಲ್ಪವಿರಬಹುದು. ತುಳಸೀದಾಸನು ಹೇಳಿದನು.

ನಾನಾರೆಂಬುದು ನಿಮಗೆ ಗೊತ್ತಿದೆಯೆ? ರತ್ನಾವಳಿಯು ಕೇಳಿದಳು.

ಮನೋಹರೆ, ನೀನು ನನ್ನ ಹೆಂಡತಿ. ನಿನ್ನ ಹೆಚ್ಚಿನ ಪರಿಚಯದ ಅವಶ್ಯಕತೆ ನನಗಿಲ್ಲ. ಯಾಕಂದರೆ, ನನ್ನ ಹಿತವು ನನಗಿಂತಲೂ ಆ ಭಗವಂತನಿಗೆ ಚನ್ನಾಗಿ ತಿಳಿಯುತ್ತಿದೆ. ಆ ಪರಮ ಕಾರುಣಿಕನು ವಿಚಾರಾಂತ್ಯದಲ್ಲಿ ನಿನ್ನನ್ನು ನನ್ನ ಸಹಧರ್ಮಿಣಿಯೆಂದು ನಿರ್ಣಯಿಸಿರಲು, ನಾನು ಆ ಸರ್ವಜ್ಞನ ಮೋಕ್ಷಿವಿಚಾರಣೆಯನ್ನು ಮಾಡಲಿಯಾ? ತುಳಸೀ ದಾಸನು ನುಡಿದನು.

ನಾನು ಮಾಯಾಪುರದ ದೀನಬಂಧು ಪಾಠಕನ ಮಗಳು. ನನ್ನ ಹೆಸರು ರತ್ನಾವಳಿ. ರತ್ನಾವಳಿಯು ಹೇಳಿದಳು.

ಹೀಗೊ? ಬಹಳ ನೆಟ್ಟಗಾಯಿತು. ನನ್ನ-ನಿನ್ನ ವಿವಾಹಕ್ಕೆ ತಡೆಯು ಇಲ್ಲದಂತಾಯಿತು! ತುಳಸೀದಾಸನು ಹೇಳಿದನು.

ಸ್ವಾಮಿ, ಹೀಗೆ ಅನ್ನಲಿಕ್ಕೆ ಹೇಗೆ ಆದೀತು? ಮೊದಲು ನನ್ನ ತಂದೆಯು ನಿಮಗೆ ನನ್ನನ್ನು ಕೊಡುವ ಸಂಕಲ್ಪ ಮಾಡಿಕೊಂಡಿದ್ದನು; ಹಾಗು ಅವನು ತನ್ನ ಈ ಸಂಕಲ್ಪವನ್ನು ಈಡೇರಿಸಲಿಕ್ಕೆ ಬಹಳ ಪ್ರಯತ್ನಿಸಿದನು; ಆದರೆ ನೀವು ಆ ಕಾಲದಲ್ಲಿ ನನ್ನನ್ನು ಲಗ್ನ ಮಾಡಿಕೊಳ್ಳಲಿಕ್ಕೆ ಒಪ್ಪಲಿಲ್ಲ. ಇದರಿಂದ ನೀವು ನನಗೂ ನನ್ನ ತಾಯಿ-ತಂದೆಗಳಿಗೂ ಅಪಮಾನ ಮಾಡಿದಂತಾಗಲಿಲ್ಲವೆ? ಆ ಅವಮಾನವನ್ನು ಬಾಲೆಯಾದ ನಾನು ಹೇಗಾದರೂ ಮಾಡಿ ಮರೆಯಬಲ್ಲೆನು; ಆದರೆ ನನ್ನ ತಾಯಿ-ತಂದೆಗಳು ತಮಗಾದ ಆ ಅವಮಾನವನ್ನು ಇಷ್ಟು ಬೇಗನೆ ಹೇಗೆ ಮರೆತಾರು? ರತ್ನಾವಳಿಯು ನುಡಿದಳು.

ಸಾಧ್ವಿಯೆ, ನಾನು ಯಾಗನ್ನೂ ಅವಮಾನಗೊಳಿಸಲು ಪ್ರಯತ್ನಿಸಿದವನಲ್ಲ! ಯಾರಿಗಾದರೂ ಅಪಮಾನಮಾಡಬೇಕೆಂದು ಆಶಿಸಿದವನಲ್ಲ. ಅಂದಿನ ನನ್ನ ವೃತ್ತಿಯೇ ಬೇರೆ ತರನ್ನಾಗಿತ್ತು. ಅದಕ್ಕನುರೂಪವಾಗಿ ನಾನು ಮಾತಾಡಿರಬಹುದು. ಇಂದಿನ ಪ್ರಸಂಗವೇ ಬೇರೆ! ಈ ಪ್ರಸಂಗದಲ್ಲಿ ನಾನು ನಿನ್ನ ತಾಯಿ-ತಂದೆಗಳ ಕ್ಷಮೆಯನ್ನು ಕೇಳಿಕೊಳ್ಳಲಿಕ್ಕೆ

ಹಿಂದೆಗೆಯುವದಿಲ್ಲ ಹೀಗೆ ಮಾಡಿದರೂ, ನಿನ್ನ ತಾಯಿ-ತಂದೆಗಳು ನನ್ನ ಪ್ರಸ್ತಾಪಕ್ಕೆ ಒಪ್ಪಿದಿದ್ದಾರೆಯೋ? ತುಳಸೀದಾಸನೆಂದನು.

ಬೇಡ. ನೀವು ಕ್ಷಮೆಬೇಡುವ ಕಾರಣವಿಲ್ಲ. ನನ್ನ ಪತಿಯು ಯಾರ ಹತ್ತರವೂ ತಲೆಬಾಗಿಸಬಾರದೆಂದು ನಾನು ಬಯಸುತ್ತೇನೆ. ನೀವು ಎಂದೆಂದಿಗೂ ಶ್ರೇಷ್ಠರಾಗಿಯೇ ಇರ್ರಿ. ನಾನು ನಿಮ್ಮ ಚರಣದಾಸಳು. ನಿಮ್ಮ ಮಡದಿಯೆಂದೆನಿಸಿಕೊಳ್ಳುವ ಯೋಗ್ಯತೆಯು ಸದ್ಯಃ ನನ್ನಲ್ಲಿರದಿದ್ದರೂ, ನಿಮ್ಮ ಸಹವಾಸದ ತರುವಾಯದಲ್ಲಿ ಆ ಯೋಗ್ಯತೆಯು ಬೇಗನೆ ಉಂಟಾದೀತೆಂದು ನಾನು ಆಶಿಸಿದ್ದೇನೆ. ರತ್ನಾವಳಿಯು ತುಳಸೀದಾಸನ ಚರಣಗಳ ಮೇಲೆ ಬಿದ್ದಳು. ತುಳಸೀದಾಸನು ಸ್ನೇಹಭರದಿಂದ ಅವಳನ್ನು ಹಿಡಿದೆತ್ತಿ ಆಲಂಗಿಸಿದನು.

ಹೀಗೆ ಪತಿ-ಪತ್ನಿಯರು ಆಲಿಂಗನ ಸುಖದಲ್ಲಿ ಮೈಯ್ಮರೆದಾಗ, ದೂರದಲ್ಲಿ ಜನರ ಗದ್ದಲವಾಗುತ್ತಿರುವದನ್ನು ಕೇಳಿ ಎಚ್ಚತ್ತರು. ಆ ಗದ್ದಲವು ಕ್ರಮಶಃ ಸಮೀಪಿಸಹತ್ತಿತು. ದಂಪತಿಗಳು ದೂರ ಸರಿದು, ಜನರ ಬರುವಿಕೆಯ ಕಡೆಗೆ ನೋಡುತ್ತ ನಿಂತರು. ದೀನಬಂಧುವು ನಾಲ್ಕಾರು ಜನರನ್ನು ಕರಕೊಂಡು ರತ್ನಾವಳಿಯ ಶೋಧಕ್ಕೆ ಹೊರಟಿದ್ದನು. ಮುದುಕಿಯು ಒಗೆಯುವದಾಗುತ್ತಲೆ ರತ್ನಾವಳಿಯನ್ನು ಕೂಗಿದಳು-ಹುಡುಕಿದಳು; ಆದರೆ ರತ್ನಾವಳಿಯು ಕಣ್ಣಿಗೆ ಬೀಳಲಿಲ್ಲ. ವೃದ್ಧೆಯು ಬೇಗ ಬೇಗ ನಡೆದು ಮನೆಗೆ ಹೋದಳು. ರತ್ನಾವಳಿಯು ಅಲ್ಲಿಯೂ ಇರಲಿಲ್ಲ. ಅಜ್ಜಿಯು ಮತ್ತಿಷ್ಟು ಗಾಬರಿಯಾಗಿ ಮಗನಿಗೆ ತಿಳುಹಿದಳು. ದೀನಬಂಧುವು ಓಣಿಯ ನಾಲ್ಕೆಂಟು ಜನರೊಡನೆ ಹೊರಟು ಹುಡುಕುತ್ತ-ಹುಡುಕುತ್ತ ರತ್ನಾವಳಿಯು ಹತ್ತರ ಬಂದನು.

ಸೂರ್ಯಾಸ್ತವಾಗಿ ಸುಮಾರು ಒಂದು ತಾಸಾಗಿರಬಹುದು. ರತ್ನಾವಳಿಗೆ ಇದರ ಕಲ್ಪನೆಯೇ ಇರಲಿಲ್ಲ. ಪ್ರಿಯಕರನೊಡನೆ ಮಾತಿನಲ್ಲಿ ತೊಡಗಿದ್ದ ಅವಳಿಗೆ ಮನೆಯ ನೆನೆಪಾಗಿರಲಿಲ್ಲ. ತಂಗೆಯನ್ನು

ನೋಡುತ್ತಲೆ ಅವಳಿಗೆ ಬಹಳ ನಾಚಿಗೆಯುಂಟಾಯಿತು. ಮೊದಲು ಅವಳ ಮುಖದಿಂದ ಮಾತುಗಳೇ ಹೊರಡಲಿಲ್ಲ. ಕೆಲಹೊತ್ತಿನ ಮೇಲೆ ಅವಳು ಶಾಂತಳಾಗಿ ನಡೆದ ಸಂಗತಿಯನ್ನು ವಿವರಿಸಿದಳು. ದೀನಬಂಧುವಿಗೆ ಪರಮಾನಂದವಾಯಿತು. ಅರಸುತಿರುವ ಬಳ್ಳಿ ಕಾಲ್ತೊಡಕಿದಂತಾಯಿತು. ಅವನು ಮಗಳೊಡನೆ ಆದರದಿಂದ ಅಳಿಯನನ್ನು ಮನೆಗೆ ಕರೆದೊಯ್ದನು. ಈ ಸುದ್ದಿಯನ್ನು ತಿಳಿದ ಮನೆಯಲ್ಲಿಯ ಹೆಂಗಸರಿಗೆ ಹಿಡಿಸಲಾರದಷ್ಟು ಆನಂದವಾಯಿತು!

ದೀನಬಂಧುವು ಸಮೀಪದ ಶುಭಮುಹೂರ್ತದಲ್ಲಿ ತುಳಸೀದಾಸನಿಗೆ ಕನ್ಯಾದಾನಮಾಡಿದನು. ತರುವಾಯ ತುಳಸೀದಾಸನು ನವವಧುವಿನೊಡನೆ ಮಹಾಸಮಾರೋಹದಿಂದ ತನ್ನ ಮನೆಯನ್ನು ಪ್ರವೇಶಿಸಿದನು.

---

## ೩ ಗೃಹಸ್ಥಾಶ್ರಮ.

ವಿವಾಹದ ತರುವಾಯ ಎರಡು ವರ್ಷಗಳು ಕ್ರಮಿಸಿವೆ. ತುಳಸೀದಾಸನು ತೀರ ಲಂಪಟನಾಗಿ ಹೋಗಿದ್ದಾನೆ. ಅವನು ಮೊದಲು ಹೃದಯದಲ್ಲಿ ಅಧಿಷ್ಠಿತನಾಗಿದ್ದ ಶ್ರೀ ರಾಮನನ್ನು ಹದ್ದುಪಾರು ಮಾಡಿ, ಅಲ್ಲಿ ಆ ರತ್ನಾವಳಿಯನ್ನು ಸ್ಥಾಪಿಸಿದ್ದಾನೆ. ಮೊದಲು ರಘುರಾಮನ ಪೂಜೆ ಮಾಡುತ್ತಿದ್ದಂತೆ, ಈಗ ರತ್ನಾವಳಿಯ ಸೇವೆ ಮಾಡುತ್ತಿದ್ದಾನೆ. ಈಗ ಅವನಿಗೆ ಹೆಂಡತಿಯ ಹೊರತು ಬೇರೆ ಏನೂ ಕಾಣುವದಿಲ್ಲ. ಅವನು ಅಹೋರಾತ್ರಿಯಲ್ಲಿ ಅವಳನ್ನನುಸರಿಸಿರುವನು. ಅವಳಿಗೆ ಕಷ್ಟವಾಗಬಾರದೆಂದು ಥಡಪಡಿಸುವನು. ಅವಳು ಮಾಡಬೇಕೆಂದಿದ್ದ ಹೋರೆಗಳನ್ನು ತಾನು ವಹಿಸಿಕೊಂಡು ಕಡೆಹಾಯಿಸುವನು. ರತ್ನಾವಳಿಯು

ಪತಿಯು ಈ ವೃತ್ತಿಯನ್ನು ನೋಡಿ ಸಂಕೋಚಗೊಂಡು ಆಗ್ರಹದಿಂದ ಕೆಲಸಕ್ಕಾರಂಭಿಸಲು ತುಳಸೀದಾಸನು ಅವಳನ್ನು ತಡೆಯುವನು; ಇಲ್ಲವೆ ಅವಳ ಹಿಂದಿದ್ದು ಸಹಾಯ ಮಾಡುವನು. ಅವಳ ಸ್ವೇದ ಬಿಂದುಗಳನ್ನು ಉತ್ತರೀಯದಿಂದ ಒರೆಸುವನು.

ತುಳಸೀದಾಸನ ಈ ಅತ್ಯಧಿಕವಾದ ಸ್ತ್ರೈಣತೆಯಿಂದ ಬಾಳುವೆಯು ಸುಸೂತ್ರವಾಗಿ ಸಾಗದಾಯಿತು. ತುಳಸೀದಾಸನಿಗೆ ಸ್ವಂತದ ಹೊಲಗಳಿದ್ದವು; ಮನೆಯಿತ್ತು. ಹಲವು ಯಜಮಾನರ ಮನೆಗಳಿದ್ದವು ತುಳಸೀದಾಸನು ಸರಿಯಾಗಿ ವ್ಯವಹರಿಸಿದ್ದರೆ, ಉಪಜೀವನಕ್ಕೆ ಕೊರತೆಯುಂಟಾಗುವಂತಿರಲಿಲ್ಲ; ಆದರೆ ತುಳಸೀದಾಸನು ಹೊಲ-ಮನೆಗಳ ಕಡೆಗೆ ಲಕ್ಷ್ಯವಿರಿಸಲಿಲ್ಲ. ಯಜಮಾನರ ಪ್ರಸನ್ನತೆಗೆ ಪ್ರಯತ್ನಿಸಲಿಲ್ಲ. ಕಾರಣ ಅವನು ಸಂಸಾರದ ಅಭಾವ-ಅಭಿಯೋಗಗಳಿಗೆ ಒಳಗಾಗಬೇಕಾಯಿತು. ತುಳಸೀದಾಸನ ಪಾಂಡಿತ್ಯದ ಪ್ರಖ್ಯಾತಿಯು ಎಲ್ಲೆಲ್ಲಿಯೂ ಹರಡಿತ್ತು. ಕಾರಣ ಹಲವರು ವಿದ್ಯೆಯನ್ನು ಕಲಿಯಬೇಕೆಂಬ ಲವಲವಿಕೆಯಿಂದ ತುಳಸೀದಾಸನನ್ನು ಆಶ್ರಯಿಸಿದ್ದರು. ತುಳಸೀದಾಸನು ತನ್ನ ಗೃಹಸ್ಥಾಶ್ರಮದ ಪ್ರಾರಂಭದಲ್ಲಿ ಈ ವಿದ್ಯಾರ್ಥಿಗಳಿಗೆ ಆಶ್ರಯಕೊಟ್ಟಿದ್ದನು; ಹಾಗು ಆಸ್ಥೆಯಿಂದ ಕಲಿಸುತ್ತಿದ್ದನು. ಆದರೆ ಆ ಆಸ್ಥೆಯು ಬಹುಕಾಲ ಉಳಿಯಲಿಲ್ಲ. ತುಳಸೀದಾಸನು ಹೆಂಡತಿಯ ಕಡೆಗೆ ಹೆಚ್ಚು ಹೆಚ್ಚು ಲಕ್ಷ್ಯಪೂರೈಸುತ್ತ ನಡೆದಂತೆ, ಅಧ್ಯಾಪನೆಯ ಕಾರ್ಯದಲ್ಲಿ ಅಲಕ್ಷ್ಯಮಾಡಹತ್ತಿದನು. ವಿದ್ಯಾರ್ಥಿಗಳ ಅಭ್ಯಾಸವು ಸರಿಯಾಗಿ ನಡೆಯದಾಯಿತು. ಇನ್ನು ತುಸ ದಿವಸ ಹೀಗೆಯೇ ಸಾಗಿದರೆ, ಗುರುವು ತಮ್ಮನ್ನು ಪೂರಾ ಮರೆದು ಬಿಡುವನೆಂದು ವಿದ್ಯಾರ್ಥಿಗಳಿಗೆ ಅನಿಸಹತ್ತಿತು. ಅವರ ಒಬ್ಬೊಬ್ಬರಾಗಿ ತುಳಸೀದಾಸನನ್ನು ಬಿಟ್ಟು ಹೊರಟು ಹೋದರು. ಅಲ್ಪಾವಕಾಶದಲ್ಲಿ ತುಳಸೀದಾಸನ ಪಾಠಶಾಲೆಯು ಅಚಲವಾಗಿಹೋಯಿತು. ಆದರೂ ತುಳಸೀದಾಸನು ಎಚ್ಚರಿಯಲಿಲ್ಲ. ಇವನು ವಿಷಯಲಂಪಟತೆಯಲ್ಲಿ

ಕ್ರಮೇಣ ಮುಂದಡಿಯಿಡುತ್ತಲೇ ಸಾಗಿದ್ದನು.

ತುಳಸೀದೇವಿಯು ಮನೆತನದ ಸ್ಥಿತಿಯನ್ನೂ ಮಗನ ಇರುವಿಕೆಯನ್ನೂ ನೋಡಿ ವ್ಯಥೆಗೊಂಡಳು. ಆದರೂ ಅವಳು ಬಾಯಿಬಿಡುವಂತಿರಲಿಲ್ಲ. ಮಗನ ಹಟವಾದಿತನವು ಅವಳಿಗೆ ಪೂರಾ ಗೊತ್ತಾಗಿತ್ತು. ತಾನು ಏನಾದರೊಂದು ಮಾತನಾಡಿದರೆ, ಮಗನು ಮನಸ್ಸಿಗೆ ಹಚ್ಚಿಕೊಂಡು ಮನೆಬಿಟ್ಟು ಹೊರಟುಹೋದಾನೆಂಬ ಭಯವು ಅವಳಿಗೆ ಬಹಳವಾಗಿತ್ತು. ಆದುದರಿಂದ ಆ ಪ್ರೇಮಳ ಮಾತೆಯು ಯಾವುದನ್ನೂ ನುಡಿಯದೆ, ನಡೆದುದನ್ನು ಅನಿಚ್ಛೆಯಿಂದ ನೋಡುತ್ತಿದ್ದಳು.

ಹೀಗಿರಲೊಂದು ದಿನ ರತ್ನಾವಳಿಯು ತಮ್ಮ ಪ್ರಥಮಮಿಲನದ ನದೀತೀರದ ಆ ಪ್ರದೇಶವನ್ನು ನೋಡಬಯಿಸಿದಳು. ತುಳಸೀದಾಸನು ಮಡದಿಯ ಮನೋಬಯಿಕೆಯನ್ನು ತೀರಿಸುವ ವಿಷಯದಲ್ಲಿ ಬದ್ಧಕಂಕಣನು. ಅವನು ತಡಮಾಡದೆ ಹೆಂಡತಿಯನ್ನು ಕರಕೊಂಡು ಅಂದೇ ಆ ಸ್ಥಳವನ್ನು ನೋಡಲಿಕ್ಕೆ ಹೊರಟನು.

ದಂಪತಿಗಳು ಸರಸ ಸಲ್ಲಾಪಗಳನ್ನಾಡುತ್ತ ಆ ಪ್ರದೇಶಕ್ಕೆ ಹೋದರು. ತುಳಸೀದಾಸನು ತನ್ನ ತಪಸ್ಸಾಧನೆಯ ಆ ಜಾಗೆಯನ್ನು ನೋಡಿದನು. ಆ ಅತ್ತಿಯ ಮರವು ಹಾಗೆಯೆ ನಿಂತುಕೊಂಡಿತ್ತು. ತುಳಸೀದಾಸನು ನಿತ್ಯದ ಪೂಜೆಗಾಗಿ ಶ್ರೀ ರಾಮನ ಮೃಣ್ಮಯ ಮೂರ್ತಿಯೊಂದನ್ನು ಗಿಡದ ಬೊಡ್ಡೆಯಲ್ಲಿರಿಸಿದ್ದನು. ಆ ಮೂರ್ತಿಯು ಕೆಳಗೆ ಬಿದ್ದು ಚೂರುಚೂರಾಗಿ ಹೋಗಿತ್ತು. ತುಳಸೀದಾಸನು ಅಂದು ಜಪಮಾಲೆಯನ್ನು ಅಲ್ಲಿಯೇ ಬಿಟ್ಟು ಹೊರಟಿದ್ದನು. ಇಂದು ಆ ಜಪಮಾಲೆಯು ಅಲ್ಲಿರಲಿಲ್ಲ. ಮಣಿಗಳು ಮಾತ್ರ ಅತ್ತಿತ್ತ ಬಿದ್ದುಕೊಂಡಿದ್ದವು. ಶೋಭಾಹೀನವಾದ ಆ ಸ್ಥಳವನ್ನೂ ಅಸ್ತವ್ಯಸ್ತವಾಗಿ ಬಿದ್ದಿದ್ದ ಸಾಮಾನುಗಳನ್ನೂ ನೋಡಿ, ತುಳಸೀದಾಸನು ಅವ್ಯಕ್ತವೇದನೆಯಿಂದ ಅಭಿಭೂತನಾದನು. ಮುನ್ನಿನ ಸಂಗತಿಗಳು ಒಂದೊಂದಾಗಿ ಅವನ ಸ್ಮರಣೆಯಲ್ಲಿ

ಬರಹತ್ತಿದವು. ದುಃಖವು ಒತ್ತರಿಸ ಹತ್ತಿತು.

ರತ್ನಾವಳಿಯು ಪತಿಯ ಈ ಸ್ಥಿತಿಯನ್ನು ಲಕ್ಷಿಸಲಿಲ್ಲ. ಅವಳು ಪತಿಯ ಹೆಗಲ ಮೇಲೆ ಕೈಯಿರಿಸಿ:—ಪ್ರಾಣನಾಥ, ನಮ್ಮೊರ್ವರ ಪ್ರಥಮ ಸಂದರ್ಶನವು ಈ ಪವಿತ್ರ ಸ್ಥಳದಲ್ಲಾಯಿತಲ್ಲವೆ? ಎಂದು ಕೇಳಿದಳು.

ತುಳಸೀದಾಸನು ಒತ್ತಿ ಒರುತ್ತಿರುವ ಕಣ್ಣೀರುಗಳನ್ನು ಬಲವಾದ ಶಕ್ತಿಯಿಂದ ತಡೆಯಲಿಕ್ಕೆ ಯತ್ನಿಸಿದನು. ಅವನ ಬಾಯಿಂದ ಶಬ್ದಗಳು ಹೊರಡಲಿಲ್ಲ.

ರತ್ನಾವಳಿಯು ಪತಿಯ ಮನಃಸ್ಥಿತಿಯನ್ನು ತಿಳಿದಳು. ಯಾವುದು ತುಳಸೀದಾಸನಿಗೆ ಅನುತಾಪದ ಸಂಗತಿಯಾಗಿತ್ತೋ ಅದು ರತ್ನಾವಳಿಗೆ ಆನಂದದ ವಿಷಯವಾಗಿತ್ತು. ತುಳಸೀದಾಸನು ತನ್ನ ಈಗಳಿನ ಹಾಗು ಮುನ್ನಿನ ಸ್ಥಿತಿಯನ್ನಾಲೋಚಿಸಿ, ನಶ್ವರವಾದ ವಿಷಯ ಸುಖದ ವ್ಯಾಮೋಹದಿಂದ ತಪಸ್ಸಾಮರ್ಥ್ಯವನ್ನೆಲ್ಲ ಹಾಳು ಮಾಡಿಕೊಂಡೆನಲ್ಲ! ಎಂದು ಹಳಹಳಿಸುತ್ತಿದ್ದನು. ರತ್ನಾವಳಿಯು ತನ್ನ ರೂಪ ಪ್ರಭೆಯಿಂದ, ಮಾತಿನ ಜಾಣ್ಮೆಯಿಂದ, ಯೋಗಿವರ್ಯನನ್ನು ಯೋಗ ಮಾರ್ಗದಿಂದ ಬಿಡಿಸಿ, ಕೈಯಲ್ಲಿ ತಕ್ಕೊಂಡು ಹೇಳಿದಂತೆ ಕುಣಿಯ ಹಚ್ಚಿರುವೆನಲ್ಲ! ಎಂದು ಅಭಿಮಾನ ಬಡುತ್ತಿದ್ದಳು.

ಪತಿಯ ಅನುತಾಪವನ್ನು ಸ್ಥಿರವಾಗಿರಿಸುವುದು ರತ್ನಾವಳಿಗೆ ಇಷ್ಟವಾಗಿರಲಿಲ್ಲ. ಕಾರಣ ಅವಳು ಪತಿಯ ಮನೋಭಾವನೆಯನ್ನರಿಯದವಳಂತೆ ನಟಿಸಿ "ಈ ಗಿಡದ ಬುಡದಲ್ಲಿ ಧ್ಯಾನಸ್ಥರಾಗಿ ಕುಳಿತಿದ್ದ ನಿಮ್ಮ ಮುಖವು ಅಂದು ನನಗೆ ಚಂದ್ರ ಬಿಂಬದಂತೆ ಸುಂದರವಾಗಿ ತೋರಿತು!" ಅಚ್ಛೆಯಿಂದ ಮಾತಾಡಿದಳು.

ತುಳಸೀದಾಸನು ಮಡದಿಯ ಮುಖವನ್ನು ನೋಡಿದನು. ಆ ವೇಳೆಯಲ್ಲಿ ಯಾವ ಮೋಹಿನೀ ಶಕ್ತಿಯಿದ್ದಿತೊ ಏನೋ! ಆ ಚಂದ್ರ ಬಿಂಬದಂತಹ ಸುಂದರ ಮುಖದಲ್ಲಿ ಮಿನುಗುತಲಿದ್ದ ಅಭಿಮಾನದ ಎಳೆ

ನಗುವನ್ನು ನೋಡಿ ತುಳಸೀದಾಸನ ಅನುತಾಪವು ಕಾಲ್ದೆಗೆಯುಹತ್ತಿತು.

ನಾಥರೆ, ಈ ಮನೋಹರವಾದ ಮುಖದ ಪ್ರಥಮ ಸಂದರ್ಶನ ಸಮಯದಲ್ಲಿ ನನಗಾದ ಆನಂದಕ್ಕೆ ಮೇರೆಯಿರಲಿಲ್ಲ. ನಾನು ಆನಂದಾತಿರೇಕದಿಂದ ಹುಚ್ಚಳಂತೆ ತಮ್ಮ ಮೋರೆಯನ್ನು ನೋಡುತ್ತ ನಿಂತು ಬಿಟ್ಟಿದ್ದೆನು! ಎಷ್ಟು ಹೊತ್ತು ನೋಡಿದರೂ, ತೃಪ್ತಿಯಾಗಲಿಲ್ಲ. ರತ್ನಾವಳಿಯು ಮತ್ತೆ ನುಡಿದಳು.

ತುಳಸೀದಾಸನು ಮತ್ತೆ ಜಡಸ್ಮೃತಿಯಲ್ಲಿ ಕಾಲಿಟ್ಟನು. ಕ್ಷಣಿಕವಾದ ಉಚ್ಚ ವಿಚಾರಗಳು ಮಾಯವಾಗಿ ಹೋಗಿ ಬಿಟ್ಟಿದ್ದವು. ಆ ಸ್ಥಳದಲ್ಲಿ ಸತಿಯ ಸಂಬಂಧದ ವಿಚಾರಗಳು ತಲೆದೋರುವುದರಲ್ಲಿದ್ದವು. "ಪ್ರಿಯೆ, ಅಂದು ನಾನು ನಿನಗೆ ಹಾಗೆ ಕಂಡೆನಲ್ಲವೆ? ಇಂದು ಹೇಗೆ ಕಾಣುತ್ತಿರುವೆನು?" ತುಳಸೀದಾಸನು ಕೇಳಿದನು.

ಇಂದು ಅಂದಿಗಿಂತಲೂ ಮನೋಹರರಾಗಿರುವಿರಿ! ನಿಮ್ಮ ಮುಖವು ಅನುಪಮೇಯವಾದುದು! ಇದನ್ನು ಸರಿಗಟ್ಟುವ ವಸ್ತುವು ಬೇರೊಂದಿಲ್ಲವೆಂದೇ ನನ್ನ ಭಾವನೆ! ರತ್ನಾವಳಿಯು ನಗೆಮೊಗದಿಂದ ನುಡಿದಳು.

ಸತಿಯ ಈ ಸರಸ ಮಾತಿನಿಂದ ತುಳಸೀದಾಸನಿಗೆ ಬಹಳ ಆನಂದವಾಯಿತು. ಜಾಗ್ರತವಾಗುತ್ತ ನಡೆದಿದ್ದ ಪತ್ನೀ ಪ್ರೇಮವು ಅವನನ್ನು ಸರಸ ಸಲ್ಲಾಪಕ್ಕೆ ಮತ್ತೆ ಹುರಿದುಂಬಿಸಹತ್ತಿತು.

ತಂಗಾಳಿಯು ಮಂದಮಂದವಾಗಿ ಸುಳಿಯುತಲಿತ್ತು. ಗಿಡದ ಮೇಲಿನ ಕೋಗಿಲೆಯೊಂದು ಕುಹೂ ಕುಹೂ, ಎಂದು ಮಂಜುಳವಾದ ಧ್ವನಿಮಾಡಿತು.

ಪ್ರಿಯೆ, ಪತಿದಾಕ್ಷಿಣ್ಯಕ್ಕೊಳಗಾಗಿ ನೀನು ಹೀಗೆ ನುಡಿಯುತ್ತಿರುವೆ! ಅಲ್ಲದೆ, ಅಂಥ ವೈಶಿಷ್ಟ್ಯವೇನೂ ನನ್ನ ಮೋರೆಯಲ್ಲಿಲ್ಲ. ಆ ವೈಶಿಷ್ಟ್ಯವು ಎಲ್ಲಿಯಾದರೂ ಪೂರ್ಣತೆಯಿಂದ ವಾಸಿಸುತ್ತಿದ್ದರೆ, ಅದು ನಿನ್ನ

ಮುಖದಲ್ಲಿಯೇ ಎಂದು ನಾನು ಪಣವಾಡಿ ಹೇಳಬಲ್ಲೆನು! ನಿನ್ನ ಮುಖವನ್ನು ನೋಡುವ ಮೊದಲು ನಾನು ನಿನ್ನನ್ನು ಉಪೇಕ್ಷಿಸಿದ್ದೆನು. ನಿನ್ನ ತಂದೆಯ ಬಿನ್ನಹವನ್ನು ಅವಮಾನ್ಯ ಮಾಡಿದ್ದೆನು. ಆಪ್ತೇಷ್ಟರ ಮಾತನ್ನು ಅಲ್ಲಗಳೆದಿದ್ದೆನು. ಜನ್ಮದಾತೆಯ ಆಗ್ರಹವನ್ನು ಅಲಕ್ಷಿಸಿದ್ದೆನು. ಅದೇ ನಾನು ನಿನ್ನ ಮುಖವನ್ನು ನೋಡುತ್ತಲೆ ಎಲ್ಲವನ್ನೂ ಮರೆದೆನು. ಅಂದು ಧ್ಯಾನ ನಿವೃತ್ತನಾದ ನಾನು ಕಣ್ದೆರೆದು ನೋಡಿದಾಗ, ನೀನು ಭುವನ ಮೋಹಿನೀರೂಪದಿಂದ ನಿಂತುಕೊಂಡು ದಶದಿಕ್ಕುಗಳನ್ನು ಬೆಳಗುತ್ತಲಿರುವುದು ನನಗೆ ಕಾಣಿಸಿತು. ಆಗ ನನಗೆ ನಿನ್ನ ಈ ಮನೋಹರ ಮೂರ್ತಿಯು ಹೊರತು ಬೇರೇನೂ ಕಾಣಲಿಲ್ಲ. ಸೃಷ್ಟಿಯ ಸೊಬಗೆಲ್ಲವೂ ನಿನ್ನಲ್ಲಿ ಏಕತ್ರಿತವಾಗಿರುವಂತೆ ತೋರಿತು ನಾನು ಎಲ್ಲವನ್ನೂ ಮರೆದು ಕೇವಲ ನಿನ್ನನ್ನೇ ನೋಡುತ್ತ ಕುಳಿತು ಬಿಟ್ಟೆನು. ತುಳಸೀದಾಸನು ಹೇಳಿದನು.

ಅಮ್ಮಯ್ಯಾ! ನನ್ನ ಈ ಸುಡುಗಾಡ ಮೋರೆಯಲ್ಲಿ ಇಂತಹ ಶಕ್ತಿಯಿದ್ದೀತೆಂದು ನನಗೆ ಗೊತ್ತಿರಲಿಲ್ಲವಲ್ಲ! ರತ್ನಾವಳಿಯು ಆಶ್ಚರ್ಯವನ್ನು ನಟಿಸುತ್ತ ನುಡಿದಳು.

ಅಂತೆಯೆ ನಾನು ಗುಡ್ಡವನ್ನು ಸುತ್ತಿಕೊಂಡು ಮೈಲಾರಕ್ಕೆ ಬರಬೇಕಾಯಿತು. ನಿನ್ನ ಈ ಅದ್ವಿತೀಯ ಮುಖದ ಮಹಾಶಕ್ತಿಯ ಕಲ್ಪನೆಯು ನಿನಗಾಗಲಿ, ನಿನ್ನ ತಂದೆಗಾಗಲಿ ಗೊತ್ತಿದ್ದರೆ, ನಾನು ಸಂನ್ಯಾಸ ಗ್ರಹಣಕ್ಕಾಗಿ ಗೃಹತ್ಯಾಗಿಯಾಗುತ್ತಿದ್ದೆನೆಲ್ಲಿ? ನಿನ್ನ ಜನಕನು ಮಾತಬೆಳೆಸುತ್ತ ಕಾಲಯಾಪನೆ ಮಾಡದೆ, ನಿನ್ನನ್ನು ಕರೆತಂದು ನನ್ನ ಮುಂದೆ ನಿಲ್ಲಿಸಿ ಬಿಟ್ಟಿದ್ದರೆ, ಕೂಡಲೆ ಕೃತಕಾರ್ಯನಾಗಿ ಹೋಗುತ್ತಿದ್ದನು. ಇರಲಿ. ಪ್ರಿಯೆ, ಈ ವರೆಗೆ ಜಾಗ್ರತಾವಸ್ಥೆಯಲ್ಲಿಯ ನಿನ್ನ ಮುಖದರ್ಶನದ ಫಲಶ್ರುತಿಯನ್ನು ವಿವರಿಸಿದೆನು. ಇನ್ನು ಸ್ವಪ್ನಾವಸ್ಥೆಯಲ್ಲಿಯ ನಿನ್ನ ಮೋರೆಯ ನೋಟದ ಪರಿಣಾಮವನ್ನು ಹೇಳುವೆನು, ಕೇಳು. ಸಾಧ

ಸಾಯಿ ಬಲದಿಂದ ಶ್ರೀರಾಮನನ್ನು ಕಂಡೇ ತೀರಬೇಕೆಂಬ ದೃಢಸಂಕಲ್ಪ ಮಾಡಿಕೊಂಡ ನಾನು, ವಿವಾಹವನ್ನು ಅಲ್ಲಗಳೆದು ಮನೆಬಿಟ್ಟು ಹೊರಟೆನು. ಸದ್ಗುರುವಿನ ಶೋಧಕ್ಕಾಗಿ ಸಂಚರಿಸ ಹತ್ತಿದೆನು. ಹೀಗೆ ಅಲೆಯುತ್ತಿದ್ದ ನಾನು ಒಂದು ದಿನ ರಾತ್ರಿಯಲ್ಲಿ ಒಂದು ಗ್ರಾಮದಲ್ಲಿಯ ಶ್ರೀರಾಮಮಂದಿರದಲ್ಲಿ ಮಲಗಿದ್ದೆನು. ಕನಸಿನಲ್ಲಿ ಶ್ರೀ ರಾಮನು ಬಂದು ನನಗೆ ನಿನ್ನನ್ನು ತೋರಿದನು. ಇವಳು ನಿನ್ನ ಹೆಂಡತಿಯು, ನೀನಿವಳೊಡನೆ ಪ್ರಪಂಚ ಮಾಡು, ಎಂದು ಹೇಳಿದನು. ನಾನು ನಿನ್ನ ಕಡೆಗೆ ನೋಡಿದೆನು. ಎಷ್ಟು ಹೊತ್ತು ನಿನ್ನ ಕಡೆಗೆ ನೋಡುತ್ತಲಿದ್ದೆನೆಂಬದನ್ನು ನಾನರಿಯೆನು. ನಿನ್ನಿಂದ ದೃಷ್ಟಿಯನ್ನು ಹೊರಳಿಸಿ ನೋಡುವಷ್ಟರಲ್ಲಿ ಶ್ರೀರಾಮನು ಕಾಣದಾಗಿದ್ದನು. ತಿರುಗಿ ನಿನ್ನನ್ನು ನೋಡುವಷ್ಟರಲ್ಲಿ ನೀನೂ ಮಾಯವಾಗಿದ್ದೆ. ಆಶ್ಚರ್ಯದಿಂದ ಎಚ್ಚರಾಗಿ ನೋಡಿದೆನು. ಏನೂ ಇರಲಿಲ್ಲ ಆ ಭವ್ಯಮಂದಿರದಲ್ಲಿ ನಾನೊಬ್ಬನೇ ಮಲಗಿದ್ದೆನು. ಬೆಳಗ ಬಂದಿತ್ತು. ಹಾಸಿಗೆಯಿಂದೆದ್ದು ಶ್ರೀರಾಮನ ಮೂರ್ತಿಯ ಮುಂದೆ ನಿಂತು ಪ್ರಾರ್ಥನೆಯ ಮಾಡಿಕೊಂಡು ನಿನ್ನ ಶೋಧಕ್ಕೆ ಉದ್ಯುಕ್ತನಾದೆನು. ನಿನ್ನ ಪ್ರತ್ಯಕ್ಷ ದರ್ಶನದ ಹಂಬಲದಿಂದ ಎಷ್ಟು ಗ್ರಾಮಗಳನ್ನಲೆದೆನು, ಎಷ್ಟು ಗುಡ್ಡಗಳನ್ನು ಸುತ್ತ ಹಾಕಿದೆನು, ಎಷ್ಟು ನದಿಗಳನ್ನು ದಾಟಿದೆನು ಎಂಬುದರ ಪರಿಮಿತಿಯಿಲ್ಲ. ಎಷ್ಟು ಹುಡುಕಿದರೂ ನಿನ್ನ ದರ್ಶನವು ನನಗಾಗಲಿಲ್ಲ ಕಡೆಯಲ್ಲಿ ನಿರಾಶನಾಗಿ ಕರ್ತಾರಪುರಕ್ಕೆ ಹೋದೆನು. ಬಾಬಾ ನಾನಕನು ಈ ಸ್ಥಳದಲ್ಲಿ ದೇಹವಿರಿಸಿದ್ದನು. ಆ ಮಹಾತ್ಮನ ವಿಷಯದಲ್ಲಿ ನಾನು ದೇಹವೆಂಬ ಶಬ್ದವನ್ನು ಪಯೋಗಿಸುವುದು ಅಯುಕ್ತವೇ ಸರಿ. ಯಾಕೆಂದರೆ, ಬಾಬಾ ನಾನಕನ ಮರಣದ ತರುವಾಯ ಹಿಂದೂ-ಮುಸಲ್ಮಾನರು ಶವದ ಸಲುವಾಗಿ ಒಡೆದಾಡ ಹತ್ತಿದರು. ಈ ಕಲಹವು ಬರಬರುತ್ತ ವಿಕೋಪಕ್ಕೆ ಹೋಗಹತ್ತಿತು. ಇಬ್ಬ ಸಮಂಜಸ ಭಕ್ತನುನ ಡೆದಿರುವ ಕಲಹವನ್ನು ನೋಡಿ ವ್ಯಥೆಗೊಂಡ

ವನಾಗಿ ಗುರುವಿನ ನಾಮಸ್ಮರಣೆ ಮಾಡಿ, ಶವದ ಮೇಲಿನ ಬಟ್ಟೆಯನ್ನು ತೆಗೆದನು. ಒಳಗೆ ಏನೂ ಇರಲಿಲ್ಲ. ಹಿಂದೂ-ಮುಸಲ್ಮಾನರು ನಾಚಿಕೊಂಡವರಾಗಿ ಕಲಹದಿಂದ ನಿವೃತ್ತರಾದರು. ಬಾಬಾ ನಾನಕನ ಶಕ್ತಿಯು ಇಷ್ಟು ಅದ್ಭುತವಾದುದು! ನಾನವನ ವರದಿಂದ ಹುಟ್ಟಿದವನು. ನಾನು ಒಂದು ದಿವಸ ಕರ್ತಾರಪುರದಲ್ಲಿದ್ದು ಬಾಬಾ ನಾನಕನ ಧ್ಯಾನ ಮಾಡಿದೆನು. ನನಗೆ ದಾರಿಯನ್ನು ತೋರೆಂದು ಪ್ರಾರ್ಥಿಸಿಕೊಂಡೆನು. ಅಂದಿನ ರಾತ್ರಿಯು ಕನಸಿನಲ್ಲಿ ಬಾಬಾ ನಾನಕನು ನನಗೆ ದರ್ಶನಕೊಟ್ಟನು. ಹೀಗೆ ಅಲೆಯುವದನ್ನು ಬಿಟ್ಟು ಈ ಸ್ಥಳದಲ್ಲಿ ವಾಸಿಸೆಂದೂ, ನಿನ್ನ ಹೆಂಡತಿಯು ತಾನೇ ತಾನಾಗಿ ನಿನ್ನ ಹತ್ತಿರ ಬರುವಳೆಂದೂ ಹೇಳಿದನು. ನಾನು ಮರುದಿನವೇ ಹೊರಟು ಇಲ್ಲಿಗೆ ಬಂದೆನು. ಚಾತಕ ಪಕ್ಷಿಯು ಮಳೆಯ ಹಾದಿಯನ್ನು ನೋಡುತ್ತಿರುವಂತೆ ನಿನ್ನ ಮಾರ್ಗಪ್ರತೀಕ್ಷೆ ಮಾಡುತ್ತ ಕಾಲಕಳೆಯ ಹತ್ತಿದೆನು. ತುಳಸೀದಾಸನು ಹೇಳಿದನು.

ಹೀಗಿದ್ದರೆ, ನಿಮ್ಮ ಆ ವೇಷವೂ, ಧ್ಯಾನ-ಧಾರಣೆಗಳೂ ಡಾಂಭಿಕವಾದವುಗಳೆಂಬುದು ಸ್ಪಷ್ಟವಲ್ಲವೇ? ರತ್ನಾವಳಿಯು ಕೇಳಿದಳು.

ನಿಜ; ಕನಸಿನಲ್ಲಿ ನಿನ್ನನ್ನು ನೋಡಿದಾಗಿನಿಂದ, ಧ್ಯಾನ-ಧಾರಣೆಗಳಲ್ಲಿ ಮನಸ್ಸು ರವಿ ಸದಾಗುತ್ತ ನಡೆಯಿತು. ಆದರೂ ಕರ್ತವ್ಯವನ್ನು ಬಿಡಕೂಡದೆಂದು ಮೊದಲಿನ ಪದ್ಧತಿಯನ್ನು ಬಿಟ್ಟಿರಲಿಲ್ಲ. ತುಳಸೀದಾಸನು ಹೇಳಿದನು.

ಹೀಗಿದ್ದರೆ, ನಾನು ನಿಮ್ಮ ತಪಶ್ಚರ್ಯವನ್ನು ಕೆಡಿಸಿದಂತಾಗಲಿಲ್ಲ. ರತ್ನಾವಳಿಯು ಅಂದಳು.

ನನ್ನ ತಪಸ್ಸನ್ನು ಕೆಡಿಸಿದವರಾರು? ಮೇನಕೆಯು ವಿಶ್ವಾಮಿತ್ರನ ತಪಸ್ಸನ್ನು ಭಂಗಗೊಳಿಸಿದಂತೆ, ನೀನು ನನ್ನನ್ನು ನನ್ನ ಉಚ್ಚಧ್ಯೇಯದಿಂದ ಬಿಡುಗಡೆ ಮಾಡಲಿಲ್ಲವೇ? ಇಲ್ಲವಾದರೆ, ಶ್ರೀರಾಮನ ಶೋಧಕ್ಕಾಗಿ ಹೊರಟ ನಾನು ಅವನನ್ನು ಮರೆದು, ನಿನ್ನ ದರ್ಶನಕ್ಕಾಗಿ ಬಳಲು

ತ್ತಿದ್ದೇನೆ? ತುಳಸೀದಾಸನು ಕೇಳಿದನು.

ನಿಮ್ಮನ್ನು ನಿಮ್ಮ ಮುಕ್ತಿಯ ಮಾರ್ಗದಿಂದ ಹೊರಳಿಸಿದವಳು ನಾನಲ್ಲ! ಇದು ನಿಮ್ಮ ಪ್ರಾಚೀನ ಕರ್ಮದ ಫಲ! ಇಲ್ಲವೆ ಆ ಕರುಣಾ ಸಾಗರನಾದ ಶ್ರೀ ಹರಿಯು ನೀವು ಮುಕ್ತಿಯ ಮಾರ್ಗದಲ್ಲಿ ಸಂಚರಿಸುವು ದಕ್ಕಿಂತ ಈ ದಾರಿಯಲ್ಲಿ ವ್ಯವಹರಿಸುವದು ಹಿತಕರವೆಂದು ಬಗೆದು ಹೀಗೆ ಮಾಡಿರಬಹುದು! ರತ್ನಾವಳಿಯು ಹೇಳಿದಳು.

ಪ್ರಿಯೆ, ಹೇಗೇ ಇರಲಿ. ಈ ಮಾರ್ಗವನ್ನು ಹಿಡಿದುದಕ್ಕಾಗಿ ನನಗೆ ದುಃಖವಿಲ್ಲ! ಶ್ರೀ ರಾಮನು ನನ್ನನ್ನು ಯಾವ ಸ್ಥಿತಿಯಲ್ಲಿರಿಸುವನೋ ಆ ಸ್ಥಿತಿಯಲ್ಲಿ ನಾನು ಸಮಾಧಾನದಿಂದಿರುವೆನು. ತುಳಸೀದಾಸನು ಹೇಳಿದನು.

ನಿಮಗೆ ಯಾವ ದಿವಸ ಕನಸು ಬಿದ್ದಿತ್ತು? ನೀವು ಎಂದು ಕನ ಸಿನಲ್ಲಿ ನನ್ನನ್ನು ಕಂಡಿರಿ? ರತ್ನಾವಳಿಯು ಕೇಳಿದಳು.

ಹೋದ ರಾಮನವಮಿಯ ದಿವಸ. ತುಳಸೀದಾಸನು ಹೇಳಿದನು.

ನಾನೂ ಅಂದೇ ಸ್ವಪ್ನದಲ್ಲಿ ನಿಮ್ಮನ್ನು ನೋಡಿದೆನು. ರತ್ನಾವಳಿಯು ಹೇಳಿದಳು.

ನಿನಗೂ ನನ್ನಂತೆಯೆ ಕನಸು ಬಿದ್ದಿತ್ತೇ? ನೀನು ಕನಸಿನಲ್ಲಿ ನನ್ನನ್ನು ನೋಡಿದೆಯಾ? ಒಂದೇ ದಿನ ನಾವಿಬ್ಬರು ಒಂದೇ ವಿಧದ ಕನಸು ಕಂಡ ದ್ದು ಆಶ್ಚರ್ಯವೇ ಸರಿ! ತುಳಸೀದಾಸನೆಂದನು.

ಆಶ್ಚರ್ಯವೇನಿದರಲ್ಲಿ? ನನ್ನ-ನಿಮ್ಮ ದೇಹಗಳು ಭಿನ್ನವಾದರೂ ಆತ್ಮವು ಒಂದೇ! ನಿಮ್ಮ ಅರ್ಧಾಂಗಿಯೆಂದು ಹೆಸರಿಟ್ಟು ನನ್ನನ್ನು ಹುಟ್ಟಿ ಸಿದ ಆ ಸೃಷ್ಟಿಕರ್ತನು ನಿಮ್ಮನ್ನು ನನ್ನ ಹತ್ತಿರಕ್ಕೆ ಕರದೇಕಾಗಿತ್ತು. ಇದಕ್ಕಾಗಿ ಅವನು ಕನಸಿನ ಆಟವನ್ನು ಹೂಡಿರಬಹುದು! ರತ್ನಾವಳಿಯು ನುಡಿದಳು.

ಇರಬಹುದು. ಆ ಲೀಲಾಮಯನ ಅಗಾಧ ಲೀಲೆಯು ನಮ್ಮಂಥ

ಅಲ್ಪಮತಿಗಳಿಗೆ ಹೇಗೆ ಹೊಳೆದೀತು? ತುಳಸೀದಾಸನಂದನು.

ಪ್ರಿಯರೆ, ನಾನು ನನ್ನ ಕನಸಿನ ಸಂಗತಿಯನ್ನು ಹೇಳುವೆನು, ಕೇಳಿರಿ. ನಾನು ಕನಸಿನಲ್ಲಿ ಕಂಡದ್ದು ನಿಮ್ಮೊಬ್ಬರನ್ನೇ ಅಲ್ಲ, ಬೇರೊಂದು ಮೂರ್ತಿಯು ನಿಮ್ಮ ಪಕ್ಕದಲ್ಲಿತ್ತು. ಆ ವ್ಯಕ್ತಿಯು ನಿಮಗಿಂತ ಸುಂದರವಾದುದು. ತೇಜೋಮಯವಾದದ್ದು. ನಾನು ಮೊದಲು ಆ ಸುಂದರ ಮೂರ್ತಿಯನ್ನೇ ನೋಡುತಲಿದ್ದೆನು. ರತ್ನಾವಳಿಯು ಹೇಳಿದಳು.

ಅವನಾರು? ತುಳಸೀದಾಸನು ಕೇಳಿದನು.

ಅವನು ಯಾರೆಂಬುದನ್ನು ನಾನು ನಿಶ್ಚಿತವಾಗಿ ಅರಿಯೆನು. ಅವನು ನಿಮ್ಮ ಉಪಾಸ್ಯದೇವನಾದ ರಘುರಾಮನಾಗಿರಬಹುದು. ನಾನು ಮೈಮರೆದು ನೋಡುತ್ತಿರುವುದನ್ನು ಕಂಡ ಆ ಮಹನೀಯನು ನನಗೆ ನಿಮ್ಮನ್ನು ತೋರಿಸಿ:—ಇಲ್ಲಿ ನೋಡು. ನನ್ನ ಪರಮಭಕ್ತನಾದ ತುಳಸೀದಾಸನು-ನಿನ್ನ ಪತಿಯು, ಎಂದು ಹೇಳಿದನು. ಬಳಿಕ ನಾನು ನಿಮ್ಮನ್ನು ನೋಡಿದೆನು. ಲಜ್ಜೆಯಿಂದ ತಲೆ ಬಾಗಿದೆನು. ಮತ್ತೆ ಮೋರೆಯನ್ನೆತ್ತಿ ನೋಡುವಷ್ಟರಲ್ಲಿ ಅಲ್ಲಿ ನೀವೀರ್ವರೂ ಇರಲಿಲ್ಲ. ನಾನು ಎಚ್ಚತ್ತು, ಸ್ವಪ್ನದ ನಾವೀನ್ಯವನ್ನು ನೆನೆಯುತ್ತ ಶೇಷರಾತ್ರಿಯನ್ನು ಕಳೆದೆನು. ಅಂದಿನ ರಾತ್ರಿಯಲ್ಲಿ ಪುನಃ ನನಗೆ ನಿದ್ದೆ ಹತ್ತಲಿಲ್ಲ ರತ್ನಾವಳಿಯು ಹೇಳಿದಳು.

ನೀನು ಕನಸಿನಲ್ಲಿ ನೋಡಿದ ಆ ಬೇರೊಬ್ಬ ಮನುಷ್ಯನು ಹೇಗಿದ್ದನು? ಅವನು ಶ್ರೀರಾಮಚಂದ್ರನೇ ಇರಬಹುದೆಂದು ನೀನು ಹೇಗೆ ಊಹಿಸಿದೆ? ತುಳಸೀದಾಸನು ಕೇಳಿದನು.

ನಾನು ಹಲವರು ಪುರಾಣಿಕರ ಮುಖದಿಂದ ಅನೇಕಸಾರೆ ರಾಮಾಯಣವನ್ನು ಕೇಳಿದ್ದೇನೆ. ಪುರಾಣಿಕರು ವರ್ಣಿಸುತ್ತಿರುವ ಶ್ರೀರಾಮನಂತೆ ನನ್ನ ಕನಸಿನ ವ್ಯಕ್ತಿಯಿತ್ತು. ನೀಲಮೇಘಶ್ಯಾಮವರ್ಣ ಬಲಿಷ್ಠ

ವಾದ ದೇಹ ಆ ಕರ್ಣವಿಶ್ರಾಂತವಾದ ಕಣ್ಣುಗಳು. ಕಮಲದಂತೆ ಮನೋಹರವಾದ ಮುಖ ಕೈಯಲ್ಲಿ ಧನುರ್ಬಾಣಗಳು. ಇಂತಹ ಅವನು ಶ್ರೀರಾಮನಲ್ಲದೆ ಅನ್ಯನಾಗಿರಲಿಕ್ಕಿಲ್ಲೆಂದು ನನ್ನ ತರ್ಕ. ರತ್ನಾವಳಿಯು ಹೇಳಿದಳು.

ನೀನು ಅವನನ್ನು ವಿಚಾರಿಸಲಿಲ್ಲವೇಕೆ? ತುಳಸೀದಾಸನು ಕೇಳಿದನು.

ನನಗೆ ಅವಕಾಶವೇ ದೊರೆಯಲಿಲ್ಲ. ದೊರೆತಿದ್ದರೂ ನನ್ನ ಬಾಯಿಂದ ಶಬ್ದಗಳೇ ಹೊರಡುತ್ತಿದ್ದಿಲ್ಲ. ಇರಲಿ ಪ್ರಾಣನಾಥ, ನಾನೊಂದು ಮಾತು ಕೇಳುತ್ತೇನೆ ಸರಿಯಾಗಿ ಉತ್ತರ ಕೊಡುವಿರಾ? ರತ್ನಾವಳಿಯು ಕೇಳಿದಳು.

ಕೇಳು, ನಾನು ಹೇಳಲಿಕ್ಕೆ ಸಿದ್ಧನಿದ್ದೇನೆ. ತುಳಸೀದಾಸನು ಹೇಳಿದನು

ಶ್ರೀರಾಮನು ಮಹಾಮಹಿಮನು ಪರಮ ಕಾರುಣಿಕನು. ಭಕ್ತವತ್ಸಲನು ಅವನನ್ನು ತ್ಯಜಿಸಿ, ಯಃಕಶ್ಚಿತಳಾದ ಈ ಅಬಲೆಯ ಬೆನ್ನ ಹತ್ತಿರುವುದೇಕೆ? ನನ್ನಲ್ಲಿ ಅಂತಹದೇನಿದೆ? ರತ್ನಾವಳಿ ಕೇಳಿದಳು.

ಪ್ರಿಯೆ, ಇದರ ಉತ್ತರವನ್ನು ನಾನು ಹೇಳಲೇಬೇಕೆ? ಊಹೆಯಿಂದ ತಿಳಿಕೊಳ್ಳಲಾರೆಯಾ? ತುಳಸೀದಾಸನೆಂದನು.

ನನ್ನಂಥ ಮೂಢೆಗೆ ಏನು ಗೊತ್ತಾಗಬೇಕು? ಮಹಾಭಗವದ್ಭಕ್ತರಾದ ನೀವು ನನ್ನ ಸಹವಾಸದಿಂದ ಮುನ್ನಿನದೆಲ್ಲವನ್ನೂ ಮರೆತು ಬಿಟ್ಟಿರಿ. ಅಜ್ಞರಾದ ಸಾಮಾನ್ಯ ಮನುಷ್ಯರಂತೆ ಕೇವಲ ಸಂಸಾರಕ್ಕೆ ಅಂಟಿಕೊಂಡಿರಿ! ರತ್ನಾವಳಿಯು ಅಂದಳು.

ಪ್ರಿಯೆ, ಇದಕ್ಕೆ ಕಾರಣವಿಲ್ಲದಿಲ್ಲ! ನೀನು ಇದರ ಕಾರಣವನ್ನು ತರ್ಕಿಸಲಾರೆಯಾ?

ಇಲ್ಲ

ಹಾಗಾದರೆ ಹೇಳುವೆನು, ಕೇಳು. ಆ ಭಗವಂತನ ಪ್ರೇಮದ

ಎಳತಕ್ಕಿಂತಲೂ ನಿನ್ನ ಪ್ರೇಮಾಕರ್ಷಣವು ಬಲವತ್ತರವಾದದ್ದು!

ಇದೇನು! ಹುಚ್ಚರಂತೆ ಪ್ರಲಾಪಿಸುತ್ತೀರಿ!

ಹುಚ್ಚನ ಪ್ರಲಾಪವಲ್ಲ! ನಿಜವನ್ನೇ ನುಡಿಯುವೆನು, ಕೇಳು. ನಾನು ಆ ರಘುರಾಮನನ್ನು ಒಡೆಯನಾಗಿ ಬೇಡಿಕೊಂಡೆನು; ಜಪ-ತಪಾದಿಗಳನ್ನಾಚರಿಸಿದೆನು; ಅತ್ತು-ಕರೆದು ದರ್ಶನ ಪ್ರಾರ್ಥಿಯಾದೆನು. ಆದರೂ ಅವನು ನನಗೆ ಭೇಟಿಯಾಗಲಿಲ್ಲ. ಪುರಾಣಕರ್ತರ ಕಲ್ಪನೆ ಏನೇ ಇರಲಿ, ಪುರಾಣಿಕರ ಅನುಭವವು ಹೇಗೇ ಇರಲಿ, ನನ್ನ ಅನುಭವವು ಮಾತ್ರ ಆ ಹರಿಯು ಅಷ್ಟೊಂದು ದಯಾಮಯನಲ್ಲವೆಂದಾಯಿತು. ಕಣ್ಣಿಗೆ ಕಾಣದ ಅವನನ್ನು ನಂಬಿಕೊಂಡಿರುವದಕ್ಕಿಂತ ಪ್ರತ್ಯಕ್ಷ ಪ್ರೇಮಮೂರ್ತಿಯಾದ ನಿನ್ನನ್ನು ಅನುಸರಿಸಿಕೊಂಡಿರುವದು ಹಿತವೆಂದು ನಾನು ಭಾವಿಸಿದೆನು. ಮೊದಲು ಆರಾಧ್ಯನಾಗಿದ್ದ ಶ್ರೀರಾಮನನ್ನು ಹೃದಯದಿಂದ ದೂರಮಾಡಿ, ಆ ಸ್ಥಳದಲ್ಲಿ ನಿನ್ನನ್ನು ಕುಳ್ಳಿರಿಸಿದೆನು. ಮೊದಲು ರಘುಪತಿಯ ಸಂತುಷ್ಟತೆಗೆ ಯತ್ನಿಸುತ್ತಿರುವಂತೆ, ಈಗ ನಿನ್ನ ಮನಸ್ತುಷ್ಟಿಗೆ ಪ್ರಯತ್ನಿಸುತ್ತಿದ್ದೇನೆ. ಇದರಲ್ಲಿ ನನ್ನ ಅನ್ಯಾಯವೇನು? ಏನ ದೋಷ ಆಚರಣೆಯಾದುದು?

ಈ ಮಾತುಗಳನ್ನು ಕೇಳುವದೂ ಕೂಡ ಪಾಪಕರವು! ನೀವು ಭ್ರಾಂತಿ ತಾಳಗೆಟ್ಟಿರುವಿರಿ! ಇನ್ನು ಸಾಕು ಮಾಡಿರಿ!

ಅದೇಕೆ? ನಾನು ಹೇಳಿದ್ದು ನಿನ್ನ ಮನಸ್ಸಿಗೆ ಬರಲಿಲ್ಲವೇ? ಪ್ರತ್ಯಕ್ಷ ವಸ್ತುವನ್ನು ತ್ಯಜಿಸಿ, ಪರೋಕ್ಷದ ಬೆನ ಹತ್ತಬೇಕೆ? ಸಮೀಪದಲ್ಲಿಯೇ ಸರೋವರವಿರುವಾಗ ನೀರು ಕುಡಿಯುವದನ್ನು ಬಿಟ್ಟು, ಮೃಗಜಲದ ಆಶೆಯಿಂದ ಧಾವಿಸಬೇಕೆ?

ಒಳ್ಳೇ ಬುದ್ಧಿವಂತರಿರುವಿರಿ ಬಿಡಿರಿ! ರತ್ನಾವಳಿಯು ಕೋಪವನ್ನು ನಟಿಸಿದಳು.

ಪ್ರಿಯೆ, ಈಗ ನಾನೊಂದು ಮಾತು ಕೇಳಬೇಕೆಂದಿದ್ದೇನೆ. ಸಂ

ಯಾಗಿ ಉತ್ತರ ಕೊಡುವೆಯಾ?

ಆಗಲಿ.

ನಾನು ನಿನಗೆ ಯಾವ ಕೊರತೆಯನ್ನೂ ಮಾಡಿದವನಲ್ಲ. ಏಕಾಂತ ಅನುರಕ್ತತೆಯಲ್ಲಿ ಕಿಂಚಿನ್ಮಾತ್ರವೂ ಶಿಥಿಲತೆಯಿಲ್ಲ. ಹೀಗಿದ್ದರೂ, ನೀನು ಸಂತುಷ್ಟಳಾಗಿಲ್ಲ! ಯಾವುದೋ ಒಂದು ಅಸಮಾಧಾನವು ನಿನಗಿರುವಂತೆ ನಿನ್ನ ಮುಖಲಕ್ಷಣವು ಹೇಳುತ್ತಿದೆ? ನನ್ನ ಸಹವಾಸದಲ್ಲಿ ನಿನಗೆ ಸುಖವಿಲ್ಲವೆ? ನೀನು ಮೊದಲಿಗಿಂತ ಹೆಚ್ಚು ಸುಖಿಯಾಗಿಲ್ಲವೆ?

ಪ್ರಾಣನಾಥಾ, ನಿಜವನ್ನೇ ಹೇಳಲಾ? ಕೇಳಿ ನಿಮಗೆ ಅಸಮಾಧಾನವಾಗಲಿಕ್ಕಿಲ್ಲವೆ? ನಿರರ್ಥಕ ಮಾತಬಳಸಿ, ವ್ಯಥೆತಂದುಕೊಳ್ಳುವದಕ್ಕಿಂತ ಆ ಮಾತಿನಿಂದ ದೂರವಿರುವದು ಒಳಿತಲ್ಲವೆ? ರತ್ನಾವಳಿಯು ಕೇಳಿದಳು.

ನೀನು ನಿಜವನ್ನು ಹೇಳಲೇಬೇಕು!

ನಿಮ್ಮ ಒತ್ತಾಯವಿದ್ದರೆ ಹೇಳುವೆನು, ಕೇಳಿರಿ. ನಾನು ಮೊದಲಿಗಿಂತ ಹೆಚ್ಚು ಸುಖಿಯಾಗಿಲ್ಲ!

ಅದೇಕೆ?

ಕಾರಣವನ್ನು ಕೇಳಬೇಡಿರಿ! ಈಗ ನಾನು ಹೇಳಲಾರೆನು! ಕಾಲವನ್ನರಿತು ಒಮ್ಮೆ ಹೇಳುವೆನು! ರತ್ನಾವಳಿಯು ನುಡಿದಳು.

ಪ್ರಿಯೆ, ನನಗೆ ತಿಳಿಯಿತು. ನೀನು ತವರೂರಿಗೆ ಹೋಗಬೇಕೆಂದು ಹಂಬಲಿಸುತ್ತಿರುವೆ; ಆದರೆ ನಿನ್ನ ಕ್ಷಣಿಕ ವಿರಹವನ್ನೂ ಸಹಿಸಲಾರದ ನಾನು ನಿನ್ನನ್ನು ತವರುಮನೆಗೆ ಕಳುಹದಿರುವೆನು. ಇದರಿಂದ ನೀನು ವ್ಯಥೆಗೊಂಡಿರುವೆ; ಆದರೆ ಪ್ರಿಯೇ, ಇದರಲ್ಲಿ ನನ್ನ ತಪ್ಪೇನು? ನಾನು ಉತ್ಕಟರೀತಿಯಿಂದ ನಿನ್ನನ್ನು ಪ್ರೀತಿಸುತ್ತಿರುವುದು ನನ್ನ ಅಪರಾಧವೆ? ಪ್ರೇಮಾತಿಶಯದಿಂದಿದ್ದು, ನಿನ್ನ ಚಿರಸಹವಾಸವನ್ನು ಬಯಸುವುದು ತಪ್ಪಿತವೆ? ರೂಪಮಂಡಿತೆಯೂ, ಗುಣಮಣಿಯೂ, ಪತಿವ್ರತೆಯೂ ಆದ ನಿನ್ನ ವಿರಹವನ್ನು ಸಹಿಸಲಾರೆನೆಂದು ಹೇಳುವುದು ಕ್ಷಮಾರ್ಹವಲ್ಲದ

ದೋಷವೇ?

ಪ್ರಾಣನಾಥ, ಈ ಮಾತು ಇಲ್ಲಿಗೆ ಕೊನೆಗಾಣಲಿ. ಅದೋ ನೋಡಿರಿ. ಸೂರ್ಯನು ಅಸ್ತನಾದನು. ತಣ್ಣಗಿನ ಗಾಳಿಯು ಭರದಿಂದ ಬೀಸಹತ್ತಿದೆ. ಕತ್ತಲು ಕವಿಯುವದರಲ್ಲಿದೆ. ಇನ್ನು ಮನೆಗೆ ಹೋಗೋಣ ನಡೆಯಿರಿ

ತುಳಸೀದಾಸನು ಮನೋವ್ಯಥೆಯಿಂದ ಹೆಂಡತಿಯ ಅನುಗಾಮಿಯಾಗಿ ಮನೆಯ ಕಡೆಗೆ ನಡೆದನು.

---

## ೪ ಅದೊಂದು ವೇಳೆ!

ಮಾತ್ರ ಕೆಲವು ತಿಂಗಳು ಕ್ರಮಿಸಿವೆ. ಈ ಅವಧಿಯಲ್ಲಿ ದೀನಬಂಧುವು ಹೆಂಡತಿಯು ಹಾಗು ತಾಯಿಯು ಅತ್ಯಾಗ್ರಹದಿಂದಲೂ, ಸ್ವಂತದ ಇಚ್ಛೆ-ಅನಿಚ್ಛೆಗಳಿಂದಲೂ ಮಗಳನ್ನು ಕರೆಯುವುದಕ್ಕೆಂದು ಹಲವು ಬಾರಿ ರಾಜಾಪುರಿಗೆ ಬಂದು ಹಿಂದಿರುಗಿ ಹೋಗಿದ್ದಾನೆ. ತುಳಸೀದಾಸನು ಪ್ರತಿಸಾರೆಯೂ ಹೆಂಡತಿಯನ್ನು ಖಂಡಿತವಾಗಿ ಕಳುಹಲಾರೆನೆಂದು ನಿರ್ಧಾರದಿಂದ ಹೇಳುತ್ತ ನಡೆದಿದ್ದನು. ಹುಲಸೀದೇವಿಯು ಮಗನ ಈ ಅಲೌಕಿಕ ವ್ಯವಹಾರವನ್ನು ನೋಡಿ ಅಸಂತುಷ್ಟಳಾಗುತ್ತಿದ್ದರೂ, ಮಾತನಾಡುವಂತಿದ್ದಿಲ್ಲ. ಯಾಕೆಂದರೆ, ಈ ವಿಷಯದಲ್ಲಿ ಮಗನು ತನ್ನ ಮಾತನ್ನು ನಡೆಸುಗೊಡವುದಿಲ್ಲೆಂಬುದು ಅವಳಿಗೆ ಹೊಳೆದಿತ್ತು. ಸಾಧ್ವಿಯಾದ ರತ್ನಾವಳಿಯು ಪತಿಯ ಈ ಉತ್ಕಟ ಪ್ರೇಮಕ್ಕಾಗಿ ಆನಂದಿಸಬೇಕಿತ್ತು; ಆದರೆ ಅವಳಲ್ಲಿ ಆನಂದದ ಬದಲು ಅಸಮಾಧಾನವೇ ಹೆಚ್ಚಾಗಿತ್ತು. ಹೆಣ್ಣುಮಕ್ಕಳಿಗೆ ತವರುಮನೆಯ ಹಂಬಲವಂತೂ ಇದ್ದದ್ದೇ. ತಂದೆಯು ಹಲವು ಸಾರೆ ಕರೆಯ ಬಂದು, ಮೋರೆಯೊಣಗಿಸಿಕೊಂಡು

ಹಿಂದಿರುಗಿ ಹೋದುದು ಅವಳಿಗೆ ಅತಿಶಯ ವ್ಯಥೆಯನ್ನುಂಟು ಮಾಡಿತ್ತು; ಅಲ್ಲದೆ ಪತಿಯು ಅತಿಪ್ರೇಮವು 'ಅತಿಯಾಗಿ ಗತಿಗೇಡು' ಎಂಬ ನಾಣ್ಣುಡಿಯಂತೆ ಯಾವಾಗ್ಗೆ ಬಾಧಿಸೀತೆಂಬ ಭಯವಂತೂ ಅವಳಲ್ಲಿ ಸದಾ ಮನೆ ಮಾಡಿಕೊಂಡಿತ್ತು. ಹೀಗಾಗಿ ಅವಳು ಸತಿಯು ಪರಮಸಾಧ್ಯವಾದ ಪತಿಪ್ರೇಮವನ್ನು ಪೂರ್ಣವಾಗಿ ಪಡೆದಿದ್ದರೂ, ಸುಖಿಯಾಗಿರಲಿಲ್ಲ.

ತುಳಸೀದಾಸನ ಮನೆತನದ ಸಾಂಪತ್ತಿಕ ಸ್ಥಿತಿಯು ಚನ್ನಾಗಿರಲಿಲ್ಲವೆಂದು ನಾವು ಹಿಂದೆ ಹೇಳಿದ್ದೇವೆ. ಆ ಸ್ಥಿತಿಯು ತುಳಸೀದಾಸನ ದುರ್ಲಕ್ಷ್ಯದ ಮೂಲಕ ಕ್ರಮಶಃ ನಿಕೃಷ್ಟವಾಗುತ್ತ ನಡೆದಿತ್ತು. ಈಗ ಅದು ತೀರ ಕೆಟ್ಟು ಹೋಗಿತ್ತು. ಹುಲಸೀದೇವಿಯು ತಡೆಯಲಾರದವಳಾಗಿ ಮಗನನ್ನು ಕರೆದು:—ಅಪ್ಪಾ, ಇಂದು ನಿನ್ನ ಪ್ರೇಯಸಿಯು ಉಪವಾಸ ಮಾಡಬೇಕಾಗುವದು, ಎಂದು ನುಡಿದಳು.

ತುಳಸೀದಾಸನು ಆಶ್ಚರ್ಯದಿಂದ ಕೇಳಿದನು:—"ಅದೇಕೆ?"

ಮನೆಯಲ್ಲಿ ಅಕ್ಕಿ ಇಲ್ಲ; ಗೋಧಿಯಿಲ್ಲ. ಏತರಿಂದ ಅಡಿಗೆಯಾಗಬೇಕು?

ಅಮ್ಮಾ, ಇದಕ್ಕೇಕೆ ಚಿಂತಿಸುವೆ? ನಾನು ತರುವೆನು.

ಆ ಸಾಮಾನುಗಳನ್ನು ತರಲಿಕ್ಕೆ ತುಳಸೀದಾಸನು ನೆರೆಯ ಹಳ್ಳಿಗೆ ಹೋಗಬೇಕಿತ್ತು. ಆ ಕೆಲಸಕ್ಕೆ ಎಷ್ಟೆಂದರೂ ನಾಲ್ಕಾರು ತಾಸುಗಳು ವೆಚ್ಚವಾಗುತ್ತಿದ್ದವು. ತುಳಸೀದಾಸನು ಇಷ್ಟು ಹೊತ್ತಿನ ವರೆಗೆ ಹೆಂಡತಿಯನ್ನಗಲಿ ಇರಲಿಕ್ಕೆ ಒಲ್ಲನು. ಸಂಗಡ ಭಾರ್ಯೆಯನ್ನು ಕರೆದೊಯ್ಯುವಂತಿರಲಿಲ್ಲ. ಹೋಗುವದನ್ನು ಬಿಟ್ಟರೆ ನಡೆಯುವಂತಿರಲಿಲ್ಲ. ಅವನು ತುಂಬ ಪೇಚಿಗೊಳಗಾದನು. ಅನಿವಾರ್ಯಕ್ಕೊಳಗಾಗಿ ಅವನು ಆ ಸಾಮಾನುಗಳನ್ನು ತರುವುದಕ್ಕೆ ನೆರೆ ಹಳ್ಳಿಯಲ್ಲಿರುವ ಮಿತ್ರರ ಮನೆಗೆ ಹೊರಡಲೇ ಬೇಕಾಯಿತು.

ಈ ಸಮಯದಲ್ಲಿ ದೀನಬಂಧುವು ಮತ್ತೆ ಮಗಳನ್ನು ಕರೆಯ

ಬಂದನು. ಮನೆಯಲ್ಲಿ ತುಳಸೀದಾಸನಿರಲಿಲ್ಲ. ಮಧ್ಯಾಹ್ನದ ಭೋಜನಕ್ಕೆ ಅಕ್ಕಿ-ಬೇಳೆಗಳಿರಲಿಲ್ಲ. ದೀನಬಂಧುವನ್ನು ತುಳಸೀದಾಸನು ಬರುವ ವರೆಗೆ ಮನೆಯಲ್ಲಿಟ್ಟುಕೊಳ್ಳುವಂತಿದ್ದಿಲ್ಲ. ಬೇಸತ್ತಿದ್ದ ಹುಲಸೀದೇವಿಯು ಮಗನ ವಿಚಾರವನ್ನು ಉಪೇಕ್ಷಿಸಿ, ಸೊಸೆಯನ್ನು ತವರೂರಿಗೆ ಕಳುಹಿಕೊಡಲಿಕ್ಕೆ ಸಮ್ಮತಿಸಿದಳು. ದೀನಬಂಧುವಿಗೂ ಇದೇ ಬೇಕಾಗಿತ್ತು. ಪತಿಯ ಸ್ವಭಾವವನ್ನು ಅರಿತಿದ್ದ ರತ್ನಾವಳಿಯಿಂದಲೂ ಪ್ರತಿಬಂಧವಾಗಲಿಲ್ಲ. ದೀನಬಂಧುವು ಕೂಡಲೆ ಮಗಳನ್ನು ಕರಕೊಂಡು ಹೊರಟನು.

ತುಳಸೀದಾಸನು ಎಣಿಸಿದಂತೆ ಬೇಗನೆ ಕೆಲಸವಾಗಲಿಲ್ಲ. ಅವನು ಆಹಾರದ ಪದಾರ್ಥಗಳನ್ನು ಸಂಗ್ರಹಿಸಿಕೊಂಡು ಮನೆಗೆ ಬರಬೇಕಾದರೆ, ಬಹಳ ಸಮಯವಾಯಿತು. ಸಾಯಂಕಾಲವು ಸಮೀಪಿಸಿತ್ತು. ಬೇಜಾರಗೊಂಡ ತುಳಸೀದಾಸನು ಮನೆಯಲ್ಲಿ ಮೂಟೆಯನ್ನಿರಿಸಿ, ಹೆಂಡತಿಯನ್ನು ಹುಡುಕಹತ್ತಿದನು. ಅವಳು ಎಲ್ಲಿಯೂ ಕಣ್ಣಿಗೆ ಬೀಳಲಿಲ್ಲ. ತುಳಸೀದಾಸನು ರಭಸದಿಂದ ತಾಯಿಯ ಹತ್ತಿರ ಹೋಗಿ "ಅವಳೆಲ್ಲಿ?" ಎಂದು ಕೇಳಿದನು.

ಹುಲಸೀದೇವಿಯು ಈ ವರೆಗೆ ಉಪವಾಸವಿದ್ದಳು. ತುಳಸೀದಾಸನಾದರೂ ನಿರಾಹಾರನಾಗಿದ್ದನು. ಇವನಿಗೆ ಹೊಟ್ಟೆಯ ಪರಿವೆಯಿರಲಿಲ್ಲ. ಸ್ನಾನ-ಸಂಧ್ಯಾದಿಗಳ ಚಿಂತೆಯಿರಲಿಲ್ಲ ಮನೆಗೆ ಬರುತ್ತಲೆ ನಿರ್ಲಜ್ಜತನದಿಂದ ಹೆಂಡತಿಯ ಮಾತೆತ್ತಿದುದನ್ನು ನೋಡಿ, ಹುಲಸೀದೇವಿಗೆ ಅತಿಶಯ ಕೋಪವುಂಟಾಯಿತು. ಮಗನ ಈ ಆಚರಣೆಯು ಅವಳಿಗೆ ತೀರ ಅಸಹ್ಯವೆನಿಸಿತು. ಆದರೂ ಅವಳು ತನ್ನ ಮನೋಭಾವನೆಯನ್ನು ತೋರಗೊಡದೆ, "ಅಪ್ಪಾ, ಅವಳು ತವರು ಮನೆಗೆ ಹೋದಳು" ಎಂದು ಶಾಂತರೀತಿಯಿಂದ ಹೇಳಿದಳು.

ಯಾವಾಗ್ಗೆ ಹೋದಳು?

ಮಧ್ಯಾಹ್ನದಲ್ಲಿ.

ಯಾರ ಸಂಗಡ?

ಅವಳ ತಂದೆಯು ಕರೆಯಬಂದಿದ್ದನು. ಅವನೊಡನೆ ಹೋದಳು.

ಅವಳನ್ನು ತವರು ಮನೆಗೆ ಕಳುಹಿಕೊಟ್ಟವರಾರು?

ನಾನು.

ತುಳಸೀದಾಸನು ಮುಂದೆ ಮಾತಾಡಲಿಲ್ಲ. ಉತ್ತರೀಯವನ್ನು ಹೆಗಲಮೇಲೆ ಹಾಕಿಕೊಂಡು ರಭಸದಿಂದ ಮನೆಬಿಟ್ಟು ನಡೆದನು. ಕ್ಷೋಭ-ಅಭಿಮಾನಗಳ ವಶವರ್ತಿನಿಯಾಗಿದ್ದ ತುಲಸೀದೇವಿಯು ಮಗನನ್ನು ಸಂತಯಿಸುವ ಹವ್ಯಾಸಕ್ಕೆ ಹೋಗಲಿಲ್ಲ

ಉತ್ತೇಜನದ ಭರದಲ್ಲಿದ್ದ ತುಳಸೀದಾಸನು ಯಾವ ವಿಚಾರವನ್ನೂ ಮಾಡಲಿಲ್ಲ. ವೇಗವಾಗಿ ಹೊರಟು ಮಾಯಾಪುರವನ್ನು ಸೇರಿದನು. ಕತ್ತಲು ಕವಿಯುವದರಲ್ಲಿತ್ತು. ಅವನು ವಿವಾಹ ಸಮಯದಲ್ಲಿ ಒಮ್ಮೆ ಮಾತ್ರ ಮಾವನ ಮನೆಯನ್ನು ನೋಡಿದವನಾಗಿದ್ದನು. ತರುವಾಯ ಅವನು ಶ್ವಶುರಾಲಯಕ್ಕಾಗಲಿ, ಮಾಯಾಪುರಕ್ಕಾಗಲಿ ಹೋದವನಲ್ಲ ಕಾರಣ ಅವನಿಗೆ ಮಾವನ ಮನೆಯನ್ನು ಹುಡುಕಿಕೊಳ್ಳುವುದು ತುಸ ತೊಂದರೆಯ ಕೆಲಸವಾಗಿತ್ತು.

ಈ ಅವಧಿಯಲ್ಲಿ ಅವನ ಉತ್ತೇಜನವು ಕೆಲಮಟ್ಟಿಗೆ ಶಾಂತವಾಗಿತ್ತು. ಒಂದೊಂದೇ ವಿಚಾರವು ಅವನ ಮನಸ್ಸಿನಲ್ಲಿ ತಲೆದೋರಹತ್ತಿತು:- ಹೀಗೆ ಆಗುಂತಕನಾಗಿ ಮಾವನ ಮನೆಗೆ ಹೋಗುವದೆಂತು? ಹಲವುಸಾರೆ ನನ್ನ ಮನೆಗೆ ಬಂದ ಮಾವನನ್ನು ಚೆನ್ನಾಗಿ ಸತ್ಕರಿಸದೆ ವಿಫಲ ಮನೋರಥನನ್ನಾಗಿ ಮಾಡಿ ಕಳುಹಿದ ನಾನು ಈಗ ಮಾವನ ಮನೆಗೆ ಹೋಗುವದು ಯೋಗ್ಯವೇ? ಹೆಂಡತಿಯು ಇಂದೇ ತವರು ಮನೆಗೆ ಹೋಗಿದ್ದಾಳೆ. ಹೋಗಿ ನಾಲ್ಕಾರು ತಾಸು ಮಾತ್ರ ಆಗಿರಬಹುದು. ಈ ಅಲ್ಪಾವಧಿಯಲ್ಲಿ ನಾನು ಅವಳನ್ನು ಕರೆಯಹೋಗುವದು ಹಾಸ್ಯಾಸ್ಪದ

ವಾಗಲಿಕ್ಕಿಲ್ಲವೆ? ಅತ್ತೆ-ಮಾವಂದಿರೇನೆನ್ನಬಹುದು? ಊರ ಜನರು ಏನೆಂದುಕೊಳ್ಳಬಹುದು? ತುಳಸೀದಾಸನು ಈ ವಿಚಾರಗಳಿಂದ ಲಜ್ಜಿತನಾದನು. ಮಾವನ ಮನೆ ಯಾವುದೆಂಬದನ್ನು ಎರಡನೆಯವರನ್ನು ವಿಚಾರಿಸಿ ತಿಳಕೊಳ್ಳುವ ಧೈರ್ಯವು ಅವನಿಗಾಗಲಿಲ್ಲ.

ತುಳಸೀದಾಸನು ಹುಚ್ಚನಂತೆ ಓಣಿ ಓಣಿ ಅಲೆಯಹತ್ತಿದನು. ಇವನು ಯಾರನ್ನೂ ಮಾತಾಡಿಸುವ ಗೋಜಿಗೆ ಹೋಗಲಿಲ್ಲ ಹಳ್ಳಿಯ ಜನವಿರಲ ಸಂದಿಗಳಲ್ಲಿ ತುಳಸೀದಾಸನನ್ನಾರೂ ಮಾತಾಡಿಸಲಿಲ್ಲ. ತುಳಸೀದಾಸನು ಅತ್ತಿತ್ತ ಬಹಳವಾಗಿ ಅಡ್ಡಾಡಿದನು. ಮುಂಜಾವಿನಿಂದ ಈ ವರೆಗೆ ಬಾಯಲ್ಲಿ ನೀರು ಹಾಕಿರಲಿಲ್ಲ. ಶ್ರಮದ ಹೋರೆಯನ್ನು ಮಾಡಿದ್ದನು. ಶರೀರವು ಅವಶವಾಗಿ ಹೋಗಿತ್ತು. ಆದರೂ ಹೆಂಡತಿಯ ಉನ್ಮಾದನೆಯಿಂದ ಹಾಗೂ ಹೀಗೂ ಅಲೆಯುತಲೇ ಇದ್ದನು.

ಹೀಗೆ ಭ್ರಮೆಯಿಂದ ತಿರುಗುತ್ತಿದ್ದ ತುಳಸೀದಾಸನಿಗೆ ಒಂದು ಮನೆಯಲ್ಲಿಯ ಅಳುವಿನ ದನಿಯು ಕೇಳಬಂದಿತು. ತುಳಸೀದಾಸನು ಇದೇ ಮಾವನ ಮನೆಯಾಗಿರಬೇಕೆಂದು ಊಹಿಸಿದನು. ಯಾಕಂದರೆ, ತನ್ನಂತೆಯೆ ತನ್ನ ಅರ್ಧಾಂಗಿನಿಯೂ ವಿರಹ ವ್ಯಥೆಯಿಂದ ವ್ಯಥಿತಳಾಗಿರಬಹುದು, ಜುಲುಮೆಯಿಂದ ತಂದೆಯು ಕರೆತಂದುದಕ್ಕಾಗಿ ದುಃಖಿಸುತ್ತಿರಬಹುದು, ಎಂಬದು ಅವನ ಆಲೋಚನೆ. ತುಳಸೀದಾಸನು ಮೆಲ್ಲನೆ ಹೋಗಿ ಬಾಗಿಲ ಹತ್ತಿರ ನಿಂತು ಹಣಿಕಿ ಹಾಕಿ ನೋಡಿದನು. ಮುಮೂರ್ಷವಾದ ರೋಗಿಯ ಹಾಸಿಗೆಯ ಸುತ್ತಲೂ ನಾಲ್ಕಾರು ಜನರು ಕುಳಿತಿರುವದನ್ನೂ, ಅವರಲ್ಲಿಯ ಒಬ್ಬಳು ರೋದಿಸುತ್ತಿರುವುದನ್ನೂ ಕಂಡನು. ಅವರು ತನ್ನವರಲ್ಲವಷ್ಟೇ ಅಲ್ಲ; ಸ್ವಜಾತಿಯವರುಸಹ ಅಲ್ಲವೆಂಬುದನ್ನು ಗೊತ್ತು ಮಾಡಿಕೊಂಡ ಅವನು, ಬೇರೆ ಕಡೆಗೆ ನಡೆದನು. ಹಾಗೆಯೆ ಹೋಗುತ್ತಿರಲು ಒಂದು ಮನೆಯಲ್ಲಿ ಸರಸ ಸಲ್ಲಾಪಗಳು ನಡೆದಿರುವುದನ್ನೂ ಒಳಗಿನ ಜನರು ಆಗಾಗ್ಗೆ ನಗುತ್ತಿರುವುದನ್ನೂ ಕೇಳಿದನು.

ಇದು ಶ್ವಶುರಾಲಯವಲ್ಲವೆಂದೇ ಅವನ ನಿಶ್ಚಯ. ಯಾಕಂದರೆ, ವಿರಹ ವ್ಯಥೆಯಿಂದ ಕಾತರಗೊಂಡ ರತ್ನಾವಳಿಯಿದ್ದ ಮನೆಯಲ್ಲಿ ಈ ತರದ ಸರಸ ಸಲ್ಲಾಪಗಳಿಗೆ ಎಡೆಯಿಲ್ಲವೆಂಬುದು ಅವನ ಗ್ರಹಿಕೆ. ಅವನು ಆ ಮನೆಯನ್ನು ದಾಟಿ ಮೆಲ್ಲನೆ ಮುಂದಕ್ಕೆ ಸಾಗಿದನು. ಇಷ್ಟರಲ್ಲಿ ಆ ಮನೆಯಿಂದ ಒಂದು ವ್ಯಕ್ತಿಯು ಹೊರಗೆ ಬಂದು, ಬಾಗಿಲ ಹತ್ತಿರ ನಿಂತು:- ಯಾರವರು? ಎಂದು ಕೇಳಿತು

ತುಳಸೀದಾಸನು ನಿಂತುಬಿಟ್ಟನು. ಮಾತಾಡಲಿಲ್ಲ ಆ ವ್ಯಕ್ತಿಯು ಮತ್ತೆ:—"ಯಾರವರು? ಏಕೆ ಮಾತಾಡಲೊಲ್ಲೆ? ಕಳ್ಳನಾಗಿರುವಂತೆ ತೋರುವೆ." ಎಂದಿತು.

ನಾನು ತುಳಸೀದಾಸ, ರಾಜಾಪುರದವನು ತುಳಸೀದಾಸನು, ಸಂಕೋಚದಿಂದ ನುಡಿದನು.

ಓಹೋ, ಅಳಿಯಂದಿರೆ, ಈ ಅಸಮಯದಲ್ಲಿ ಇಲ್ಲೇಕೆ? ಇತ್ತ ಯಾವ ಕಡೆಗೆ ಹೊರಟಿದ್ದಿರಿ? ಆ ವ್ಯಕ್ತಿಯು ತುಳಸೀದಾಸನ ಮಾವನಾದ ದೀನಬಂಧುವಾಗಿದ್ದನು.

ತುಳಸೀದಾಸನಿಗೆ ಮಾವನ ಈ ಮಾತುಗಳು ಹುಡುಗಾಟಿಕೆಯವಾಗಿ ತೋರಿದುವು. ಅವನ ಸಂಕೋಚವು ಹೆಚ್ಚುತ್ತ ನಡೆಯಿತು. ಬಾಯಿಯಿಂದ ಮಾತು ಹೊರಡಲಿಲ್ಲ ಅವನು ಮುಂದೆ ಹೋಗಲಿಲ್ಲ. ಮಾವನ ಮನೆಗೆ ಹೋಗಲಿಕ್ಕೂ ಧೈರ್ಯಹೊಂದಲಿಲ್ಲ. ದೀನಬಂಧುವು ತಾನೇ ಮುಂದೆ ಬಂದು ಅಳಿಯನ ಕೈಯ ಹಿಡಿದು 'ಸಂಕೋಚಗೊಳ್ಳುವ ಕಾರಣವಿಲ್ಲ. ಒಳಗೆ ನಡೆಯಿರಿ' ಎಂದು ನುಡಿದು, ಆಗ್ರಹದಿಂದ ಮನೆಗೆ ಕರೆದೊಯ್ದನು.

ತುಳಸೀದಾಸನು ಸಂಕೋಚಾತಿಶಯದಿಂದ ಮಾವನು ತೋರಿದ ಸ್ಥಳದಲ್ಲಿ ಕುಳಿತು ಬಿಟ್ಟನು. ಅತ್ತೆ ಮಾವಂದಿರ-ಮಾತುಕತೆಗಳಲ್ಲಾಗಲಿ, ಆದರೋಪಚಾರಗಳಲ್ಲಾಗಲಿ ನ್ಯೂನತೆಯಾಗಲಿಲ್ಲ. ಆದರೂ ತುಳಸೀ

ದಾಸನ ಸಂಕೋಚವೃತ್ತಿಯು ಸ್ವಲ್ಪ ಸಹ. ಕಡಿಮೆಯಾಗಲಿಲ್ಲ. ಅವನು ಯಾರೊಡನೆಯೂ ಮನಬಿಚ್ಚಿ ಮಾತಾಡಲಿಲ್ಲ.

ಅತ್ತೆ-ಮಾವಂದಿರು ಗೃಹಕೃತ್ಯಗಳಲ್ಲಿ ತೊಡಗಿದರು. ತುಳಸೀದಾಸನು ಹುದುಗಿಕೊಂಡು ಕುಳಿತು ವಿಚಾರಮಗ್ನನಾದನು ಈ ಸಮಯದಲ್ಲಿ ರತ್ನಾವಳಿಯು ಕಾಣಿಸಿಕೊಂಡು, ಸಂಕೇತದಿಂದ ಪತಿಯನ್ನು ಕರೆದಳು. ತುಳಸೀದಾಸನ ಒಣಗಿದ ಮೋರೆಯು ಕಳೆಗೊಂಡಹತ್ತಿತು. ಅವನು ಎದ್ದು ಹೆಂಡತಿಯು ಹತ್ತರ ಹೋದನು.

ಅದೊಂದು ಕೋಣೆ. ಅಲ್ಲಿ ಬೇರೆ ಯಾರೂ ಇರಲಿಲ್ಲ. ದೀಪವು ಉರಿಯುತಲಿತ್ತು. ತುಳಸೀದಾಸನು ಸ್ತಿಮಿತ ಪ್ರಕಾಶದಲ್ಲಿ ಕಾಂತೆಯು ಚಂದ್ರಮುಖದ ಕಡೆಗೆ ನೋಡಿದನು. ಆ ಮುಖದಲ್ಲಿ ತುಳಸೀದಾಸನಿಗೆ ಪ್ರಿಯವಾದ ಯಾವ ಲಕ್ಷಣಗಳೂ ಕಾಣಲಿಲ್ಲ. ಆ ಸಿಡುಮೋರೆಯನ್ನು ನೋಡಿ ತುಳಸೀದಾಸನು ನಾಚಿದನು ಅಧೋವದನನಾಗಿ ನಿಂತನು. ರತ್ನಾವಳಿಯು ತಿರಸ್ಕಾರ ಸೂಚಕ ಸ್ವರದಿಂದ:—ನಿಮಗೆ ಕೊಂಚವೂ ನಾಚುಗೆಯಿಲ್ಲವೆ? ಮನಲಜ್ಜೆಯಿಲ್ಲವಾದರೂ, ಜನಲಜ್ಜೆಯಾದರೂ ಬೇಡವೇ? ಎಂದು ಕೇಳಿದಳು.

ತುಳಸೀದಾಸನಿಗಾದ ವ್ಯಥೆಯನ್ನು ವರ್ಣಿಸಲಳವಲ್ಲ. ತಾನು ಅನಾಹಾರದಿಂದ ತೊಳಲಿ ಬಳಲಿ ಬೆಂಡಾಗಿ ಬಂದಾಗ ತನ್ನ ಸಾಧ್ವಿಯಾದ ಹೆಂಡತಿಯು ಹೀಗೆ ಕಠೋರ ವಚನಗಳನ್ನಾಡಬಹುದೆಂದು ಅವನು ಸ್ವಪ್ನದಲ್ಲಿ ಸಹ ಭಾವಿಸುವ ಸಂಭವವಿದ್ದಿಲ್ಲ. ಅತ್ತೆಯು ಏನೇ ಅನ್ನಲಿ, ಮಾವನು ಹೇಗೇ ಆಚರಿಸಲಿ, ಹೆಂಡತಿಯಿಂದ ಅನಾದರದ ಆಚರಣೆ ಕಾಲತ್ರಯದಲ್ಲೂ ಘಟಿಸದೆಂದು ನಂಬಿದವನವನು. ನಚ್ಚಿದೆಮ್ಮೆಯು ಕೋಣವನ್ನೀಯ್ದಂತಾಯ್ತು! ಆದರೂ ಅತಿ ಮೋಹಿತನಾದ ಅವನು ಹೆಂಡತಿಯು ವಿರುದ್ಧಾಚರಣೆಯಿಂದುಂಟಾದ ಕೋಪವನ್ನು ತೋರ್ಗೊಡದೆ:-ಇಲ್ಲ, ನನಗೆ ಯಾವ ತರದ ಲಜ್ಜೆಯೂ ಇಲ್ಲ, ಎಂದು ಹೇಳಿದನು.

ಲಜ್ಜೆಯಿಲ್ಲದಿದ್ದರಿಲ್ಲ! ಆತ್ಮಾಭಿಮಾನವಾದರೂ ಬೇಡವೇ? ಆಗಂತುಕರಾಗಿ ಶ್ವಶುರಾಲಯಕ್ಕೆ ಹೋಗಕೂಡದೆಂಬುದು ತಮಗೆ ಹೊಳೆಯಬಾರದೆ? ಬುದ್ಧಿಯನ್ನೆಲ್ಲ ಮಾರಿಕೊಂಡು ಬಿಟ್ಟಿರುವಿರಾ? ರತ್ನಾವಳಿಯು ಉತ್ತೇಜಿತಳಾಗಿ ಕೇಳಿದಳು.

ಏಟಿನ ಮೇಲೆ ಏಟು! ಗಾಯದ ಮೇಲೆ ಬರೆಕೊಟ್ಟಂತೆ! ಆದರೂ ಭಾರ್ಯೆಯೇ ಸರ್ವಸ್ವವೆಂದು ತಿಳಿದಿದ್ದ ಆ ಪಂಡಿತನು ಶಾಂತನಾಗಿಯೆ ಹೇಳಿದನು:—ನನ್ನಲ್ಲಿ ಮೊದಲಿದ್ದ ಆ ವಿದ್ಯೆಯನ್ನೂ ಬುದ್ಧಿಯನ್ನೂ ನಿನಗೆ ಮಾರಿಬಿಟ್ಟಿದ್ದೇನೆ. ಮೊದಲು ನನ್ನವುಗಳಾಗಿದ್ದ ಅವು, ನಾನು-ನೀನೆಂಬ ಭೇದವಿರಿಸದೆ ಅಭಿನ್ನಹೃದಯನಾಗಿ ಆಚರಿಸಿದ ನನ್ನ ವರ್ತನವನ್ನು ನೋಡಿ ನಿನ್ನಲ್ಲಿ ವಾಸವಾಗಿರಬಹುದು. ಮೊದಲಿನ ತುಳಸೀದಾಸನು ಇವನಲ್ಲ! ನಿಸ್ಸಾರವಾದ ಅವನ ಪ್ರೇತವಿದು!

ನಿಮ್ಮ ಈ ಪಂಡಿತಗಿರಿಯ ಮಾತು ನನಗೆ ಬೇಡ! ಇವರು ಆಮಂತ್ರಣ ಕೊಟ್ಟವರಲ್ಲ! ಎತ್ತು-ಛಕಡಿ ಕಳುಹಿ ಕರಸಿಕೊಂಡವರಲ್ಲ! ನೀವು ಹೀಗೆ ಒಮ್ಮಿಂದೊಮ್ಮೆಲೆ ಇಲ್ಲಿಗೆ ಬಂದಿರೇಕೆ?

ನಾನು ಅಳಿಯತನವನ್ನು ಆಶಿಸಿ ಬಂದವನಲ್ಲ.

ಹಾಗಾದರೆ, ಏತಕ್ಕೆ ಬಂದಿರುವಿರಿ? ನನ್ನನ್ನು ಕರೆಯ ಬಂದಿರಾ?

ಅಹುದು. ನಡೆ, ಹೋಗೋಣ.

ಮತ್ತಷ್ಟು ನಾಚಿಗೆಯ ಮಾತು! ಅವ್ವನೂ ಅಪ್ಪನೂ ಏನೆಂದಾರು? ಜನರು ಎಷ್ಟು ಅಪಹಾಸ್ಯ ಮಾಡಬಹುದು? ಎಂಬದರ ಅರಿವೇನಾದರೂ ನಿಮಗಿದೆಯೆ?

ನನ್ನ ಹೆಂಡತಿಯನ್ನು ನಾನು ಕರೆದೊಯ್ದರೆ, ಜನರು ಏನೆನ್ನುವರು? ತಾಯಿ-ತಂದೆಗಳು ಏನು ಮಾಡುವರು? ನಿನ್ನ ಮೇಲೆ ನನ್ನ ಸಂಪೂರ್ಣ ಸ್ವಾಮಿತ್ವವಿದೆ! ತುಳಸೀದಾಸನು ನುಡಿದನು.

ಆ ಸ್ವಾಮಿತ್ವಕ್ಕೆ ಬೆಂಕಿ ಹಚ್ಚಿರಿ! ನಾನು ಖಂಡಿತವಾಗಿ ಹೇಳು

ತ್ತೀನೆ, ಕೇಳಿರಿ. ನೀವು ಏನು ಮಾಡಿದರೂ, ನಾನು ಬರತಕ್ಕವಳಲ್ಲ!

ಪ್ರಿಯೆ, ಇದೇನು ಹೀಗೆ ಮಾತಾಡುತ್ತಿರುವೆ? ನಿನ್ನ ಸ್ವಭಾವಕ್ಕೂ ಸಂಸ್ಕೃತಿಗೂ ಈ ಮಾತು ತೀರ ವಿಪರೀತವಾದುದು! ವಿಚಾರಿಸಿ ನೋಡು. ತುಳಸೀದಾಸನು ಹೇಳಿದನು.

ಹಾಗಾದರೆ ಹೇಳುವೆನು ಕೇಳಿರಿ. ಆ ಮಾತನ್ನು ನಿದಾಕ್ಷಿಣ್ಯದಿಂದ ನಿಮ್ಮೆದುರಿನಲ್ಲಿ ನುಡಿಯುವ ಪ್ರಸಂಗಬರಬಾರದೆಂದು ನಾನು ಆಶಿಸಿದ್ದೆನು; ಆದರೆ ನೀವು ಅದನ್ನು ನನ್ನ ಬಾಯಿಂದ ಒಡನುಡಿಸಿಯೇ ಬಿಡುವ ಸಂಕಲ್ಪಮಾಡಿಕೊಂಡಿರುವಂತೆ ತೋರುತ್ತದೆ! ನಿಮ್ಮ ದಿವ್ಯ ಪ್ರೇಮದಲ್ಲಿ ನನಗೆ ತಿಲಮಾತ್ರವೂ ಸಂದೇಹವಿಲ್ಲದಿದ್ದರೂ, ನನಗೆ ಸುಖವಿಲ್ಲದಾಗಿದೆ! ನಿಮ್ಮ ಪ್ರೇಮಾತಿಶಯದ ಹುಚ್ಚುವ್ಯವಹಾರವು ನನಗೆ ಸರಿಬರಲೊಲ್ಲದು! "ಅತಿ ಸರ್ವತ್ರ ವರ್ಜಯೇತ್" ಎಂದು ಶಾಸ್ತ್ರಕಾರರು ಹೇಳಿದ್ದಾರಷ್ಟೆ? ಪಂಡಿತರಾದ ನೀವು ಶಾಸ್ತ್ರಕಾರರ ಈ ಅನುಭವದ ವಚನವನ್ನು ದುರ್ಲಕ್ಷಿಸಿ ವರ್ತಿಸುತ್ತಿರುವುದು ನನಗೆ ಭಯವನ್ನುಂಟುಮಾಡಿರುವದು. 'ಸ್ನೇಹಃ ಪಾಪ ಶಂಕೀ' ಎಂಬಂತೆ ನನ್ನ ಮನಸ್ಸು ಭವಿಷ್ಯತ್ಕಾಲದ ವಿಪತ್ತನ್ನು ಕಲ್ಪಿಸಿ ತಲ್ಲಣಗೊಳ್ಳುತ್ತಿರುವುದು. ನೀವು ಪ್ರೀತಿಸುತ್ತಿರುವಂತೆ ನಾನು ನಿಮ್ಮನ್ನು ಪ್ರೀತಿಸಲಾರೆನಿಷ್ಟೇ ಅಲ್ಲ; ಅದರ ಶತಾಂಶ ಪ್ರೇಮವನ್ನಾದರೂ ನಾನು ನಿಮಗೆ ಪ್ರತಿಫಲವಾಗಿ ಸಲ್ಲಿಸಲಾರದವಳಾಗಿದ್ದೇನೆ!

ನೀನಾಡುವ ಮಾತುಗಳು ನಿಜವಾದವುಗಳೇ? ನಾನಿದೇನನ್ನು ಕೇಳುತ್ತಿರುವೆನು! ತೀರ ವಿಪರೀತ ವಾಕ್ಯಗಳಿವು! ನೀನು ನನ್ನನ್ನು ಪ್ರೀತಿಸಲಾರೆಯಾ? ತುಳಸೀದಾಸನು ವಿಷಾದಾತಿರೇಕದಿಂದ ಕೇಳಿದನು.

ನಾನು ಮೊದಲು ನಿಮ್ಮಲ್ಲಿಯ ಯಾವ ಗುಣಗಳಿಂದ ಎಳೆಯಲ್ಪಟ್ಟು ನಿಮ್ಮನ್ನು ಪ್ರೀತಿಸಿದೆನೋ, ಆ ಗುಣಗಳು ಈಗ ನಿಮ್ಮಲ್ಲಿ ಉಳಿದಿಲ್ಲ! ನಾನು ಮೊದಲು ಯಾವ ನಿಮ್ಮ ಘನತೆಯನ್ನು ಮನದಂದು

ತಾಯಿ-ತಂದೆಗಳ ಅನುಮತಿಯನ್ನು ಆಶಿಸದೆ ಕೊರಳಿಗೆ ವರಮಾಲೆಯನ್ನು ಹಾಕಿದೆನೋ ಆ ಮಹತಿಯು ಈಗ ನಿಮ್ಮಲ್ಲಿರುವದಿಲ್ಲ! ಯಾವನ ಅನುಗ್ರಹದಿಂದ ತೀರ ಅಪರಿಚಿತರಾಗಿದ್ದ ನಾವೀರ್ವರೂ ಸ್ವಪ್ನದರ್ಶನದಿಂದ ಪರಿಚಿತರಾದೆವೋ, ಆ ಮಹಾಮಹಿಮನನ್ನು ನೀವೀಗ ಪೂರ್ಣವಾಗಿ ಮರೆದಿರುವಿರಿ! ಮೊದಲಿನ ಸತ್ವವು ಈಗ ನಿಮ್ಮಲ್ಲಿಲ್ಲ! ಇಂದಿನ ನಿಮ್ಮ ಇರುವಿಕೆಯು ಜಲಹೀನ ಕಲಶದಂತೆ, ನಿರ್ಗಂಧ ಕುಸುಮದಂತೆ, ಘೃತವಿಹೀನವಾದ ಪಾತ್ರೆಯಂತೆ, ಜೀವರಹಿತವಾದ ದೇಹದಂತೆ ನಿಸ್ಸಾರವಾಗಿದೆ! ರತ್ನಾವಳಿಯು ಆವೇಶದಿಂದ ನುಡಿದಳು.

ಮೊದಲು ಯಾವ ಗುಣಗಳು ನನ್ನಲ್ಲಿದ್ದವು? ಈಗ ಯಾವವು ಲೋಪವಾಗಿವೆ? ತುಳಸೀದಾಸನು ಕೇಳಿದನು.

ಮೊದಲಿನ ನಿಮ್ಮ ಆ ವಿದ್ಯಾನುರಾಗ, ಬುದ್ಧಿಮತ್ತೆ, ಶ್ರೀ ರಾಮನಲ್ಲಿಯ ಅಖಂಡ ಭಕ್ತಿ ಈಗ ನಿಮ್ಮಲ್ಲಿಲ್ಲ

ಒಬ್ಬ ಪತಿವ್ರತೆಯು ತನ್ನ ಪತಿಯನ್ನು ಪ್ರೀತಿಸಲಿಕ್ಕೆ ಈ ಗುಣಗಳು ಅವಶ್ಯವಾಗಿ ಬೇಕೇನು? ಪತಿಯ ದಿವ್ಯ ಪ್ರೇಮವು ಆ ಸಾಧ್ವಿಗೆ ಹೆಚ್ಚಿನದಲ್ಲವೇ?

ಪತಿವ್ರತೆಯು ದಯಿತನು ಸತ್ವಸಮಾವಿಷ್ಟನಾಗಿರಬೇಕೆಂದು ಆಶಿಸುವಳಲ್ಲದೆ, ಸ್ವಾಮಿಯ ಲಂಪಟತೆಯನ್ನು ಪ್ರೀತಿಸಳು! ಗಯ್ಯಾಳಿಯಾದ ಹೆಂಗಸು ಮಾತ್ರ ಗಂಡನ ವಿಷಯಲಂಪಟತೆಯನ್ನು ಮೆಚ್ಚಬಹುದು!

ನಾನು ನಿನಗಾಗಿ ಆ ಗುಣಗಳನ್ನು ಬಲಿಗೊಡಲಿಲ್ಲವೇ? ನನ್ನ ಆ ಪಾಂಡಿತ್ಯದ ಪರಮ ಉದ್ದೇಶವನ್ನೂ, ಆ ಭಗವತ್ಪ್ರೇಮವನ್ನೂ ನಿನ್ನ ಸಂತುಷ್ಟತೆಗಾಗಿ ತ್ಯಜಿಸಲಿಲ್ಲವೆ? ತುಳಸೀದಾಸನು ವಿಷಾದದಿಂದ ನುಡಿದನು.

ಹೀಗೆ ಅನ್ನುವದಕ್ಕೆ ನಿಮಗೆ ನಾಚಿಗೆ ಒದಗುವದಿಲ್ಲವೆ? ನೀವು ನನಗಾಗಿ ನಿಮ್ಮ ಆದರ್ಶವನ್ನು ತ್ಯಜಿಸಬೇಕೆ? ಶ್ರೇಷ್ಠಗುಣಗಳನ್ನು

ಬಹು ಕಾಲದ ಸಾಧನೆಯ ಫಲವನ್ನು ಬಿಟ್ಟುಕೊಡಬೇಕೆ? ನಾನೆಂದರೆ ಯಾರು? ಒಬ್ಬ ಯಃಕಶ್ಚಿತ ಹೆಂಗಸಲ್ಲವೆ? ನಿಮ್ಮ ದಾಸಾನುದಾಸಿಯಲ್ಲವೇ? ನಿಜವಾಗಿ ಹೇಳುವುದಾದರೆ, ನೀವು ನನ್ನನ್ನು ಪ್ರೀತಿಸಿಲ್ಲ; ಹೊರಗಿನ ಚಂದಕ್ಕೆ ಮೋಹಗೊಂಡಿರಿ; ರಕ್ತ ಮಾಂಸಮಯವಾದ ಈ ದೇಹವನ್ನು ಪ್ರೀತಿಸಿದಿರಿ! ಪ್ರಿಯರೆ, ಈ ಶರೀರವು—ನಿಮಗೆ ಅತೀವ ಮೋಹವನ್ನುಂಟುಮಾಡಿ, ನಿಮ್ಮನ್ನು ಕರ್ತವ್ಯಭ್ರಷ್ಟರನ್ನಾಗಿ ನಿಮ್ಮ ಶ್ರೇಷ್ಠ ಆದರ್ಶದಿಂದ ಹಿಂದೆಳೆದ ಈ ಹೊಲಸು ದೇಹವು—ನಾನಾದೆನೆ? ನಾನು ಬೇರೆ! ನನ್ನೀ ದೇಹವು ಬೇರೆ! ನೀವು ನನ್ನನ್ನು ಪ್ರೀತಿಸದೆ ನಶ್ವರವಾದ ನನ್ನ ದೇಹವನ್ನು ಅಂಟಿಕೊಳ್ಳಲಾಶಿಸಿದ್ದರಿಂದ ಈ ಅಧೋಗತಿಯನ್ನು ಹೊಂದಿರುವಿರಿ! ಇನ್ನೂ ಹೊಂದುವುದರಲ್ಲಿರುವಿರಿ! ಮನುಷ್ಯತ್ವ ವಿಹೀನನಾಗುತ್ತ ನಡೆದಿದ್ದ ಪತಿಯನ್ನು ಯಾವ ಸಾಧ್ವಿಯೂ ಪ್ರೀತಿಸಲಾರಳು!

ಸರಿಯಾಗಿ ಮಾತನಾಡಿದೆ ಮೋಹದಿಂದ ಮುಚ್ಚಿ ಹೋಗಿದ್ದ ನನ್ನ ಕಣ್ಣುಗಳು ಅಪ್ರಿಯವಾಗಿದ್ದರೂ ಸತ್ಯದ ಹಾಗು ಪಥ್ಯದ ನಿನ್ನ ಮಾತುಗಳನ್ನು ಕೇಳಿ ಇಂದು ತೆರೆದವು. ನೀನು ಮಾಯೆ, ಮೃಗಜಲ! ನಾನು ಸತ್ಯವನ್ನು ದುರ್ಲಕ್ಷಿಸಿ, ನಿನ್ನ ಬೆನ್ನ ಹತ್ತಿ ನಿರರ್ಥಕ ಬಳಲಿದೆನು!

ಇನ್ನೂ ನೀವು ನಿಮ್ಮ ಮನುಷ್ಯತ್ವವನ್ನು ಪೂರಾ ಕಳೆದುಕೊಂಡಿಲ್ಲ ಎಚ್ಚರಾಗಿರಿ. ಸಾರಾಸಾರ ವಿಚಾರ ಮಾಡಿರಿ. ನಿಮ್ಮಂತಹ ಜಗದ್ವಿಖ್ಯಾತ ಪಂಡಿತರಿಗೆ ನನ್ನಂತಹ ಅಲ್ಪಜ್ಞನು ಹೊಸದಾಗಿ ಹೇಳಿಕೊಡುವುದೇನೂ ಇಲ್ಲ. ಮೋಹಮಯವಾದ ಪಟಲವು ಹಾರಿಹೋಗುತ್ತಲೆ ಸತ್ಯವು ತಾನೇತಾನಾಗಿ ನಿಮ್ಮೆದುರಿಗೆ ನಿಲ್ಲುವುದು. ಆ ಪಟಲವನ್ನು ಹಾರಿಹೊಡೆಯುವುದೂ, ಸದ್ವಸ್ತುವನ್ನು ಗುರುತಿಸುವುದೂ ನಿಮ್ಮ ಕೆಲಸ.

ನೀನು ಕೇವಲ ಸಹಧರ್ಮಿಣಿಯಷ್ಟೇ ಅಲ್ಲ; ನನ್ನ ಪರಮಗುರುವು!

ಭ್ರಾಂತಿಯಿಂದ ದಾರಿದಪ್ಪಿದ ಈ ಮಾರ್ಗಸ್ಥನಿಗೆ ಸರಿಯಾದ ಹಾದಿಯನ್ನು ತೋರಿದೆ! ಇದೊ, ನಾನು ಹೊರಟೆನು!

ಹೋಗಿ ಬನ್ನಿರಿ.

ಮತ್ತೆ ಬರುವುದಕ್ಕೆ ಹೇಳುವೆಯಾ?

ನನ್ನ ಹತ್ತಿರ ಬನ್ನಿ, ಎಂದು ನಾನು ಹೇಳಿದವಳಲ್ಲ! ಸನ್ಮಾರ್ಗದಲ್ಲಿ ಸಂಚರಿಸಿರೆಂದು ಹೇಳಿದೆನು!

ಹಾಗಾದರೆ, ನಾನು ನಿನ್ನನ್ನು ಪ್ರೀತಿಸಿ, ದುರ್ಮಾರ್ಗವನ್ನೇ ಹಿಡಿದಿದ್ದೆನೆಂದಾಯ್ತು!

ಇದರಲ್ಲಿ ಸಂದೇಹವಿದೆಯೆ? ಮೊದಲು ಏನಿದ್ದಿರಿ? ಈಗ ಏನಾಗಿರುವಿರಿ? ಎಂಬುದನ್ನು ಕ್ಷಣ ಕಾಲ ವಿಚಾರಿಸಿದರೆ, ನಿಮಗೆ ಸತ್ಯವು ಹೊಳೆಯದಿರದು. ಯಾವ ಪರಮ ಪಂಡಿತರೂ, ಭಗವದ್ಭಕ್ತರೂ ಹತ್ತೆಂಟು ಸಾರೆ ಕರೆಕಳುಹಿದರೂ ತಮ್ಮ ಚರಣ ಧೂಳಿಯನ್ನು ಕೆಡವದಿದ್ದರೋ, ಅವರೇ ಇಂದು ಅನಿಮಂತ್ರಿತರಾಗಿ ಕ್ಷುದ್ರ ನಾರಿಯ ಸಲುವಾಗಿ ಮಾನಾಪಮಾನ, ಗೌರವ-ಅಗೌರವಗಳನ್ನು ಆಲೋಚಿಸದೆ ಕಳ್ಳರಂತೆ ಶ್ವಶುರಗೃಹವನ್ನು ಸೇರಿರುವರು! ನಾನೆಲ್ಲಿಯಾದರೂ ಓಡಿಹೋಗುತ್ತಿದ್ದೆನೆ? ತಿರುಗಿ ನಿಮ್ಮ ಹತ್ತಿರ ಬರುತ್ತಿದ್ದಿಲ್ಲವೆ?

ಇನ್ನು ಹೆಚ್ಚಿಗೆ ಮಾತು ಬೇಡ. ನಾನು ನಿನ್ನಲ್ಲಿರಿಸಿದ್ದ ಮನವನ್ನು ಬೇರೆ ಕಡೆಗೆ ಒಯ್ಯುವೆನು. ಇನ್ನೆಂದೂ ನಿನ್ನ ಹತ್ತಿರ ಬರುವುದಿಲ್ಲ. ಇದೇ ನನ್ನ ನಿನ್ನ ಕೊನೆಯ........

ಹೀಗೆ ಮಾತಾಡಬೇಡಿರಿ! ಎಲ್ಲಿಗೆ ಹೋಗುವಿರಿ? ನಿಲ್ಲಿರಿ!

ಪರಮ ಗುರುವೆ, ಕಡೆಯ ಅಪ್ಪಣೆಯನ್ನು ಕೊಡು. ವಿಷಯ ಲಂಪಟನಾದ ತುಳಸೀದಾಸನ ಅವತಾರಕಾರ್ಯವು ಇಂದಿಗೆ ಮುಗಿಯಿತು. ಇನ್ನವನು ಆ ರೂಪದಲ್ಲಿರಲಾರನು! ರೂಪಾಂತರ ಹೊಂದುವನು. ಸಾಧ್ಯವಿಲ್ಲದಿದ್ದರೆ ಜನ್ಮಾಂತರ ಹೊಂದುವನು! ತುಳಸೀದಾಸನು



C. S. P. P.

ರತ್ನಾವಲಿ.

ಹೇಗೆ ಮನೆಯಿಂದ ಭರದಿಂದ ಹೊರಬಿದ್ದಿದ್ದನೊ ಹಾಗೆಯೆ ಶ್ವಶುರಾಲಯದಿಂದಲೂ ಹೊರಬಿದ್ದನು.

ನಿಲ್ಲಿರಿ. ಹೋಗಬೇಡಿರಿ. ತುಸ ತಡೆಯಿರಿ.

ರತ್ನಾವಳಿಯ ಈ ಮಾತುಗಳು ತುಳಸೀದಾಸನಿಗೆ ಕೇಳಲಿಲ್ಲ. ಅವನು ಈ ಅವಧಿಯಲ್ಲಿ ರತ್ನಾವಳಿಯಿಂದ ದೂರ ಹೋಗಿದ್ದನು.

ಅದೊಂದು ವೇಳೆ! ಅದು ಸುಮುಹೂರ್ತವೊ ದುರ್ಮುಹೂರ್ತವೊ ಎಂಬುದನ್ನು ಹೇಳುವುದು ಸಹಜವಲ್ಲ. ಪರಿಣಾಮವನ್ನು ಮನದಂದು ಸುಕುಗಳ ನಿರ್ಣಯವನ್ನು ಹೇಳುವುದಾದರೆ, ಅದು ಸುಮುಹೂರ್ತವೆಂದೇ ಹೇಳಬೇಕಾಗುತ್ತದೆ! ಯುವರಾಜನಾಗಿದ್ದು, ಮುಂದೆ ವಿಶಾಲವಾದ ಸಾಮ್ರಾಜ್ಯದ ಸಾಮ್ರಾಟನಾಗಿ ಅಧಿಕಾರವನ್ನು ಮೆರೆಯಿಸಬೇಕಿದ್ದ ಗೌತಮನು ಸಾಧ್ವಿಯೂ ಸುಂದರಿಯೂ ಆದ ಹೆಂಡತಿಯನ್ನೂ ಮುದ್ದು ಬಾಲಕನನ್ನೂ ತ್ಯಜಿಸಿ ಮನೆಬಿಟ್ಟು ಹೊರಬಿದ್ದುದು ಇಂಥದೇ ಬೇರೊಂದು ಮುಹೂರ್ತದಲ್ಲಿ! ಬಾಲ ವಟುವಾದ ಶಂಕರಾಚಾರ್ಯನು ತಾಯಿಯ ಇಚ್ಛೆಯಂತೆ ಸಾಂಸಾರಿಕನಾಗುವುದನ್ನು ತ್ಯಜಿಸಿ ಅದ್ವೈತ ಮತಸ್ಥಾಪಕ ಆಚಾರ್ಯರಾಗಲು ಹೊರಟುದು ಇಂಥದೇ ಮತ್ತೊಂದು ಸುಮುಹೂರ್ತದಲ್ಲಿ! ಹಿಂದೂ ಮುಸಲ್ಮಾನರ ಕಲಹವನ್ನೂ ರಕ್ತಪಾತವನ್ನೂ ನೋಡಿ ಸಹಿಸದ ನಾನಕನು ಇವೆರಡು ಧರ್ಮಗಳ ಏಕೀಕರಣಕ್ಕಾಗಿ ಬೇಕಿದ್ದ ತಪಸ್ಸಂಪಾದನೆಗೆ ಮನೆಬಿಟ್ಟು ಹೊರಟದ್ದು ಇಂಥದೇ ಇನ್ನೊಂದು ಸನ್ಮುಹೂರ್ತದಲ್ಲಿ! ಪ್ರಪಂಚದ ಆರ್ಥಿಕ ಅಡಚಣಿಯ ಮೂಲಕ ಬೇಸತ್ತು ವಿದ್ಯಾರಣ್ಯರಾಗಿ ಜಗದ್ವರೇಣ್ಯರಾಗಲಿಕ್ಕೆ ಮಾಧವನು ಗೃಹತ್ಯಾಗಿಯಾದುದು ಇಂಥದೇ ಬೇರೊಂದು ಸುಸಮಯದಲ್ಲಿ! ಈ ಎಲ್ಲ ಮಹನೀಯರಂತೆಯೇ ತುಳಸೀದಾಸನೂ ಕೃತಕಾರ್ಯನಾಗಿ ಯಶಸ್ವಿಯಾದುದರಿಂದ ನಾವು ಮೇಲಿನ ಮುಹೂರ್ತಕ್ಕೆ ಸುಮುಹೂರ್ತವೆಂದು ಕರೆದುದು ಸಯುಕ್ತಿಕವೆಂಬುದು ನಿಸ್ಸಂದೇಹವಾದದ್ದು.

## ೫ ಕಾಶಿಯಲ್ಲಿ.

ಶ್ವಶುರಗೃಹದಿಂದ ಹೊರಬಿದ್ದ ತುಳಸೀದಾಸನು ತನ್ನ ಮನೆಗೆ ಹೋಗಲಿಲ್ಲ. ನಿಷ್ಫಲ ಪ್ರೇಮದ ನಿದಾರುಣ ಯಾತನೆಯನ್ನು ಸಂಬಲವಾಗಿಟ್ಟುಕೊಂಡು ಕಾಶಿಗೆ ಹೋದನು. ತನ್ನ ಮೊದಲಿನ ಗುರುವಾದ ನೃಸಿಂಹದಾಸನ ಮನೆಯಲ್ಲಿ ಇರಹತ್ತಿದನು. ನೃಸಿಂಹದಾಸನು ತನ್ನ ಈ ಪ್ರೀತಿಯ ಶಿಷ್ಯನಿಗೆ ಈ ಮರ್ಮಯಾತನೆಯ ಸಮಯದಲ್ಲಿ ಸಾದರದಿಂದ ಆಶ್ರಯಗೊಟ್ಟನು; ಆದರೆ ತುಳಸೀದಾಸನು ತನ್ನ ಈ ಗುರುವಿನ ಮನೆಯಲ್ಲಿ ಪರಪುಷ್ಟನಾಗಿ ಬಹು ದಿವಸ ಇರಲಿಕ್ಕೆ ಮನಸ್ಸುಮಾಡಲಿಲ್ಲ. ಇವನು ತುಸ ದಿವಸಗಳಲ್ಲಿಯೇ ಗುರುವಿನ ಅಪ್ಪಣೆ ಪಡೆದು, ಅಸಿಯ ದಡದಲ್ಲೊಂದು ಆಶ್ರಮವನ್ನು ನಿರ್ಮಿಸಿಕೊಂಡು ವಾಸಿಸಹತ್ತಿದನು. ಭಿಕ್ಷೆ ಬೇಡಿ ಉಪಜೀವನ ಸಾಗಿಸಹತ್ತಿದನು. ದಿನದ ಬಹು ಭಾಗವನ್ನು ಶ್ರೀರಾಮನ ಪೂಜೆಯಲ್ಲೂ ಧ್ಯಾನ-ಧಾರಣೆಗಳಲ್ಲೂ ಕಳೆಯಹತ್ತಿದನು.

ತುಳಸೀದಾಸನು ಹೀಗೆ ಆಶ್ರಮವಾಸಿಯಾಗಿರುವುದನ್ನು ತಿಳಿದ ಕೆಲವರು ವಿದ್ಯಾರ್ಥಿಗಳು ತುಳಸೀದಾಸನನ್ನು ಆಶ್ರಯಿಸಿದರು. ತುಳಸೀದಾಸನು ಇವರಿಗೆ ಬೇಡೆನ್ನಲಿಲ್ಲ. ಇವನು ತನ್ನ ಉತ್ಕಟ ಪತ್ನೀಪ್ರೇಮಕ್ಕಾಗಿ ಹೊಂದಿದ ಬಲವಾದ ಆಘಾತವನ್ನು ಹೇಗಾದರೂ ಮಾಡಿ, ಸಹಿಸಿಕೊಳ್ಳಬೇಕಾಗಿತ್ತು. ಅಹರ್ನಿಶ ದಹಿಸುತ್ತಿರುವ ಈ ಚಿಂತೆಯನ್ನು ಮರೆಯಿಸುವುದಕ್ಕಾಗಿ, ಸದಾ ಕಾರ್ಯತತ್ಪರನಾಗಬೇಕಿತ್ತು. ಕಾರಣ ಇವನು ಯಾವಾಗಲೂ ಕೆಲಸದಲ್ಲಿ ತೊಡಗಿ, ಗತಸಂಗತಿಯನ್ನು ಸ್ಮರಿಸಿ ಚಿಂತಾಕ್ರಾಂತವಾಗುತ್ತಿರುವ ಮನಸ್ಸನ್ನು ಬೇರೆ ವಿಷಯಗಳಲ್ಲಿ ತೊಡಗಿಸು

ವುದಕ್ಕೆ ಹವಣಿಸುತ್ತಿದ್ದನು. ತುಳಸೀದಾಸನ ಈ ಒತ್ತಾಯಕ್ಕೆ ಮನಸ್ಸು ಅಳುಕಲಿಲ್ಲ. ವ್ಯಥಿತವಾದ ಮನಸ್ಸು ಶಾಂತವಾಗಲಿಲ್ಲ. ಹೃದಯದ ಹಾ ಹಾಕ್ಕಾರವು ಅಧ್ಯಾಪನಾಕಾರ್ಯವನ್ನಾಗಲಿ, ಜಪ-ತಪಗಳನ್ನಾಗಲಿ ಸರಿಯಾಗಿ ಸಾಗಗೊಡಲಿಲ್ಲ. ತುಳಸೀದಾಸನು ಮನಸ್ಸಂತಾಪದ ಅತಿರೇಕದಿಂದ ಒಂದೊಂದು ರಾತ್ರಿಯನ್ನು ಜಾಗರಣೆಯಲ್ಲಿ ಕಳೆವನು. ಮನಶ್ಶಾಂತಿಗಾಗಿ ಬಹಳವಾಗಿ ಯತ್ನಿಸುವನು. ಸಾಧಿಸದಿರಲು ಬಾಲಕನಂತೆ ರೋದಿಸುವನು. ನೆಲದ ಮೇಲೆ ಬಿದ್ದು ಹೊರಳಾಡುವನು. "ರಘುನಾಥನೇ, ಇನ್ನು ನಾನು ನಿನ್ನನ್ನು ಮರೆಯುವದಿಲ್ಲ ಈಗ ನನಗೆ ನಿನ್ನ ಹೊರತು ಬೇರೆ ಗತಿಯಿಲ್ಲ. ನಾನು ಅನನ್ಯಭಾವನೆಯಿಂದ ನಿನಗೆ ಶರಣು ಬಂದಿರುವೆನು. ನನ್ನ ಅಪರಾಧಗಳೆಲ್ಲವನ್ನು ಕ್ಷಮಿಸು. ಈ ಆರ್ತನನ್ನುದ್ಧರಿಸು," ಎಂದು ಪ್ರಾರ್ಥಿಸಿಕೊಳ್ಳುವನು.

ತುಳಸೀದಾಸನು ಪ್ರತಿದಿನ ಮುಂಜಾವಿನಲ್ಲಿ ಕತ್ತಲಿರುವಾಗಲೆ ಎದ್ದು ಬಹಿರ್ದೇಶಕ್ಕೆ ಹೊರಟು, ಅಸೀ ನದಿಯನ್ನು ದಾಟಿ ಬಹು ದೂರ ಹೋಗುತ್ತಿದ್ದನು. ಶೌಚದ ತರುವಾಯ ಎದ್ದು ಬರುತ್ತಿರುವಾಗ ತಂಬಿಗೆಯಲ್ಲಿಯ ಉಳಿದ ನೀರನ್ನು ದಾರಿಯಲ್ಲಿರುವ ಒಂದು ಮಾವಿನ ಮರಕ್ಕೆ ಹನಿಸುತ್ತಿದ್ದನು. ಈ ಕ್ರಮವು ಎಷ್ಟೋ ದಿನಗಳ ವರೆಗೆ ಸಾಗಿತು. ಒಂದು ದಿನ ತುಳಸೀದಾಸನು ತಿರುಗಿ ಬರುವಾಗ, ಮಾವಿನಗಿಡದ ಹತ್ತಿರ ಬಂದು ನೋಡಿದನು. ತಂಬಿಗೆಯಲ್ಲಿ ನೀರಿರಲಿಲ್ಲ. ನಿತ್ಯದ ಪರಿಪಾಠವು ಇಂದು ಅಕಸ್ಮಾತ್ತಾಗಿ ತಪ್ಪಿಹೋದದ್ದನ್ನು ನೋಡಿ, ಅವನಿಗೆ ತುಸ ಅಸಮಾಧಾನವಾಯಿತು. ಅವನು ಕೆಲಹೊತ್ತು ಆ ಮಾವಿನ ಗಿಡದಡಿಯಲ್ಲಿ ಸುಮ್ಮನೆ ನಿಂತುಬಿಟ್ಟನು. ಈ ವೇಳೆಯಲ್ಲಿ 'ಬ್ರಾಹ್ಮಣಶ್ರೇಷ್ಠನೇ, ದುಃಖಿತನಾಗಬೇಡ. ತಂಬಿಗೆಯಲ್ಲಿಯ ನೀರು ಸಹಜವಾಗಿ ತೀರಿಹೋಗಿವೆ. ಬುದ್ಧಿಪೂರ್ವಕವಾಗಿ ನೀನು ಹೀಗೆ ಮಾಡಿದವನಲ್ಲ ನೀನು ನನಗೆ ಬಹು ದಿನಗಳಿಂದ ಜಲದಾನ ಮಾಡುತ್ತ ಬಂದಿರುವೆ ನಿನ್ನ ವಿಷಯದಲ್ಲಿ ನಾನು

ತುಂಬ ಸಂತುಷ್ಟನಿರುವೆನು.' ಎಂಬ ಶಬ್ದಗಳು ಅವನ ಕಿವಿಗೆ ಬಿದ್ದುವು. ತುಳಸೀದಾಸನು ಆಶ್ಚರ್ಯಾತಿರೇಕದಿಂದ ಮೋರೆಯೆತ್ತಿ ಮೇಲೆ ನೋಡಿದನು. ಯಾವ ಪ್ರಾಣಿಯೂ ಅವನ ಕಣ್ಣಿಗೆ ಬೀಳಲಿಲ್ಲ. ಕೆಲಹೊತ್ತು ಆಲೋಚಿಸಿದ ಬಳಿಕ ಅವನು ಈ ಗಿಡದಲ್ಲಿ ಭೂತವು ವಾಸವಾಗಿರಬಹುದೆಂದು ಭಾವಿಸಿದನು; ಹಾಗು 'ನೀನಾರು?' ಎಂದು ದೊಡ್ಡ ಧ್ವನಿಯಿಂದ ಕೇಳಿದನು.

ಈಗ ನಾನಾರೆಂಬುದು ನನಗೇ ಗೊತ್ತಿಲ್ಲ; ನಿನಗೇನು ಹೇಳಲಿ? ನೀನು ನಿನ್ನ ಮನಸ್ಸಮಾಧಾನಕ್ಕಾಗಿ ನಾನು ಪಿಶಾಚನೆಂದು ತಿಳಕೊಳ್ಳಬಹುದು. ಈ ಜನ್ಮದ ಪೂರ್ವದಲ್ಲಿ ಅಂದರೆ ಹಿಂದಿನ ಜನ್ಮದಲ್ಲಿ ನಾನು ಬ್ರಾಹ್ಮಣನಾಗಿದ್ದೆನೆಂಬುದು ನನಗೆ ಈಗಲೂ ನೆನಪಿನಲ್ಲಿದೆ. ಗಿಡದ ಮೇಲಿನ ಪಿಶಾಚನು ನುಡಿದನು:

ಅಯ್ಯೋ, ಎಂತಹ ಅಧೋಗತಿಯಯ್ಯಾ ಇದು! ಬ್ರಾಹ್ಮಣನಾಗಿದ್ದ ನಿನಗೆ ಪಿಶಾಚಯೋನಿಯಲ್ಲಿ ಜನಿಸಿ, ಹೀಗೆ ಕಾಲಕಳೆಯುವ ಪ್ರಸಂಗ ಬರಬೇಕೆ? ತುಳಸೀದಾಸನು ಸಹಾನುಭೂತಿಯನ್ನು ತೋರಿದನು.

ಎಲ್ಲವೂ ಕರ್ಮಫಲದ ಪರಿಣಾಮ! ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿಬಂದ ಮಾತ್ರಕ್ಕೆ ಅವನ ಪಾಪಗಳೆಲ್ಲ ನಾಶವಾಗುವವೆಂದಾಗಲಿ, ಅವನಿಂದ ಪಾಪದ ಕಾರ್ಯಗಳು ಘಟಿಸವೆಂದಾಗಲಿ ಹೇಳಲಿಕ್ಕಾಗದು. ಯಾವುದೇ ಜಾತಿಯಲ್ಲಿ ಹುಟ್ಟಲಿ; ಪ್ರಾರಬ್ಧಕ್ಕನುಗುಣವಾಗಿ ಕೆಲಸ ಮಾಡಲೇಬೇಕು. ಫಲವನ್ನನುಭವಿಸಲೇ ಬೇಕು. ಪ್ರಾಚೀನ ಕರ್ಮವಿಧಿ ಬೆನ್ನ ಬಿಡದು! ಇದಕ್ಕೆ ವಿಪರೀತವಾಗಿ ಯಾರು ಏನು ಮಾಡುವರು? ಆರಿಂದಲೇನಹುದು? ಪಿಶಾಚವು ನುಡಿಯಿತು.

ಯಾವುದರಿಂದ ತನ್ನ ಅಧೋಗತಿಯಾಗುವದೋ ಅಂತಹ ಕುಕಾರ್ಯವನ್ನು 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂದಿರುವ ಬ್ರಾಹ್ಮಣನು ಎಂದಿಗೂ ಆಚರಿಸನೆಂದು ನಾನು ತಿಳಿದಿದ್ದೆನು. ಪ್ರಾಚೀನ

ಕರ್ಮವು ಒಳ್ಳೆಯದಿದ್ದರೇನೇ ಬ್ರಾಹ್ಮಣನಾಗಿ ಹುಟ್ಟುವನು. ಬ್ರಾಹ್ಮಣನು ಅನುಕೂಲಗೃಹದಲ್ಲಿ ಉತ್ತಮ ಪರಿಸ್ಥಿತಿಯಲ್ಲಿ ಬೆಳೆದು ಸದಾ ಉನ್ನತಿಯ ಕಾರ್ಯಗಳನ್ನೇ ಮಾಡುವನೆಂದು ನಾನು ಭಾವಿಸಿದ್ದೆನು. ತುಳಸೀದಾಸನು ಹೇಳಿದನು.

ನಿಮ್ಮ ಈ ಭಾವನೆಯು ಸರಿಯಾದದ್ದಲ್ಲ! ಉಚ್ಚ ಕುಲದಲ್ಲಿ ಹುಟ್ಟಿದವನು ಸದಾ ಸನ್ಮಾರ್ಗಿಯಾಗಿರುವನೆಂದು ನಿಶ್ಚಿತವಾಗಿ ಹೇಳಲಿಕ್ಕೆ ಬರುವಂತಿಲ್ಲ."

ಮಾನವನು ಯಾವುದೇ ಜಾತಿಯಲ್ಲಿ ಜನ್ಮವೆತ್ತಲಿ, ವಿಧಿ ವಶನಾಗಿ ದುಷ್ಕರ್ಮಗಳನ್ನು ಮಾಡಲಿ; ಆದರೆ ಉನ್ನತಿಯ ವಿಷಯದಲ್ಲಿ ನಿರಾಶನಾಗುವ ಕಾರಣವಿಲ್ಲ. ಅವನು ಸಾಧನೆಯ ಬಲದಿಂದ ಪೂರ್ವ ಜನ್ಮದ ಹಾಗೂ ಈ ಜನ್ಮದ ಸಕಲ ಪಾಪಗಳನ್ನು ಹೋಗಲಾಡಿಸಿಕೊಳ್ಳಬಹುದು. ಉತ್ತಮಗತಿಯನ್ನು ಹೊಂದಬಹುದು. ತುಳಸೀದಾಸನು ಹೇಳಿದನು.

ಸಾಧ್ಯವಿದೆಯೆ?

ನಿಶ್ಚಿತವಾಗಿಯೂ ಸಾಧ್ಯವಿದೆ. ಬುದ್ಧಿವಂತನಾದ ಮಾನವನಿಗೆ ಅಸಾಧ್ಯವೆಂಬುದಿಲ್ಲ. ಮಾನವನ ಪಾಪಮೋಚನೆಗೆ ಅಮೋಘವೂ ತೀರ ಸುಲಭವೂ ಆದ ಒಂದು ಸಾಧನವಿದೆ ಮಾನವನು ದುಷ್ಕೃತಿಗಳನ್ನು ಮಾಡಿ ದುಷ್ಫಲದ ಹೊರೆಯನ್ನು ಹೊತ್ತುಕೊಂಡಾಗಲೂ ಪಶ್ಚಾತ್ತಾಪಯುಕ್ತನಾಗಿ ಒಂದು ಬಾರಿ—ಒಂದೇ ಒಂದು ಸಲ—ಆ ಶ್ರೀರಾಮನನ್ನು ನೆನೆದರೆ ಸಾಕು! ಅವನ ಸಂಚಿತ ಪಾಪವೆಲ್ಲವೂ ಕ್ಷಣ ಮಾತ್ರದಲ್ಲಿ ಧ್ವಂಸವಾಗಿ ಹೋಗುವುದು!

ವಿಪ್ರವರ್ಯರೆ, ನೀವೆನ್ನುವದು ನಿಜವಿರಬಹುದು; ಆದರೆ ಕುಕರ್ಮಗಳ ಕುಫಲಗಳ ಬಜ್ಜೆಯಲ್ಲಿ ಪೇಚಾಡುತ್ತಿದ್ದ ಪಾಪಿಗೆ ತಾರಕಮಂತ್ರದ ನೆನಪಾಗಲಿಕ್ಕೆ ಪೂರ್ವಜನ್ಮದ ಸುಕೃತದ ಸಹಾಯವು ಬೇಡವೆ? ತನ್ನ ತಾರಕಮಂತ್ರವು ಗೊತ್ತಾದರೂ, ಅದನ್ನು ಸರಿಯಾಗಿ ಪಠಿಸುವ ಕ್ರಮ

ಕ್ಕಾಗಿ ಗುರೂಪದೇಶವು ಬೇಡವೆ? ಇಂತಹ ಗುರುವು ದೊರೆಯಲಿಕ್ಕೆ ಸಂಚಿತ ಪುಣ್ಯದ ಬೆಂಬಲವು ಬೇಡವೇನು?

ನಿಜ. ಅಂತೆಯೇ ಬುದ್ಧಿವಂತರೆಂದು ಗರ್ವಿಸುತ್ತಿರುವ ಮಾನವರು ತಮ್ಮ ಉದ್ಧಾರಕ್ಕೆ ತೀರ ಸುಲಭವಾದ ಸಾಧನವಿದ್ದರೂ, ಆ ಕಡೆಗೆ ಕಣ್ಣೆತ್ತಿ ನೋಡದೆ, ಅಧೋಗತಿಯ ಕೊಂಚಿ ದಾರಿಯಲ್ಲಿ ಕಾಲಿಡುತ್ತಿರು ವರು. ಭರಭರನೆ ದುಷ್ಕಾರ್ಯಗಳನ್ನು ಮಾಡಿ, ಪಾಪದ ಹೊರೆಯನ್ನು ಹೊತ್ತುಕೊಳ್ಳುತ್ತಿರುವರು. ಇದೆಲ್ಲವೂ ಆ ಮಹಾಮಹಿಮನ ಲೀಲೆ ಯಲ್ಲದೆ ಬೇರಿಲ್ಲ! ಇಲ್ಲವಾದರೆ ಪತನಕ್ಕೆ ತೀರ ಸುಲಭವಾದ ರಾಮ ನಾಮವಿರುತ್ತಿರಲು, ಮಾನವನು ಪಾಪಕರ್ಮಿಯಾಗಿ ನರಕಗಾಮಿಯಾ ಗುತ್ತಿದ್ದನೆ?

ಸಾಧುವರ್ಯರೆ, ನೀವೆನ್ನುವುದು ಸರಿಯಾದದ್ದು. ಇಲ್ಲವಾದರೆ ನನಗೆ ಈ ಅಧೋಗತಿಯಾಗುತ್ತಿತ್ತೆ? ಪಿಶಾಚಜನ್ಮವನ್ನು ಹೊಂದಿ ಮರದ ರೆಂಬೆಯಲ್ಲಿ ನಾನು ಕಾಲಕಳೆಯುತ್ತಿದ್ದೆನೆ? ನನ್ನ ಇತಿಹಾಸವನ್ನು ಹೇಳು ವೆನು, ಕೇಳಿರಿ. ನಾನು ವಿಂಧ್ಯಪರ್ವತದ ಹತ್ತಿರಿರುವ ಒಂದು ರಾಜ್ಯದ ನಿವಾಸಿಯು; ಬ್ರಾಹ್ಮಣನು. ರಾಜಪುರೋಹಿತನು. ನನಗೆ ಎಲ್ಲೆಲ್ಲಿಯೂ ಸನ್ಮಾನವು ದೊರೆಯುತ್ತಿತ್ತು. ಇದರಿಂದ ನಾನು ಗರ್ವಿಷ್ಠನಾದೆನು. ಹಲವು ತರದ ಜನರು ನನ್ನ ಅನುಗ್ರಹದ ಆಶೆಯಿಂದ ನನ್ನನ್ನು ಆಶ್ರಯಿ ಸುತ್ತಿದ್ದರು. ನಾನು ಇವರೆಲ್ಲರಿಗೂ ಆಶ್ರಯಗೊಡುತ್ತಿದ್ದೆನು; ಆದರೆ ನಿಸ್ವಾರ್ಥ ಭಾವನೆಯಿಂದಲ್ಲ. ಪ್ರತಿಯೊಂದರಲ್ಲೂ ನನ್ನ ಸ್ವಾರ್ಥವು ಅಡಕ ವಾಗಿದ್ದೇ ಇರುತ್ತಿತ್ತು. ರಾಜನು ನನ್ನ ಹೇಳಿಕೆಯ ಮೇರೆಗೆ ಪಂಡಿತ ರಿಗೆ ಬಹುಮಾನವಾಡಿದರೆ, ಅದರಲ್ಲಿ ನನ್ನ ಪಾಲು ಇದ್ದದ್ದೇ. ಅರಸನು ನನ್ನ ಶಿಫಾರಸಿನ ಮೇರೆಗೆ ಯಾರಿಗಾದರೂ ನವಕರಿ ಕೊಟ್ಟರೆ, ಅವರ ಮೇಲೆ ನಾನು ಕಂದಾಯ ಕೂಡಿಸದೆ ಬಿಡುತ್ತಿದ್ದಿಲ್ಲ. ಇದರಿಂದ ಅನು ಗ್ರಹಿತರಾದ ಆ ಜನರು ಮುಂದೆ ನನ್ನ ಮೇಲೆ ಸಿಟ್ಟಾದರೂ, ನಾನದನ್ನು

ಲಕ್ಷಿಸುತ್ತಿದ್ದಿಲ್ಲ. ಅರಸನಿಂದ ಹೇರಳ ಹಣವನ್ನು ಹೊಂದಿ,ನನ್ನನ್ನು ವಂಚಿಸಿ ಹೊರಟವರನ್ನು ನಾನು ನನ್ನ ಆಶ್ರಿತರಾದ ಕಳ್ಳರಿಂದ ಸುಲಿಗೆಮಾಡಿಸಲಿಕ್ಕೆ ಹಿಂಜರಿದವನಲ್ಲ. ನಾನು ಬಾಹ್ಯದಲ್ಲಿ ಭಸ್ಮ-ವಿಭೂತಿಗಳಿಂದ ವಿಭೂಷಿತನಾಗಿದ್ದರೂ, ಜಪ-ತಪ-ದೇವಪೂಜಾದಿ ಕಾರ್ಯಗಳಲ್ಲಿ ರಮಿಸಿದವನಂತೆ ನಟಿಸುತ್ತಿದ್ದರೂ, ನನ್ನ ಅಂತರಂಗದಲ್ಲಿ ಸದಾ ಲಕ್ಷ್ಮಿಯ ಆಲೋಚನೆ ನಡೆದಿರುತ್ತಿತ್ತು! ನಾನು ಲಕ್ಷ್ಮೀಭಕ್ತನು! ದ್ರವ್ಯಸಂಚಯಕ್ಕಾಗಿ ಎಂತಹ ಹೀನ ಹೋರೆಗಳನ್ನು ಮಾಡಲಿಕ್ಕೂ ಹಿಂದೆಗೆದವನು ನಾನಲ್ಲ! ನನ್ನ ಲಾಭವನ್ನಿಟ್ಟುಕೊಳ್ಳಗೆ, ಪರೋಪಕಾರಕ್ಕೆ ಎಂದೂ ಕೈಹಾಕಿದವನಲ್ಲ! ಶುದ್ಧ ಮನಸ್ಸಿನಿಂದ ಭಜನ-ಪೂಜನಗಳನ್ನಾಚರಿಸಿದವನಲ್ಲ! ಆದರೆ ನಾನು ಒಂದು ದಿನ ನೀರಡಿಸಿದ ಒಬ್ಬ ಬ್ರಾಹ್ಮಣನಿಗೆ ನೀರ ಕುಡಿಯಲಿಕ್ಕೆ ಕೊಟ್ಟೆನು. ಇದರಲ್ಲಿ ಸ್ವಾರ್ಥಸಾಧನೆಯೇನೂ ಇರಲಿಲ್ಲ. ಇದರ ಪುಣ್ಯ ಬಲದಿಂದ ನಾನಿದುವರೆಗೆ ನಿಮ್ಮಿಂದ ನೀರನ್ನು ಹೊಂದುತ್ತ ಬಂದೆನು; ಹಾಗು ದಿನಾಲು ಪುಣ್ಯಾತ್ಮರಾದ ನಿಮ್ಮ ದರ್ಶನವಾಗುತ್ತ ಬಂತು ಈಗ ನನಗೆ ನನ್ನ ಮುಕ್ತಿಯ ಕಾಲವು ಸಮೀಪಿಸಿದೆಯೆಂದು ಅನಿಸಹತ್ತಿದೆ.

ವಿಂಧ್ಯ ದೇಶದ ನೀನು ಇಲ್ಲಿಗೆ ಬಂದೆಯೇಕೆ? ತುಳಸೀದಾಸನು ಕೇಳಿದನು.

ರಾಜನು ಕಾಶೀಯಾತ್ರೆಗೆ ಸಪರಿವಾರ ಹೊರಟಿದ್ದನು. ಆ ಪರಿವಾರದಲ್ಲಿ ನಾನೂ ಇದ್ದೆನು ನನ್ನಂಥ ಪಾಪಾತ್ಮನಿಗೆ ಕಾಶೀವಾಸವೂ ವಿಶ್ವೇಶ್ವರನ ದರ್ಶನವೂ ಘಟಿಸುವುದೆಂತು? ಪಾಪಿಷ್ಠನಾದ ನಾನು ಕಾಶಿಯ ಪುಣ್ಯ ಭೂಮಿಯಲ್ಲಿ ಕಾಲಿಡಬಾರದೆಂದೇ ಭೈರವನ ಸಂಕಲ್ಪವಿರಲಿಕ್ಕೆ ಬೇಕು. ಅಂತೆಯೇ ರಾಜಪರಿವಾರದೊಡನೆ ಹೊರಟ ನಾನು ಇಲ್ಲಿಗೆ ಬರುತ್ತಲೆ, ಭೈರವನು ಸರ್ಪರೂಪದಿಂದ ಬಂದು ನನ್ನನ್ನು ಕಚ್ಚಿದನು. ನಾನು ತತ್ಕ್ಷಣವೆ ಮೃತ್ಯುಮುಖನಾದೆನು. ಬಳಿಕ ಪಿಶಾಚನಾದೆನು. ಈ ವೃಕ್ಷದಲ್ಲಿ ವಾಸಿಸಹತ್ತಿದೆನು

ಅವರಿರುವುದೆಲ್ಲಿ?

ಕರ್ಣಘಂಟಾ ಎಂಬ ಸ್ಥಳದಲ್ಲಿ.

ಇನ್ನು ನನಗೆ ಅಪ್ಪಣೆಕೊಡು. ನಿನ್ನಿಂದ ನನಗೆ ಮಹದುಪಕಾರ ವಾದಂತಾಯಿತು, ಎಂದು ನುಡಿದು, ತುಳಸೀದಾಸನು ಭರದಿಂದ ತನ್ನ ಆಶ್ರಮದ ಕಡೆಗೆ ನಡೆದನು.

---

## ೬ ಸಾಧನೆ.

ಶ್ರೀರಾಮನ ದರ್ಶನಾತುರನಾಗಿದ್ದ ಭಕ್ತಶ್ರೇಷ್ಠ ತುಳಸೀದಾಸನು ಭಾವೀ ಗುರುವಿನ ಅನ್ವೇಷಣಕ್ಕೆ ಹೊರಟನು. ಬ್ರಹ್ಮದೈತ್ಯನ ಹೇಳಿಕೆಯಂತೆ ತುಳಸೀದಾಸನಿಗೆ ಜಗನ್ನಾಥದಾಸರು ದೊರಕಿದರು. ತುಳಸೀದಾಸನಿಗೆ ಪರಮಾನಂದವಾಯಿತು. ಜಗನಾಥದಾಸರ ಮುಮುಕ್ಷು ಮಾರ್ಗದಲ್ಲಿಯ ಪರಿಣತಾವಸ್ಥೆಯನ್ನು ಮನಗಂಡ ತುಳಸೀದಾಸನಿಗೆ ಯೋಗ್ಯ ಗುರುವು ದೊರೆತನೆಂಬ ಭಾವನೆಯಾದುದು ಸಹಜವದೆ. ತುಳಸೀದಾಸನು ಗುರುವಿನಲ್ಲಿ ಅತ್ಯಂತ ಭಕ್ತಿಯನ್ನಿರಿಸಿ, ಆಜ್ಞಾಧಾರಕನಾಗಿ ಸೇವೆಮಾಡಿಕೊಂಡಿದ್ದು ಗುರು ಅನುಜ್ಞೆಯಂತೆ ತಪಸ್ಸಾಧನೆಗೋಸುಗ ಚಿತ್ರಕೂಟ ಪರ್ವತಕ್ಕೆ ಹೊರಟನು; ಚಿತ್ರಕೂಟ ಪರ್ವತಕ್ಕೂ ತುಳಸೀದಾಸನ ಜನ್ಮಭೂಮಿಗೂ ಬಹಳ ಅಂತರವಿರಲಿಲ್ಲ. ತುಳಸೀದಾಸನು ಮಾರ್ಗದಲ್ಲಿಯ ಒಂದು ಸ್ಥಳದಲ್ಲಿ ನಿಂತು ನೋಡಿದರೆ, ಜನ್ಮಭೂಮಿಯು ನ್ನಾಗಲಿ ಶ್ವಶುರಾಲಯುವನ್ನಾಗಲಿ ಅವಲೋಕಿಸಬಹುದಾಗಿತ್ತು; ಆದರೆ ಭಗವದ್ದರ್ಶನವೇ ಏಕಮಾತ್ರ ಇಚ್ಛೆಯಾಗಿದ್ದ ಆ ಸತ್ಪುರುಷನಿಗೆ ಮನೆಯು ನೆನಪಾಗಲಿಲ್ಲ. ಮಾತೆಯು ಸ್ಮರಣೆಯಾಗಲಿಲ್ಲ. ತುಳಸೀದಾಸನು ಇಂದು

ಮಾಯಾಮುಕ್ತನು. ಈಗವನಿಗೆ ಅನಿತ್ಯ ವಸ್ತುಗಳ ಸಂಪಾದನೆಯ ಲೋಭವು ತಿಲಮಾತ್ರವೂ ಇರಲಿಲ್ಲ.

ತುಳಸೀದಾಸನು ಚಿತ್ರಕೂಟ ಪರ್ವತದಲ್ಲಿ ತಪಸ್ಸಾಧನೆಗೆ ಯೋಗ್ಯವಾದ ಗುಹೆಯನ್ನು ಹುಡುಕಿಕೊಂಡು ವಾಸವಾದನು. ತಪಸ್ಸನ್ನಾಚರಿಸ ಹತ್ತಿದನು. ಪರ್ವತದ ಕಂದರದಲ್ಲಿಯ ನಿಬಿಡಾರಣ್ಯ. ಏಕಾಂತ ವಾಸ. ಫಲಾಹಾರ. ಗಿರಿನದಿಯ ಜಲಪಾನ. ತುಳಸೀದಾಸನು ಏಕಾಗ್ರ ಮನಸ್ಸಿನಿಂದ ಸಾಧನೆಯ ಕಾರ್ಯದಲ್ಲಿ ಕ್ರಮವಾಗಿ ಮುಂದಡಿಯಿಡುತ್ತ ನಡೆದನು. ಒಂದೊಂದು ದಿನ ಅವನು ಆಹಾರ-ನೀರುಗಳ ಪರಿವೆಯಿಲ್ಲದೆ ಕೇವಲ ಸಮಾಧಿಯಲ್ಲಿಯೆ ಇರುವನು. ಹೀಗೆ ಇರುತ್ತಿರಲು, ಮುಂದೆ ನಾಲ್ಕಾರು ದಿನಗಳಿಗೊಮ್ಮೆ ಸಮಾಧಿಭಂಗವಾಗಹತ್ತಿತು. ಅವನ ಆನಂದವು ಹೆಚ್ಚುತ್ತ ನಡೆಯಿತು. ಆ ಗಿರಿಕಂದರದ ಭಯಂಕರ ಪ್ರದೇಶದಲ್ಲಿ, ನಿರ್ಜನವಾದ ನಿಬಿಡಾರಣ್ಯದಲ್ಲಿ, ಸಂಗವಿರಹಿತನಾದ ಆ ಯೋಗಿಯು ಆತ್ಮಪ್ರಸಾದದ ನಿಜಸುಖದಲ್ಲಿ ಕಾಲಕಳೆಯಹತ್ತಿದನು. ಹೀಗೆ ಆರು ತಿಂಗಳಗಳು ಕ್ರಮಿಸಿದವು. ಜೆಡೆಗಳು ಬೆಳೆದವು. ದೇಹವು ಕೃಶವೂ ಕ್ಷೀಣವೂ ಆದರೂ, ಮೋರೆಯ ಆನಂದವೃತ್ತಿಯೂ ಕಣ್ಣುಗಳ ತೇಜವೂ ಹೆಚ್ಚುತಲಿತ್ತು.

ಒಂದು ದಿನ ನಡು ಇರುಳಿನಲ್ಲಿ ತುಳಸೀದಾಸನು ಗುಹೆಯಲ್ಲಿ ಆಸನಮಂಡಿತನಾಗಿ ಯೋಗರತನಾಗಿರುವಾಗ ಹೆಂಡತಿಯು ಎದುರಿನಲ್ಲಿ ಬಂದು ನಿಂತಿರುವಂತೆ ಭಾಸವಾಯಿತು. ತುಳಸೀದಾಸನು ಸಿಟ್ಟಿನಿಂದ:—'ನೀನು ಇಲ್ಲಿಗೇಕೆ ಬಂದೆ?' ಎಂದು ಕೇಳಿದನು.

ನಾನು ತಮ್ಮ ಸಹಧರ್ಮಿಣಿಯು-ಸಹಚರಳು-ಅನುಗಾಮಿನಿಯು. ಗೃಹವನ್ನು ಮರೆದು ಅರಣ್ಯವಾಸಿಗಳಾಗಿದ್ದ ತಮ್ಮನ್ನು ಮನೆಗೆ ಕರೆದೊಯ್ಯಲಿಕ್ಕೆ ಬಂದಿರುವೆನು. ಭಾಸಮಾನಳಾದ ರತ್ನಾವಳಿಯು ಉಚ್ಚರಿಸಿದಂತಾಯಿತು.

ಈಗ ನನಗೂ ನಿನಗೂ ಯಾವ ಸಂಬಂಧವೂ ಇಲ್ಲ. ಮೊದಲಿನ ತುಳಸೀದಾಸನು ಇವನಲ್ಲ. ಆ ತುಳಸೀದಾಸನು ಬೇರೆ; ಈ ತುಳಸೀದಾಸನು ಬೇರೆ. ಹೆಂಡತಿಗೆ ದೇಹವನ್ನೂ ಆತ್ಮವನ್ನೂ ವಿಕ್ರಯಿಸಿಕೊಂಡು, ಪರಮಪುರುಷನನ್ನು ಮರೆದು, ಪ್ರಿಯಕರೆಯ ಆಜ್ಞಾಧಾರಕ ಸೇವಕನಾಗಿದ್ದ ತುಳಸೀದಾಸನು ನಾನಾಗಬಹುದೇ? ನಿನಗೆ ಹೇಗೆ ಕಾಣುತ್ತದೆ?

ಪ್ರಿಯರೆ, ಈ ಪ್ರಸಂಗದಲ್ಲಿ ಈ ದಾಸಿಯೊಡನೆ ರಹಸ್ಯವಾಡುವುದು ಸಮಂಜಸವೆ? ತಮ್ಮ ಶೋಧಕ್ಕಾಗಿ ಎಂತಹ ಕಷ್ಟವನ್ನು ಸಹಿಸಿರುವೆನು? ಕೋಮಲೆಯಾದ ನಾನು ಹೇಗೆ ತೊಳಲಿ ಬಳಲಿದ್ದೇನು? ಎಂಬುದರ ವಿಚಾರ ಮಾಡಿರಿ. ವಿರಹಾನಲದಿಂದ ಬೆಂದ ಈ ಅಬಲೆಯು ಭ್ರಾಂತಳಾಗಿ, ಅನ್ನ-ನೀರುಗಳನ್ನು ತೊರೆದು, ಗಿರಿ ಕಂದರಗಳಲ್ಲಿ ಸಂಚರಿಸಿ, ನಿಮ್ಮನ್ನು ಹುಡುಕಿಕೊಂಡು ಬಂದಿರುವಾಗ ನೀವು ಹೀಗೆ ಹುಡುಗಾಟಿಕೆ ಮಾಡದೇಕೆ? ಒಂದು ವಿಷವೇಳೆಯಲ್ಲಿ ಅಜ್ಞಾನಿಯಾದ ನಾನು ಅವಿಚಾರದಿಂದ ಮಾತನಾಡಿರಬಹುದು. ಅದಕ್ಕೆ ಈ ತರದ ಕಠೋರ ಶಿಕ್ಷೆಯೆ? ಪ್ರಾಣನಾಥರೆ, ಆ ಮಾತು ನಿಮ್ಮ ಮನಸ್ಸಿಗೆ ಹತ್ತಿದ್ದರೆ, ನಾನು ನಿಮ್ಮ ಕ್ಷಮೆ ಬೇಡುವೆನು. ಅಂಗಲಾಚಿ ಬೇಡಿಕೊಳ್ಳುವೆನು. ನನ್ನ ಅಪರಾಧವನ್ನು ಕ್ಷಮಿಸಿ, ಮೊದಲಿನಂತೆ ಸ್ನೇಹದೃಷ್ಟಿಯಿಂದ ನೋಡಿರಿ.

ಅದು ವಿಷವೇಳೆಯಲ್ಲ; ಅಮೃತಸಿದ್ಧಿಯೋಗ. ನೀನಾಡಿದುದು ಅಸಮಂಜಸವಲ್ಲ; ಅತ್ಯಂತ ಉಪಯುಕ್ತ. ನೀನಾಚರಿಸಿದುದು ಅಪರಾಧವಲ್ಲ; ಪರಮೋಪಕಾರ. ಪರಮ ಗುರು, ನಿನ್ನ ಉಪಕಾರವನ್ನು ನಾನೆಷ್ಟು ಸ್ಮರಿಸಿದರೂ ತೀರದು. ಆದರೆ ಈಗ ನೀನು ಆಚರಿಸುತ್ತಿರುವುದೂ, ಉಚ್ಚರಿಸುತ್ತಿರುವುದೂ ತೀರ ಅನುಚಿತವಾದದ್ದು. ಯಾವುದು ನಿತ್ಯವಾದುದು? ಯಾವುದು ಅನಿತ್ಯವಾದದ್ದು? ಸದ್ವಸ್ತುವಾವುದು? ಕೇವಲ ಮಾಯೆಯಿಂದ ಮೋಹಕವಾದದ್ದು ಯಾವುದು? ಯಾವುದರಲ್ಲಿ

ನಿತ್ಯ ಸುಖವಿದೆ? ಏತರಲ್ಲಿ ಕ್ಷಣಿಕ ಆನಂದವಿದೆ? ಎಂಬುದನ್ನರಿಯದ—ಅರಿತಿದ್ದರೂ ವಿಪರೀತ ಆಚರಣೆಯಲ್ಲಿದ್ದ—ಈ ಪಾಮರನಿಗೆ ಸದ್ವಸ್ತುವನ್ನು ನೆನಪಿಗೆ ತಂದುಕೊಟ್ಟು, ಸನ್ಮಾರ್ಗವನ್ನು ತೋರಿದ ಪರಮ ದೇವತೆಯೆ, ಯಾವ ಮಾಯೆಯನ್ನು ನನ್ನಲ್ಲಿಂದ ಹೊಡೆದೋಡಿಸಲಿಕ್ಕೆ ಕಾರಣಳಾದೆಯೋ ಆ ಮಾಯೆಯಲ್ಲಿ ಶಿಲುಕಬೇಡ. ಆ ಶ್ರೇಷ್ಠ ವಿಚಾರಗಳನ್ನು ಸದಾ ಚಿತ್ತದಲ್ಲಿರಿಸು. ಅವುಗಳಿಂದ ಕ್ಷಣಿಕವೂ ಚ್ಯುತಳಾಗಬೇಡ. ಎಲ್ಲಿಯ ಪತಿ? ಎಲ್ಲಿಯ ಪತ್ನಿ? ಎತ್ತಣ ಸಂಬಂಧ? ಆರಿಗಾರಿಲ್ಲ! ತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು. ಇನ್ನು ಹೊರಡು. ನೀನಿಲ್ಲಿ ಬಹು ಕಾಲ ನಿಲ್ಲುವದು ನಿನಗೂ ನನಗೂ ಅಹಿತಕರವು. ತುಳಸೀದಾಸನು ನುಡಿದನು.

ಪ್ರಾಣನಾಥರೆ, ನಾನು ನಿಮ್ಮ ಚರಣದಾಸಿಯು. ಎಲ್ಲಿ ನೀವೋ ಅಲ್ಲಿ ನಾನು. ನನ್ನನ್ನು ದೂರ ಹೊಡೆದೋಡಿಸಬೇಡಿರಿ!

ನೀನು ನನ್ನ ಸಹಧರ್ಮಿಣಿಯಷ್ಟೆ? ಪತಿಯ ಧರ್ಮಕಾರ್ಯಕ್ಕೆ ಸಹಾಯ ಮಾಡುವುದು ನಿನ್ನ ಕರ್ತವ್ಯವಷ್ಟೆ? ಪತಿಯ ಆಜ್ಞಾಪಾಲನೆಯು ಪತಿವ್ರತೆಯಾದ ನಿನ್ನ ಧರ್ಮವಷ್ಟೆ? ಸತಿಯು ಅಧಿಕಾರದಿಂದ ನನ್ನನ್ನು ಕರೆದೊಯ್ಯಲು ಬಂದ ನಿನಗೆ ಈ ಸ್ಥಳದಿಂದ ಬೇಗನೆ ಹೊರಟು ಹೋಗೆಂದು ನಾನು ಅಪ್ಪಣೆ ಮಾಡುವೆನು. ಹೊರಡು, ನಿಂತು ಪತಿಯ ಆಜ್ಞಾಭಂಗ ಮಾಡಿದ ಪಾಪಕ್ಕೆ ಗುರಿಯಾಗದಿರು! ತುಳಸೀದಾಸನು ಹೇಳಿದನು.

ಪತ್ನಿಯ ಆ ಮೂರ್ತಿಯು ಅಂತರ್ಧಾನವಾಯಿತು. ಆದರೆ ಆ ಸ್ಥಳವು ಶೂನ್ಯವಾಗಲಿಲ್ಲ. ತುಳಸೀದಾಸನಿಗೆ ಅಲ್ಲಿ ಹುಲಸೀದೇವಿಯ ಮೂರ್ತಿಯು ಕಾಣಹತ್ತಿತು. ಅವಳ ದೀನ ಮುಖವನ್ನು ನೋಡಿ ತುಳಸೀದಾಸನ ಮನಸ್ಸು ಕೊಂಚ ಚಂಚಲವಾಯಿತು. ಹುಲಸೀದೇವಿಯು:—ಅಪ್ಪಾ, ನಿನ್ನನ್ನು ನಾನು ಬಹಳವಾಗಿ ಹುಡುಕಿದೆನು. ಬಹು ಶ್ರಮಬಟ್ಟು ಇಲ್ಲಿಗೆ ಬಂದೆನು, ಎಂದಳು.

ಏಕಮ್ಮಾ? ತುಳಸೀದಾಸನು ಕೇಳಿದನು.

ನಿನ್ನ ಹೊರತು ನನಗೆ ಗತಿಯಾರಪ್ಪಾ? ಹುಲಸೀದೇವಿಯು ಆರ್ತ ಸ್ವರದಿಂದ ಕೇಳಿದಳು.

ಅಮ್ಮಾ, ಜಗತ್ತಿನ ಎಲ್ಲ ಜನರಿಗೂ ಆ ರಘುನಾಥನೇ ಗತಿಯು. ಅವನ ಹೊರತು ಬೇರೆ ಆಶ್ರಯ ಸ್ಥಳವಿಲ್ಲ! ತುಳಸೀದಾಸನು ಹೇಳಿದನು.

ಅಯ್ಯಾ, ಹೀಗೆಂದರೆ ಹೇಗೆ? ನಂದದಾಸನು ಎಂದೋ ಕೈಬಿಟ್ಟು ಹೋಗಿರುವನು. ನೀನೂ ಹೀಗೆ ಗೃಹತ್ಯಾಗಿಯಾದೆ! ನಾನು ಯಾರನ್ನವಲಂಬಿಸಿ ಸಂಸಾರದಲ್ಲಿರಲಿ? ಈ ಮುಪ್ಪಿನ ವಯಸ್ಸಿನಲ್ಲಿ ನನ್ನನ್ನು ರಕ್ಷಿಸುವವರಾರು?

ಅಮ್ಮಾ, ಯಾವನು ಪರಮ ಪುರುಷನು, ಯಾವನು ನಿತ್ಯನು, ಯಾವನು ಆರ್ತಪರಿತ್ರಾಣನು ಆ ಶ್ರೀಹರಿಯನ್ನೇ ನಂಬಿ ಸಂಸಾರದಲ್ಲಿ ವ್ಯವಹರಿಸು! ಉಳಿದವರೆಲ್ಲರೂ ಅನಿತ್ಯರು. ಒಂದಿಲ್ಲೊಂದು ದಿನ ಕೈ ಬಿಡತಕ್ಕವರೇ! ತುಳಸೀದಾಸನೆಂದನು.

ಅಪ್ಪಾ, ನಾನು ನಿನ್ನ ಗರ್ಭಧಾರಿಣಿಯು. ಸಣ್ಣವನನ್ನು ದೊಡ್ಡವನನ್ನಾಗಿ ಮಾಡಿದ ಹಡೆದಮ್ಮನು. ನನಗೆ ವ್ಯಥೆಯನ್ನುಂಟುಮಾಡಬೇಡ! ನಡೆ, ಮನೆಗೆ ಹೋಗೋಣ.

ಜನನಿಯೆ, ಕ್ಷಮಿಸು.

ಮಾತೆಗೆ ಮನೋವ್ಯಥೆಯನ್ನುಂಟುಮಾಡುವುದೇ ನಿನ್ನ ಧರ್ಮವೇನಯ್ಯಾ? ಈ ಧರ್ಮವನ್ನು ನೀನೆಲ್ಲಿ ಕಲಿತೆ? ಈ ವಿಪರೀತ ಆಚರಣೆಯನ್ನು ನಿನಗೆ ಹೇಳಿಕೊಟ್ಟವರಾರು? ಹಡೆದ ತಾಯಿಯನ್ನೂ ಕೈ ಹಿಡಿದ ಹೆಂಡತಿಯನ್ನೂ ಮನೆ-ಮಾರುಗಳನ್ನೂ ತ್ಯಜಿಸಿ, ಆಶ್ರಿತರನ್ನು ಅನಾಥರನ್ನಾಗಿ ಮಾಡಿ, ಅರಣ್ಯವಾಸಿಯಾಗುವುದು ಧರ್ಮವಾದೀತೆ? ಕಣ್ಣಿಗೆ ಕಾಣುವ ಪ್ರಿಯಜನರನ್ನು ತ್ಯಜಿಸಿ, ಅದೃಷ್ಟವಾದ ಛಾಯೆಯನ್ನು ನಂಬಿ

ಶ್ರಮಬಡುವುದು ಧರ್ಮವೆ? ಇದೆಲ್ಲಿಯ ಧರ್ಮ! ನಮ್ಮೆಲ್ಲರ ದುರದೃಷ್ಟ! ಇಲ್ಲವಾದರೆ, ನಿನಗೆ ಈ ದುರ್ಬುದ್ಧಿಯುಂಟಾಗುತ್ತಿತ್ತೆ? ಮಗನೆ ಬೇಡ! ಈ ವೃತ್ತಿಯನ್ನು ಬಿಡು! ನಿನ್ನ ಈ ಕೃಶದೇಹವನ್ನು ನೋಡಲಾರೆನು! ಒಳಸೇರಿದ ಕಣ್ಣುಗಳು ನನಗೆ ಭಯವನ್ನುಂಟುಮಾಡುತ್ತಿವೆ! ಸುಕುಮಾರನೆ, ನಿನಗೇತರ ಕೊರತೆಯಿದೆ? ತಾಯಿ-ತಂದೆಗಳ ಭಾರ ಹೊತ್ತ ನಾನಿದ್ದೇನೆ. ರೂಪವತಿಯೂ ಗುಣವತಿಯೂ ಆದ ಅಂಗನೆಯಿದ್ದಾಳೆ. ಹೀಗಿರಲು ನೀನು ಅಡವಿಯ ಪಾಲೇಕೆ?

ಮಾತೆಯೇ, ವಿಚಾರಿಸಿ ನೋಡು ಎಲ್ಲವೂ ಮಾಯೆ! ತಾಯಿ-ಮಗ, ಗಂಡ-ಹೆಂಡತಿ, ಅಣ್ಣ-ತಮ್ಮ ಇವೇ ಮೊದಲಾದ ಸಂಬಂಧಗಳು ನಿತ್ಯವಾದವುಗಳಲ್ಲ; ಅನಿತ್ಯವಾದವುಗಳು. ನಿನ್ನ ವಿವಾಹದ ಪೂರ್ವದಲ್ಲಿ ನಾನೆಲ್ಲಿದ್ದೆನು? ಈಗ ಆ ನನ್ನ ಜನಕನೆಲ್ಲಿ? ಅನಂತಪಥದ ದಾರಿಕಾರರಾಗಿದ್ದ ನಾವು ಮಧ್ಯದಲ್ಲಿ ಒಬ್ಬರಿಗೊಬ್ಬರು ಕೂಡುತ್ತೇವೆ; ಮತ್ತೆ ಅಗಲುತ್ತೇವೆ. ಈ ಸಂಬಂಧಗಳನ್ನು ದೃಢಪಡಿಸಿಕೊಳ್ಳಲು ಪ್ರಯತ್ನಿಸುವದಾಗಲಿ, ಚಿರಕಾಲ ಇರಲೆಂದಾಶಿಸುವದಾಗಲಿ ನಿರುಪಯುಕ್ತವಾದುದು. ಋಣಪರಿಶೋಧಕ್ಕಾಗಿ ಹೊರಟ ನಾವು ಋಣವಿರುವ ವರೆಗೆ ಮಾತ್ರ ಒಂದು ಕಡೆಯಲ್ಲಿ ಯಾವುದೊಂದು ಸಂಬಂಧದಿಂದ ಬದ್ಧರಾಗಿ ವಾಸಿಸುತ್ತೇವೆ. ಆ ಋಣವು ತೀರುತ್ತಲೇ ಧರ್ಮಶಾಲೆಯಲ್ಲಿಯ ಪ್ರವಾಸಿಗರಂತೆ ನಮ್ಮ ನಮ್ಮ ಗಂತವ್ಯ ಪಥದ ಕಡೆಗೆ ಗಮನಮಾಡಲೇಬೇಕು. ಋಣಾನುಬಂಧವು ತೀರಿದ ಬಳಿಕ ಅಗಲಿ ಹೋಗುತ್ತಿರುವ ಆಪ್ತೇಷ್ಟರನ್ನು ಮತ್ತೆ ಆ ಮುನ್ನಿನ ಸಂಬಂಧದ ಜೀರ್ಣಸೂತ್ರದಿಂದ ಬಂಧಿಸ ಬಯಸುವುದು ಮೂರ್ಖತನವಲ್ಲದೆ ಬೇರಿಲ್ಲ! ನನ್ನ-ನಿನ್ನ ಋಣಾನುಬಂಧವು ತೀರಿದೆ. ಇನ್ನು ನಾವಿಬ್ಬರು ಕೂಡಿರುವುದು ಸಾಧ್ಯವಿಲ್ಲ! ಹೀಗಾಗಿ, ನಿನ್ನ ಈ ಮಗನು ಸಂಸಾರ ರಂಗನಾಟಕದಲ್ಲಿ ಅಯಶಸ್ವಿಯಾದ ನಟನಾಗಿ, ಅಪಕೀರ್ತಿ ಹೊಂದಿ, ಅಕಾಲಮೃತ್ಯುವಿಗೆ ತುತ್ತಾದವನಲ್ಲ. ಇವನು ಮನುಷ್ಯ ಜನ್ಮದ

ಸಾರ್ಥಕತೆಯ-ಪರಮಪುರುಷಾರ್ಥದ-ಸಾಧನೆಯಲ್ಲಿರುವನು. ನಾನೀ ಮಾರ್ಗದಲ್ಲಿ ಸರಿಯಾಗಿ ನಡೆದು ಹೋದರೆ, ಕುಲಕೋಟಿಯನ್ನುದ್ಧರಿಸುವೆನು. ಇದರಿಂದ ನೀನೂ ಉದ್ಧಾರಳಾಗುವೆ. ಇದು ನಿನಗೆ ಬೇಡವೆ? ಸಂಸಾರದಲ್ಲಿ ಯಾವುದು ನಿತ್ಯವಾದುದು? ಯಾವುದು ಅನಿತ್ಯವಾದುದು? ಆ ಭಗವಂತನೊಬ್ಬನೇ ನಿತ್ಯನು. ಮಾನವರ ಚಿರಸಂಬಂಧಿಕನು. ಮಾಯೆಯಿಂದ ಭ್ರಾಂತನಾದ ಮಾನವನು ನಿತ್ಯಸಂಬಂಧಿಕನಾದ ಭಗವಂತನನ್ನು ಮರೆದು, ಅನಿತ್ಯದ ಹೆಂಡಿರು-ಮಕ್ಕಳನ್ನು ನಚ್ಚಿ, ಅಡಿಗಡಿಗೆ ಅಪಮಾನವನ್ನೂ ತಾಪವನ್ನೂ ಹೊಂದಿ, ಹಲವು ವಿಧಗಳಾದ ಕಷ್ಟಗಳಿಗೆ ಗುರಿಯಾಗುವನಾದರೂ, ಚಿರಸಂಬಂಧಿಕನನ್ನು ನೆನೆಯುವದಿಲ್ಲ! ಅಮ್ಮಾ, ಎಂತಹ ಅಜ್ಞಾನವಿದು ನೋಡು. ನಿನ್ನ ಈ ಮಗನು ಮಾಯೆಯಿಂದ ಮುಕ್ತನಾಗಿದ್ದಾನೆ. ಮೊದಲಿನ ಭ್ರಾಂತಿಯಿಂದ ಬಿಡುಗಡೆ ಹೊಂದಿದ್ದಾನೆ ಚಿರಮಾಂಗಲ್ಯದ ಪರಮದಾರಿಯಲ್ಲಿ ಭರದಿಂದ ಮುಂದಡಿಯಿಡುತ್ತಿದ್ದಾನೆ. ಇದು ನಿನಗೆ ಪ್ರಿಯವಲ್ಲವೆ? ಈ ಶ್ರೀರಾಮ ಸೇವಕನನ್ನು ನೋಡಿ ನಿನಗೆ ಸಂತೋಷವಾಗುವದಿಲ್ಲವೆ? ಮಾತೆ. ಇನ್ನು ಹೊರಡು. ಇಲ್ಲಿರಬೇಡ. ಕೃತಕಾರ್ಯದಲ್ಲಿ ಜಯಶಾಲಿಯಾಗೆಂದು ಹರಸಿ, ನಿರ್ವಿಚಾರದಿಂದ ಹೊರಟುಹೋಗು.

ತುಲಸೀದೇವಿಯು ವಿಫಲಮನೋರಥಳಾಗಿ ಹೊರಟಳು. ಆ ಸ್ಥಳದಲ್ಲಿ ಬೇರೊಂದು ಪುರುಷ ಮೂರ್ತಿಯು ಕಾಣಿಸಹತ್ತಿತು. ತುಳಸೀದಾಸನು "ನೀನು ಯಾರು?" ಎಂದು ಕೇಳಿದಳು.

ನಾನು ಯಕ್ಷ.

ನಿನಗೇನು ಬೇಕಾಗಿದೆ? ನೀನಿಲ್ಲಿಗೇಕೆ ಬಂದೆ? ತುಳಸೀದಾಸನು ಕೇಳಿದನು.

ನಾನು ನಿನಗೆ ಅಖಂಡೈಶ್ವರ್ಯವನ್ನು ಅನುಗ್ರಹಿಸಲು ಬಂದಿದ್ದೇನೆ.

ನನಗೆ ಐಶ್ವರ್ಯವು ಬೇಕಿಲ್ಲ!

ಎಂತಹ ಹುಚ್ಚನು ನೀನು! ಐಶ್ವರ್ಯವನ್ನು ಧಿಕ್ಕರಿಸುವ ಮಾನವರಾರಾದರೂ ಉಂಟೆ? ಯಕ್ಷನು ಕೇಳಿದನು.

ಇರಲಿ,-ಇಲ್ಲದಿರಲಿ. ಈ ವಿಚಾರವು ನನಗೆ ಬೇಡ! ನನಗೆ ಧನವು ಬೇಕಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ! ತುಳಸೀದಾಸನೆಂದನು.

ಅಯ್ಯೋ, ಬುದ್ಧಿಹೀನನೇ, ನಾನು ಕೊಡಬೇಕೆಂದಿರುವ ದ್ರವ್ಯವನ್ನು ತಿರಸ್ಕರಿಸುವೆಯಾ? ಯುಧಿಷ್ಠಿರನಂಥ ಧರ್ಮಾತ್ಮನು ಬೇರೊಬ್ಬನಾಗಲಿಲ್ಲವೆಂದು ಜಗತ್ತಿನಲ್ಲಿ ಖ್ಯಾತಿಯುಂಟಷ್ಟೆ? ಆದರೆ ಧರ್ಮಪ್ರಾಣನಾದ ಆ ಧರ್ಮರಾಯನೂ ಧನಸಂಪಾದನೆಯ ಆಶೆಯಿಂದ ಹಿಮಾಲಯಕ್ಕೆ ಧಾವಿಸಿದ್ದನ್ನು ನೀನು ಕೇಳಿಲ್ಲವೆ?

ನೀನು ಅಂತಹ ಧರ್ಮಪ್ರಾಣರಿಗೇನೇ ನಿನ್ನ ದ್ರವ್ಯವನ್ನು ಸಲ್ಲಿಸು! ನಾನು ತೀರ ಕ್ಷುದ್ರ ಮನುಷ್ಯನು! ನನಗೆ ನಿನ್ನ ಧನದಿಂದ ಉಪಯೋಗವಿಲ್ಲ!

ನೀನು ಕುಳಿತಿರುವ ಆ ಸ್ಥಳದ ಬುಡದಲ್ಲಿಯೆ........

ಪಿಶಾಚನೆ, ದೂರ ನಡೆ. ಕ್ಷಣಮಾತ್ರವೂ ಇಲ್ಲಿ ನಿಲ್ಲಬೇಡ!

ಯಕ್ಷನು ಅದೃಶ್ಯನಾದನು. ಆ ಸ್ಥಳವು ಅರೆನಿಮಿಷ ಮಾತ್ರ ಶೂನ್ಯವಾಗಿತ್ತು. ಅಲ್ಪಾವಕಾಶದಲ್ಲಿಯೆ ಪರಮಲಾವಣ್ಯಮಯಿಯಾದ ಪ್ರೌಢರಮಣಿಯೊಬ್ಬಳು ಆ ಸ್ಥಳದಲ್ಲಿ ಕಾಣಿಸಿಕೊಂಡಳು. ತುಳಸೀದಾಸನು 'ಅಮ್ಮಾ ನೀನಾರು?' ಎಂದು ಕೇಳಿದನು.

ನಾನು ಅಷ್ಟಸಿದ್ಧಿ. ಆ ಹೆಂಗಸು ಹೇಳಿದಳು.

ನಿನಗೇನು ಬೇಕು? ನನ್ನ ಬಳಿಗೆ ಏಕೆ ಬಂದೆ? ತುಳಸೀದಾಸನು ಕೇಳಿದನು.

ನೀನು ಎಸಗಿದ ಈ ಸಾಧನೆಯಿಂದ ಪರಮಸಂತುಷ್ಟಳಾದ ನಾನು ನಿನಗೆ ವರಕೊಡಲಿಕ್ಕೆ ಬಂದಿದ್ದೇನೆ.

ನೀನು ನನಗೆ ನನ್ನ ಉಪಾಸ್ಯದೇವನಾದ ರಘುರಾಮನನ್ನು

ತಂದು ಕೊಡಬೇಕು.

ಸಾಧ್ಯವಿಲ್ಲ. ಇದೊಂದನ್ನುಳಿದು ಬೇರೆ ಏನನ್ನಾದರೂ ಬೇಡು. ಕೊಡಲಿ ಅದು ನಿನಗೆ ಪ್ರಾಪ್ತವಾಗುವಂತೆ........

ಅಮ್ಮಾ, ನನಗೆ ಬೇರೇನೂ ಬೇಡ. ನಿನ್ನಿಂದ ನನಗೆ ಉಪಯೋಗವಿಲ್ಲ. ಹೊರಡು.

ಸಾಧಕನೆ, ವಿಚಾರಿಸಿ ನೋಡು ಸಾವಿರಾರು ಯೋಗಿಗಳು ನೂರಾರು ವರುಷ ಅರಣ್ಯವಾಸಿಗಳಾಗಿ ಕಠಿಣ ತಪಸ್ಸಾಧನೆಯನ್ನು ಮಾಡಿದರೂ, ನಾನವರಿಗೆ ಸಂಪೂರ್ಣ ಒಲಿದವಳಲ್ಲ ಕೆಲವರು ಒಂದು ಸಿದ್ಧಿಯನ್ನು ಹೊಂದುವರು ಬೇರೆ ಕೆಲವರು ಎರಡು ಸಿದ್ಧಿಗಳನ್ನು ಸಂಪಾದಿಸುವರು; ಆದರೆ ಅಷ್ಟಸಿದ್ಧಿಗಳನ್ನು ಪಡೆದವರು ವಿರಲ. ಮಹಾತ್ಮಾ ಶಂಕರಾಚಾರ್ಯನು ಮಾತ್ರ ಅಷ್ಟಸಿದ್ಧಿಯನ್ನು ಹೊಂದಿದ್ದನು. ನಾನೀಗ ನಿನಗೆ ಅಷ್ಟಸಿದ್ಧಿಗಳನ್ನು ದಯಪಾಲಿಸಲಿಕ್ಕೆ ಆಗಮಿಸಿದ್ದೇನೆ.

ಅಮ್ಮಾ, ಯಾರು ಅಷ್ಟಸಿದ್ಧಿಗಳನ್ನಾಶಿಸುವರೋ ನೀನು ಅವರ ಬಳಿಗೆ ಹೋಗು. ನೀನು ನನಗೆ ಬೇಡ. ಯಾಕೆಂದರೆ ನನಗೆ ಅಷ್ಟ-ಸಿದ್ಧಿ ಬೇಕಾಗಿಲ್ಲ. ತುಳಸೀದಾಸನು ಹೇಳಿದನು.

ವತ್ಸ, ನೀನು ಸಾಧನೆಯಲ್ಲಿ ಆ ಶಂಕರಾಚಾರ್ಯನಿಗಿಂತಲೂ ಮಿಗಿಲಾದವನು.

ಛೀ, ಹೀಗೆ ಮಾತಾಡಬೇಡ. ಅಮ್ಮಾ, ನನ್ನಲ್ಲಿ ಅಭಿಮಾನವನ್ನು ಹುಟ್ಟಿಸಲಿಕ್ಕೆ ಯತ್ನಿಸಬೇಡ. ನಾನು ತೀರ ಕ್ಷುಲ್ಲಕ ಪ್ರಾಣಿ. ಕೇವಲ ರಾಮನಾಮವನ್ನು ಜಪಿಸುತ್ತಿರುವೆನು ಮಾತ್ರ! ಉಳಿದುದೇನೂ ನನಗೆ ಗೊತ್ತಿಲ್ಲ. ಸಾಧನೆಯೆಂದರೇನು? ಸಿದ್ಧಿಯೆಂದರೇನು? ಎಂಬುದನ್ನು ನಾನೆಷ್ಟುಮಾತ್ರಕ್ಕೂ ಅರಿತವನಲ್ಲ. ತುಳಸೀದಾಸನು ನುಡಿದನು.

ನಿನಗೆ ಏನೂ ಬೇಡವೆ?

ನಿನ್ನಿಂದ ನನಗೆ ಪ್ರಯೋಜನವಿಲ್ಲ. ಹೊರಡು.

ಆಗ ಆ ವೃದ್ಧನಾರೀಮೂರ್ತಿಯೂ ಅದೃಶ್ಯವಾಯಿತು. ಆ ಸ್ಥಳದಲ್ಲಿ ಗುರುವು ಕಾಣಿಸಿಕೊಂಡು:—ವತ್ಸ, ನಿನ್ನ ಸಾಧನೆಯು ಪೂರ್ಣವಾಗಿದೆ. ನೀನು ಬೇಗನೆ ಶ್ರೀರಾಮನ ದರ್ಶನವನ್ನು ಹೊಂದುವೆ, ಎಂದು ಹೇಳಿದನು.

ಮಹಾರಾಜ, ನಾನಂತಹ ಭಾಗ್ಯಶಾಲಿಯೆ? ನನಗೆ ಕ್ಷಿಪ್ರದಲ್ಲಿಯೆ ರಘುರಾಮನ ಸಾಕ್ಷಾತ್ಕಾರವು ಘಟಿಸುವದೆ? ತುಳಸೀದಾಸನು ಸಂದೇಹದಿಂದ ಕೇಳಿದನು.

ಈ ವಿಷಯದಲ್ಲಿ ನಿನಗಿನ್ನೂ ಸಂಶಯವಿದೆಯೆ? ಏಕೆ ಸಂದೇಹಗ್ರಸ್ತನಾಗುವೆ? ಆ ಪರಮಪುರುಷನು ಪರಮ ದಯಾಕರನು. ಭಕ್ತನು ಹೃದಯದ ಆವೇಗದಿಂದ, ಏಕಮನಸ್ಸಿನಿಂದ ಒಂದೇ ಒಂದು ಸಲ ಅನನ್ಯಭಾವನೆಯಿಂದ ಕೂಗಿದರೆ ಸಾಕು; ಆ ದಯಾಮಯನು ಓಡಿ ಬಂದು ಭಕ್ತನ ಮನೋಭೀಷ್ಟವನ್ನು ಪೂರ್ಣಮಾಡುವನು. ಭಕ್ತಾಭಿಮಾನಿಯೂ ಆಶ್ರಿತವತ್ಸಲನೂ ಕರುಣಾಸಾಗರನೂ ಆಗಿದ್ದ ಆ ಶ್ರೀಹರಿಯನ್ನು ಒಲಿಸುವದು ಸಾಧಕನಿಗೆ ಬಹು ಸುಲಭವಾದದ್ದು. ಇನ್ನು ಗುಹೆಯ ಹೊರಗೆ ನಡೆ. ಬೆಳಗಾಗ ಬಂದಿದೆ. ಸೂರ್ಯೋದಯಕ್ಕೆ ಇನ್ನು ಹೆಚ್ಚು ಅವಕಾಶವಿಲ್ಲ. ಗುರುದೇವನು ಅದೃಶ್ಯನಾದನು.

ತುಳಸೀದಾಸನು ಗುರುವಿನ ಅಪ್ಪಣೆಯಂತೆ ಗುಹೆಯಿಂದ ಹೊರಬಿದ್ದನು. ಪೂರ್ವಾಕಾಶವು ಜ್ಯೋತಿರ್ಮಯವಾಗಿತ್ತು. ಪೃಥ್ವಿಯು ಆನಂದಮಯವಾಗಿತ್ತು. ತುಳಸೀದಾಸನು ಸುತ್ತಲಿನ ವನಶೋಭೆಯನ್ನು ನೋಡಿ, ಪರಮಹರ್ಷಿತನಾದನು. ಯಾವನೋ ಅದೃಶ್ಯಪುರುಷನು ಯತ್ನಪೂರ್ವಕವಾಗಿ ಈ ವನ ಶೋಭೆಯನ್ನು ನಿರ್ಮಿಸಿಟ್ಟಿರುವನೆಂದು ತುಳಸೀದಾಸನಿಗೆ ಬೋಧೆಯಾಯಿತು. ಒಂದೆಡೆಯಲ್ಲಿ ಸಣ್ಣ ಸಣ್ಣ ಗಿಡಗಳಲ್ಲಿ ಅಸಂಖ್ಯ ಬಿಳಿಯ ಬಣ್ಣದ ಹೂಗಳು. ಹೂವುಗಳು ಸಣ್ಣವಿದ್ದರೂ

ಸುಗಂಧ ಪೂರ್ಣವಾದವುಗಳು. ಮತ್ತೊಂದೆಡೆಯಲ್ಲಿ ಕೆಂಪು ಬಣ್ಣದ ಹೂಗಳು ಸುವಾಸನೆಯಲ್ಲೂ ಅಂದದಲ್ಲೂ ಒಂದನ್ನೊಂದು ಪ್ರತಿಸ್ಪರ್ಧಿಸುವಂತೆ ಕಾಣುತ್ತಿದ್ದವು. ಇನ್ನೊಂದು ಕಡೆಯಲ್ಲಿ ಹಲವು ವರ್ಣಗಳ, ಅನೇಕ ಆಕಾರಗಳ, ಬೇರೆ ಬೇರೆ ವಾಸನೆಗಳುಳ್ಳ ಪುಷ್ಪ ಸಮೂಹ. ಎಲ್ಲಿ ನೋಡಿದರೂ ಗಿಡಗಳ ಮೇಲೆ ಹೂವಿನ ಹಾಸುಗೆ ರಚಿಸಲ್ಪಟ್ಟಿರುವಂತೆ ತೋರುತ್ತಿತ್ತು. ಪ್ರಭಾತ ಕಾಲದ ಸ್ವಚ್ಛ ಹವೆ, ತಂಗಾಳಿ, ಸುವಾಸನೆಗಳು ತುಳಸೀದಾಸನಿಗೆ ಪರಮಾನಂದವನ್ನುಂಟು ಮಾಡಿದುದು ಸಹಜವದೆ. ತುಳಸೀದಾಸನು ಅವರ್ಣನೀಯವಾದ ಆ ವನಶೋಭೆಯನ್ನು ನೋಡಿ, ಈಶ್ವರೀಯ ಪ್ರೇಮದಲ್ಲಿ ವಿಹ್ವಲನಾಗಿ ಹೋದನು. ಆ ಮಮತಾಮಯನ ಮನೋಹರ ಮೂರ್ತಿಯನ್ನು ಮನದಂದು ಕೈ ಮುಗಿದು ಬೇಡಿಕೊಂಡನು:-"ದಯಾನಿಧಿಯೆ, ನಿನ್ನ ಸೃಷ್ಟಿಯು ಅಗಾಧವಾದುದು. ಎಂತಹ ರೂಪ? ಎಷ್ಟು ವಿಧಗಳಾದ ಆಕಾರಗಳು? ಎಷ್ಟು ತರದ ಗಂಧ? ರೂಪ-ರಸ-ಗಂಧಗಳಿಂದ ದಶ ದಿಕ್ಕುಗಳನ್ನು ಉಜ್ವಲಗೊಳಿಸಿರುವೆ. ಎಲ್ಲೆಲ್ಲಿಯೂ ನಿನ್ನ ವಾಸ್ತವ್ಯವಿದೆ. ನೀನಿಲ್ಲದೆ ಈ ಹೂಗಳಿಗಾಗಲಿ, ಈ ಲತಾಪತ್ರಗಳಿಗಾಗಲಿ ಈ ಶೋಭೆಯುಂಟಾದೀತೆ? ಎಲ್ಲವೂ ನಿನ್ನಾಟ! ಅನಂತವ್ಯಾಪಿಯೆ, ನೀನೆಲ್ಲೆಲ್ಲಿಯೂ ಇರುತ್ತಿದ್ದರೂ, ನಾನು ನಿನ್ನನ್ನು ಕಾಣದಿರುವೆನು! ನಿನ್ನ ಸಾಕ್ಷಾದ್ದರ್ಶನಕ್ಕಾಗಿ ಅನುದಿನವೂ ಹಾತೊರೆಯುತ್ತಿರುವೆನು! ನಿನ್ನ ಪರಮ ಮಂಗಲ ರೂಪವನ್ನು ಕಾಣದೆ ಹೃದಯವು ತಲ್ಲಣಗೊಳ್ಳುತ್ತಿದೆ. ಅಲ್ಲಿ ಆರನ್ನು ಪ್ರತಿಷ್ಠೆಗೊಳಿಸಲಿ? ನನ್ನ ಆರಾಧ್ಯ ದೇವನೆ, ನೀನೆಲ್ಲಿ? ನನಗೆ ದರ್ಶನ ಕೊಡು. ಎಲ್ಲೆಲ್ಲಿಯೂ ಅದೃಶ್ಯನಾಗಿದ್ದು ಎಲ್ಲವನ್ನು ನೋಡುತ್ತಿದ್ದ ನೀನು, ಮೂರ್ತಿಮಂತನಾಗಿ ನನ್ನೆದುರಿಗೆ ಬಂದು ನಿಲ್ಲು. ನಿನ್ನ ಬರುವಿಕೆಯನ್ನೆ ನಿರೀಕ್ಷಿಸಿಕೊಂಡಿರುವ ನನ್ನನ್ನು ತೃಪ್ತಿಗೊಳಿಸು.

ತುಳಸೀದಾಸನ ನೇತ್ರಗಳು ಪ್ರೇಮಾಶ್ರುಗಳಿಂದ ಪೂರ್ಣವಾದುವು.

ಅವನು ಅವುಗಳನ್ನೊರಸಿಕೊಂಡು ಸುತ್ತಲೂ ನೋಡಿದನು. ಪರ್ವತದ ಕೆಳ ಭಾಗದಲ್ಲಿ ಇಬ್ಬರು ಅಶ್ವಾರೋಹಿಗಳು ಮೆಲ್ಲನೆ ಸಾಗಿರುವುದನ್ನು ಕಂಡನು. ಅತಿ ಸುಂದರ ರೂಪದ ಆ ತರುಣರು ಸೈನಿಕ ವೇಷವನ್ನು ಧರಿಸಿದ್ದರು. ಕೈಯಲ್ಲಿ ಬಿಲ್ಲುಬಾಣಗಳಿದ್ದುವು. ತುಳಸೀದಾಸನು ಭಾವಾವೇಶದಿಂದ ವಿಹ್ವಲನಾಗಿದ್ದ ಮೂಲಕ ಸವಾರರನ್ನು ನೋಡಿದನಾದರೂ ಅವರ ಕಡೆಗೆ ಹೆಚ್ಚು ಲಕ್ಷ್ಯವಿರಿಸಲಿಲ್ಲ. ಅಲ್ಪಾವಕಾಶದಲ್ಲಿ ಆ ಅಶ್ವಾರೋಹಿಗಳು ಅದೃಶ್ಯರಾಗಿ ಹೋದರು. ತುಳಸೀದಾಸನು ರಾಮಧ್ಯಾನ ಮಾಡುತ್ತ ಅಲ್ಲಿಯೇ ಕುಳಿತುಬಿಟ್ಟನು.

ವೇಳೆಯು ಹೆಚ್ಚುತ್ತ ನಡೆದು ಮಧ್ಯಾಹ್ನವಾಯಿತು. ಆದರೂ ತುಳಸೀದಾಸನು ಆ ಸ್ಥಳಬಿಟ್ಟು ಕದಲಲಿಲ್ಲ. ಗುರುವು ಇಂದು ದೇವದರ್ಶನವಾಗುವುದೆಂದು ಹೇಳಿದ್ದನು. ತುಳಸೀದಾಸನು ಶ್ರೀರಾಮನನ್ನು ನೋಡಿಯೆ, ಆ ಸ್ಥಳವನ್ನು ಬಿಟ್ಟು ಹೊರಡಬೇಕೆಂದು ನಿರ್ಧರಿಸಿಕೊಂಡಿದ್ದನು. ಮಧ್ಯಾಹ್ನವು ಸಾಯಂಕಾಲದಲ್ಲಿ ರೂಪಾಂತರವಾಗುತ್ತ ನಡೆಯಿತು. ಆದರೂ ತುಳಸೀದಾಸನು ಏಳಲಿಲ್ಲ. ಕ್ರಮವಾಗಿ ಸಾಯಂಕಾಲವಾಗಿ ಕತ್ತಲೆಯು ಪಸರಿಸಹತ್ತಿತು. ಆದರೂ ತುಳಸೀದಾಸನು ಇಚ್ಛಿಸಿದಂತೆ ಶ್ರೀರಾಮನ ದರ್ಶನವನ್ನು ಹೊಂದಲಿಲ್ಲ. ಅವನು ನಿರಾಶನಾಗಿ 'ಗುರುದೇವ, ಎಲ್ಲಿ? ಶ್ರೀರಾಮನೆಲ್ಲಿ? ಈ ವರೆಗೆ ಮಾರ್ಗಪ್ರತೀಕ್ಷೆ ಮಾಡಿದರೂ ಬರಲಿಲ್ಲವಲ್ಲ!' ಎಂದು ಮೆಲ್ಲನೆ ನುಡಿದನು.

ಭಕ್ತಶ್ರೇಷ್ಠನೆ, ಮುಂಜಾವಿನಲ್ಲಿಯೆ ನೀನು ನಿನ್ನ ಇಷ್ಟ ದೇವನ ದರ್ಶನವನ್ನು ಹೊಂದಿರುವೆ! ಎಂಬ ವಾಕ್ಯವನ್ನು ಕೇಳಿ, ತುಳಸೀದಾಸನು ಆಶ್ಚರ್ಯದಿಂದ ನೋಡಿದನು. ಎದುರಿನಲ್ಲಿ ಗುರುದೇವನು ನಿಂತಿದ್ದನು.

ಗುರುಮಹಾರಾಜ, ಎಲ್ಲಿ? ನಾನು ಕಾಣಲಿಲ್ಲವಲ್ಲ! ತುಳಸೀದಾಸನೆಂದನು.

ರಾಮ-ಲಕ್ಷ್ಮಣರು ಅಶ್ವಾರೋಹಿಗಳಾಗಿ ನಿನ್ನೆದುರಿನಲ್ಲಿ ಹೋದು

ದನ್ನು ನೀನು ಕಂಡಿರುವೆ.

ಅಹಾ, ಅವರು ರಾಮ-ಲಕ್ಷ್ಮಣರೆ? ನಾನೆಂತಹ ಅಜ್ಞಾನಿಯು! ನೋಡಿಯೂ ಅವರನ್ನು ಗುರುತಿಸದಾದೆನು. ನಿರ್ಭಾಗ್ಯ ನಡಿಯೊಳಿದಹ ನಿಧಿಯು ಕಾಣದಂತೆ ಅಲ್ಲದೆ ಮತ್ತೇನು?

ಪ್ರಿಯ ಶಿಷ್ಯನೆ, ವ್ಯಥೆಗೊಳ್ಳದಿರು. ಶಾಂತನಾಗು. ಆ ರಘು ರಾಮನು ನಿನ್ನನ್ನು ಬಿಟ್ಟು ಹೋಗಿಲ್ಲ. ನಿನ್ನ ಹತ್ತಿರದಲ್ಲಿಯೇ ಇದ್ದಾನೆ. ಮತ್ತೆ ತಾನೇ ತಾನಾಗಿ ಬಂದು ನಿನ್ನನ್ನು ಕಾಣುವನು. ಯಾಕೆಂದರೆ, ಅವನಿಗೆ ಭಕ್ತರನ್ನು ಮಾತಾಡಿಸುವುದರಲ್ಲೂ, ಭಕ್ತರೊಡನೆ ಹುಡುಗಾಟ ಮಾಡುವುದರಲ್ಲೂ ಬಲು ಆಕ್ಕರತೆ!

ಈ ಸುಯೋಗವು ನನಗೆ ದೊರೆದೀತೆ? ನಾನು ಆ ರಘು-ರಾಮನನ್ನು ಮತ್ತೆ ಕಾಣುವೆನೆ? ತುಳಸೀದಾಸನು ಕೇಳಿದನು.

ನಿಶ್ಚಿತವಾಗಿಯೂ ನೋಡುವೆ; ಆದರೆ ಲೀಲಾವಿನೋದನಾದ ಅವನು ವೇಷಾಂತರದಿಂದ ನಿನ್ನ ಬಳಿಗೆ ಬರುವನು. ನೀನವನನ್ನು ಗುರುತಿಸುವುದು ಕಠಿಣ.

ಗುರುವರ್ಯರೆ, ಹೀಗೆ ಶ್ರೀರಾಮನನ್ನು ನೋಡುವುದರಿಂದ ನಾನು ಸಂತುಷ್ಟನಾಗಲಾರೆನು. ನಿತ್ಯವೂ ನನಗೆ ಅವನ ದರ್ಶನವಾಗಬೇಕು. ನಾನು ಅವನ ಸಹವಾಸಿಯಾಗಿರಬೇಕು. ಪರಮ ಗುರುವೆ, ನನ್ನ ಈ ಆಕಾಂಕ್ಷೆಯು ಸಫಲವಾಗುವಂತೆ ಕರುಣಿಸು.

ಭಕ್ತಾಗ್ರೇಸರನೆ, ಅವಸರ ಮಾಡಬೇಡ. ಅಧೈರ್ಯಗೊಳ್ಳಬೇಡ. ಕಾರ್ಯಸಾಧನೆಗೆ ಕಾಲಾನುಕೂಲವು ಬೇಕು. ಅನುಕೂಲ ಸಮಯದಲ್ಲಿ ಎಲ್ಲವೂ ಸಾಧಿಸುವುದು. ನೀನಿದರ ಮಾರ್ಗಪ್ರತೀಕ್ಷೆ ಮಾಡುತ್ತ ಸಾಧನೆಯಲ್ಲಿ ತೊಡಗಿರಬೇಕು. ನೀನು ಇನ್ನು ವೃಂದಾವನಕ್ಕೆ ಹೋಗಬೇಕು. ಇನ್ನು ಇಲ್ಲಿರುವ ಅವಶ್ಯಕತೆಯಿಲ್ಲ. ನಾನು ನಿನಗೆ ದಿವ್ಯದೃಷ್ಟಿಯನ್ನು ದಯಪಾಲಿಸಿದ್ದೇನೆ; ಹಾಗು ನೀನು ಸ್ಮರಿಸಿದಾಗ ನಿನ್ನ ಹತ್ತಿರ ಬಂದು

ನಿಲ್ಲುತ್ತೇನೆ. ನೀನು ವೃಂದಾವನದಲ್ಲಿದ್ದು ವೈಷ್ಣವರ ಸಹವಾಸದಲ್ಲಿ ಕಾಲ ಕಳೆ. ಏನಾದರೂ ಸಂದೇಹವುಂಟಾದಾಗ, ಇಲ್ಲವೆ ಸಂಕಟವು ಸಂಭವಿಸಿದಾಗ ನನ್ನನ್ನು ಸ್ಮರಿಸು.

ನಿಮ್ಮ ಅಪ್ಪಣೆಯು ನನಗೆ ಶಿರೋಧಾರ್ಯವು, ಎಂದು ಹೇಳಿ ತುಳಸೀದಾಸನು ನಮಸ್ಕಾರ ಮಾಡಿದನು. ಮೋರೆಯನ್ನೆತ್ತಿ ನೋಡುವಷ್ಟರಲ್ಲಿ ಗುರುವು ಅದೃಶ್ಯನಾಗಿ ಹೋಗಿದ್ದನು. ತುಳಸೀದಾಸನು ಆ ಸ್ಥಳವನ್ನು ಬಿಟ್ಟು ಹೊರಟು ಗುಹೆಯೊಳಗೆ ಪ್ರವೇಶಿಸಿದನು.

---

## ೭ ಮಾರ್ಗದಲ್ಲಿ.

ಚಿತ್ರಕೂಟದಿಂದ ವೃಂದಾವನಕ್ಕೆ ಹೋಗುವ ದಾರಿಯಲ್ಲಿ ಬಿಲ್ವಗ್ರಾಮವಿತ್ತು. ಈ ಊರಲ್ಲಿ ಬಹು ಜನ ಬ್ರಾಹ್ಮಣರ ವಸತಿಯಿತ್ತು. ಇವರಲ್ಲಿ ಸೀತಾಪತಿಯೆಂಬವನೊಬ್ಬನು. ಇವನು ಗ್ರಾಮಪುರೋಹಿತನು. ಇವನಿಗೆ ಸ್ವಂತದ ಹೊಲ-ಮನೆಗಳಿದ್ದವಲ್ಲದೆ, ಹಲವು ಯಜಮಾನರ ಮನೆಗಳೂ ಇದ್ದವು. ಇದರಿಂದ ಸೀತಾಪತಿಯು ಉದರನಿರ್ವಾಹಕ್ಕೆ ಯಾವ ಕೊರತೆಯೂ ಉಂಟಾಗುವಂತಿದ್ದಿಲ್ಲ. ಇವನ ಮನೆಯಲ್ಲಿ ಇವನು, ಇವನ ಹೆಂಡತಿ, ನಾಲ್ವರು ಮಕ್ಕಳು, ಸೊಸೆಯರು, ಮೊಮ್ಮಕ್ಕಳು ಹೀಗೆ ಬಹುಜನರು ವಾಸವಾಗಿದ್ದರು. ಹಿರಿಯಮಗನಾದ ರಾಮದಾಸನು ಮನೆಯ ಭಾರವನ್ನು ಹೊತ್ತು, ಸಂಸಾರವನ್ನು ಸಾಗಿಸುತ್ತಿದ್ದನು. ಇದರಿಂದ ಸೀತಾಪತಿಯು ಬಾಳುವೆಯ ವಿಷಯದಲ್ಲಿ ನಿಶ್ಚಿಂತನಾಗಿದ್ದನು.

ಸೀತಾಪತಿಯ ಅಣ್ಣನ ಮಗನೊಬ್ಬನಿದ್ದನು. ಇವನ ಹೆಸರು ಜಾನಕೀವಲ್ಲಭನು. ಸೀತಾಪತಿಯ ಮನೆಯ ಹೊಂದಿಗೇನೇ ಇವನ

ಮನೆ. ಇವನ ಮನೆಯಲ್ಲಿ ಗಂಡ-ಹೆಂಡಿರ ಹೊರತು ಬೇರೆ ಪ್ರಾಣಿಗಳಿರಲಿಲ್ಲ. ಹೆಂಡತಿಯ ಹೆಸರು ನಿರುಜೆ. ಈ ದಂಪತಿಗಳಿಗೆ ಸೀತಾಪತಿಯ ಹೆಚ್ಚಳವು ಸೇರುತ್ತಿದ್ದಿಲ್ಲ. ಮತ್ಸರಗ್ರಸ್ತರಾದ ಇವರು ಸೀತಾಪತಿಯ ಅಹಿತವನ್ನೇ ಕೋರುತ್ತಿದ್ದರು. ಜಾನಕೀವಲ್ಲಭನು ಬಹು ದುಷ್ಟನು. ಇವನು ತಕ್ಕನ ಸಂಗಡ ಕಾಲುಕೆದರಿ ಜಗಳ ತೆಗೆಯುತ್ತಿದ್ದನು; ಆದರೆ ಶಾಂತಸ್ವಭಾವದ ಸೀತಾಪತಿಯೇ ಆಗಲಿ, ರಾಮದಾಸನೆ ಆಗಲಿ ಕಲಹಕ್ಕೆ ಉದ್ಯುಕ್ತರಾಗುತ್ತಿದ್ದಿಲ್ಲ ಇದರಿಂದ ಜಾನಕೀವಲ್ಲಭನಿಗೆ ಬಹು ಕೋಪ ಉಂಟಾಗುತ್ತಿತ್ತು. ತಕ್ಕನೂ, ತಕ್ಕನ ಮಗನೂ ತನಗೆ ಹೆದರುತ್ತಿರುವರೆಂದು ತಿಳಿದುಕೊಳ್ಳುತ್ತಿದ್ದನು ಹಲವು ರೀತಿಗಳಿಂದ ತಕ್ಕನನ್ನು ಕಾಡಲಿಕ್ಕೆ ತೊಡಗುತ್ತಿದ್ದನು. ಇವನ ಪೀಡೆಗಳಿಂದ ಸೀತಾಪತಿಯು ಬೇಸತ್ತಿದ್ದನಾದರೂ, ಪ್ರತಿಹಿಂಸೆಯನ್ನು ಮಾಡಬಯಸುತ್ತಿದ್ದಿಲ್ಲ. ತನ್ನ ಈ ಗುಣಮಣಿಯಾದ ಅಣ್ಣನ ಮಗನ ಕಾಟಗಳನ್ನೆಲ್ಲ ನೀರವವಾಗಿ ತಾಳಿಕೊಂಡಿರುತ್ತಿದ್ದನು.

ಗುರುವಿನ ಅಪ್ಪಣೆಯಂತೆ ವೃಂದಾವನಕ್ಕೆ ಹೊರಟ ತುಳಸೀದಾಸನು ಒಂದು ದಿನ ಮಧ್ಯಾಹ್ನದಲ್ಲಿ ಬಿಲ್ವಗ್ರಾಮಕ್ಕೆ ಬಂದನು. ಭಿಕ್ಷೆಗೆ ಹೊರಟು ಜಾನಕೀ ವಲ್ಲಭನ ಮನೆಯನ್ನು ಹೊಕ್ಕನು, ಜಯ ಸೀತಾರಾಮ! ಎಂದು ಕೂಗಿ ಮನೆಯವರಿಗೆ ತನ್ನ ಬರುವಿಕೆಯನ್ನು ಸೂಚಿಸಿದನು. ಜಾನಕೀವಲ್ಲಭನು ಪಡಸಾಲೆಯಲ್ಲಿ ಪವಡಿಸಿದ್ದನು. ಸಾಧುವಿನ ಕೂಗಿನಿಂದ ಕೋಪಗೊಂಡ ಇವನು:-ಎಲೋ, ನಾವು ಭಿಕ್ಷೆ ಹಾಕುವದಿಲ್ಲ. ಮುಂದಿನ ಮನೆಗೆ ಹೋಗು, ಎಂದು ಹೇಳಿದನು.

ತುಳಸೀದಾಸನು ಹೊರಡಲಿಲ್ಲ. ಹಾಗೆಯೇ ನಿಂತಿದ್ದು 'ಒಂದು ತುಣುಕು ರೊಟ್ಟಿ ಸಹ ಇಲ್ಲವೇನಪ್ಪಾ?' ಎಂದು ಕೇಳಿದನು.

ಎಲೊ ಬೈರಾಗಿ, ನಮ್ಮ ಮನೆಯಲ್ಲಿ ಏನಿದೆ? ಏನಿಲ್ಲ ಎಂಬುದರ ಗೊಡವೆ ನಿನಗೇಕೆ? ಮುಂದಿನ ಮನೆಗೆ ಹೋಗೆಂದು ಒಮ್ಮೆ ಹೇಳ

ಲ್ಲವೆ? ಬಾಯಿಗೆ ಬಂದಂತೆ ಮಾತಾಡುತ್ತ ನಿಂತುಕೊಳ್ಳಬೇಡ. ಬೇಗ ಹೊರಡು! ಜಾನಕೀವಲ್ಲಭನು ಗದ್ದರಿಸಿದನು.

ಹಾಗೇ ಆಗಲಯ್ಯಾ, ಹೊಗುವೆನು. ಕೋಪಗೊಳ್ಳದಿರು. ಗೃಹಸ್ಥಾಶ್ರಮಿಗಳು ಭಿಕ್ಷುಕರ ಮೇಲೆ ಸಿಟ್ಟುಮಾಡುವುದು ಅನುಚಿತವು! ತುಳಸೀದಾಸನು ಹೇಳಿದನು.

ನಿನ್ನ ಉಪದೇಶವು ನನಗೆ ಬೇಕಿಲ್ಲ, ಸಡೆ. ಜಾನಕೀವಲ್ಲಭನು ಸಿಟ್ಟಿನಿಂದ ನುಡಿದನು.

ತುಳಸೀದಾಸನು ಹೊರಡುವುದರಲ್ಲಿದ್ದನು. ಇಷ್ಟರಲ್ಲಿ ನಿರುಜೆಯು ಹೊರಗೆ ಬಂದು ಪತಿಯನ್ನುದ್ದೇಶಿಸಿ:—'ಅತಿಥಿಯನ್ನು ಹಾಗೇ ಕಳುಹಬೇಡಿರಿ. ನಾನು ನೀಡುವೆನು.' ಎಂದು ಅಂದಳು.

ವಾಹವ್ವಾ, ಒಳ್ಳೇ ಹೆಂಗಸು ನೀನು! ಈ ಗೋಸಾವಿಯ ಮೇಲೆ ನಿನಗಿಷ್ಟು ಮಮತೆಯೇಕೆ? ಈ ಬೈರಾಗಿಯು ಉಪವಾಸ ಸತ್ತರೆ ನಮಗಾಗುವದೇನು? ಈ ಹಿರೇತನವು ನಿನಗೇಕೆ? ನಾನು ಭಿಕ್ಷೆ ಹಾಕುವದಿಲ್ಲೆಂದು ಹೇಳಿ ಕಳುಹುತ್ತಿರುವಾಗ, ನೀನು ನೀಡ ಬಂದೆಯಾ? ಯಾರದನ್ನು ದಾನಮಾಡುವೆ? ಈ ಮನೆಯಲ್ಲಿರುವುದು ಯಾರದು? ನಿಮ್ಮಪ್ಪನ ಮನೆಯಿಂದ ಭಿಕ್ಷುಕರಿಗೆ ದಾನಮಾಡಲಿಕ್ಕೆಂದು ಏನನ್ನಾದರೂ ಕಟ್ಟಿಕೊಂಡು ಬಂದಿರುವೆಯಾ? ಜಾನಕಿವಲ್ಲಭನು ಅಂದನು.

ಹೀಗೆ ಮಾತಾಡಿದರೇನು? ಬಾಯಿಗೆ ಬಂದಂತೆ ನುಡಿಯಬೇಡಿರಿ! ಅತಿಥಿಗಳ ಆಗಮನವು ಗೃಹಸ್ಥಾಶ್ರಮಿಗಳಿಗೆ ಸುದೈವದ ಸಂಗತಿಯು. ಅತಿಥಿಗಳ ಅವಮಾನ ಮಾಡಿ ಕಳಿಸುವುದು ಮಹಾ ಪಾಪಕಾರ್ಯವು! ನಿರುಜೆಯು ನುಡಿದಳು.

ಒಳ್ಳೇ ಉಪದೇಶಕಳು ನೀನು! ನಿನ್ನ ಉಪದೇಶವು ನನಗೆ ಬೇಕಾಗಿಲ್ಲ! ನಿನ್ನ ಆಟವನ್ನು ನಾನು ನಡೆಯಗೊಡುವವನಲ್ಲ! ಇದು ನನ್ನ ಮನೆ! ಎಲ್ಲವೂ ನನ್ನ ಇಚ್ಛೆಯಂತೆ ನಡೆಯಲಿಕ್ಕೆ ಬೇಕು! ಜಾನಕೀವಲ್ಲ

ಭನು ಹೇಳಿದನು.

ನಿರುಜೆಯು ಸಣ್ಣ ಮೋರೆಮಾಡಿ ನಿಂತುಬಿಟ್ಟಳು. ಅವಳಿಂದ ಮುಂದೆ ಮಾತಾಡಲಿಕ್ಕಾಗಲಿಲ್ಲ. ತುಳಸೀದಾಸನು ಇವಳ ಮನಃಸ್ಥಿತಿಯನ್ನು ತಿಳಿದು:-“ಅಮ್ಮಾ ದುಃಖಿಸಬೇಡ. ನೀನೊಂದು ಕಾಳನ್ನು ದಾನ ಮಾಡಿದರೂ ನಾಸದನ್ನು ಸಂತೋಷದಿಂದ ಸ್ವೀಕರಿಸುವೆನು,” ಎಂದು ಹೇಳಿದನು.

ಎಲೈ ಭಂಡನೆ, ನಾನದನ್ನು ಸಹ ಕೊಡಗೊಡುವವನಲ್ಲ! ತಿಳಿಯಿತೆ? ಜಾನಕೀವಲ್ಲಭನು ನುಡಿದನು.

ಅಮ್ಮಾ, ನಾನಿನ್ನು ಹೊರಡುವೆನು; ವ್ಯಥೆಗೊಳ್ಳದಿರು. ಪಾಲಿಗೆ ಬಂದದ್ದು ಪಂಚಾಮೃತ. ಹೊಂದಿರುವುದನ್ನು ಅನುಭವಿಸಲೇ ಬೇಕು. ಆದರೆ ನಾನೊಂದು ಮಂತ್ರವನ್ನು ಹೇಳಿಡುವೆನು. ನೀನು ಅವಕಾಶ ದೊರೆತಾಗ ರಾಮನಾಮದ ಜಪಮಾಡುತ್ತ ಹೋಗು. ಈ ಮಂತ್ರವು ನಿನಗೆ ಒದಗುವ ಅಶುಭಗಳನ್ನು ನಾಶಮಾಡುವುದು. ತುಳಸೀದಾಸನು ಹೇಳಿದನು.

ನನ್ನ ಮನೆಯಲ್ಲಿ ಅಶುಭವೆಲ್ಲಿ? ಎಂದಿಗೂ ಜರಗದು! ನಿನ್ನ ಉಪದೇಶದ ಅವಶ್ಯಕತೆಯಿಲ್ಲ. ರಾಮನಾಮ ಜಪದ ಕಾರಣವಿಲ್ಲ. ‘ತಾನು ಕೆಟ್ಟ ಕಪಿ, ವನವನ್ನೆಲ್ಲ ಕೆಡಿಸಿತು!’ ಎಂಬ ನಾಣ್ನುಡಿಯಂತೆ ಸಾಂಸಾರಿಕರನ್ನು ನಿಮ್ಮ ವರ್ಗದಲ್ಲಿ ಎಳಕೊಳ್ಳಲಿಕ್ಕೆ ಯತ್ನಿಸುತ್ತಿರುವಿರಿ. ಈ ಭಂಡತನವನ್ನರಿಯದವನು ನಾನಲ್ಲ! ಸುಮ್ಮನೆ ಹೋಗು! ಜಾನಕೀವಲ್ಲಭನು ಹೇಳಿದನು.

ಅಯ್ಯಾ, ನಿನ್ನ ಈ ಮನೆಯು ಸುಟ್ಟುಹೋಗುವದರಲ್ಲಿದೆ! ದೂರ ದೃಷ್ಟಿಯಿಲ್ಲದ ನಿನಗದು ಕಾಣಿಸದು! ನನಗದು ಸ್ಪಷ್ಟವಾಗಿ ಕಾಣುತ್ತಿದೆ! ತುಳಸೀದಾಸನು ಹೇಳಿದನು.

ನೀನು ಸಂನ್ಯಾಸಿಯಲ್ಲ! ಪ್ರಸಿದ್ಧ ಕಳ್ಳನು! ನನ್ನ ಮನೆಯನ್ನು

ಸುಡುವ ಸಂಕಲ್ಪಮಾಡಿಕೊಂಡು ತಪಾಸಣೆಗೆ ಬಂದಿರಬೇಕು.

ಅಪ್ಪಾ, ನಾನು ಸುಡುವದಿಲ್ಲ! ಮನೆಸುಡುವವನೂ ಅಲ್ಲ; ನೊಂದಿಸುವವನು. ನೀನೇ ನಿನ್ನ ಮನೆಯನ್ನು ಸುಟ್ಟುಕೊಳ್ಳುತ್ತಿರುವೆ! ತುಳಸೀದಾಸನು ಹೇಳಿದನು.

ಅದೇಕೆ? ಭವಿಷತ್ಕಾಲದಲ್ಲಿ ನಾನು ಮನೆ-ಮಾರುಗಳನ್ನು ತೊರೆದು ನಿನ್ನ ಶಿಷ್ಯನಾಗಬೇಕಾಗಿದೆಯೋ? ಜಾನಕೀವಲ್ಲಭನು ಕೇಳಿದನು.

ತುಳಸೀದಾಸನು ಮಂದಹಾಸ್ಯದಿಂದ ಇಂತು ನುಡಿದನು:—ರಘುರಾಮನ ಇಚ್ಛೆಯು ಹೇಗಿದೆಯೊ ಏನೊ! ಅದನ್ನು ನಾನಾಗಲಿ ನೀನಾಗಲಿ ಮುಂದಾಗಿ ತಿಳಿಯುವುದು ಅಶಕ್ಯ!

ಜಾನಕೀವಲ್ಲಭನು ನಗಹತ್ತಿದನು. ತುಳಸೀದಾಸನು ಜಯ ಸೀತಾರಾಮ! ಎಂದೆನ್ನುತ್ತ ಹೊರಟಿದ್ದನು. ಸೀತಾಪತಿಯು ಮನೆಯ ಹೊಕ್ಕನು. ಸೀತಾಪತಿಯು ಸಾಧುವಿಗೆ ಶಿರಬಾಗಿಸಿ ನಮಸ್ಕಾರಮಾಡಿದನು. ಒಳಗೆ ಹೋಗಿ ಹಣ್ಣು ತುಂಬಿದ ಬುಟ್ಟಿಯನ್ನು ತಂದು ಸಾಧುವಿನ ಮುಂದಿರಿಸಿ, 'ಬೇಕಾದಷ್ಟು ತಕ್ಕೊಳ್ಳಿರಿ,' ಎಂದು ವಿನಂತಿಮಾಡಿಕೊಂಡನು. ತುಳಸೀದಾಸನು ಒಂದು ಹಣ್ಣನ್ನು ತಕ್ಕೊಂಡು ತನಗೆ ಇಷ್ಟೇ ಸಾಕೆಂದು ಹೇಳಿ ಹೊರಡುವುದರಲ್ಲಿದ್ದನು. ಇಷ್ಟರಲ್ಲಿ ಗೃಹಿಣಿಯು ಹೊರಗೆ ಬಂದು, ತುಳಸೀದಾಸನಿಗೆ ನಮಸ್ಕಾರ ಮಾಡಿದಳು. ಆಶೀರ್ವಾದ ಹೊಂದಿ ಎದ್ದು ನಿಂತು, ಮಧ್ಯಾಹ್ನದ ಭೋಜನವು ಇಲ್ಲಿಯೆ ಆಗಬೇಕೆಂದು ಆಗ್ರಹ ಮಾಡಹತ್ತಿದಳು. ತುಳಸೀದಾಸನು ಎಷ್ಟು ಪರಿಯಾಗಿ ಹೇಳಿಕೊಂಡರೂ ಅವಳು ಕೇಳಲಿಲ್ಲ. ಕಡೆಗೆ ತುಳಸೀದಾಸನು ಅನಿವಾರ್ಯವಿಂದ ಆವಳ ಬಿನ್ನಹವನ್ನು ಮಾನ್ಯಮಾಡಬೇಕಾಯಿತು.

ಸೀತಾಪತಿಯೂ ಇವನ ಹೆಂಡತಿಯಾದ ಬಿಲ್ವಲೆಯೂ ತುಳಸೀದಾಸನನ್ನು ಬಹಳವಾಗಿ ಆದರಿಸಿದರು. ಬಿಲ್ವಲೆಯು ಉತ್ತಮವಾದ

ಅಡುಗೆಮಾಡಿ, ತುಳಸೀದಾಸನಿಗೆ ಭೋಜನ ಮಾಡಿಸಿದಳು. ತುಳಸೀದಾಸನು ಊಟವಾದ ಬಳಿಕ ವಿಶ್ರಾಂತಿಗಾಗಿ ಕುಳಿತಿದ್ದಾಗ ಬಿಲ್ವಲೆಯು ತುಳಸೀದಾಸನ ಹತ್ತಿರ ಬಂದು—:"ನಾನು ನಿಮ್ಮನ್ನು ಗುರುತಿಸಿದೆನು. ನೀವು ಮಾತ್ರ ನನ್ನನ್ನು ಗುರುತಿಸಿದಂತೆ ತೋರುವದಿಲ್ಲ" ಎಂದು ಅಂದಳು. ತುಳಸೀದಾಸನು ನಿರುಕಿಸಿ ನೋಡಿದನು. ಆದರೂ ಅವಳ ಮೊದಲಿನ ಪರಿಚಯವನ್ನು ಗೊತ್ತುಮಾಡಿಕೊಳ್ಳಲಾರದಾದನು.

ನೀವು ಬಾಬಾ ನಾನಕನ ವರದಿಂದ ಹುಟ್ಟಿದವರು. ಹುಲಸೀದೇವಿಯ ಮಕ್ಕಳು. ಬಿಲ್ವಲೆಯು ಹೇಳಿದಳು.

ಅಮ್ಮಾ, ನೀನು ಯಾರು? ಇದನ್ನು ಹೇಗೆ ತಿಳಿದೆ?

ನನ್ನ ತವರು ಮನೆಯು ರಾಜಾಪುರದಲ್ಲಿದೆ. ನನ್ನ ತಾಯಿಗೂ ಹುಲಸೀದೇವಿಗೂ ಸ್ನೇಹವು ಬಹಳ. ಅಕ್ಕ-ತಂಗಿಯರಂತಿದ್ದರು. ಚಿಕ್ಕಂದಿನಲ್ಲಿ ನಾನು ನಿಮ್ಮನ್ನು ಎತ್ತಿ ಆಡಿಸಿರುವೆನು. ಅಂತೆಯೇ ಒಮ್ಮೆ ನೋಡಿದ ಕೂಡಲೆ ಗುರುತಿಸಿದೆನು. ಬಿಲ್ವಲೆಯು ಅಂದಳು.

ಇರಬಹುದು.

ಹುಲಸೀದೇವಿಯು ಎಲ್ಲಿರುವಳು? ನೆಟ್ಟಗಿದ್ದಾಳೆಯೆ? ಬಿಲ್ವಲೆಯು ಕೇಳಿದಳು.

ನಾನರಿಯೆನು. ಈಗ ಕಾಶಿಯಲ್ಲಿ ಆಶ್ರಮಹೊಂದಿದ್ದೇನೆ. ಅಮ್ಮಾ, ಇನ್ನು ನಾನು ಹೊರಡುವೆನು. ತುಳಸೀದಾಸನು ಹೊರಡಲಿಕ್ಕೆ ಸಿದ್ಧನಾದನು.

ಇನ್ನು ನಿಮ್ಮ ದರ್ಶನವಾಗುವದೆಂದು?

ನೀನು ನಿನ್ನ ಪತಿಯೊಡನೆ ಕಾಶಿಗೆ ಹೋಗು. ಅಲ್ಲಿಯೇ ವಾಸಮಾಗಿರ್ರಿ. ನಾನು ನಿಮ್ಮ ಭವಿಷ್ಯವನ್ನು ತಿಳಿದು, ಈ ಮಾತು ಹೇಳುತ್ತಿರುವೆನು. ನೀವು ಅಲ್ಲಿಗೆ ಹೋಗುವುದರಿಂದ ನೆಮ್ಮದಿಯಾಗಿರುವಿರಿ. ಅಲ್ಲಿಯೇ ನಿಮಗೆ ನನ್ನ ದರ್ಶನವಾಗುವುದು ತುಳಸೀದಾಸನು ಹೇಳಿದನು.

ಇಲ್ಲಿರುವುದು ನಮಗೆ ಹಿತಕರವಲ್ಲವೆ? ಏಕೆ?

ಇಲ್ಲಿ ನಿಮಗೆ ಮನಶ್ಶಾಂತಿ ದೊರೆಯದು.

ಏಕೆ? ಏನಾಗುವುದು? ಬಿಲ್ವಲೆಯು ಕೇಳಿದಳು.

ಬೇಗನೆ, ಒಂದು ವಿಪತ್ತು ಒದಗತಕ್ಕದ್ದಿದೆ ತುಳಸೀದಾಸನು ಹೇಳಿದನು.

ಅದನ್ನು ತಪ್ಪಿಸಿಕೊಳ್ಳಲಿಕ್ಕೆ ಉಪಾಯವಿಲ್ಲವೆ? ಇದ್ದರೆ ಹೇಳಿ ಕೊಡಿರಿ

ಅಮ್ಮಾ, ರಘುನಾಥನೇ ಉಪಾಯನು. ನಾನು ತೀರ ಕ್ಷುದ್ರ ಮಾನವನು. ನನ್ನಿಂದಾಗತಕ್ಕದ್ದೇನು?

ಹೀಗೆಂದರೆ, ನಾನು ಕೇಳುವವಳಲ್ಲ. ನಿಮ್ಮಂಥ ಶ್ರೇಷ್ಠ ಯೋಗಿಗಳಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ನಮ್ಮ ಭವಿಷ್ಯತ್ತನ್ನು ಹೇಳಿದ ನಿಮಗೆ ಭವಿಷ್ಯತ್ಕಾಲದ ಸಂಕಟವನ್ನು ಹೋಗಲಾಡಿಸಿಕೊಳ್ಳುವ ಹಂಚಿಕೆಯನ್ನು ಹೇಳಲಿಕ್ಕಾಗುವದಿಲ್ಲವೆ?

ಅಮ್ಮಾ, ತೋರಿಕೆಯಿಂದಲೇ ವಸ್ತುವಿನ ಬೆಲೆಯನ್ನು ನಿರ್ಧರಿಸಲಾಗದು. ಒಮ್ಮೊಮ್ಮೆ ತೋರಿಕೆಯಲ್ಲಿ ಭವ್ಯವಾಗಿದ್ದರೂ, ಶಕ್ತಿಯಲ್ಲಿ ಹೀನವಾಗಿರುವ ಸಂಭವವುಂಟು. ಉದಾಹರಣಾರ್ಥವಾಗಿ, ತೆಂಗಿನ ಗಿಡವನ್ನು ನೋಡು; ಕಣ್ಣಿಗೇನೋ ಬಹು ದೊಡ್ಡದ; ಆದರೆ ಬಳಲಿ ಬಾಯಾರಿ ಹೋದ ಶಕ್ತಿಹೀನನಿಗೆ ಫಲವೀಯದು; ಸೂರ್ಯತಾಪದಿಂದ ಸಂರಕ್ಷಿಸದು. ಹೀಗೆಯೆ ನನ್ನ ಸ್ಥಿತಿಯಿದೆ.

ಹೀಗೆ ಹಾರಿಸಿಕೊಂಡು ಮಾತಾಡಿದರೆ, ನಾನು ಕೇಳುವವಳಲ್ಲ. ನಮಗೆ ಯಾವುದೊಂದು ದಾರಿಯನ್ನು ತೋರಿಸಿ ಹೋಗಬೇಕು. ಇಲ್ಲವಾದರೆ, ನಾನು ನಿಮ್ಮ ಚರಣಗಳನ್ನು ಬಿಟ್ಟವಳಲ್ಲ!

ಅಮ್ಮಾ, ಕಾಶಿಗೆ ಹೋಗಿರಿ; ಧರ್ಮಾಚರಣೆಯಿಂದಿದ್ದು ಶ್ರೀಹರಿಗೆ ಮೊರೆಹೊಗಿರಿ. ಮುಂದೆ ಒಳಿತಾಗುವದು.

ಬಿಲ್ವಲೆಯು ತುಳಸೀದಾಸನ ಚರಣಗಳಮೇಲೆ ಬಿದ್ದಳು. ತುಳಸೀದಾಸನು ಆಶೀರ್ವಾದ ಮಾಡಿ, ಭಜನೆಮಾಡುತ್ತ ಆ ಸ್ಥಳದಿಂದ ಹೊರಬಿದ್ದನು.

## ೮ ಪತಿವಿರಹಿಣಿಯಾದ ಸತಿ.

ರತ್ನಾವಳಿಯು ಅಂದು ಒಂದು ವಿಧದ ಉತ್ತೇಜನಕ್ಕೊಳಗಾಗಿ ಕಟುವಚನಗಳನ್ನಾಡಿ ಪತಿಯನ್ನು ಹೊರಗೆ ಹಾಕಿದಳು. ನಾಥನು ಕಣ್ಮರೆಯಾಗುತ್ತಲೆ ಅವಳ ಕಣ್ಣುಗಳು ತೆರೆದವು. ಅವಳು ತಾನು ಅನುಚಿತವನ್ನು ಆಚರಿಸಿದೆನೆಂದು ಪಶ್ಚಾತ್ತಾಪಕ್ಕೆ ಗುರಿಯಾದಳು. ಸೆರೆಯ ವ್ಯಸನಿಯಲ್ಲದವನು ಸ್ನೇಹಿತರ ಆಗ್ರಹದಿಂದ ಸೆರೆಗುಡಿದು ಬಾಯಿಗೆ ಒಂದಂತೆ ಬಡಬಡಿಸಿ, ನಿಶೆಯು ಇಳಿಯುತ್ತಲೆ ಹಳಹಳಿಗೆ ಗುರಿಯಾಗುವಂತೆ, ರತ್ನಾವಳಿಯು ಮರುಗಹತ್ತಿದಳು.

ರತ್ನಾವಳಿಯು ಮಾತಾಡಲಾರಂಭಿಸಿದಾಗ ತನ್ನ ಮಾತಿನ ಪರಿಣಾಮವೇನಾಗಬಹುದೆಂಬದನ್ನು ಯೋಚಿಸಿದವಳಲ್ಲ. ತನ್ನಲ್ಲಿ ತೀರ ಅನುರಕ್ತನಾಗಿದ್ದ ತನ್ನ ಪತಿಯು ತಾನಾಡಿದ ಒಂದೆರಡು ಕಠೋರ ಮಾತುಗಳಿಂದ ಸಂಸಾರವಿರಕ್ತನಾದಾನೆಂಬ ಭಯವು ಅವಳಿಗುಂಟಾಗುವ ಸಂಭವವಿರಲಿಲ್ಲ. ಅಂತೆಯೇ ಅವಳು ಪತಿಯ ಕಿವಿ ಹಿಂಡುವದಕ್ಕೆ ಉದ್ಯುಕ್ತಳಾಗಿದ್ದಳು. ಮಾತಿನ ಆವೇಶದಲ್ಲಿ ಮೇರೆದಪ್ಪಿ ಮಾತಾಡಿದ್ದಳು; ಆದರೆ ಪತಿಯು ತನ್ನ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಂಡು ಭರದಿಂದ ಹೊರಟು ನಡೆದುದನ್ನು ನೋಡಿ ಅವಳು ಗಾಬರಿಯಾದಳು. ಮುಂದಿನ ಪರಿಣಾಮವೇನಾಗಬಹುದೆಂದು ಚಿಂತಿಸಹತ್ತಿದಳು; ಆದರೆ ಮಿಂಚಿ ಹೋದ ಬಳಿಕ ಚಿಂತಿಸಿ ಫಲವೇನು?

ನಮ್ಮ ಆಚಿನ ಒಡವೆಯು ನಮ್ಮಿಂದ ದೂರವಿದ್ದಾಗ ನಾವು ಅದರ ವಿಷಯದಲ್ಲಿ ತುಂಬ ಆದರವುಳ್ಳವರಾಗಿರುವೆವು. ಅದನ್ನು ದೊರಕಿಸುವ ವಿಷಯದಲ್ಲೂ, ಹತ್ತರಿಟ್ಟುಕೊಳ್ಳುವ ವಿಷಯದಲ್ಲೂ ಉತ್ಸುಕತೆಯಿಂದ ಪ್ರಯತ್ನಿಸುತ್ತಿರುವೆವು. ಆ ವಸ್ತುವು ನಮಗೆ ದೊರೆದೀತೋ ದೊರೆಯಲಿಕ್ಕಿಲ್ಲೋ ಎಂದು ಸದಾ ಚಿಂತಿಸುತ್ತಿರುವೆವು. ದೊರೆಯುವುದು ತಡವಾದಂತೆ ಅದರಲ್ಲಿ ಅನುರಾಗವು ಹೆಚ್ಚುತ್ತ ಹೋಗುವುದು; ಆದರೆ ಆ ವಸ್ತುವು ತಾನೇ ತಾನಾಗಿ ನಮ್ಮ ಕೈಸೇರಿ, ನಮ್ಮ ಹತ್ತಿರ ಚಿರವಾಸ್ತವ ಮಾಡಿಕೊಂಡಿರಹತ್ತಿತೆಂದರೆ, ನಮಗದರ ಬೆಲೆಯು ತಿಳಿಯದಂತಾಗಿ ಹೋಗುವದು. ಅದರ ವಿಷಯದಲ್ಲಿ ಕ್ರಮೇಣ ಅನಾದರವನ್ನು ತೋರಿಸಹತ್ತುವೆವು ಕಾಲಾಂತರದಲ್ಲಿ ಅದನ್ನು ದೊರಕಿಸಲಿಕ್ಕೆ ಮಾಡಿದ ಶ್ರಮವನ್ನು ಮರೆಯುವೆವಷ್ಟೇ ಅಲ್ಲ; ಅದರ ಗರಜನ್ನು ಸಹ ಮನಸ್ಸಿನಲ್ಲಿ ತರುವದಿಲ್ಲ! ಉಪೇಕ್ಷಿತ ವಸ್ತುವು ಮತ್ತೆ ಕಣ್ಮರೆಯಾಯಿತೆಂದರೆ, ಆಗ ನಮ್ಮ ಕಣ್ಣುಗಳು ತೆರೆಯುವವು. ತೋರಿದ ಉಪೇಕ್ಷೆಗಾಗಿ ಹಳಹಳಿಸುವೆವು. ಮತ್ತೆ ಹೇಗೆ ದೊರಕಿಸಲಿಕ್ಕಾದೀತೆಂಬ ದೀರ್ಘ ವಿಚಾರಕ್ಕೊಳಗಾಗುವೆವು. ಅದು ಅಪ್ರಾಪ್ಯವಾಗಿ ಹೋದರಂತೂ ನಮ್ಮ ದುಃಖಕ್ಕೆ ಮೇರೆಯಿಲ್ಲದಾಗುವುದು.

ರತ್ನಾವಳಿಯು ಪತಿಯು ಕಣ್ಮರೆಯಾಗುತ್ತಲೆ ಬಹು ವ್ಯಸನಕ್ಕೊಳಗಾದಳು. ಇವಳು ತನ್ನ ಪತಿಯಂತಹ ಸ್ತ್ರೈಣನು ಕ್ಷಣಿಕ ಉತ್ತೇಜನಕ್ಕೊಳಗಾಗಿ ವಿರಕ್ತನಾಗುವ ಸಂಭವವಿಲ್ಲೆಂದು ಮನಸ್ಸಿಗೆ ಸಮಾಧಾನ ಹಚ್ಚಿಕೊಳ್ಳಬಹುದಾಗಿತ್ತು; ಆದರೆ ಇಂದು ರತ್ನಾವಳಿಯ ಮನಸ್ಸಿನಲ್ಲಿ ಸಮಾಧಾನದ ವಿಚಾರಗಳು ಹುಟ್ಟಲೇ ಇಲ್ಲ. ಅದಾವ ನಿಮಿತ್ತವೋ ಏನೊ! ತನ್ನ ಪತಿಯು ತನ್ನನ್ನು ಚಿರಕಾಲಿಕವಾಗಿಯೆ ಅಗಲಿ ಹೋದನೆಂದು ಅವಳಿಗೆ ಅನಿಸಹತ್ತಿತು; ಮತ್ತು ಈ ಭಾವನೆಗೆ ಅನುರೂಪವಾದ ನೂರೆಂಟು ವಿಚಾರಗಳುದಿಸಹತ್ತಿದವು. ಅವಳು ಅಂದಿನ ದಿನ

ರಾತ್ರಿಯಲ್ಲಿ ಊಟಮಾಡಲಿಲ್ಲ. ತಾಯಿ-ತಂದೆಗಳೊಡನೆ ಸರಿಯಾಗಿ ಮಾತಾಡಲಿಲ್ಲ. ಹಾಸುಗೆಯನ್ನು ಹಾಕಿಕೊಳ್ಳಲಿಲ್ಲ. ಹಾಗೆಯೆ ನೆಲದ ಮೇಲೆ ಬಿದ್ದುಕೊಂಡಳು. ಕಣ್ಣಿಗೆ ಕಣ್ಣು ಹಚ್ಚಲಿಲ್ಲ. ನಿದ್ದೆ ಮಾಡಲಿಲ್ಲ. ಬೆಳಗಿನ ಜಾವದ ವರೆಗೆ ನೆಲದ ಮೇಲೆ ಹೊರಳಾಡುತ್ತ ತಳಮಳದಿಂದ ವೇಳೆಗಳೆದಳು.

ಇನ್ನೂ ಬೆಳಗಾಗಿರಲಿಲ್ಲ. ಸೂರ್ಯೋದಯಕ್ಕೆ ಒಂದೆರಡು ತಾಸುಗಳ ಅವಕಾಶವಿರಬಹುದು. ರತ್ನಾವಳಿಯು ಕೋಣೆಯಿಂದ ಹೊರಬಿದ್ದಳು. ತಾಯಿ-ತಂದೆಗಳನ್ನು ಎಬ್ಬಿಸುವ ಗೋಜಿಗೆ ಹೋಗಲಿಲ್ಲ. ಹೊರಮನೆಯಲ್ಲಿ ಮಲಗಿದ್ದ ಪರಿಚಾರಿಕೆಯನ್ನು ಎಬ್ಬಿಸಿ, ಅವಳನ್ನು ಸಂಗಡ ಕರೆದುಕೊಂಡು ಮನೆಯಿಂದ ಹೊರಟಳು. ಭರದಿಂದ ನಡೆದು ರಾಜಾಪುರವನ್ನು ಸೇರಿದಳು. ಸಂಧಿಪ್ರಕಾಶವು ಬಿದ್ದಿತ್ತು. ಇನ್ನೂ ಅರುಣೋದಯವಾಗಿರಲಿಲ್ಲ. ರತ್ನಾವಳಿಯು ದಾಸಿಯನ್ನು ಹಿಂದುರುಗಿ ಕಳುಹಿಕೊಟ್ಟು ಉನ್ಮಾದಿನಿಯಂತೆ ಮನೆಯನ್ನು ಹೊಕ್ಕಳು. ತನ್ನ ಮಲಗುವ ಕೋಣೆಗೆ ಹೋದಳು; ನೋಡಿದಳು ಪ್ರಾಣನಾಥನಿರಲಿಲ್ಲ ಹಾಸುಗೆಯನ್ನು ಪರಕಿಸಿದಳು. ಮೊದಲಿನಂತೆಯೇ ಇತ್ತು. ಯಾರೂ ಕೈಹಚ್ಚಿರಲಿಲ್ಲ. ರತ್ನಾವಳಿಯ ಎದೆಯು ಧಸ್ಸೆಂದಿತು. ಅವಳು ದುಃಖಾತಿರೇಕದಿಂದ ನೆಲದಮೇಲೆ ಬಿದ್ದುಬಿಟ್ಟಳು. ಬಾಹ್ಯಸೃಷ್ಟಿಯನ್ನು ಪೂರಾ ಮರೆದು ಬಿಟ್ಟಳು.

ತುಸ ಹೊತ್ತಿನಲ್ಲಿ ಹುಲಸೀದೇವಿಯು ಅಲ್ಲಿಗೆ ಬಂದಳು. ಸೊಸೆಯು ಇರವನ್ನು ನೋಡಿದಳು; ಹೀಗೇಕೆ ಮಾಡುತ್ತಿರುವೆ? ಎಂದು ತಿರಸ್ಕಾರ ಸೂಚಕ ಸ್ವರದಿಂದ ಕೇಳಿದಳು.

ಅತ್ತೆಯವರೆ, ಇವರೆಲ್ಲಿ? ರತ್ನಾವಳಿಯು ದೀನ ಮುದ್ರೆಯಿಂದ ಕೇಳಿದಳು.

ಹುಲಸೀದೇವಿಯು ಆಶ್ಚರ್ಯಚಕಿತಳಾದಳು ಇದೇನು ಹೀಗೆ

ಕೇಳುತ್ತಿರುವೆ? ನಿನಗೆ ಗೊತ್ತಿಲ್ಲವೆ? ತುಳಸೀದಾಸನು ಅಕ್ಕ-ಗೋದಿಗಳನ್ನು ತಕ್ಕೊಂಡು ಸಾಯಂಕಾಲ ಸುಮಾರಕ್ಕೆ ತಿರುಗಿ ಮನೆಗೆ ಬಂದನು. ನಿನ್ನ ಸುದ್ದಿಯನ್ನು ಕೇಳಿದನು. ಮುಂಜಾನೆಯಿಂದ ಬಾಯಿಯಲ್ಲಿ ನೀರ ಹಾಕಿರಲಿಲ್ಲ. ಆದರೂ ಅವನು ಸ್ನಾನ-ಭೋಜನಗಳ ಪರಿವೆಯಿಲ್ಲದೆ, ಕೂಡಲೆ ನಿನ್ನನ್ನು ಕರೆತರುವುದಕ್ಕೆಂದು ಹೊರಟನು. ಅವನು ಅಲ್ಲಿಗೆ ಬರಲಿಲ್ಲವೆ? ಹುಲಸೀದೇವಿಯು ಕೇಳಿದಳು.

ರತ್ನಾವಳಿಯು ಅನುತಪ್ತ ಸ್ವರದಿಂದ:—ಅತ್ತೆಯವರೆ, ನಾನು ಹೇಳಲಿ? ಮಂದಭಾಗ್ಯಳು ನಾನು! ಇಲ್ಲವಾದರೆ ನನಗೆ ಆ ದುರ್ಬುದ್ಧಿಯುಂಟಾಗುತ್ತಿತ್ತೆ? ನಿನ್ನಿನ ರಾತ್ರಿಯಲ್ಲಿ ಇವರು ಅಲ್ಲಿಗೆ ಬಂದಿದ್ದರು. ನಾನು ಮನಸಿಗೆ ಹಚ್ಚಿಕೊಳ್ಳುವಂತೆ ಮಾತಾಡಿ ಕಳುಹಿಕೊಟ್ಟುಬಿಟ್ಟೆನು! ಆಗ ಯಾವ ಪಿಶಾಚಿಯು ನನ್ನಲ್ಲಿ ಆಶ್ರಯಹೊಂದಿತ್ತೊ ಏನೊ! ಹೆಚ್ಚಾಗಿ ಮಾತಾಡಿದೆನು. ಇವರು ಕೋಪಗೊಂಡವರಾಗಿ, ಆ ಸ್ಥಳದಿಂದ ಹೊರಟು ನಡೆದರು. ಎಲ್ಲಿಗೆ ಹೋದರೆಂಬದನ್ನು ನಾನರಿಯೆನು. ನನಗೆ ಬೆಳತನಕ ನಿದ್ದೆ ಹತ್ತಲಿಲ್ಲ ದುಶ್ಚಿಂತೆಯಿಂದ ಚಟಪಡಿಸಿ, ರಾತ್ರಿಯಿರುವಾಗಲೆ ಹೊರಟು ಇಲ್ಲಿಗೆ ಬಂದೆನು, ಎಂದು ಹೇಳಿದಳು.

ಎಲ್ಲವನ್ನೂ ಹಾಳುಮಾಡಿ ಬಿಟ್ಟೆಯಮ್ಮಾ! ನನ್ನ ತುಳಸೀದಾಸನು ಬಹು ಅಭಿಮಾನಿಯು! ಹುಲಸೀದೇವಿಯು ನಿಟ್ಟುಸುರು ಬಿಟ್ಟು ನುಡಿದಳು.

ಇವರಿನ್ನು ಇಲ್ಲಿಗೆ ಬರಲಿಕ್ಕಿಲ್ಲವೆ? ರತ್ನಾವಳಿಯು ಕೇಳಿದಳು.

ಹೇಗೆ ಹೇಳಬೇಕಮ್ಮಾ? ನನ್ನ ನಿನ್ನ ಹಣೆ ಬರಹ! ನಾನು ಏಕಮಾತ್ರ ಪುತ್ರನನ್ನು ಕಳೆದುಕೊಂಡೆ! ನೀನು ಏಕಾಂತಾನುರಕ್ತನಾದ ಅಲೌಕಿಕ ಪತಿಯನ್ನು ಕಳೆದುಕೊಂಡೆ! ಹುಲಸೀದೇವಿಯು ದುಃಖಾತಿರೇಕದಿಂದ ಮಾತಾಡಿದಳು. ರತ್ನಾವಳಿಗೆ ಮಾತಾಡಲಿಕ್ಕೆ ಬಾಯಿಯಿರಲಿಲ್ಲ. ತನ್ನ ತಪ್ಪು ಎಂತಹ ಗುರುತರವಾದುದು, ಎಂಬುದರ ಸರಿಯಾದ ಕಲ್ಪನೆಯು ಅವಳಿಗೆ ಈಗ ಉಂಟಾಯಿತು. ವಿಷಾದಾತಿರೇಕದಿಂದ ಮನೆ

ಗೆಲಸಗಳನ್ನು ಮರೆದು ಕುಳಿತುಬಿಟ್ಟರು!

ಸಂಜೆಯಾಗುತ್ತ ಬಂದರೂ, ತುಳಸೀದಾಸನು ಮನೆಗೆ ಬರಲಿಲ್ಲ. ಆ ಪ್ರೀತಿಯ ಮಾತೆಗೆ ಅನ್ನ-ನೀರುಗಳ ಪರವೆಯಿಲ್ಲ. ಕ್ಷಣಿಕ ಉತ್ತೇಜನ ವಶದಿಂದ ಪತಿಯ ಮನಸ್ಸನ್ನು ನೋಯಿಸಿ, ಪಶ್ಚಾತ್ತಾಪದಿಂದ ದಹಿಸುತ್ತಿರುವ ಆ ಸತಿಗೆ ಸ್ನಾನ-ಭೋಜನಗಳ ನೆನಪಿಲ್ಲ. ಸಾಯಂಕಾಲವಾಗುತ್ತಲೆ ಅತ್ತೆ-ಸೊಸೆಯರು ಹೊರಬಾಗಿಲ ಹತ್ತರ ಬಂದು ಕುಳಿತು ಮಾರ್ಗಪ್ರತೀಕ್ಷೆ ಮಾಡಹತ್ತಿದರು. ದಿನನಾಥನು ಅಸ್ತನಾಗಿ ಕತ್ತಲು ಬೀಳಹತ್ತಿತು. ಮೆಯ್ಯಲಿಕ್ಕೆಂದು ಮನೆಬಿಟ್ಟು ಹೋಗಿದ್ದ ದನಕರುಗಳು ಗ್ರಾಮವನ್ನು ಸೇರಹತ್ತಿದವು ಮನೆಯಲ್ಲಿ ಕಟ್ಟಿದ್ದ ಕರುಗಳ ದರ್ಶನದಿಂದ ಅವು ಸಂತೋಷಗೊಂಡವು. ಮಬ್ಬುಗತ್ತಲೆಯು ಎಲ್ಲೆಲ್ಲಿಯೂ ಹಬ್ಬಿತು. ಮನೆಮನೆಗಳಲ್ಲಿ ದೀಪಗಳು ಹೊತ್ತಿಕೊಂಡವು. ದಣಿದು ಬಂದ ಒಕ್ಕಲಿಗರು ಪ್ರಿಯ ಜನರೊಡನೆ ವಿನೋದದ ಮಾತುಗಳನ್ನು ನಡೆಸಿದರು. ಆಕಾಶದಲ್ಲಿ ಒಂದೊಂದಾಗಿ ನಕ್ಷತ್ರಗಳು ಕಾಣಿಸಿಕೊಳ್ಳಹತ್ತಿದವು. ಅಲ್ಪಾವಕಾಶದಲ್ಲಿ ಚಂದ್ರಮನುದಯಿಸಿ, ಪಸರಿಸಿದ್ದ ಮಬ್ಬುಗತ್ತಲೆಯನ್ನು ಹೋಗಲಾಡಿಸಿದನು. ಗ್ರಾಮವೆಲ್ಲವೂ ಆನಂದಮಯವಾಯಿತು; ಆದರೆ ಹುಲಸೀದೇವಿಗಾಗಲಿ, ರತ್ನಾವಳಿಗಾಗಲಿ ಕೊಂಚವೂ ಸಮಾಧಾನವಿರಲಿಲ್ಲ. ಇವರು ಹೃದಯದ ತಳಮಳದಿಂದ ಅರಿವುಗೆಟ್ಟು, ಉತ್ಸುಕತೆಯಿಂದ ತುಳಸೀದಾಸನ ದಾರಿಯ ಕಾಯುತ್ತಿದ್ದರು. ಹೊರಗೆ ತುಸ ಸಪ್ಪಳವಾಗುತ್ತಲೆ ತುಳಸೀದಾಸನೇ ಬಂದನೆಂದು ಭಾವಿಸುತ್ತಿದ್ದರು. ದಿಟ್ಟಿಸಿ ನೋಡಿ ನಿರಾಶರಾಗಿ ಕೆಳಮೋರೆಮಾಡಿಕೊಂಡು ಕುಳ್ಳುವರು. ಕ್ರಮೇಣ ರಾತ್ರಿಯು ಹೆಚ್ಚುತ್ತ ನಡೆಯಿತು; ಗ್ರಾಮವಾಸಿಗಳೆಲ್ಲರೂ ನಿದ್ರಾಭಿಭೂತರಾದರು. ಗ್ರಾಮದಲ್ಲೆಲ್ಲಿಯೂ ಶಾಂತಿಯು ಮೂರ್ತಿಮಂತಾಗಿ ಪಸರಿಸಿತು; ಆದರೆ ಹುಲಸೀದೇವಿಗೂ ರತ್ನಾವಳಿಗೂ ಶಾಂತಿಯು ದೊರೆಯಲಿಲ್ಲ. ಅತ್ತೆ-ಸೊಸೆಯರು ಆ ರಾತ್ರಿಯನ್ನು

ಮನದ ದುಗಡುದಿಂದ ನಿದ್ರೆಯಿಲ್ಲದೆ ಕುಳಿತು ಕಳೆದರು.

ಮರುದಿನ ಹುಲಸೀದೇವಿಯು ಗ್ರಾಮವಾಸಿಗಳಲ್ಲಿಯ ಕೆಲವರಿಗೆ ಹೇಳಿಕೊಂಡು ತುಳಸೀದಾಸನ ಶೋಧಕ್ಕಾಗಿ ನಾಲ್ಕೂಕಡೆಗೆ ಜನರನ್ನು ಕಳುಹಿಕೊಟ್ಟಳು. ಪರಸ್ಥಳಗಳಿಗೆ ಹೋಗುವ ಜನರನ್ನು ಹುಡುಕಿ, ಅವರಿಗೆ ತುಳಸೀದಾಸನ ತಪಾಸಣೆ ಮಾಡಿಕೊಂಡು ಬರಲಿಕ್ಕೆ ಬಿನ್ನಯಿಸಿಕೊಂಡಳು.

ತುಳಸೀದಾಸನು ಗೃಹತ್ಯಾಗಿಯಾಗಿ ಹೋದ ಸಂಗತಿಯು ಊರಲ್ಲೆಲ್ಲ ಹರಡಿತು. ಹುಲಸೀದೇವಿಗೂ ರತ್ನಾವಳಿಗೂ ಸಮಾಧಾನ ಹೇಳುವುದಕ್ಕೆ ಜನರು ಕಲೆಯುಹತ್ತಿದರು. ಗ್ರಾಮವಾಸಿಗಳ ಈ ವಚನಗಳಿಂದ ಅತ್ತೆ-ಸೊಸೆಯರ ಮನದ ಅಶಾಂತಿಯು ಹೆಚ್ಚಿತೇ ಹೊರತು, ಕಡಿಮೆಯಾಗಲಿಲ್ಲ.

ಮನುಷ್ಯನ ಹೊಟ್ಟೆಯೆಂಬುದು ಬಹು ಶಕ್ತಿಶಾಲಿಯಾದ ವಸ್ತುವು. ಇದು ಕಾಲಕಾಲಕ್ಕೆ ತನ್ನ ಅಸ್ತಿತ್ವದ ಕಲ್ಪನೆಯನ್ನು ತನ್ನನ್ನು ಹೊತ್ತಿದ್ದ ಪ್ರಾಣಿಗೆ ಮಾಡಿಕೊಡುವುದು. ಮನುಜನ ಅತಿದುಃಖದ ಪ್ರಸಂಗದಲ್ಲಿ ಕೆಲಹೊತ್ತು ಮಾತ್ರ ಇದು ನೀರವವಾಗಿ ಇರಬಹುದಲ್ಲದೆ, ಬಹು ಕಾಲ ಸುಮ್ಮನಿರದು. ಅಂತೆಯೇ ಇದು ಪುತ್ರ ವಿರಹದಿಂದ ಸಂತಪ್ತಳಾದ ಹುಲಸೀದೇವಿಗೂ ಪತಿವಿರಹದಿಂದ ವ್ಯಾಕುಲಗೊಂಡ ರತ್ನಾವಳಿಗೂ ಉಪದ್ರವಗೊಡಲಿಕ್ಕೆ ಹಿಂಜರಿಯಲಿಲ್ಲ. ಅತ್ತೆ-ಸೊಸೆಯರು ಮತ್ತೆ ಅನಿರ್ವಾಹದಿಂದ ಮನೆಗೆಲಸಗಳಿಗೆ ತೊಡಗಬೇಕಾಯಿತು. ಹೇಗಾದರೂ ಮಾಡಿ, ಏನಾದರೂ ಮಾಡಿಕೊಂಡು ಹೊಟ್ಟೆಯನ್ನು ಶಾಂತಗೊಳಿಸಬೇಕಾಯ್ತು!

ಕಾಲವು ಕ್ರಮಿಸುತಲಿತ್ತು. ಅದು ಹುಲಸೀದೇವಿಯ ಹಾಗು ರತ್ನಾವಳಿಯ ದುಃಖವನ್ನು ನೋಡಿ ಅಚಲವಾಗಿ ನಿಲ್ಲಲಿಲ್ಲ. ಅತ್ತೆ ಸೊಸೆಯರ ದುಃಖವನ್ನು ಲಾಘವಗೊಳಿಸುವುದಕ್ಕಾಗಿ ಭರದಿಂದಲೂ

ಚಲಿಸಲಿಲ್ಲ. ಅದು ತನ್ನ ನಿಯಮದ ಮೇರೆಗೆ ನಡೆದಿತ್ತು.

ತುಳಸೀದಾಸನ ಶೋಧಕ್ಕಾಗಿ ಹೋದವರು ತಿರುಗಿ ಬಂದರು. ತುಳಸೀದಾಸನು ಎಲ್ಲಿಯೂ ಕಾಣಲಿಲ್ಲವೆಂದು ಹೇಳಿದರು. ಹುಲಸೀದೇವಿಯು ಹಾಗು ರತ್ನಾವಳಿಯ ಆಶೆಗೆ ಅನುರೂಪವಾದ ಉತ್ತರವು ಯಾರಿಂದಲೂ ದೊರೆಯಲಿಲ್ಲ.

ಹೀಗೆ ಒಂದು ವರ್ಷವು ಕ್ರಮಿಸಿತು. ಆದರೂ ತುಳಸೀದಾಸನು ಮನೆಗೆ ಬರಲಿಲ್ಲ. ಹುಲಸೀದೇವಿಗೂ ರತ್ನಾವಳಿಗೂ ಆಕಾಂಕ್ಷಿತ ವಸ್ತುವು ಕಣ್ಣಿಗೆ ಬೀಳಲಿಲ್ಲ. ಅತ್ತೆ-ಸೊಸೆಯರು ನಿರಾಶರಾಗಿ ಹೋದರು.

ಒಂದು ದಿನ ರತ್ನಾವಳಿಯು ಸಣ್ಣ ಮೋರೆ ಮಾಡಿ:—ಅತ್ತೆಯವರೆ, ಹೀಗೆ ದಿನಗಳನ್ನು ಕಳೆವುದು ಇನ್ನು ನನ್ನಿಂದಾಗದು. ಹೊತ್ತೇ ಹೋಗದಂತಾಗಿದೆ. ಏನು ಮಾಡಲಿ? ಎಂದು ಕೇಳಿದಳು.

ಮಾಡಬೇಕೇನಮ್ಮಾ? ಹಣೆಯ ಬರಹದಲ್ಲಿದ್ದಂತೆ ಭೋಗಿಸಲೇ ಬೇಕು! ಸಂಚಿತ ಕರ್ಮಫಲವನ್ನು ಉಪಭೋಗಿಸಿಯೇ ತೀರಬೇಕು! ಹುಲಸೀದೇವಿಯು ಹೇಳಿದಳು.

ಅತ್ತೆಯವರೆ, ಈ ಹಾಳು ಮನೆಯಲ್ಲಿರುವುದು ನನಗೆ ಅಶಕ್ಯವಾಗಿದೆ. ಕಾಶಿಗೆ ಹೋಗೋಣ, ನಡೆಯಿರಿ.

ಕಾಶಿಗೆ ಹೋದರೆ, ನಮ್ಮ ಕಷ್ಟ ಪರಿಹಾರವಾದೀತೆ? ಅಲ್ಲಿ ನಮಗೆ ತುಳಸೀದಾಸನು ಸಿಕ್ಕಾನೆ? ಹುಲಸೀದೇವಿಯು ಕೇಳಿದಳು.

ಅತ್ತೆಯವರೆ, ಅದನ್ನು ಹೇಗೆ ಹೇಳಲಿಕ್ಕಾದೀತು? ನಾನೇನು ಸರ್ವಜ್ಞೆಯೆ? ಇವರು ಇಂಥಲ್ಲಿಯೇ ಇರುವರೆಂದು ನನಗೆ ಗೊತ್ತಿದ್ದರೆ, ನಾನು ಇಲ್ಲಿ ಹೀಗೆ ಸುಮ್ಮನೆ ಕುಳಿತಿರುತಿದ್ದೆನೆ? ನಾವು ಕಾಶಿಗಂತೂ ಹೋಗೋಣ. ಅಲ್ಲಿ ಇವರನ್ನು ಹುಡುಕೋಣ. ಮುಂದೆ ನಮ್ಮ ಅದೃಷ್ಟವಿದ್ದಂತಾಗಲಿ!

ನಾವು ಕಾಶಿಗೆ ಹೋದಾಗ ತುಳಸೀದಾಸನು ಇಲ್ಲಿಗೆ ಬಂದರೆ?

ನಾವು ಇಲ್ಲದಿರುವುದನ್ನು ಕಂಡು, ಮತ್ತೆ ಮನೆಬಿಟ್ಟು ಹೋದರೆ? ತುಲಸೀದೇವಿಯು ಕೇಳಿದಳು.

ಅತ್ತೆಯವರೆ, ನೀವೆನ್ನುವುದು ನಿಜ; ಆದರೆ ಇವರು ಇನ್ನು ಇಲ್ಲಿಗೆ ಬರುವದಿಲ್ಲೆಂದು ನನ್ನ ಮನಸ್ಸು ನನಗೆ ಹೇಳುತ್ತಿದೆ. ರತ್ನಾವಳಿಯು ಅಳುತ್ತಿದಳು.

ಅಮ್ಮಾ, ಹೀಗೆ ಅಭದ್ರ ಮಾತುಗಳನ್ನಾಡಬೇಡ! ಈಗ ದೈವವು ನಮ್ಮ ವಿಷಯದಲ್ಲಿ ವಿಮುಖವಾಗಿದೆ. ಅದು ಸರಿಯಾಗುತ್ತಲೆ, ಮತ್ತೆ ನಾವು ಸುದಿನಗಳನ್ನು ಕಾಣುವೆವು! ತುಲಸೀದೇವಿಯು ಸೊಸೆಯ ಸಮಾಧಾನಕ್ಕಾಗಿ ನುಡಿದಳು.

ಅತ್ತೆಸೊಸೆಯರು ಈ ತರದ ಶೂನ್ಯಮನಸ್ಸಿನಿಂದ ಆ ಭಣಗುಟ್ಟುವ ಮನೆಯಲ್ಲಿ ಮತ್ತೊಂದು ವರುಷವನ್ನು ಕಳೆದರು. ಆದರೂ ತುಳಸೀದಾಸನು ಮನೆಗೆ ಬರಲಿಲ್ಲ. ಒಂದು ದಿನ ರತ್ನಾವಳಿಯು ಪತಿಯ ತದೇಕ ಧ್ಯಾನದಿಂದ ರಾತ್ರಿಯ ಬಹುಭಾಗವನ್ನು ಜಾಗ್ರತಾವಸ್ಥೆಯಲ್ಲಿ ಕಳೆದಳು. ಕೊನೆಗೆ ಅವಳಿಗೆ ತುಸ ನಿದ್ದೆ ಬಂದಂತಾಯಿತು. ಈ ಅರೆ ನಿದ್ದೆಯಲ್ಲಿ ಅವಳು ಒಂದು ಕನಸು ಕಂಡಳು ಕನಸಿನಲ್ಲಿ ಜಟಾಧಾರಿಯೂ ತೇಜಸ್ವಿಯೂ ಆದ ಸಂನ್ಯಾಸಿಯೊಬ್ಬನು ಕಾಣಿಸಿಕೊಂಡು:—"ಮಗಳೇ, ಇನ್ನೂ ನೀನು ಈ ಮನೆಯಲ್ಲಿಯೇ ಇರುವೆಯಾ? ಈ ಸ್ಥಳದ ಮೋಹ ವಿನ್ನೂ ಕಡಿಯಲೊಲ್ಲದೆ?" ಎಂದು ಕೇಳಿದನು.

ಮಹಾರಾಜ, ನಾನೆಲ್ಲಿಗೆ ಹೋಗಲಿ? ನನಗೆ ಬೇರೆ ಆಶ್ರಯ ಸ್ಥಳವಾವುದು? ರತ್ನಾವಳಿಯು ಕನಸ್ಸಿನಲ್ಲಿ ಕೇಳಿದಳು.

ಯಾವ ದಾರಿಯಲ್ಲಿ ನಿನ್ನ ಪತಿಯು ಸಂಚರಿಸುತ್ತಿರುವನೋ ನೀನೂ ಅದೇ ಹಾದಿಯಲ್ಲಿ ಸಾಗು.

ಇವರಿನ್ನು ಈ ಮನೆಗೆ ಬರುವದಿಲ್ಲವೆ? ರತ್ನಾವಳಿಯು ಕೇಳಿದಳು.

ಒಂದೇ ಒಂದು ದಿನ ಬರುವನು. ಕೇವಲ ಮಾತೃಭೂಮಿಯು

ಸಂದರ್ಶನಕ್ಕಾಗಿ!

ನನಗೆ ಇನ್ನು ಇವರ ದರ್ಶನವಾಗಲಿಕ್ಕಿಲ್ಲವೆ?

ಆಗುವದು. ಆದರೆ ಈ ಸ್ಥಳದಲ್ಲಲ್ಲ.

ಮತ್ತೆಲ್ಲಿ?

ಕಾಶಿಯಲ್ಲಿ.

ಆ ಸಂನ್ಯಾಸಿಯು ಕಾಣದಾದನು. ಕೂಡಲೆ ರತ್ನಾವಳಿಗೆ ಎಚ್ಚರವಾಯಿತು. ಬೆಳಗಾಗ ಬಂದಿತು. ರತ್ನಾವಳಿಯು ಹತ್ತರ ಮಲಗಿದ್ದ ಅತ್ತೆಯನ್ನು ಎಬ್ಬಿಸಿ, ಕನಸಿನ ಸಂಗತಿಯನ್ನು ಹೇಳಿದಳು. ಕಾಶಿಗೆ ಹೋಗುವ ಆಗ್ರಹಕೊಟ್ಟಳು. ಹುಲಸೀದೇವಿಗೂ ಇದೇ ಬೇಕಿತ್ತು. ಮಗನಿಲ್ಲದ ಮನೆಯಲ್ಲಿ ಸೊಸೆಯೂ ಇಲ್ಲದಂತಾದರೆ ತಾನೊಬ್ಬಳೇ ಇರುವುದು ಅಸಾಧ್ಯವೆಂದು ಅವಳಿಗೆ ಅನಿಸಿತ್ತು. ಅವಳು ಸೊಸೆಯ ಹೇಳಿಕೆಯಂತೆ, ಕಾಶಿಗೆ ಹೊರಡುವುದನ್ನು ಗೊತ್ತುಮಾಡಿಕೊಂಡು, ಸಿದ್ಧತೆಗೆ ತೊಡಗಿದಳು.

ಒಂದೆರಡು ದಿನಗಳಲ್ಲಿಯೇ ಅತ್ತೆ-ಸೊಸೆಯರು ಕಾಶೀಯಾತ್ರೆಗೆ ಹೊರಟರು. ಪ್ರವಾಸದ ಅನುಕೂಲತೆಗಾಗಿ ಎರಡು ಚಕ್ಕಡಿಗಳು ಸಿದ್ಧವಾದವು. ಒಂದರಲ್ಲಿ ಸಾಮಾನುಗಳನ್ನು ಹೇರಿದರು. ಬೇರೊಂದರಲ್ಲಿ ತಾವು ಕುಳಿತುಕೊಂಡರು. ದಾರಿಯ ಸಂರಕ್ಷಣೆಗಾಗಿ ರೈತರಲ್ಲಿಯ ನಾಲ್ಕು ಜನ ಗಟ್ಟಿಗರನ್ನು ಸಂಗಡ ಕರಕೊಂಡರು. ಬಂಡಿಗಳನ್ನು ಹೊಡೆಯುವವರಂತೂ ಇದ್ದೇ ಇದ್ದರು. ಚಕ್ಕಡಿಗಳು ಈ ಯಾತ್ರಿಕರನ್ನೂ ಸಾಮಾನುಗಳನ್ನೂ ಹೊತ್ತುಕೊಂಡು ಕಾಶಿಯ ಕಡೆಗೆ ನಡೆದವು.

ಎತ್ತಿನ ಬಂಡಿಗಳು ಎರಡು ದಿವಸ ದಾರಿಯನ್ನು ಕ್ರಮಿಸಿದವು. ಮೂರನೆಯ ದಿನ ಮಧ್ಯಾಹ್ನದ ಸುಮಾರಕ್ಕೆ ಒಂದು ನಿಬಿಡವಾದ ಅರಣ್ಯವನ್ನು ಹೊಕ್ಕವು. ಈ ಅಡವಿಯನ್ನು ದಾಟುತ್ತಲೆ, ಒಂದು ಸಣ್ಣ ಗ್ರಾಮವಿತ್ತು. ಬೇಗನೆ ಆ ಹಳ್ಳಿಗೆ ಹೋಗಿ, ಮಧ್ಯಾಹ್ನದ

ಸ್ನಾನಾಹಾರಗಳನ್ನು ತೀರಿಸಿಕೊಳ್ಳಬೇಕೆಂದು ಯಾತ್ರಿಕರು ಗೊತ್ತು ಮಾಡಿಕೊಂಡಿದ್ದರು.

ಅಡವಿಯು ಅಂಥ ದೊಡ್ಡದಲ್ಲ. ಆದರೂ ಹಿಂಸ್ರಪಶುಗಳಿರಲಿಕ್ಕಿಲ್ಲೆಂದು ಹೇಳುವಂತಿದ್ದಿಲ್ಲ. ಬಂಡಿಗಳನ್ನು ನಡಿಸುವವರು ಯಾತ್ರಿಕರು ಈ ಸ್ಥಳಗಳಲ್ಲಿ ಹುಲಿ-ಕರಡಿಗಳ ಕೈಯಲ್ಲಿ ಸಿಕ್ಕು ಸತ್ತುಹೋದ ಹಲವು ಸಂಗತಿಗಳನ್ನು ಜನರ ಬಾಯಿಂದ ಕೇಳಿದವರಾಗಿದ್ದರು. ಕಾರಣ ಇವರು ದುಷ್ಟಮೃಗಗಳ ಕಾಟವೆಲ್ಲಿಯೊದಗುವದೋ ಎಂದು ಭಯಪಡಬೇಕಾಗಿತ್ತು. ಮೇಲಾಗಿ ದಾರಿಯು ಸಪಾಟಾಗಿರಲಿಲ್ಲ. ಅಲ್ಲಲ್ಲಿ ಏರಿಳುಕಲಗಳಿಂದ ತುಂಬಿಹೋಗಿತ್ತು. ಈ ಭಯಂಕರ ದಾರಿಯನ್ನು ಕ್ರಮಿಸುವದು, ಅವರಿಗೆ ತೀರ ತ್ರಾಸಿನ ಸಂಗತಿಯಾಗಿತ್ತು. ಅವರು ಚಕ್ಕಡಿ ಎಲ್ಲಿ ಬೀಳುವುದೋ, ತಮಗೂ ಎತ್ತುಗಳಿಗೂ ಎಲ್ಲಿ ಅಪಾಯ ವಾದೀತೋ ಎಂದು ಸದಾ ಚಿಂತಿಸುತ್ತಿದ್ದರು. ಕಳ್ಳರ ಹಾವಳಿಯಂತೂ ಇದ್ದೇ ಇತ್ತು. ಕಾರಣ ಅತ್ತೆ-ಸೊಸೆಯರು ಒಳಗೆ ಭಯದಿಂದ ಕುಳಿತಿದ್ದರು. ಬಂಡಿಯನ್ನು ಹೊಡೆಯುವವರೂ ರಕ್ಷಿಸುವವರೂ ತುಂಬ ಎಚ್ಚರಿಕೆಯಿಂದ ಸಾಗಿದ್ದರು.

ಹೀಗೆ ಬಂಡಿಗಳು ಸಾಗಿರಲು, ಒಂದು ತೀರ ಇಕ್ಕಟ್ಟಿನ ಸ್ಥಳವು ಹತ್ತಿತು. ಇಲ್ಲಿ ಚಕ್ಕಡಿಯನ್ನು ಸಹಜವಾಗಿ ಹೊಡೆಯುವಂತಿದ್ದಿಲ್ಲ. ಸೀಳದಾರಿ; ಎಡಬಲಗಳಲ್ಲಿ ಆಳವಾದ ತೆಗ್ಗುಗಳು. ದಾರಿಯು ಇಳುಕಲ. ಕಾರಣ ವಾಹಕರೂ ರಕ್ಷಕರೂ ಕೂಡಿ ಒಂದೊಂದೇ ಬಂಡಿಯನ್ನು ಪಾರುಮಾಡಿಕೊಳ್ಳುವ ಆಲೋಚನೆಯನ್ನು ಮಾಡಿದರು. ಒಂದು ಬಂಡಿಯನ್ನು ಅಲ್ಲಿಯೇ ನಿಲ್ಲಿಸಿ, ಮತ್ತೊಂದನ್ನು ಮೆಲ್ಲನೆ ಮುಂದಕ್ಕೆ ಸಾಗಿಸಿಕೊಂಡು ಹೋದರು.

ಒಮ್ಮಿಂದೊಮ್ಮೆಲೆ ಹತ್ತಿಪ್ಪತ್ತು ಮಂದಿ ಕಳ್ಳರು ಕಾಣಿಸಿಕೊಂಡರು. ಅತ್ತೆ-ಸೊಸೆಯರು ಭಯಕಂಪಿತರಾಗಿ ಹುದುಗಿ ಕುಳಿ

ತಿದ್ದರು ಕಳ್ಳರಿಗೆ ಪರಮಾನಂದವಾಯಿತು. ಅವರು ಅಲ್ಪಾಯಾಸದಿಂದ ಬಂಡಿಯನ್ನು ಸುಲಿದರು. ರತ್ನಾವಳಿಗೆ ಕೆಳಗಿಳಿಯುವಂತೆ ಆಜ್ಞಾಪಿಸಿದರು. ರತ್ನಾವಳಿಯು ಭಯವಿಹ್ವಲೆಯಾಗಿ ಅತ್ತೆಯನ್ನಂಟಿಕೊಂಡಿದ್ದಳು. ಚೋರರ ಇಂಗಿತವೇನಿರಬಹುದೆಂಬದನ್ನು ಗೇನಿಸಿದಳು. ತನ್ನ ಮೈಮೇಲಿನ ಆಭರಣಗಳ ಆಶೆಯಿಂದ ಹೀಗೆನ್ನುತ್ತಿರಬಹುದೆಂದು ಊಹಿಸಿ, ಅವುಗಳನ್ನು ತೆಗೆದುಕೊಡಲಿಕ್ಕೆ ಯತ್ನಿಸಿದಳು; ಆದರೆ ತಸ್ಕರರು ಕೇವಲ ಅಲಂಕಾರಗಳಿಂದ ಸಂತುಷ್ಟರಾಗಲಿಲ್ಲ. ಅವರು ಆ ಅತ್ತೆ-ಸೊಸೆಯರ ಕೂಗಾಟಕ್ಕೂ, ಆರ್ತಧ್ವನಿಗೂ ಲಕ್ಷ್ಯಗೊಡದೆ ರತ್ನಾವಳಿಯನ್ನು ಹೊತ್ತರು. ಭರದಿಂದ ಪಲಾಯನ ಮಾಡಿದರು. ಹುಲಸೀದೇವಿಯು ಚೀತ್ಕಾರ ಮಾಡುತ್ತ ಬಂಡಿಯಿಂದಿಳಿದಳು. ಆ ಸುಲಿಗೆಗಾರರನ್ನು ಬೆನ್ನಟ್ಟಿದಳು; ಆದರೆ ಕೊಂಚ ನಡೆಯುತ್ತಲೆ ಮೂರ್ಛಿತಳಾಗಿ ಬಿದ್ದು ಬಿಟ್ಟಳು.

ವಾಹಕರೂ ರಕ್ಷಕರೂ ಬಂದು ಬಂಡಿಯನ್ನು ಪಾರುಗಾಣಿಸಿ, ಮತ್ತೆ ಮೊದಲಿನ ಸ್ಥಳಕ್ಕೆ ಬಂದು ನೋಡಿದರು. ಗಾಬರಿಯಾದರು. ಕಳ್ಳರು ರತ್ನಾವಳಿಯನ್ನು ಹೊತ್ತುಕೊಂಡೊಯ್ಯುತ್ತಿರುವುದು ಇವರಿಗೆ ಕಾಣಿಸಿತು. ಇವರಿಗೆ ಆ ದಾರಿಯು ತೀರ ಅಪರಿಚಿತವಾದದ್ದು. ಕಾರಣ ಇವರು ಬೆನ್ನು ಹತ್ತಿಹೋಗಿ ಕಳ್ಳರನ್ನು ಹಿಡಿಯುವಂತಿದ್ದಿಲ್ಲ. ಹಿಡಿದರೂ, ಅವರೊಡನೆ ಹೋರಾಡಿ ರತ್ನಾವಳಿಯನ್ನು ಬಿಡಿಸಿ ತರುವಷ್ಟು ಶಕ್ತಿಯುಳ್ಳವರಾಗಿರಲಿಲ್ಲ ಕಾರಣ ಇವರು ಕಳ್ಳರನ್ನು ಹಿಂಬಾಲಿಸಿ ಹೋಗುವ ಆಲೋಚನೆ ಮಾಡಲಿಲ್ಲ. ಮೂರ್ಛಿತಳಾಗಿದ್ದ ಹುಲಸೀದೇವಿಯನ್ನು ಎಚ್ಚರ ಪಡಿಸಿದರು. ಮುಂದಿನ ಗ್ರಾಮಕ್ಕೆ ಹೋಗಿ, ಗ್ರಾಮವಾಸಿಗಳ ನೆರವಿನಿಂದ ಕಳ್ಳರ ತಪಾಸಣೆ ಮಾಡಬೇಕೆಂದು ಗೊತ್ತು ಮಾಡಿಕೊಂಡರು. ಹುಲಸೀದೇವಿಯನ್ನು ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಮುಂದೆ ಸಾಗಿದರು.

---

# ೯ ವಿವಿಧತೆಯಲ್ಲಿ ಏಕತ್ವ.

ತುಳಸೀದಾಸನು ವೃಂದಾವನಕ್ಕೆ ಬಂದ ಸಮಯದಲ್ಲಿ ಹಲವರು ಹೆಸರುವಾಸಿಗಳಾಗಿದ್ದ ವೈಷ್ಣವರು ಅಲ್ಲಿ ವಾಸವಾಗಿದ್ದರು. ಭಗವದ್ಭಕ್ತರಾದ ಇವರಲ್ಲಿ ಜೀವ-ಗೋಸ್ವಾಮಿಯು ಶ್ರೇಷ್ಠತಮನು. ಕೃಷ್ಣಸಾಧಸೆಂಬ ಭಾಗವತನು ಭಗವತ್ಪ್ರೇಮದಲ್ಲಿ ಮೈಮರೆದವನಾಗಿ ಎಲ್ಲೆಲ್ಲಿಯೂ ಶ್ರೀಹರಿಯನ್ನು ಹುಡುಕುತ್ತ ಅಲೆಯುತ್ತಿದ್ದನು. ಭಟ್ಟಗೋಸ್ವಾಮಿಯು ರಾಧಾಮಾಧವನ ಮೂರ್ತಿಯು ಮುಂದೆ ಭಜನ-ಪೂಜನಗಳಿಗೆಂದು ಕುಳಿತು ಈಶ್ವರೀಯ ಪ್ರೇಮದಿಂದ ಎಚ್ಚರದಪ್ಪಿ ಹೋಗುತ್ತಿದ್ದನು. ಇನ್ನೂ ಅನೇಕ ಭಕ್ತರು ಕೃಷ್ಣಪ್ರೇಮದಿಂದ ಮತ್ತರಾಗಿ ಮನಃಪೂತ ಆಚರಣೆಯಲ್ಲಿದ್ದರು.

ತುಳಸೀದಾಸನು ವೃಂದಾವನಕ್ಕೆ ಬಂದು ನೋಡಿದನು; ಎಲ್ಲೆಲ್ಲಿಯೂ ರಾಧಾ-ಕೃಷ್ಣರ ಜಯಜಯಕಾರವೆ; ಎಲ್ಲಿ ನೋಡಿದರೂ ರಾಧಾ-ಕೃಷ್ಣರ ಪೂಜೆ; ರಾಧಾ-ಕೃಷ್ಣರ ಗುಣಕೀರ್ತನ; ಎಲ್ಲಿ ಹೋದರೂ ರಾಧಾ-ಕೃಷ್ಣರ ಪ್ರೇಮಮಹಿಮೆಯನ್ನು ಬಣ್ಣಿಸುವ ಪುರಾಣ-ಪುಣ್ಯಕಥೆಗಳು. ಎಲ್ಲಿ ಸಂಚರಿಸಿದರೂ, ರಾಧಾ-ಕೃಷ್ಣರ ಭಜನೆ, ಪೂಜೆ, ಮಂಗಳಾರತಿ. ತುಳಸೀದಾಸನ ಉಪಾಸ್ಯದೇವನು ಕೃಷ್ಣನಲ್ಲ; ಆದರೆ ವೃಂದಾವನದಲ್ಲಿ ಕೃಷ್ಣನ ವಿಗ್ರಹಗಳೇ ವಿಗ್ರಹ. ರಾಮನ ಮೂರ್ತಿಯೆ ಇಲ್ಲ. ತುಳಸೀದಾಸನೇನು ಮಾಡಬೇಕು? ಇವನು ಒಂದು ಸ್ಥಳವನ್ನು ವಾಸಕ್ಕಾಗಿ ಗೊತ್ತುಮಾಡಿಕೊಂಡು, ಸದಾ ಅಲ್ಲಿಯೇ ಇದ್ದು, ರಾಮನಾಮದ ಭಜನೆಮಾಡಹತ್ತಿದನು. ಕಿವಿಗಳು ಗಡಚಿಕ್ಕುವಂತೆ ಇವನು ಸ್ವರಗೈಯುತ್ತಿದ್ದನು. ಯಾಕಂದರೆ, ಹೊರಗೆ ಉಚ್ಚರಿತವಾಗುತ್ತಿದ್ದ ರಾಧಾ-

ಕೃಷ್ಣರ ಜಯಜಯಕಾರವು ತನ್ನ ಕಿವಿಗೆ ಬೀಳಬಾರದೆಂಬುದು ಇವನ ಉದ್ದೇಶವಾಗಿತ್ತು.

ಜೀವಗೋಸ್ವಾಮಿಗೆ ಈ ಸುದ್ದಿಯು ತಿಳಿಯಿತು. ಇವನು ಒಂದು ದಿನ ಸಾಯಂಕಾಲದಲ್ಲಿ ಶಿಷ್ಯಸಮೇತನಾಗಿ ತುಳಸೀದಾಸನನ್ನು ಕಾಣಲಿಕ್ಕೆ ಬಂದನು. ತುಳಸೀದಾಸನಿಗೆ ಜೀವಗೋಸ್ವಾಮಿಯ ಪರಿಚಯವಿರಲಿಲ್ಲ. ಜೀವಗೋಸ್ವಾಮಿಗೆ ತುಳಸೀದಾಸನ ಗುರುತಿರಲಿಲ್ಲ. ಈ ಮೊದಲು ಒಬ್ಬರನ್ನೊಬ್ಬರು ನೋಡಿದ್ದಿಲ್ಲ; ಆದರೆ ತುಳಸೀದಾಸನು ಜೀವಗೋಸ್ವಾಮಿಯ ಮಹತಿಯನ್ನು ಜನಮುಖದಿಂದ ಕೇಳಿದವನಾಗಿದ್ದನು.

ತುಳಸೀದಾಸನು ತನ್ನ ವಾಸಸ್ಥಳದಲ್ಲಿ ಉಚ್ಚಸ್ವರದಿಂದ ರಾಮಭಜನೆ ಮಾಡುತಲಿದ್ದನು. ಜೀವಗೋಸ್ವಾಮಿಯೂ ರಾಮಭಜನೆಯಲ್ಲಿ ಪ್ರವೃತ್ತನಾದನು. ಇಬ್ಬರೂ ರಾಮನಾಮದಲ್ಲಿ ಮೆಯ್ಮರೆದರು. ಇಬ್ಬರ ಕಣ್ಣುಗಳಿಂದಲೂ ಪ್ರೇಮಾಶ್ರುಗಳುದಿರಹತ್ತಿದವು. ದರ್ಶಕರು ಬೆರಗುಗೊಂಡು ಈ ಭಕ್ತಶಿಖಾಮಣಿಗಳ ಭಗವತ್ಪ್ರೇಮದ ಆಟವನ್ನು ನೋಡುತಲಿದ್ದರು. ತುಳಸೀದಾಸನು ಮೊದಲು ಎಚ್ಚತ್ತನು. ಶಾಂತನಾಗಿ ತನ್ನೆದುರಿನಲ್ಲಿ ನಡೆದಿದ್ದ ಸಂಗತಿಯನ್ನು ನೋಡಿದನು. ಜೀವಗೋಸ್ವಾಮಿ ಯಾರೆಂಬುದನ್ನೂ, ಅವನ ಭಕ್ತಿಯ ಹೆಚ್ಚಳವನ್ನೂ ತರ್ಕಿಸಲಿಕ್ಕೆ ತುಳಸೀದಾಸನಿಗೆ ತಡವಾಗಲಿಲ್ಲ. ತುಳಸೀದಾಸನು ಕೂಡಲೆ ಜೀವಗೋಸ್ವಾಮಿಯ ಪಾದಗಳ ಮೇಲೆಬಿದ್ದನು. ಜೀವಗೋಸ್ವಾಮಿಯು ಭಜನೆಯಲ್ಲಿಯ ತನ್ಮಯತೆಯಿಂದ ಎಚ್ಚತ್ತು ತುಳಸೀದಾಸನನ್ನು ನೋಡಿದನು. ಹಿಡಿದೆಬ್ಬಿಸಿ, ತಾನು ನಮಸ್ಕಾರ ಮಾಡಿ, ಇಂತು ನುಡಿದನು:—ನೀನು ಪರಮ ವೈಷ್ಣವನು. ನಮ್ಮೆಲ್ಲರಿಗೆ ಪೂಜ್ಯನು; ನಾನು ನಿನಗೆ ಶತಶಃ ವಂದಿಸುತ್ತೇನೆ.

ತುಳಸೀದಾಸನು ಸಂಕೋಚಗೊಂಡವನಾಗಿ:—ಭಕ್ತ ಶಿಖಾಮಣಿಗಳೆ, ನನ್ನನ್ನು ಹೊಗಳಿ, ನನಗೆ ಲಜ್ಜೆಯುಂಟಾಗುವಂತೆ ಮಾಡಬೇಡಿರಿ. ತಾವು ಈ ಭಾರತವರ್ಷದಲ್ಲೆಲ್ಲ ಕಡೆಗೂ ಪಂಡಿತ ಶ್ರೇಷ್ಠರೆಂದೂ, ಭಕ್ತ

ಚೂಡಾಮಣಿಗಳಿಂದಲೂ ಖ್ಯಾತಿಯನ್ನು ಪಡೆದಿರುವಿರಿ! ನಾನು ನಿಮ್ಮ ದಾಸಾನುದಾಸನಾಗಲಿಕ್ಕೂ ಅಪಾತ್ರನು! ಎಂದು ನುಡಿದನು.

ಜ್ಞಾನಿಯೆ, ಯಾರು ಯಾರ ದಾಸರು! ನಾವೆಲ್ಲರೂ ಆ ಶ್ರೀ ಹರಿಯ ಚರಣದಾಸರು. ಮೂರು ಲೋಕಗಳನ್ನೂ ಉದ್ಧರಿಸಬಲ್ಲ ಆ ರಘುರಾಮನು ನಮ್ಮೆಲ್ಲರ ಪಿತನು, ಪ್ರಭು. ನಾವೆಲ್ಲರೂ ಅವನ ಪಾದ ಸೇವಕರು. ಜೀವಗೋಸ್ವಾಮಿಯು ಹೇಳಿದನು.

ತಮ್ಮ ಮುಖದಿಂದ ರಾಮನಾಮವನ್ನು ಕೇಳಿ ಪರಮಾನಂದಿತನಾದೆನು. ಇಲ್ಲಿ ಎಲ್ಲಿ ನೋಡಿದರೂ ಕೃಷ್ಣನಾಮದ ಜಯಜಯಕಾರವು ನಡೆದಿದೆ. ತುಳಸೀದಾಸನು ನುಡಿದನು.

ಕೃಷ್ಣನು ನಮ್ಮ ಹೃದಯವನ್ನಾಕರ್ಷಣ ಮಾಡಿದ್ದಾನೆ. ರಾಮನು ನಮ್ಮ ಹೃದಯವನ್ನು ರಮಿಸಿದ್ದಾನೆ. ರಾಮ-ಕೃಷ್ಣರಲ್ಲಿ ಭೇದವಿದೆಯೆ? ಆ ರಾಮನೇ ಹೆಸರನ್ನೂ ರೂಪವನ್ನೂ ಬದಲಾಯಿಸಿ ಕೃಷ್ಣನಾಗಿ ಬಂದಿದ್ದಾನೆ.

ನೀವು ಹನುಮಂತನ ಪೂಜೆಮಾಡುತ್ತಿರುವಿರಾ? ತುಳಸೀದಾಸನು ಕೇಳಿದನು.

ಮಾಡದೇನು? ಆಂಜನೇಯನ ಮುಖವು ಓಂಕಾರವು. ಬಾಲವು ಪ್ರಕೃತಿಯು. ಆದರ್ಶಭಕ್ತನಾದ ಮಾರುತಿಯು ಪ್ರಸನ್ನನಾದ ಹೊರತು ರಾಮಚಂದ್ರನನ್ನು ಸಂತುಷ್ಟಗೊಳಿಸುವದು ಅಸಾಧ್ಯ!

ಆದರೆ ನೀವು ಸೀತಾರಾಮರ ಭಜನೆ ಮಾಡುವದಿಲ್ಲವಲ್ಲ!

ಸೀತಾರಾಮರ ಭಜನೆ ಮಾಡದಿದ್ದವರು ವೈಷ್ಣವರಲ್ಲ! ಯಾವನು ವೈಷ್ಣವನೋ ಅವನು ಸೀತಾರಾಮರ ಅಥವಾ ರಾಧಾ-ಕೃಷ್ಣರ ಭಜನೆ ಮಾಡಲೇಬೇಕು ಸೀತಾರಾಮ ಹಾಗು ರಾಧಾ-ಕೃಷ್ಣ ಈ ಯುಗಲ ಮೂರ್ತಿಗಳಲ್ಲಿ ಭೇದವಿಲ್ಲ. ಯಾವನಿಗೆ ಯಾವುದು ರುಚಿಸುವುದೋ ಅವನು ಅದನ್ನು ಆಯ್ದುಕೊಳ್ಳಬಹುದು. ಆ ನಾಮವನ್ನು ಪ್ರೀತಿಸ

ಬಹುದು. ಭಜನೆ ಮಾಡಬಹುದು. ವೈಷ್ಣವರಲ್ಲಿ ಕೆಲವರು ಕೃಷ್ಣ ಕೃಷ್ಣನೆಂದು ಭಜನೆ ಮಾಡುತ್ತ ವೇಣುಧರನಾದ ಗೋಪಾಲನನ್ನು ಪೂಜಿಸುವರು. ಉಳಿದವರು ರಾಮರಾಮನೆಂದೆನ್ನುತ್ತ ಧನುರ್ಧಾರಿಯಾದ ರಾಮನನ್ನು ಪೂಜೆಮಾಡುವರು. ಪುರಾಣಪುರುಷನಾದ ಆ ಶ್ರೀ ಹರಿಯು ಇವರೆಲ್ಲರನ್ನೂ ಸಮಾನವಾದ ಸ್ನೇಹದೃಷ್ಟಿಯಿಂದ ನೋಡುವನು. ಸರಿಯಾಗಿ ಪ್ರೀತಿಸುವನು.

ತಮ್ಮ ತಂದೆಯವರು ರಾಮಭಕ್ತರಾಗಿದ್ದರೆಂದು ನಾನು ಕೇಳಿದ್ದೇನೆ.

ಅವರು ಪರಮವೈಷ್ಣವರು. ರಾಮನಾಮದಲ್ಲಿ ಅವರಿಗೆ ಮಿಗಿಲಾದ ಪ್ರೇಮವಿತ್ತು!

ಯಾವ ರೂಪದಲ್ಲಿ ನನ್ನ ಪ್ರೇಮವಿದೆಯೋ ಅಂತಹ ರೂಪವನ್ನು ಇಲ್ಲಿಯ ಯಾವ ವಿಗ್ರಹದಲ್ಲೂ ನಾನು ಕಾಣದಾಗಿರುವೆನು! ತುಳಸೀದಾಸನು ನುಡಿದನು.

ಆಶ್ಚರ್ಯವೇ ಸರಿ! ನಿಜವಾಗಿ ಹೇಳಬೇಕಾದರೆ, ನೀನು ನೋಡುತ್ತಿರುವ ಪ್ರತಿಯೊಂದು ವಿಗ್ರಹದಲ್ಲಿ ನಿನ್ನ ಪ್ರೀತಿಯ ಆ ಮೂರ್ತಿಯು ನಿನಗೆ ಕಾಣಲೇಬೇಕು! ಯಾಕೆಂದರೆ, ಆ ಶ್ರೀ ಹರಿಯು ನಿರ್ಗುಣ, ನಿರಾಕಾರ, ನಿತ್ಯ. ನಾವು ನಮಗೆ ಬೇಕಿದ್ದಂತೆ ಅವನ ರೂಪವನ್ನು ಕಲ್ಪಿಸುವೆವಲ್ಲದೆ, ಅವನಿಗೆ ನಿರ್ದಿಷ್ಟವಾದ ಒಂದು ರೂಪವಿಲ್ಲ!

ತಾವು ಪರಮಜ್ಞಾನಿಗಳು. ಶ್ರೇಷ್ಠತಮಭಕ್ತರು. ತಮ್ಮ ಉಪದೇಶ ಶ್ರವಣದಿಂದ ನಾನು ಧನ್ಯನಾದೆನು! ತುಳಸೀದಾಸನು ಅಂದನು.

ನಾನು ಆ ಶ್ರೀ ಹರಿಯ ಸೇವಕನಷ್ಟೇ ಅಲ್ಲ, ಅವನ ಭಕ್ತರ ದಾಸನೂ ಆಹುದು. ಇದರಿಂದ ನಾನು ನಿಮ್ಮೆಲ್ಲರ ಸೇವಕನೆಂಬುದು ಸಹಜ. ನನ್ನ ಜ್ಞಾನವೂ, ಬುದ್ಧಿಯೂ ಸಾಮಾನ್ಯವಾದದ್ದು. ಇಂತಹ ನಾನು ನಿಮ್ಮಂತಹ ವೈಷ್ಣವರಿಗೆ ಉಪದೇಶ ಮಾಡುವದೇನು?

ನೀವು ಇಂದು ಕರುಣಿಸಿದ ಉಪದೇಶ-ದಾನವು ಸಾಮಾನ್ಯವಾದು ದಲ್ಲ. ನಿಮ್ಮ ಈ ಅನರ್ಘವಾದ ಉಪದೇಶದಿಂದ ನಾನಿಂದು ಭ್ರಾಂತಿ ಯಿಂದ ಬಿಡುಗಡೆ ಹೊಂದಿರುವೆನು. ಮಂದಿರಕ್ಕೆ ಹೋಗಿ ವಿಗ್ರಹದ ದರ್ಶನ ತಕ್ಕೊಂಡು ಬರೋಣ, ನಡೆಯಿರಿ. ತುಳಸೀದಾಸನು ನುಡಿದನು.

ಹತ್ತಿರದಲ್ಲಿಯೇ ಮದನಗೋಪಾಲನ ಗುಡಿಯಿದೆ. ಅಲ್ಲಿಗೆ ಹೋಗೋಣ.

ಎಲ್ಲರೂ ಗುಡಿಯ ಕಡೆಗೆ ನಡೆದರು. ಪೂಜಾರಿಯು ಸಾಯಂ-ಕಾಲದ ಆರತಿಯ ಸೌರಣೆಯಲ್ಲಿದ್ದನು. ವೃಂದಾವನ ನಿವಾಸಿಗಳು ಈ ಆರತಿಯನ್ನು ನೋಡಲಿಕ್ಕೆಂದು ಬರುತಲಿದ್ದರು ಜೀವಗೋಸ್ವಾಮಿಯು ತುಳಸೀದಾಸನನ್ನೂ, ಶಿಷ್ಯರನ್ನೂ ಕರಕೊಂಡು ದೇವಮಂದಿರವನ್ನು ಪ್ರವೇಶಿಸಿದರು. ಪೂಜಾರಿಯು ಇವರನ್ನು ಆದರದಿಂದ ಬರಮಾಡಿ ಕೊಂಡನು. ಜೀವಗೋಸ್ವಾಮಿಯೂ ಇವನ ಶಿಷ್ಯರೂ ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು; ಆದರೆ ತುಳಸೀದಾಸನು ಹೀಗೆ ಮಾಡಲಿಲ್ಲ; ಮೂರ್ತಿಯನ್ನು ಸ್ಥಿರದೃಷ್ಟಿಯಿಂದ ನೋಡುತ್ತ ನಿಂತನು. ಕೆಲಹೊತ್ತಿನ ಮೇಲೆ:—ನನ್ನ ಆ ಧನುರ್ಧರನಾದ ಶ್ರೀ ರಾಮನೆಲ್ಲಿ? ಎಂದು ಕೇಳಿದನು.

ಇವನೇ ನಿನ್ನ ಆ ಶ್ರೀರಾಮನು. ಜೀವಗೋಸ್ವಾಮಿಯು ಹೇಳಿ ದನು.

ಕೈಯಲ್ಲಿ ಧನುರ್ಬಾಣಗಳಿಲ್ಲವಲ್ಲ!

ಚನ್ನಾಗಿ ನೋಡು! ನೀನು ನೋಡುತ್ತಿರುವ ನೋಟವು ದೋಷ ರಹಿತವಿದ್ದರೆ, ನಿನಗೆ ನೀನು ಇಚ್ಛಿಸಿರುವಂತೆ ಕಾಣಲೇಬೇಕು! ಗೋ-ಸ್ವಾಮಿಯು ನುಡಿದನು.

ತುಳಸೀದಾಸನು ಕೈಜೋಡಿಸಿ ಪ್ರಾರ್ಥಿಸಿಕೊಂಡನು: ರಘುರಾಮ,

ದಯದೋರು. ನಿನ್ನ ಈ ದಾಸನಿಗೆ ದರ್ಶನಕೊಡು. ಕೈಯಲ್ಲಿಯ ಕೊಳಲನ್ನು ಬಿಸಾಟಿ, ಧನುರ್ಬಾಣಗಳನ್ನು ತಕ್ಕೊ! ಇಲ್ಲವಾದರೆ ತುಳಸೀ ದಾಸನು ನಿನಗೆ ನಮಸ್ಕರಿಸನು!

ಕೂಡಿದ ಜನರು ಆಶ್ಚರ್ಯದಿಂದ ನೋಡಿದರು. ಮದನಗೋಪಾಲನ ಕೈಯಲ್ಲಿ ಕೊಳಲಿನ ಬದಲು ಧನುರ್ಬಾಣಗಳು! ತುಳಸೀದಾಸನು ಗದ್ಗದಕಂಠನಾಗಿ ಮದನಗೋಪಾಲನ ಚರಣತಲದಲ್ಲಿ ಹೊರಳಾಡಹತ್ತಿದನು. ಆ ಸ್ಥಳವನ್ನು ಪ್ರೇಮಾಶ್ರುಗಳಿಂದ ಆರ್ದ್ರಗೊಳಿಸಿದನು. ಕೆಲ ಹೊತ್ತಿನ ಮೇಲೆ ಎದ್ದು ನಿಂತು ಕೃತಾಂಜಲಿಯಾಗಿ ಸ್ತೋತ್ರ ಮಾಡ ಹತ್ತಿದನು.

ರಾಮಾಯ ರಾಮಚಂದ್ರಾಯ ರಾಮಭದ್ರಾಯ ವೇಧಸೇ |
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ ||

ಭಕ್ತೋತ್ತಮನೆ, ರಘುನಾಥನೇ ಕೃಷ್ಣನು, ಕೃಷ್ಣನೇ ರಘುನಾಥನು ಎಂಬುದನ್ನು ಈಗಲಾದರೂ ಗೊತ್ತುಮಾಡಿಕೊಂಡೆಯಷ್ಟೆ? ಶ್ರೀಹರಿಗೆ ನಿಶ್ಚಿತವಾದ ಒಂದು ರೂಪವಿಲ್ಲ, ಆಕಾರವಿಲ್ಲ. ಭಕ್ತನು ಯಾವ ರೂಪವನ್ನು ಕಲ್ಪಿಸಿ, ಭಕ್ತಿಯ ಬಲದಿಂದ ಬಲವಾಗಿ ಕೂಗುವನೋ ಆಗ ಭಕ್ತಮನೋಭೀಷ್ಟಪೂರ್ಣನಾದ ಆ ಶ್ರೀಹರಿಯು ಆ ರೂಪವನ್ನು ತಾಳಿ ವ್ಯಕ್ತನಾಗುವನು. ಇದರಿಂದ ಶ್ರೀಹರಿಗೆ ಬೇರೆ ಬೇರೆ ರೂಪಗಳನ್ನೂ, ಆಕಾರಗಳನ್ನೂ ಉಂಟುಮಾಡುವವರು ನಾವೆಂಬುದು ನಿಸ್ಸಂದೇಹವಾದದ್ದು. ಭಕ್ತಾಧೀನನಾದ ಆ ಗೋಪೀವಲ್ಲಭನು ನಾವು ಕುಣಿಸಿದಂತೆ ಕುಣಿಯಲೇ ಬೇಕು! ಭಕ್ತಿಯ ಬಲವು ಇಷ್ಟು ಪ್ರಬಲವಾಗಿದೆ! ಜೀವಗೋಸ್ವಾಮಿಯು ಹೇಳಿದನು.

ಮಹಾತ್ಮರೆ, ತಮ್ಮ ಅನುಗ್ರಹದಿಂದ ನಾನಿಂದು ತಿಳಿದವನಾದೆನು! ಜಯ ರಘುರಾಮ! ಜಯ ಮದನ ಗೋಪಾಲ! ತುಳಸೀದಾಸನು ಜಯ ಘೋಷ ಮಾಡಿದನು. ಕೂಡಿದವರೆಲ್ಲರೂ ತುಳಸೀದಾಸನ ಅನುಕರಣ

ಮಾಡಿದರು. ಕೆಲ ಹೊತ್ತು ಗುಡಿಯು ಜಯಘೋಷದಿಂದ ತುಂಬಿ ಹೋಯಿತು. ಮತ್ತೆ ಶಾಂತವಾದ ಬಳಿಕ ತುಳಸೀದಾಸನು ಇಂತು ನುಡಿದನು:-ತಾವು ನಿಜವಾದ ಜ್ಞಾನಿಗಳು; ನಿಜವಾದ ಭಕ್ತರು! ನಾನು ತೋರಿಕೆಯ ಭಕ್ತನು ಮಾತ್ರ!

ಛೆ, ಹೀಗೆ ಮಾತಾಡುವುದುಂಟೆ? ಯಾವನ ಇಚ್ಛೆಯಂತೆ ಮದನ ಗೋಪಾಲನು ರೂಪಪರಿವರ್ತನ ಮಾಡಿಕೊಂಡನೋ ಅವನು ಭಕ್ತಾಗ್ರೇಸರನಲ್ಲದೆ ಬೇರೇನು? ಗೋಸ್ವಾಮಿಯು ನುಡಿದನು.

ಆರತಿಯು ಆರಂಭವಾಯಿತು; ಝಾಂಗಟೆ-ಶಂಖ-ಘಂಟೆಗಳು ಬಾರಿಸಹತ್ತಿದವು. ಎಲ್ಲರೂ ಸ್ತಬ್ಧರಾಗಿ ವಿಗ್ರಹದ ಕಡೆಗೆ ನೋಡುತ್ತ ನಿಂತರು. ಆ ಒಂದೇ ವಿಗ್ರಹವು ತುಳಸೀದಾಸನಿಗೆ ಶ್ರೀರಾಮನಾಗಿಯೂ, ಉಳಿದವರಿಗೆ ಮದನಗೋಪಾಲನ ಮೂರ್ತಿಯಾಗಿಯೂ ತೋರಿತು.

ಆರತಿಯು ಮುಗಿಯಿತು; ಮಂತ್ರಪುಷ್ಪವಾಯಿತು. ಎಲ್ಲರೂ ತೀರ್ಥ-ಪ್ರಸಾದಗಳನ್ನು ಸ್ವೀಕರಿಸಿ ಗುಡಿಯಿಂದ ಹೊರಬಿದ್ದರು. ಅಂಗಣಕ್ಕೆ ಬಂದ ಬಳಿಕ ತುಳಸೀದಾಸನು ಗೋಸ್ವಾಮಿಗೆ ಕೈಯಿಂದ ಆರತಿ ಮಾಡಿ:—ಮಹಾತ್ಮರೆ, ಸತ್ಸಹವಾಸವು ಅತ್ಯಂತ ಫಲಪ್ರದವು. ಸತ್ಸಹವಾಸಕ್ಕೆ ಪೂರ್ವಸುಕೃತವು ಬೇಕು. ನನ್ನ ಪೂರ್ವಜನ್ಮದ ಪುಣ್ಯದ ಬಲದಿಂದ ಇಂದು ನನಗೆ ತಮ್ಮ ದರ್ಶನವಾಯಿತು. ನಾನು ಕೃತಾರ್ಥನಾಗಿ ಹೋದೆನು. ನನ್ನ ಪಾಪಗಳೆಲ್ಲವೂ ನಾಶವಾಗಿ ಹೋದವು; ಎಂದು ಹೇಳಿ ವಂದಿಸಿದನು.

ಗೋಸ್ವಾಮಿಯು ತುಳಸೀದಾಸನನ್ನು ಎಬ್ಬಿಸಿ:—ನೀನು ಪರಮ ಭಕ್ತನು; ನಿನ್ನ ದರ್ಶನದಿಂದ ಇಂದು ನನಗಾದ ಆನಂದಕ್ಕೆ ಮೇರೆಯಿಲ್ಲದಾಗಿದೆ, ಎಂದು ನುಡಿದನು.

ತುಳಸೀದಾಸನು ವೃಂದಾವನದಲ್ಲಿ ಕೆಲವು ದಿವಸ ಇದ್ದು, ಮತ್ತೆ ಚಿತ್ರಕೂಟ ಪರ್ವತಕ್ಕೆ ಹೋದನು.

---

# ೧೦ ವೇಷಾಂತರದಲ್ಲಿ ಶ್ರೀರಾಮ.

ತುಳಸೀದಾಸನು ಚಿತ್ರಕೂಟಪರ್ವತಕ್ಕೆ ಹೋಗಿ, ತಾನು ಮೊದಲು ಯಾವ ಗುಹೆಯಲ್ಲಿ ಕುಳಿತು ತಪಸ್ಸು ಮಾಡಿದ್ದನೊ ಆ ಗುಹೆಯನ್ನು ಹುಡುಕಿದನು; ಆದರೆ ಅದು ಕಣ್ಣಿಗೆ ಬೀಳಲಿಲ್ಲ. ಪರ್ವತದ ನೋಟವೂ, ಗವಿಯ ಸುತ್ತು-ಮುತ್ತಲಿನ ಪ್ರದೇಶವೂ ಮೊದಲಿನಂತೆಯೇ ಇತ್ತು; ಆದರೆ ಗುಹೆಯು ಮಾತ್ರ ಇರಲಿಲ್ಲ. ತುಳಸೀದಾಸನು ಇನ್ನು ತಾನು ಗುಹೆಯಲ್ಲಿ ವಾಸವಾಗುವುದು ಗುರುವಿನ ಮನಸ್ಸಿನಲ್ಲಿಲ್ಲವೆಂದು ಭಾವಿಸಿದನು. ಪರ್ವತವನ್ನು ಇಳಿಯಹತ್ತಿದನು. ಕೆಲವು ದಿನಗಳ ಹಿಂದೆ ರಾಮ-ಲಕ್ಷ್ಮಣರು ಯಾವ ಸ್ಥಳದಲ್ಲಿ ಸೈನಿಕರ ವೇಷದಿಂದ ಕಾಣಿಸಿಕೊಂಡಿದ್ದರೊ ಆ ಸ್ಥಳಕ್ಕೆ ಬಂದನು. ಅತ್ತಿತ್ತ ನೋಡಿದನು. ಸಮೀಪದಲ್ಲಿ ವಿಶಾಲವಾದ ಬಂಡೆಗಲ್ಲೊಂದಿರುವುದು ಕಾಣಿಸಿತು. ಅದು ಕೂಡುವುದಕ್ಕೆ ಒಳ್ಳೇ ಅನುಕೂಲವಾದದ್ದಿತು. ತುಳಸೀದಾಸನು ಆ ಬಂಡೆಗಲ್ಲ ಹತ್ತರ ಹೋಗಿ, ಅದರ ಮೇಲೆ ತನ್ನ ಜೋಳಿಗೆಯನ್ನಿರಿಸಿದನು. ಸುತ್ತಲೂ ದೃಷ್ಟಿಯನ್ನು ಚಲ್ಲಿದನು. ಪರ್ವತದ ಶೋಭೆಯು ಮೊದಲಿಗಿಂತಲೂ ಹೆಚ್ಚಿರುವಂತೆ ಅವನಿಗೆ ತೋರಿತು. ಅಲ್ಲಲ್ಲಿ ವಿಚಿತ್ರ ವರ್ಣದ ನಾನಾ ಆಕಾರಗಳ ಲತಾಪತ್ರಗಳು; ಹಲವು ವಿಧಗಳಾದ ಅನೇಕ ವರ್ಣಗಳ ಬೇರೆಬೇರೆ ಆಕಾರಗಳ ಸುಗಂಧಪೂರ್ಣ ಪುಷ್ಪಗಳು. ಇವೆಲ್ಲವುಗಳ ಸಮಷ್ಟಿಯಿಂದ ಸುತ್ತುಮುತ್ತಲಿನ ನೋಟವು ಅತ್ಯಂತ ರಮಣೀಯವಾಗಿತ್ತು. ತುಳಸೀದಾಸನು ಉತ್ತಮೋತ್ತಮಗಳಾದ ಪತ್ರ-ಪುಷ್ಪಗಳನ್ನು ಆಯ್ದುತಂದು ರಘುರಾಮನಿಗೆ ಸಮರ್ಪಿಸಬೇಕೆಂದು

ಅಪೇಕ್ಷಿಸಿದನು. ತನ್ನ ಈ ಆಕಾಂಕ್ಷೆಯು ಮೇರೆಗೆ ಅವನು ಕೆಲಸಕ್ಕೆ ತೊಡಗಿದನು. ಎಲೆ-ಹೂವುಗಳನ್ನು ಸಂಗ್ರಹಿಸಹತ್ತಿದನು. ಎಷ್ಟು ಹರಿದರೂ ಅವನ ಮನಸ್ಸು ತಣಿಯುಲಿಲ್ಲ. ಹರಿಯುತ್ತ ನಡೆದಂತೆ ಹೆಚ್ಚು ಹೆಚ್ಚು ಉತ್ತಮ ಕುಸುಮಗಳು ಅವನ ಕಣ್ಣಿಗೆ ಬೀಳಹತ್ತಿದವು. ತುಳಸೀದಾಸನು ಮನದಣಿಯುವಂತೆ ಪತ್ರ-ಪುಷ್ಪಗಳನ್ನು ಹರಿದುಕೊಂಡು ಬಂದು ಶಿಲಾಸನದ ಮೇಲೆ ವಿಶ್ರಮಿಸಿದನು. ಅವುಗಳನ್ನು ಒಕ್ಕಟ್ಟಿಗೆ ಇರಿಸಿ ಮಾಲೆಯನ್ನು ರಚಿಸಹತ್ತಿದನು ಅವನ ಕಣ್ಣುಗಳು ಪ್ರೇಮಾಶ್ರು ಪೂರ್ಣವಾದುವು. ತುಳಸೀದಾಸನು ಆಶ್ರುಸಿಕ್ತ ಹೂಗಳನ್ನು ರಾಮನಾಮವನ್ನು ಜಪಿಸುತ್ತ ಸರದಲ್ಲಿ ಸೇರಿಸಹತ್ತಿದನು. ಮಾಲೆಯು ಪೂರ್ಣವಾದ ಬಳಿಕ ಅದನ್ನು ಒಂದು ಕಡೆಯಲ್ಲಿರಿಸಿದನು. ತರುವಾಯ ಜೋಳಿಗೆಯಿಂದ ಗಂಧದ ಕೊರಡನ್ನೂ, ಚಂಬುವನ್ನೂ ಹೊರದೆಗೆದನು. ಎದ್ದು ಹೋಗಿ ತಂಬಿಗೆಯಲ್ಲಿ ನೀರುತುಂಬಿಕೊಂಡು ಬಂದನು. ಗಂಧವನ್ನು ತೆಯ್ದನು. ಮಾಲೆಯನ್ನು ಕೈಯಲ್ಲಿ ತಕ್ಕೊಂಡು ಅದರಲ್ಲಿಯ ಹೂಗಳಿಗೆ ಗಂಧವನ್ನು ತೊಡೆದನು. ಬಳಿಕ ಮಾಲೆಯನ್ನು ಅತ್ತಿತ್ತ ಹೊರಳಿಸಿ ಹೇಗಾಗಿದೆಯೆಂಬದನ್ನು ಪರೀಕ್ಷಿಸಿದನು. ಪ್ರತಿಯೊಂದು ಹೂವಿಗೆ ಗಂಧವು ಹತ್ತಿದೆಯೋ ಇಲ್ಲವೋ ಎಂಬುದನ್ನು ನೋಡಿದನು. ಮಾಲೆಯು ಮನಸಿನಂತೆ ಪೂರ್ಣವಾಗಿರುವುದನ್ನು ನೋಡಿ ಸಮಾಧಾನಬಟ್ಟನು. ಈ ಸಮಯದಲ್ಲಿ ಆ ರಘುಕುಲತಿಲಕನು ಇಲ್ಲಿಗೆ ಆಗಮಿಸಿದರೆ.....

ತುಳಸೀದಾಸನ ಆನಂದಕ್ಕೆ ಮೇರೆಯೇ ಉಳಿಯುತ್ತಿರಲಿಲ್ಲ; ಆದರೆ ಆ ಶ್ರೀರಾಮನೆಲ್ಲಿ? ಅವನಿಗೆ ತುಳಸೀದಾಸನ ಈ ಉತ್ಕಂಠೆಯು ತಿಳಿವುದು ಹೇಗೆ? ಅವನನ್ನು ಯಾರು ಇಲ್ಲಿಗೆ ಕರೆತರಬೇಕು? ಅವನನ್ನು ಕರಕೊಂಡು ಬರಲಿಕ್ಕೆ ಯಾರನ್ನು ಕಳುಹಬೇಕು? ಅವನೆಲ್ಲಿರುವನು? ತುಳಸೀದಾಸನು ಹಲವು ವಿಧಗಳಿಂದ ಆಲೋಚಿಸಿದನು. ಯಾವ ಆಲೋಚನೆಯೂ ಬಗೆಹರಿಯಲಿಲ್ಲ. ಮನಸ್ಸಿನ ಕೋರಿಕೆಯು ಅಳಿಯಲಿಲ್ಲ

ಅವನು ಮೇಲಿಂದ ಮೇಲೆ ಇಂತು ಆಲೋಚಿಸುವನು:. ಇಂದು ಆ ರಾಘವನು ಇಲ್ಲಿಗೆ ಬರಲೇಬೇಕು. ನಾನವನಿಗೆ ಈ ಮಾಲೆಯನ್ನು ಹಾಕಿ, ಆ ಮಂಗಳಾಕಾರನ ಮನೋಹರ ಮೂರ್ತಿಯನ್ನು ಕಣ್ತುಂಬ ನೋಡಲೇಬೇಕು. ಇಲ್ಲವಾದರೆ ನನ್ನ ಈ ಕಣ್ಣುಗಳು ನಿರರ್ಥಕವಾದವುಗಳು. ನಾನು ಮನುಷ್ಯನಾಗಿ ಹುಟ್ಟಿರುವುದು ವ್ಯರ್ಥ! ತುಳಸೀದಾಸನು ಕೆಲ ಕಾಲ ಸುಮ್ಮನಿದ್ದು ಮತ್ತೆ ಆಲೋಚಿಸುತ್ತಿದ್ದನು:— ಆ ರಘುರಾಮನಿಗೆ ನನ್ನ ಇಚ್ಛೆಯನ್ನು ಪೂರ್ಣಮಾಡುವುದು ಅಸಾಧ್ಯವೆ? ಅಘಟಿತ ಘಟನೆಗಳನ್ನು ಲೀಲಾಮಾತ್ರದಿಂದ ಘಟಿಸಬಲ್ಲ ಆ ಇನಕುಲತಿಲಕನು ಬೇಕಾದಾಗ ಬೇಕಾದ ಕೆಲಸವನ್ನು ಮಾಡಬಲ್ಲನು! ಹೀಗಿರಲು ಅವನು ನನ್ನ ಕೂಗನ್ನು ಕೇಳಿ, ಇಲ್ಲಿಗೇಕೆ ಬರಬಾರದು? ನಾನು ಸಫಲ ಮನೋರಥನಾಗುವುದು ಅವನಿಗೆ ಬೇಡವೆ? ನಾನು ಸುಖಿಯಾಗಬೇಕೆಂದು ಅವನು ಇಚ್ಛಿಸುತ್ತಿರಲಿಕ್ಕಿಲ್ಲವೆ? ಅವನು ನನ್ನನ್ನು ಪ್ರೀತಿಸುವದಿಲ್ಲವೆ? ನಾನು ಅವನನ್ನು ಬಹಳವಾಗಿ ಪ್ರೀತಿಸಿ, ರಾಮ ರಾಮ ಎಂದು ಸದಾ ಧ್ಯಾನಿಸುತ್ತಿರುವಾಗ, ಅವನು ನನ್ನನ್ನು ತಿರಸ್ಕರಿಸುವನೆ? ಅವನೂ ರತ್ನಾವಳಿಯಂತೆ.......

ಅವಳು ಸಾಮಾನ್ಯ ಹೆಂಗಸು! ನೀನು ಪರಮ ಪುರುಷ! ಅವಳು ಮಾಯಾವೃತಳು, ನೀನು ಮಾಯಾತೀತನು! ಅವಳನ್ನು ನಂಬಿದುದರಿಂದುಂಟಾದ ಗತಿಯು ನಿನ್ನನ್ನು ನಚ್ಚುವದರಿಂದಾಗದೆಂದೇ ಭಾವಿಸಿದ ನಾನು ಎಲ್ಲರನ್ನೂ ತೊರೆದು ನಿನ್ನನ್ನು ಮೊರೆ ಹೊಕ್ಕಿದ್ದೇನೆ. ಭಕ್ತವತ್ಸಲ, ನೀನೆಲ್ಲಿ? ಆಶ್ರಿತ ಪಾಲಕ, ನೀನೆಲ್ಲಿರುವೆ? ಅನಾಥರ ನಾಥ, ಆಗಮಿಸು! ದಯಾಮಯ, ದಯಗೋರು! ಆಗಮಿಸಿ ದರ್ಶನ ಕೊಡು! ಅತೃಪ್ತತೆಯ ಹಾ ಹಾ ಕಾರದಿಂದ ತಲ್ಲಣಗೊಂಡಿರುವ ನನ್ನೀ ಹೃದಯವನ್ನು ಶಾಂತಗೊಳಿಸು!....ತುಳಸೀದಾಸನಿಂದ ಮುಂದೆ ಮಾತಾಡಲಿಕ್ಕಾಗಲಿಲ್ಲ. ಅವನು ಕೆಲ ಹೊತ್ತು ಸುಮ್ಮನಿದ್ದನು. ಬಳಿಕ ಮಾಲೆಯನ್ನು ಬಳಿ

ಬಿಲ್ವಿಯ ಪತ್ರ ಪುಷ್ಪಗಳ ರಾಶಿಯ ಮೇಲಿರಿಸಿ, ಯುಕ್ತಕರನಾಗಿ ಕುಳಿತು ನೀರವತೆಯಿಂದ ಪ್ರಾರ್ಥನೆ ಮಾಡಹತ್ತಿದನು. ಭಾವ ವಿಹ್ವಲನಾದ ಅವನ ಕಣ್ಣುಗಳಿಂದ ಭರದಿಂದ ಅಶ್ರುಗಳುದಿರಹತ್ತಿದವು. ಎದೆಯು ತೊಯ್ದಿತು. ಉತ್ತರೀಯವು ನೆನೆಯಿತು. ಕುಳಿತಿದ್ದ ಶಿಲೆಯು ಅಶ್ರುಮಂಡಿತವಾಯಿತು. ತುಳಸೀದಾಸನ ರೋದನಕ್ಕೆ ವಿರಾಮವಿರಲಿಲ್ಲ. ಹೀಗೆ ಅವನು ಅಳುತ್ತಿರುವಾಗ ದೂರದಲ್ಲಿ ಮನೋಹರವಾದ ಸ್ವರವಾಗುತ್ತಿರುವಂತೆ ಅವನಿಗೆ ಭಾಸವಾಯಿತು. ತುಳಸೀದಾಸನು ರೋದನ ನಿಲ್ಲಿಸಿ, ಕಣ್ಣುಗಳನ್ನು ಒರಿಸಿಕೊಂಡು, ಆ ಕಡೆಗೆ ನೋಡಿದನು. ದೂರದಲ್ಲಿ ಯಾರೋ ಕೊಳಲೂದುತ್ತಿರಬೇಕೆಂದು ಅವನಿಗೆ ಅನಿಸಿತು; ಆದರೆ ಕಣ್ಣಿಗೆ ಏನೂ ಕಾಣಲಿಲ್ಲ. ತುಳಸೀದಾಸನು ಹೆಚ್ಚು ಲಕ್ಷ್ಯವಿಟ್ಟು ನೋಡಹತ್ತಿದನು ಸ್ವರವು ಬರಬರುತ್ತ ಸಮೀಪಿಸ ನಡೆದಿದೆಯೆಂದು ಅವನಿಗೆ ಅನಿಸಹತ್ತಿತು. ಅವನ ಕುತೂಹಲತೆಗೆ ಮೇರೆಯಿಲ್ಲದಾಯಿತು ಆ ಧ್ವನಿಯು ಸಮೀಪಿಸಿದಂತೆ ತುಳಸೀದಾಸನು ಅದು ಕೊಳಲಿನ ಸ್ವರವಲ್ಲವೆಂದೂ ಯಾವನೋ ಗಾಯಕನು ಹಾಡುತ್ತಿರಬೇಕೆಂದೂ ಗೊತ್ತುಮಾಡಿಕೊಂಡನು; ಆದರೆ ಹಾಡುವವನು ಕಾಣಿಸಲಿಲ್ಲ. ಕ್ರಮವಾಗಿ ಸ್ವರವು ತೀರ ಹತ್ತರದಲ್ಲಿಯೇ ಇರುವಂತೆ ತುಳಸೀದಾಸನಿಗೆ ಭಾಸವಾಗಹತ್ತಿತು. ಅವನು ಚಿತ್ತಗೊಟ್ಟು ಕೇಳಿ, ಪದ್ಯದ ಅರ್ಥವನ್ನು ಗ್ರಹಿಸಹತ್ತಿದನು.

ಆ ರಾಮಂ ಸಲೆ ಸುಖದಂ|
ಶ್ರೀ ರಾಮಂ ಭಕ್ತಜನ ಮನೋರಥ ಪೂರ್ಣಂ||

ಹೀಗಿದ್ದರೆ, ರಘುರಾಮನೇ ನೀನೆಲ್ಲಿರುವಿ? ಬಾ, ಬೇಗ ಬಾ. ತುಳಸೀದಾಸನು ಕೂಗಿದನು.

ಭೋ ರಾಮನೆಂದು ಭಕ್ತಂ|
ಈ ರಾಮಂ ಕರೆಯುತಿರಲು ಭಾವಿಸಿ ಬರುವಂ|| ೧ ||

ತುಳಸೀದಾಸನು ಮತ್ತೆ ಕೂಗಿದನು:— ಶ್ರೀ ರಾಮನೇ, ಹೀಗಿ

ದ್ದರೆ ಏಕೆ ಬರಲೊಲ್ಲೆ? ನನ್ನ ಕೂಗು ನಿನಗೆ ಕೇಳಲೊಲ್ಲದೇನು? ವಿರಹಾಕುಲೆಯಾದ ರಮಣಿಯು ಚಿರಪ್ರವಾಸಿಯಾದ ಪತಿಯ ಮಾರ್ಗಪ್ರತೀಕ್ಷೆಮಾಡುತ್ತಿರುವಂತೆ ನಾನು ನಿನ್ನ ದಾರಿಯನ್ನು ಕಾಯುತ್ತಿದ್ದೇನೆ! ಸಮುದ್ರದ ತಳದಲ್ಲಿಯ ಸಿಂಪು ಸ್ವಾತಿಯ ಮಳೆಯ ಹನಿಯ ಹಾದಿಯ ನೋಡುತ್ತಿರುವಂತೆ ನಾನು ನಿನ್ನ ಬರುವನ್ನು ನಿರೀಕ್ಷಿಸಿ ಕೊಂಡಿದ್ದೇನೆ!

ತುಳಸೀದಾಸನಿಗೆ ಉತ್ತರವು ದೊರೆಯಲಿಲ್ಲ ಗಾಯನದ ಸ್ವರವು ನಿಂತು ಹೋಯಿತು; ಗಾಯಕನಂತೂ ಕಾಣಲೇ ಇಲ್ಲ. ತುಳಸೀದಾಸನು ಉದ್ಭ್ರಾಂತನಾಗಿ ಸುತ್ತಲೂ ನೋಡಿದನು. ಮೇಲೆ ಕೆಳಗೆ ನಿರುಕಿಸಿದನು ಎಲ್ಲವೂ ಶೂನ್ಯ. ತುಳಸೀದಾಸನ ಸ್ಥಿತಿಯು ತೀರ ವಿಚಿತ್ರ. ಮತ್ತೆ ಅವನು ಬೇಡಿಕೊಳ್ಳಹತ್ತಿದನು:—"ನಾಥನೆ, ಬಾ; ಬೇಗ ಬಾ. ನಾನು ಯಾರನ್ನು ಕಂಡು ಸಮಾಧಾನ ಪಡಲಿ? ನಾನು ಯಾರೊಡನೆ ಮಾತಾಡಿ ತೃಪ್ತನಾಗಲಿ? ನನಗೆ ನಿನ್ನ ಹೊರತು ಅನ್ಯನು ಬೇಡ! ನನಗೆ ತಾಯಿಯು ನೀನೆ; ತಂದೆಯೂ ನೀನೆ; ಬಂಧುಬಳಗವೂ ನೀನೆ. ಪ್ರಿಯನೆ, ನನಗೆ ನಿನ್ನ ಹೊರತು ಬೇರೆ ಯಾರೂ ಇಲ್ಲ! ಅನನ್ಯಭಾವದಿಂದ ಆರ್ತಸ್ವರದಿಂದ ನಾನು ಕೂಗಿಕೊಳ್ಳುತ್ತಿದ್ದೇನೆ. ಬಾ; ಬೇಗ ಬಾ. ದರ್ಶನ ಕೊಡು! ನಿನ್ನನ್ನು ಮನದಣಿಯುವಂತೆ ನೋಡುವೆನು. ನಿನ್ನೊಡನೆ ಮನಬಿಚ್ಚಿ ಮಾತಾಡುವೆನು. ಬಹಳವಾಗಿ ಮಾತಾಡಬೇಕೆಂದಿದ್ದೇನೆ; ಆದರೆ ಯಾಚಕನು ನಾನೆಂದು ಭಾವಿಸಿ, ಹತ್ತಿರ ಬರಲಿಕ್ಕೆ ಹಿಂದೆಗೆಯದಿರು! ಯಾಕೆಂದರೆ, ಯಾಚನೆಮಾಡುವವನು ನಾನಲ್ಲ. ನಾನು ನಿನ್ನ ಹತ್ತಿರ ಏನನ್ನೂ ಬೇಡಿಕೊಳ್ಳುವದಿಲ್ಲ. ನನ್ನ ಅಭಾವ-ಅಭಿಯೋಗಗಳನ್ನು ದೂರಿಕೊಂಡು ನಿನ್ನನ್ನು ತೊಂದರೆಗೊಳಿಸುವುದಿಲ್ಲ. ಬೇಡಬಾರದ್ದನ್ನು ಬೇಡಿ ನಿನ್ನನ್ನು ಸಿಟ್ಟಿಗೆಬ್ಬಿಸುವುದಿಲ್ಲ. ನನಗೆ ಮತ್ತೇನೂ ಬೇಕಿಲ್ಲ. ಕೇವಲ ನೀನು ಮಾತ್ರ ಬೇಕು! ನೋಡುವೆನು; ಮಾತಾಡುವೆನು; ಮಾತಾಡಿಸುವೆನು; ಮಾತು ಕೇಳುವೆನು! ಹಾಡುವೆನು; ನಿನ್ನನ್ನು

ಹಾಡಹಚ್ಚಿ ಗಾಯನ ಕೇಳುವೆನು! ನಾವಿಬ್ಬರೇ ಇಬ್ಬರು! ಅನ್ಯನೊಬ್ಬನೂ ಇಲ್ಲಿರುವುದು ಬೇಡ! ಇಬ್ಬರೇ ನಿಸ್ಸಂಕೋಚವೃತ್ತಿಯಿಂದಿರೋಣ. ಪರಸ್ಪರ ಮುಖಾವಲೋಕನ ಮಾಡೋಣ. ಸರಸ ಸಲ್ಲಾಪಗಳನ್ನಾಡೋಣ. ನಗೋಣ, ಕಲಿಯೋಣ. ಆಹಾ ಅದೆಂತಹ ಸುಖಕರ! ಅದೆಂತಹ ಪ್ರಿಯಕರ! ಭಕ್ತವತ್ಸಲ, ಅನಂತ ಬ್ರಹ್ಮಾಂಡದಲ್ಲಿ ನಾವೀರ್ವರೇ ಆಗಿ, ಬಾಹ್ಯಸೃಷ್ಟಿಯನ್ನು ಮರೆದು, ಕ್ರೀಡಿಸುವುದು ಮೋಜಿನ ಸಂಗತಿಯಲ್ಲವೆ? ನನ್ನನ್ನು ಈ ಸುಖದಿಂದ ವಂಚಿಸುವೆಯಾ? ನಿನಗಿದು ಬೇಕಿಲ್ಲವೆ? ನೀನು ಏನೇ ಅನ್ನು, ನಾನು ಈ ಆಶೆಯನ್ನು ತ್ಯಜಿಸಲಾರೆನು!

ಬಳಿಯಲ್ಲಿಯೇ ಸಪಳ್ಪವಾದಂತೆ ತುಳಸೀದಾಸನಿಗೆ ಅನಿಸಿತು. ಅವನು ಪ್ರೇಮಾಶ್ರು ಪೂರ್ಣವಾದ ಕಣ್ಣುಗಳನ್ನೊರಸಿಕೊಂಡು ನೋಡಿದನು. ಅತಿ ಸುಂದರವಾದ ಅಡವಿಯ ಚಿಗರೆಯೊಂದು ತನ್ನ ಕಡೆಗೆ ಓಡಿ ಬರುತ್ತಿರುವುದನ್ನು ಕಂಡನು. ಅದು ನೋಡ ನೋಡುತ್ತಿರುವಷ್ಟರಲ್ಲಿ ತುಳಸೀದಾಸನ ತೀರ ಸನಿಯಕ್ಕೆ ಬಂದು ನಿಂತಿತು. ಭಯಕಂಪಿತವಾದ ಆ ಹರಿಣವು ಹಿಂದಿರುಗಿ ನೋಡುತಲಿತ್ತು; ತುಳಸೀದಾಸನ ಕಡೆಗೆ ನೋಡಿ ಕರುಣಾಯಾಚನೆ ಮಾಡುತಲಿತ್ತು. ತುಳಸೀದಾಸನು ವನಮೃಗದ ಈ ಮನೋಭಾವವನ್ನು ತಿಳಿದನು. ಹರಿಯ ಭಾವನೆಯನ್ನು ತ್ಯಜಿಸಿ, ಹರಿಣದ ಯೋಗಕ್ಷೇಮಕ್ಕಾಗಿ ಉದ್ಯುಕ್ತನಾದನು. ಆ ಚಿಗರೆಯ ಮೈಮೇಲೆ ಸ್ನೇಹಭರದಿಂದ ಕೈಯಾಡಿಸಿ, 'ನಿನಗೇನಾಗಿದೆ? ಏಕೆ ಹೀಗೆ ನಡುಗುತ್ತಿರುವೆ?' ಎಂದು ಕೇಳಿದನು. ಎರಳೆಯು ಮತ್ತೆ ಹಿಂದಿರುಗಿ ನೋಡಿ ಭಯದ ಕಾರಣದ ದಿಕ್ಕನ್ನು ಸೂಚಿಸಿತು. ತುಳಸೀದಾಸನು ಮತ್ತೆ ಅದರ ಮೋರೆಯ ಮೇಲೆ ಕೈಯಾಡಿಸಿ, ಭಯವನ್ನು ಬಿಡು. ನಾನು ನಿನಗೆ ಆಶ್ರಯಗೊಟ್ಟಿದ್ದೇನೆ. ಇನ್ನು ನಿನಗೆ ಯಾರಿಂದಲೂ ಪೀಡೆಯಾಗದು, ಎಂದು ಹೇಳಿದನು. ಹರಿಣವು ನೀರವವಾಗಿದ್ದು, ತುಳಸೀದಾಸನ ಮೋರೆಯ ಕಡೆಗೆ ನೋಡಹತ್ತಿತು. ತುಳಸೀದಾಸನು

ಮತ್ತೆ ಇಂತು ನುಡಿದನು:-"ಎಷ್ಟು ಮಾತ್ರಕ್ಕೂ ಭಯಗೊಳ್ಳದಿರು. ನಿನ್ನನ್ನು ರಕ್ಷಿಸಲಿಕ್ಕೆ ನಾನು ಸಮರ್ಥನೋ ಅಸಮರ್ಥನೋ ಎಂಬ ವಿಚಾರವು ನಿನ್ನಲ್ಲುಂಟಾಗಿದ್ದರೆ ಅದನ್ನು ಸಂಪೂರ್ಣವಾಗಿ ತ್ಯಜಿಸು. ಜಗತ್ತಿನಲ್ಲಿಯ ಯಾವ ಶಕ್ತಿಯೂ ನಿನ್ನನ್ನು ನನ್ನಿಂದ ದೂರ ಸೆಳೆದು ಕೊಂಡು ಹೋಗಲಿಕ್ಕೆ ಸಮರ್ಥವಾಗದು! ತಿಳಿಯಿತೆ?"

ಧನುರ್ಧಾರಿಯಾದ ಬಾಲಕನೊಬ್ಬನು ತುಳಸೀದಾಸನ ಸಮೀಪಕ್ಕೆ ಬಂದು ನಿಂತನು. ತನ್ನ ಆಕಾಂಕ್ಷಿತ ಹರಿಣವು ಅಲ್ಲಿರುವುದನ್ನು ನೋಡಿ, ಪರಮಾನಂದಬಟ್ಟು ಗಹಗಹಿಸಿ ನಗಹತ್ತಿದನು. ತುಳಸೀದಾಸನು ವಿಸ್ಮಯದಿಂದ ನೋಡಿದನು. ಕಿಶೋರ ವಯಸ್ಸಿನಾದ ಆ ಬಾಲಕನ ಸುಂದರ ರೂಪವನ್ನೂ ನಿಂತ ಬಗೆಯನ್ನೂ ನೋಡಿ ಮೋಹಿತನಾಗಿ ಹೋದನು. ಆ ಕಿಶೋರನು ತುಳಸೀದಾಸನನ್ನು ಲಕ್ಷಿಸಲಿಲ್ಲ; ಚಿಗರೆಯನ್ನು ಹಿಡಿಯುವ ಹವ್ಯಾಸದಲ್ಲಿದ್ದನು. ಚಿಗರೆಯು ಬಾಲಕನ ಆ ವೃತ್ತಿಯನ್ನರಿತು ತುಳಸೀದಾಸನ ತೀರ ಸಮೀಪಕ್ಕೆ ಸರಿಯಿತು. ಆ ಬಾಲಕನ ರೂಪವನ್ನು ನೋಡುವದರಲ್ಲಿ ತನ್ಮಯನಾಗಿದ್ದ ತುಳಸೀದಾಸನು ಎಚ್ಚತ್ತು ಹರಿಣದ ಮೇಲೆ ಕೈಯಾಡಿಸಿ, "ಬಾಲಕನೆ, ಈ ಚಿಗರೆಯು ನನ್ನ ಆಶ್ರಯದಲ್ಲಿದೆ. ಶಾಂತನಾಗು. ಈ ಜಿಂಕೆಯನ್ನು ಹಿಡಿಯುವದಕ್ಕಾಗಲಿ, ಹೊಡೆಯುವದಕ್ಕಾಗಲಿ ಯತ್ನಿಸಬೇಡ," ಎಂದು ಹೇಳಿದನು.

ಈ ಚಿಗರೆಯು ನನ್ನದು. ನೀನಿದಕ್ಕೆ ಆಶ್ರಯಗೊಡುವ ಮೊದಲೇ ನಾನಿದನ್ನು ನೋಡಿದ್ದೆನು; ಬೆನ್ನಟ್ಟಿದ್ದೆನು. ಇದರಿಂದ ಈ ಎರಳೆಯ ಮೇಲೆ ನಿನ್ನ ಅಧಿಕಾರವೆಷ್ಟುಮಾತ್ರಕ್ಕೂ ಇಲ್ಲದಾಗಿದೆ. ನನ್ನ ಚಿಗರೆಯನ್ನು ನನಗೊಪ್ಪಿಸಿ ಬಿಡು. ಬಾಲಕನು ಹೇಳಿದನು.

ಈ ಚಿಗರೆಯು ನನ್ನದು ಇಲ್ಲವೆ ನಿನ್ನದು ಎಂಬ ಬಗ್ಗೆ ವಾದ ವಿವಾದ ಮಾಡಿ ಪ್ರಯೋಜನವಿಲ್ಲ. ಮೂಲತಃ ಈ ಚಿಗರೆಯು ನಮ್ಮಿಬ್ಬ

ರದೂ ಇಲ್ಲ. ಅದು ತನ್ನಿಷ್ಟಕ್ಕೆ ಸ್ವತಂತ್ರವಿದೆ. ಅದಕ್ಕೆ ತನಗೆ ಬೇಕಾದವನನ್ನು ಆಶ್ರಯಿಸುವ ಅಧಿಕಾರವಿದೆ. ಅದನ್ನು ಹಿಡಿದು ಹಿಂಸಿಸುವ ಇಲ್ಲವೆ ಕೊಲ್ಲುವ ಅಧಿಕಾರವು ನಮ್ಮೆಲ್ಲರಿಗೂ ಇಲ್ಲ. ಕಾರಣ ನಾನು ನಿನಗೆ ಈಗ ಖಂಡಿತವಾಗಿ ಹೇಳುವೆನು. ನೀನಿದನ್ನು ಹಿಡಿಯದಿರು. ಹಿಂಸಿಸದಿರು. ನನ್ನ ಮಾತನ್ನು ಲಕ್ಷಿಸದೆ, ನೀನು ಹರಿಣವನ್ನು ಕೊಲ್ಲಲಿಕ್ಕೆ ಮನಸ್ಸು ಮಾಡಿದರೆ, ಮೊದಲು ನನ್ನನ್ನು ಸಂಹರಿಸಬೇಕಾಗುತ್ತದೆಯೆಂಬುದನ್ನು ಮರೆಯದಿರು! ನಾನು ಜೀವಂತನಿರುವಾಗ ನೀನಿದನ್ನು ಮುಟ್ಟಲಾರೆ! ಹಿಡಿದೊಯ್ಯಲಾರೆ! ತುಳಸೀದಾಸನು ಹೇಳಿದನು.

ಬಾಲಕನು ಗಟ್ಟಿಯಾಗಿ ನಗಹತ್ತಿದನು. ಎಂತಹ ಸುಂದರ ನಗುವದು! ಆ ಮನೋಹರ ಬಾಲಕನ ರುಚಿರ ಹಾಸ್ಯವನ್ನು ನೋಡಿ ತುಳಸೀದಾಸನು ಮೋಹಿತನಾಗಿ ಹೋದನು. ಆ ವನಪ್ರದೇಶವೆಲ್ಲವೂ ಬಾಲಕನ ನಗುವಿನೊಡನೆ ನಗುತ್ತಿರುವಂತೆ ತುಳಸೀದಾಸನಿಗೆ ಭಾಸವಾಯಿತು.

ಬಾಲಕನು ನಗುವನ್ನು ನಿಲ್ಲಿಸಿ ಇಂತು ನುಡಿದನು:—ಸಾಧುವೆ, ನಿನಗೆ ಮಕ್ಕಳಿಲ್ಲವೆಂಬಂತೆ ತೋರುತ್ತದೆ.

ಏಕೆ? ಏತರ ಮೇಲಿಂದ ನೀನು ಹೀಗೆನ್ನುವೆ? ತುಳಸೀದಾಸನು ಕೇಳಿದನು.

ನಿನಗೆ ಮಕ್ಕಳಿದ್ದರೆ, ನೀನು ಮಕ್ಕಳನ್ನಾಡಿಸಿದ್ದರೆ, ನೀನು ನನ್ನ ದುಃಖವನ್ನು ತಿಳಿಯುತ್ತಿದ್ದೆ!

ನಿನಗೇತರ ದುಃಖವಯ್ಯಾ? ತುಳಸೀದಾಸನು ಕೇಳಿದನು.

ನನಗೆ ಈ ಚಿಗರೆಯು ಬೇಕು.

ಇದನ್ನು ನಿನಗೆ ಕೊಡಲಾರೆನಪ್ಪಾ! ಬೇರೆ ಏನಾದರೂ ಬೇಕಿದ್ದರೆ ಬೇಡು.

ಹಾಗಾದರೆ ನೀನು ಕಟ್ಟಿ ಇಟ್ಟಿದ್ದ ಆ ಹೂಮಾಲೆಯನ್ನು ಕೊಡು.

ಅದನ್ನು ಕೊಡಲಾರೆನು!

ಯಾಕೆ?

ನಾನು ಆ ಮಾಲೆಯನ್ನು ಶ್ರೀರಾಮನ ಸಲುವಾಗಿ ಸಿದ್ಧಪಡಿಸಿದ್ದೇನೆ.

ಅವನಾರು?

ಅವನು ಆ ಭಗವಂತನು. ನಮ್ಮೆಲ್ಲರ ಪ್ರಭುವು. ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳ ಕಾರಣನು.

ಅವನು ನಿನ್ನ ಹೂವಿನ ಸರಕ್ಕೋಸುಗ ಆಕಾಶದಿಂದಿಳಿದು ಬರುವನೆ?

ಅವನು ಬರಲಿ-ಬಾರದಿರಲಿ; ನಾನವನ ದಾರಿಯನ್ನು ಕಾಯುತ್ತಿದ್ದೇನೆ. ಅವನಿಗೇ ಈ ಮಾಲೆಯನ್ನು ಹಾಕಬೇಕೆಂದು ನಿಶ್ಚಯಿಸಿದ್ದೇನೆ. ಕಾರಣ ಈ ಮಾಲೆಯನ್ನು ನಿನಗೆ ಕೊಡಲಾರದವನಾಗಿದ್ದೇನೆ ನಿನಗೆ ಬೇಕಿದ್ದರೆ, ಬೇರೊಂದನ್ನು ತಯಾರಿಸಿ ಕೊಡುವೆನು.

ನಾನು ಅಷ್ಟು ಹೊತ್ತಿನ ವರೆಗೆ ಇಲ್ಲಿ ಕುಳಿತಿರಲಾರೆನು. ಈಗಲೆ ಬೇಟೆಯನ್ನು ಹುಡುಕಲಿಕ್ಕೆ ಹೊರಡಬೇಕು. ನನ್ನನ್ನು ತುಂಬ ನಿರಾಶನನ್ನಾಗಿ ಮಾಡಿ ಕಳುಹುತ್ತಿರುವೆಯೆಂಬದನ್ನು ನೆನಪಿನಲ್ಲಿಟ್ಟುಕೊ. ನೀನು ನನಗೆ ನನ್ನ ಚೆಂಡೆಯನ್ನು ಕೊಡಲಿಲ್ಲ; ನಿನ್ನ ಮಾಲೆಯನ್ನೂ ಕೊಡಲಿಲ್ಲ. ಸಾಧುವಿನ ವಚನ ಪರಿಪಾಲನೆಯು ಚೆನ್ನಾಗಿದೆ! ಇದೋ ನಾನು ಹೊರಟೆನು!

ಬಾಲಕನೆ, ಸಿಟ್ಟಾಗದಿರು. ಇವೆರಡನ್ನು ಬಿಟ್ಟು ಬೇರೆ ಏನನ್ನಾದರೂ ಬೇಡು. ನಿಶ್ಚಿತವಾಗಿ ಕೊಡುವೆನು.

ನೀನು ಮತ್ತೇನು ಕೊಡಬಲ್ಲೆ? ನಿನ್ನ ಹತ್ತಿರ ಇರುವುದಾದರೂ ಏನು? ಹೇಳಿ ಕೇಳಿ ವನವಾಸಿಯಾದ ವೈರಾಗಿಯು ನೀನು! ನಿನ್ನ ಹತ್ತಿರ ನಾನೇನು ಬೇಡಿಕೊಳ್ಳಲಿ?

ಅಗೋ, ಆ ಜೋಳಿಗೆಯಿದೆ ಬೇಕಾದರೆ ತಕ್ಕೋ.

ಭಿಕ್ಷುಕನ ಜೋಳಿಗೆ ತಕ್ಕೊಂಡು ನಾನೇನು ಮಾಡಲಿ? ನಾನೂ ಬಿಕ್ಕೆ ಬೇಡಲಿಯಾ? ನನಗದು ಬೇಡ! ನೀನು ಗಂಧವನ್ನು ಬಹಳವಾಗಿ ತೆಯ್ದಿರುವಂತೆ ತೋರುತ್ತಿದೆ! ನಾನು ಗಂಧವನ್ನು ಹಚ್ಚಿಕೊಳ್ಳುವೆನು! ಬಾಲಕನು ತುಳಸೀದಾಸನ ಅಪ್ಪಣೆಯು ದಾರಿಯನ್ನು ನೋಡಲಿಲ್ಲ. ತುಳಸೀದಾಸನು ಬಾಲಕನ ಈ ವಿಚಿತ್ರ ಬೇಡಿಕೆಯು ಬಗ್ಗೆ ವಿಚಾರಿಸುತ್ತ ಕುಳಿತಿರುವಾಗ, ಬಾಲಕನು ಗಂಧವನ್ನು ತಕ್ಕೊಂಡು ಮನಬಂದಂತೆ ಮೈಗೆ ಬಡಿದುಕೊಂಡನು ತುಳಸೀದಾಸನು ನಿಷೇಧಿಸಲಿಲ್ಲ ಒಪ್ಪಿಗೆಯನ್ನೂ ಕೊಡಲಿಲ್ಲ. ಅವನು ಬೇರೊಂದು ವಿಚಾರದಲ್ಲಿ ಮಗ್ನನಾಗಿದ್ದನು.

ಕೆಲ ಹೊತ್ತಿನ ಮೇಲೆ ತುಳಸೀದಾಸನು ತನ್ನ ವಿಚಾರ ತಂದ್ರಿಯಿಂದೆಚ್ಚತ್ತು ನೋಡಿದನು. ಬಾಲಕನು ಮೈಗೆ ಗಂಧವನ್ನು ಚನ್ನಾಗಿ ಹಚ್ಚಿಕೊಂಡು ನಗುತ್ತ ನಿಂತಿರುವುದನ್ನು ಕಂಡನು. ಗಂಧಲೇಪನದಿಂದ ಬಾಲಕನು ಹೆಚ್ಚು ಮನೋಹರನಾಗಿ ಕಾಣುತ್ತಿದ್ದನು. ತುಳಸೀದಾಸನು ಕೊಂಚ ಕಾಲ ಬಾಲಕನನ್ನು ನಿರೀಕ್ಷಿಸಿ ಇಂತು ನುಡಿದನು:— ಇದೇನು ಮಾಡಿದೆಯಯ್ಯಾ! ನಾನೀ ಗಂಧವನ್ನು ಶ್ರೀರಾಮನ ಸಲುವಾಗಿಯೇ ಸಿದ್ಧಪಡಿಸಿದ್ದೆನು. ಇನ್ನು ಅವನು ಬಂದರೆ, ಅವನಿಗೇನು ಹಚ್ಚಲಿ?

ಹೀಗಿದ್ದರೆ, ನೀನು ನನಗೆ ಯಾವುದನ್ನೂ ಕೊಡಬಾರದೆಂದು ನಿಶ್ಚಯಿಸಿಕೊಂಡು ಕುಳಿತಿರಲಿಕ್ಕೆ ಬೇಕು! ಬೇರೆ ಏನನ್ನಾದರೂ ಬೇಡು-ಕೊಡುವೆನು, ಎಂದು ಬಾಯಿಂದ ನುಡಿಯುತ್ತಿರುವೆ. ಬೇಡಿದ ಕೂಡಲೆ ಅದು ಶ್ರೀರಾಮನದೆಂದು ಅನ್ನುತ್ತಿರುವೆ! ಕೊಡುವ ಮನಸ್ಸಿಲ್ಲದಿರುವಾಗ ಬೇಡಿಕೊಳ್ಳೆಂದು ಹೇಳುವುದು ವಿಡಂಬನೆಯಲ್ಲವೆ? ಪರತತ್ವವನ್ನು ತಿಳಿಯಲಿಕ್ಕೆಂದು ವನವಾಸಿಯಾದ ನಿನಗೆ ಈ ಲೌಕಿಕ ತತ್ವವು ಹೊಳೆಯು ಬಾರದೆ? ಒಳ್ಳೇ ವಿರಾಗಿಯಯ್ಯ ನೀನು!

ಬಾಲಕನೆ, ಕೋಪಗೊಳ್ಳಬೇಡ. ನಿಜವನ್ನು ಹೇಳುವೆನು-ಕೇಳು. ನನ್ನಲ್ಲಿರುವುದೆಲ್ಲವೂ ರಘುರಾಮನದು. ಇಷ್ಟೇ ಅಲ್ಲ; ನಾನು ಸಹ ಶ್ರೀರಾಮನ ಅಧಿಕಾರಕ್ಕೊಳಪಟ್ಟವನು. ಶ್ರೀರಾಮನಲ್ಲದ ಯಾವ ವಸ್ತುವೂ ನನ್ನಲ್ಲಿಲ್ಲ; ಆದರೆ ಮುದ್ದು ಬಾಲಕನೆ, ನಿನ್ನನ್ನು ನೋಡು ವುದರಿಂದ ನನಗೆ ಪರಮಾನಂದವಾಗಿದೆ ನಿನ್ನನ್ನು ಬರಿಗೈಯಿಂದ ಕಳುಹಬಾರದೆಂದು ಈಗ ನಾನು ಗೊತ್ತುಮಾಡಿಕೊಂಡಿದ್ದೇನೆ ನೀನು ಯಾವುದನ್ನೇ ಬೇಡಲೊಲ್ಲೆಯೇಕೆ; ಅನ್ಯ ವಿಚಾರ ಮಾಡದೆ, ಅದನ್ನು ನಿನಗೆ ಕೊಟ್ಟುಬಿಡಬೇಕೆಂದು ನನಗೆ ಅನಿಸಹತ್ತಿದೆ. ಅಹಹ! ಬಾಲಕಾ, ಗಂಧಲೇಪನದ ಕರುವಾಯದಲ್ಲಿ ನೀನು ಮೊದಲಿಗಿಂತಲೂ ರಮಣೀಯ ನಾಗಿ ತೋರುತ್ತಿರುವೆ! ತುಳಸೀದಾಸನೆಂದನು.

ಹೀಗಿದ್ದರೆ, ನಾನು ಆ ಮಾಲೆಯನ್ನು ಹಾಕಿಕೊಳ್ಳುವೆನು. ಬಾಲ ಕನು ಉತ್ತರದ ದಾರಿಯನ್ನು ನೋಡಲಿಲ್ಲ ಎಲೆ-ಹೂಗಳ ರಾಶಿಯ ಮೇಲೆ ಕಾಲಿಟ್ಟನು. ಹೂವಿನ ಸರವನ್ನು ಭರದಿಂದ ತಕ್ಕೊಂಡು ಕೊರಳಲ್ಲಿ ಹಾಕಿಕೊಂಡೇ ಬಿಟ್ಟನು. ತುಳಸೀದಾಸನು ಬಾಲಕನ ಕಡೆಗೆ ನೋಡಿದನು. ಅವನಿಂದ ಮಾತನಾಡಲಿಕ್ಕಾಗಲಿಲ್ಲ. ಅವನು ಉನ್ಮಾದ ಗ್ರಸ್ತನಂತೆ ಎವೆಯಿಕ್ಕದೆ ಬಾಲಕನನ್ನು ನೋಡುತ್ತ ಕುಳಿತಿದ್ದನು. ಎಂತಹ ಸುಂದರ ರೂಪವಿದು! ತುಳಸೀದಾಸನ ಚಿರಾಕಾಂಕ್ಷಿತ ರೂಪವೇ ಇದು! ತುಳಸೀದಾಸನು ಮೆಯ್ಮರೆದು ಹೋದನು.

ಕೆಲ ಹೊತ್ತಿನ ಮೇಲೆ ತುಳಸೀದಾಸನು ಎಚ್ಚತ್ತು ಹೀಗೆ ನುಡಿ ದನು:-"ಬಾಲಕನೆ, ಇದೇನ ಮಾಡಿದೆ? ನೀನು ನನ್ನ ಪ್ರೀತಿಯ ದುರುಪ ಯೋಗ ಮಾಡಿಕೊಂಡೆ! ಶ್ರೀರಾಮನ ಚರಣಗಳಿಗೆ ಸಮರ್ಪಿಸಬೇಕೆಂದು ಪತ್ರ-ಪುಷ್ಪಗಳನ್ನು ತಂದಿಟ್ಟಿದ್ದೆನು. ರಾಘವನ ಕೊರಳಿಗೆ ಹಾಕ ಬೇಕೆಂದು ಮಾಲೆಯ ಮಾಡಿಟ್ಟಿದ್ದೆನು ನೀನು ನನ್ನ ಆ ಇಚ್ಛೆಯನ್ನು ನಡೆಯಗೊಡಲಿಲ್ಲ! ಎಲ್ಲವನ್ನೂ ನೀನೇ ಧರಿಸಿಬಿಟ್ಟೆ! ಇನ್ನು ಆ ಶ್ರೀ

ಹರಿಯು ಒಂದರೆ, ಅವನಿಗೇನ ಕೊಡಲಿ?”

ಸಾಧುವೆ, ನಿನಗೆ ದುಃಖವಾಗುತ್ತಿದೆಯೆ? ಆಗುತ್ತಿದ್ದರೆ, ನಿನ್ನ ವಸ್ತ್ರಗಳನ್ನು ನೀನು ತಕೊ್ಳೀ. ನನಗೇನೂ ಬೇಡ!

ತಿರುಗಿ ಕೊಡುವುದು ಬೇಡ! ಈ ವೇಷದಲ್ಲಿ ನೀನು ಬಹು ಸುಂದರನಾಗಿ ತೋರುತ್ತಿರುವೆ! ಅದಾವ ರಹಸ್ಯವಿದೆಯೊ ನನಗೆ ಹೊಳೆಯುದು! ನೀನು ಗಂಧವನ್ನು ಹಚ್ಚಿಕೊಳ್ಳುವಾಗಲೂ, ಮಾಲೆಯನ್ನು ಧರಿಸುವಾಗಲೂ ಬೇಡವೆನ್ನಲಿಕ್ಕೆ ನನ್ನ ನಾಲಿಗೆಯೇ ಏಳಲಿಲ್ಲ. ಹಾಗೆಯೆ ನಿನ್ನಿಂದ ಈ ಮಾಲೆಯನ್ನು ತಿರುಗಿ ತಕೊಳ್ಳಲಿಕ್ಕೆ ನನ್ನ ಮನಸ್ಸು ಒಪ್ಪದಾಗಿದೆ. ಇದಕ್ಕೆ ಒಂದು ಕಾರಣವೆಂದರೆ, ನಾನು ಬಹು ದಿನಗಳಿಂದ ಯಾವ ರೂಪದ ಉಪಾಸನೆಯನ್ನು ಮಾಡುತ್ತ ಬಂದಿರುವೆನೋ ನೀನು ಆ ರೂಪದವನಿರುವೆ! ಶ್ರೀಹರಿಯು ಭಕ್ತರೊಡನೆ ಹುಡುಗಾಟವಾಡುವುದಕ್ಕೆ ಮೆಚ್ಚಿದವನೆಂದು ನಾನು ಕೇಳಿದ್ದೇನೆ. ಆ ಶ್ರೀರಾಮನೇ ನೀನಾಗಿ ಯಾಕೆ ಬಂದಿರಬಾರದೆಂಬ ಆಲೋಚನೆಯು ನನಗುಂಟಾಗಿದೆ. ಬಾಲಕನೆ, ನಿಜವಾಗಿ ಹೇಳು. ನೀನು ಶ್ರೀರಾಮನಲ್ಲವೆ? ನಿನಗೆ ನನ್ನಾಣೆಯಿದೆ! ಸುಳ್ಳಾಡಬೇಡ! ತುಳಸೀದಾಸನೆಂದನು.

ನಿನಗೆ ನಾನು ಹೇಗೆ ಕಾಣುತ್ತಿದ್ದೇನೆ?

ಅಲ್ಪಮತಿಯು ನಾನು! ಆ ಶ್ರೀ ಹರಿಯ ನಿಜಸ್ವರೂಪವನ್ನು ತಿಳಿಯುವುದು ಮಹಾತ್ಮರಿಗೂ ದುಸ್ತರವಾಗಿರಲು, ನನ್ನ ಪಾಡೇನು? ಆ ಶ್ರೀರಾಮನು ತಾನೇ ತಾನಾಗಿ ನನಗೆ ತನ್ನ ಪರಿಚಯವನ್ನು ಮಾಡಿಕೊಡಬೇಕಲ್ಲದೆ, ನಾನು ನನ್ನ ತಿಳುವಳಿಕೆಯಿಂದ ಅವನ ಪರಿಚಯ ಮಾಡಿಕೊಳ್ಳಲಾರದವನಾಗಿದ್ದೇನೆ!

ಯಾವನೊಬ್ಬನು ನಿನ್ನ ಹತ್ತಿರ ಬಂದು, ನಾನೇ ಶ್ರೀರಾಮನೆಂದು ಹೇಳಿ, ನಿನ್ನನ್ನು ವಂಚಿಸ ಬಯಸಿದರೆ? ಆ ಬಾಲಕನು ನಗುತ್ತ ಕೇಳಿದನು.

ವಂಚಿಸಲಿ, ನನಗದರಿಂದ ಹಾನಿಯಿಲ್ಲ. ಸಾಧಕನು ನಾನು; ಬೀಳು

ತ್ತೇಳುತ್ತ ಶ್ರೀರಾಮನ ದರ್ಶನದ ಸಾಧನೆಯಲ್ಲಿ ಮುಂದಡಿಯಿಡುತ್ತಿದ್ದೇನೆ. ಆ ದಯಾಸಾಗರನು ಒಂದಿಲ್ಲೊಂದು ದಿನ ನನ್ನ ವಿಷಯದಲ್ಲಿ ಪ್ರಸನ್ನನಾಗಲೇ ಬೇಕು! ನನಗೆ ತನ್ನ ನಿಜರೂಪವನ್ನು ತೋರಲೇಬೇಕು!

ಈ ಆತ್ಮವಿಶ್ವಾಸವು ನಿನಗಿದೆಯೆ?

ನಿಶ್ಚಯವಾಗಿಯೂ ಇರುವುದು!

ಹಾಗಾದರೆ ನಾನೇ ಆ ರಾಮನು.

ತುಳಸೀದಾಸನು ತನ್ನ ಉಪಾಸ್ಯದೇವನ ಪಾದಗಳ ಮೇಲೆ ಮೂರ್ಛಿತನಾಗಿ ಬಿದ್ದುಬಿಟ್ಟನು! ಎಷ್ಟೋ ಹೊತ್ತಿನ ಮೇಲೆ ಜ್ಞಾನಸಂಚಯವಾಯಿತು. ಎದ್ದು ನೋಡಿದನು; ಬಾಲಕನಿರಲಿಲ್ಲ. ಚಿಗರೆಯೂ ಇರಲಿಲ್ಲ. ತುಳಸೀದಾಸನು ಆವೇಗಭರದಿಂದ ಕೂಗಿದನು; ಗಂಟಲು ಹರಿಯುವಂತೆ ಚೀರಿದನು; ದೊಡ್ಡ ದನಿಯಿಂದ ಅತ್ತನು. ಇವನನ್ನು ಸಮಾಧಾನ ಪಡಿಸಲಿಕ್ಕೆ ಅಲ್ಲಿ ಯಾರೂ ಇರಲಿಲ್ಲ ತುಳಸೀದಾಸನು ಹುಚ್ಚನಂತೆ ಶ್ರೀ ಹರಿಯ ಶೋಧಕ್ಕಾಗಿ ಅತ್ತಿತ್ತ ಅಲೆಯಹತ್ತಿದನು. ವನವಾಸಿಯಾದ ಶ್ರೀ ರಾಮನು ರಾವಣನು ಸೀತೆಯನ್ನು ಕದ್ದೊಯ್ಯಲು ವಿರಹವ್ಯಾಕುಲನಾಗಿ ಸೀತೆಯ ಶೋಧವನ್ನು ನಡಿಸಿ, ಗಿಡಗಂಟಿಗಳನ್ನು ಮಾತಾಡಿಸಿದಂತೆ, ತುಳಸೀದಾಸನು ಶ್ರೀ ರಾಮನೆಲ್ಲಿ? ಎಂದು ಬಂಡೆಗಲ್ಲನ್ನು ವೃಕ್ಷವನ್ನು ವಿಚಾರಿಸಹತ್ತಿದನು.

ತುಳಸೀದಾಸನು ಮಧ್ಯರಾತ್ರಿಯ ವರೆಗೆ ಶ್ರೀ ರಾಮನನ್ನು ಹುಡುಕುತ್ತ ಆ ವನದಲ್ಲಿ ಅತ್ತಿತ್ತ ತಿರುಗಾಡಿದನು. ಶ್ರೀ ರಾಮನು ಸಿಗಲಿಲ್ಲ. ತುಳಸೀದಾಸನು ನಿರಾಶೆಯಿಂದಲೂ ದೈಹಿಕಶ್ರಮದಿಂದಲೂ ತೀರ ಅವಸನ್ನನಾಗಿ ಹತ್ತಿರಿದ್ದ ಬಂಡೆಗಲ್ಲ ಮೇಲೆ ಒರಗಿಬಿಟ್ಟನು; ಅಲ್ಲಿಯೆ ಅವನಿಗೆ ನಿದ್ದೆಹತ್ತಿತು. ಬೆಳಗುಮುಂಜಾವಿನ ಕನಸಿನಲ್ಲಿ ತುಳಸೀದಾಸನು ಗುರುವನ್ನು ಕಂಡನು; ಸ್ವಪ್ನಗತನಾದ ಗುರುವು ತುಳಸೀದಾಸನಿಗೆ ಇಂತು ಆಜ್ಞಾಪಿಸಿದನು:—ಅಯೋಧ್ಯೆಗೆ ಹೋಗು; ರಾಮಾಯಣವನ್ನು ರಚಿಸು.

# ೧೧ ಉದ್ಧಾರ.

ಕಳ್ಳರು ಪರ್ವತದ ಅಂಚಿನಲ್ಲಿಯ ಗುಹೆಗಳಲ್ಲಿ ವಾಸವಾಗಿದ್ದರು. ತಳುವಾದ ಸ್ಥಳಕ್ಕೂ ಈ ಗುಹೆಗಳಿಗೂ ಸುಮಾರು ಒಂದು ಹರದಾರಿ ಅಂತರವಿತ್ತು. ಕಳ್ಳರು ರತ್ನಾವಳಿಯನ್ನು ಹೊತ್ತುಕೊಂಡು ತಮ್ಮ ವಾಸಸ್ಥಳಕ್ಕೆ ಹೋದರು. ಒಂದು ಭದ್ರವಾದ ಗುಹೆಯಲ್ಲಿ ರತ್ನಾವಳಿಯನ್ನಿರಿಸಿದರು. ತಾವು ಬೇರೆ ಕಡೆಗೆ ಹೋದರು.

ಈ ಗುಹೆಗಳು ಮೊದಲು ಸಂನ್ಯಾಸಿಗಳ ತಪಶ್ಚರ್ಯೆಯ ಸ್ಥಳಗಳಾಗಿರಬಹುದು. ಈಗ ಕಳ್ಳರ ವಾಸಸ್ಥಳಗಳಾಗಿದ್ದವು. ಇವು ಅಪರಿಚಿತ ಮನುಷ್ಯರಿಗೆ ಗೊತ್ತಾಗದಂಥ ಮರೆಯ ಸ್ಥಳದಲ್ಲಿದ್ದವು. ಆದುದರಿಂದ ತುಡುಗರಿಗೆ ಅಧಿಕಾರಿಗಳ ಭಯವಿರಲಿಲ್ಲ. ಯಾವುದೊಂದು ವ್ಯಕ್ತಿಯನ್ನು ಈ ಗುಹೆಯಲ್ಲಿ ಬಚ್ಚಿಟ್ಟರೆ ಆ ವ್ಯಕ್ತಿಗೆ ಆ ಸ್ಥಳದಿಂದ ಪಾರಾಗಿ ಹೋಗುವದು ದುಸ್ತರವಾಗಿತ್ತು. ಯಾಕೆಂದರೆ, ಗವಿಯಿಂದ ಹೊರಬೀಳುವ ದಾರಿಯು ತೀರ ಭಯಾನಕವಾಗಿತ್ತು. ಕಾರಣ ಕಳ್ಳರು ಈ ವಿಷಯದಲ್ಲೂ ನಿಶ್ಚಿಂತರಾಗಿದ್ದರು

ಬಹುಕಾಲ ಮೂರ್ಛೆಯಲ್ಲಿದ್ದ ರತ್ನಾವಳಿಯು ಎಚ್ಚತ್ತು ಸುತ್ತಲೂ ನೋಡಿದಳು. ಇವಳಿಗೆ ತಾನೆಲ್ಲಿರುವೆನೆಂಬುದು ಹೊಳೆಯಲಿಲ್ಲ. ಇವಳು ತುಸ ಹೊತ್ತಿನ ವರೆಗೆ ತಾನು ಸ್ವಪ್ನಸೃಷ್ಟಿಯಲ್ಲಿರಬಹುದೆಂದು ಭಾವಿಸಿದ್ದಳು; ಆದರೆ ಆ ಭಾವನೆಯು ಕಡೆತನಕ ಉಳಿಯುವ ಸಂಭವವಿರಲಿಲ್ಲ. ಇವಳು ಗೇನಿಕೆ ಹಾಕುತ್ತ ನಡೆದಂತೆ ಅತ್ತೆಯೊಡನೆ ಕಾಶಿಗೆ ಹೊರಟದ್ದು, ದಾರಿಯಲ್ಲಿ ಕಳ್ಳರು ಎತ್ತಿಕೊಂಡು ಹೋದದ್ದು ಮೊದಲಾದ ಸಂಗತಿಗಳು ಇವಳ ಸ್ಮರಣೆಯಲ್ಲಿ ಬಂದವು. ಆಗ ಅವಳಿಗೆ ತಾನು ಕಳ್ಳರ ಕಬಳದಲ್ಲಿ ಅಂಧಕಾರಮಯವಾದ ಈ ಗುಪ್ತಸ್ಥಳದಲ್ಲಿ ವಾಸವಾಗಿ

ರುವೆನೆಂಬುದು ಗೊತ್ತಾಯಿತು.

ರತ್ನಾವಳಿಯು ಭಯಗ್ರಸ್ತಳಾದಳು. ಅವಳು ತನ್ನ ಮುಂದಿನ ಗತಿಯೇನೆಂಬ ದೊಡ್ಡ ಚಿಂತೆಗೊಳಗಾದಳು. ತಾನು ಏನು ಮಾಡ ಬೇಕು? ಈ ಸ್ಥಳದಿಂದ ಹೇಗೆ ಪಾರಾಗಬೇಕು? ಅಬಲೆಯಾದ ತಾನು ದುಷ್ಟರಾದ ಕಳ್ಳರ ಕಣ್ಣುತಪ್ಪಿಸಿ ಹೋಗುವದೆಂತು? ತನ್ನನ್ನು ಈ ಸ್ಥಳ ದಿಂದ ಯಾರು ಉದ್ಧರಿಸುವರು? ಇವೇ ಮೊದಲಾದ ಯೋಚನೆಗಳು ಅವಳ ಮನಸ್ಸಿನಲ್ಲಿ ಬರಹತ್ತಿದುವು; ಆದರೆ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕಂಡುಕೊಳ್ಳುವುದು ಅವಳಿಂದಾಗಲಿಲ್ಲ. ಈ ಸ್ಥಳದಿಂದ ತಾನು ಪಾರಾಗಿ ಹೋಗುವುದು ಅಶಕ್ಯವೆಂದೇ ಅವಳಿಗೆ ಅನಿಸಿತು. ಅವಳು ನಿರಾಶಳಾಗಿ ದೇವರ ಮೇಲೆ ಹೊರೆ ಹಾಕಿ ಸುಮ್ಮನೆ ಬಿದ್ದು ಕೊಂಡುಬಿಟ್ಟಳು.

ಮರುದಿನ ಮುಂಜಾನೆ ಕಳ್ಳರ ಸರದಾರನು ರತ್ನಾವಳಿಯ ಹತ್ತರ ಬಂದನು ಗುಹೆಯಲ್ಲಿ ಕೊಂಚ ಬೆಳಕು ಬಿದ್ದಿತ್ತು. ಆ ಕ್ಷೀಣ ಪ್ರಕಾಶ ದಲ್ಲಿ ರತ್ನಾವಳಿಯು ನೋಡಿದಳು. ತನ್ನ ಬಳಿಗೆ ಬಂದಿದ್ದ ಕರೇಟೊಣಪ ನನ್ನು ನೋಡಿ, ಭಯಕಂಪಿತಳಾಗಿ ಹುದುಗಿ ಕುಳಿತಳು. ಸರದಾರನು ಕೆಲವು ಹಣ್ಣುಗಳನ್ನು ತಕ್ಕೊಂಡು ಬಂದಿದ್ದನು. ಅವುಗಳನ್ನು ರತ್ನಾ ವಳಿಯ ಮುಂದಿರಿಸಿ:—ಇವುಗಳನ್ನು ತಕ್ಕೊ. ಹಸಿವೆಯನ್ನು ಕಳಕೊಳ್ಳು. ನಿನಗೆ ಬೇಕಿದ್ದರೆ ನೀರು ತಂದುಕೊಡುವೆನು. ಈ ಸ್ಥಳದಿಂದ ಓಡಿ ಹೋಗಲಿಕ್ಕೆ ಯತ್ನ ಮಾಡಬೇಡ. ಯಾಕಂದರೆ ನಿನಗದು ಸಾಧ್ಯವಿಲ್ಲ. ನನ್ನ ಹೇಳಿಕೆಯಂತೆ ನೀನು ಇದ್ದರೆ, ನಿನಗೆ ನನ್ನಿಂದ ಯಾವ ತರದ ತೊಂದರೆಯೂ ಆಗದು, ಎಂದು ಹೇಳಿದನು.

ರತ್ನಾವಳಿಯು ತುಸ ಧೈರ್ಯವನ್ನು ತಂದುಕೊಂಡು "ನಿನಗೆ ಏನು ಬೇಕು? ನನ್ನ ಆಭರಣಗಳು ಬೇಕೆ?" ಎಂದು ಕೇಳಿದಳು.

ಆ ಅಲಂಕಾರಗಳು ಇನ್ನು ನಮ್ಮವೇ. ನಮಗೆ ಬೇಕಾದಾಗ

ನಾವು ಅವುಗಳನ್ನು ತಕ್ಕೊಳ್ಳಬಲ್ಲೆವು.

ಮತ್ತೇನು ಬೇಕು? ಹಣವು ಬೇಕೆ?

ಹಣವು ನಿನ್ನಲ್ಲಿಲ್ಲಿದೆ? ಇದ್ದುದೆಲ್ಲವನ್ನು ಈ ಮೊದಲೇ ದೋಚಿ ಕೊಂಡಿರುವೆವು.

ನೀವು ನನ್ನಿಂದ ಮತ್ತೆ ಏತರ ಆಶೆಮಾಡುತ್ತಿರುವಿರಿ? ನನ್ನನ್ನು ಏಕೆ ಹೀಗೆ ಪ್ರತಿಬಂಧದಲ್ಲಿರಿಸಿರುವಿರಿ? ರತ್ನಾವಳಿಯ ಹೃದಯವು ತತ್ತರಿಸ ಹತ್ತಿತು. ಅವಳ ಅಳಿವು-ಉಳಿವುಗಳು ಈ ಪ್ರಶ್ನೆಯ ಉತ್ತರ ವನ್ನವಲಂಬಿಸಿದ್ದುವು. ಕಳ್ಳರ ಸರದಾರನು ರತ್ನಾವಳಿಯ ಇಂಗಿತ ವನ್ನರಿತು ಹೀಗೆ ಮಾತಾಡಿದನು:-ಭಯಗೊಳ್ಳಬೇಡ. ನಾವು ಕಳ್ಳ ರಾಗಿರುವುದು ನಿಜ. ಹೀನ ಜಾತಿಯವರಾಗಿರುವುದೂ ನಿಜ. ಆದರೂ ಸತಿಯರ ಮಾನಭಂಗಮಾಡಲಿಕ್ಕೆ ಬಯಿಸುವವರಲ್ಲ! ನಮಗೆ ಬೇಕಾ ದುದು ದುಡ್ಡು. ಮತ್ತೇನೂ ಬೇಡ; ಆದರೆ ನಮ್ಮ ಗುಂಪಿನಲ್ಲಿ ಎಲ್ಲರೂ ಒಂದೇ ಸ್ವಭಾವದವರಿರುವರೆಂದು ಹೇಳಲಿಕ್ಕೆ ಬರುವಂತಿಲ್ಲ. ಯಾವನಾದರೊಬ್ಬನು ದುರ್ವಿಚಾರಕ್ಕೊಳಗಾಗಿ ನಿನ್ನ ಮಾನಭಂಗ ಮಾಡಲಿಕ್ಕೂ ಮುಂದರಿಯಬಹುದು; ಆದರೆ ನಾನಿರುವ ವರೆಗೆ ನೀನು ಹೆದರುವ ಕಾರಣವಿಲ್ಲ ಅವ್ವಾ, ನನ್ನ ಈ ದೇಹದಲ್ಲಿ ಜೀವವಿರುವ ವರೆಗೆ ನಿನ್ನ ಮರ್ಯಾದೆಗೆ ಯಾವ ರೀತಿಯಿಂದಲೂ ಕುಂದು ಬರ ಲಾರದು. ನೀನು ನಿಶ್ಚಿಂತಳಾಗಿರು.

ರತ್ನಾವಳಿಯು ಸಮಾಧಾನದಿಂದ ಉಸಿರ್ಗರೆದಳು. ತನ್ನ ತಲೆಯ ಮೇಲಿನ ದೊಡ್ಡ ಬಂಡೆಗಲ್ಲು ಇಳಿದಂತೆ ಅವಳಿಗೆ ಸಮಾಧಾನವಾಯಿತು. ಅವಳು ಕೆಲ ಹೊತ್ತು ಆಲೋಚಿಸಿ:—"ಹೀಗಿದ್ದರೆ, ನನ್ನನ್ನು ಇಲ್ಲಿಗೇಕೆ ತಂದಿರಿ? ಹೀಗೆ ಈ ಕತ್ತಲೆಯ ಸ್ಥಳದಲ್ಲೇಕೆ ಇರಿಸಿರುವಿರಿ? ನನ್ನನ್ನು ಹೊರಗೆ ಕಳುಹಿಕೊಡಬಾರದೇಕೆ?" ಎಂದು ಕೇಳಿದಳು.

ನಾವು ನಿನ್ನನ್ನು ಮಾರಬೇಕೆಂದು ಮಾಡಿದ್ದೇವೆ.

ನನ್ನನ್ನು ಮಾರುವಿರಾ? ಯಾರಿಗೆ ಮಾರುವಿರಿ?

ಹೆಚ್ಚು ಹಣವನ್ನು ಕೊಟ್ಟು ಕೊಂಡುಕೊಳ್ಳುವವರಿಗೆ.

ಅವರು ನನ್ನನ್ನು ಮಾರಲಿಕ್ಕೆ ತಕ್ಕೊಂಡು ಮಾಡುವುದೇನು?

ಅದು ಅವರ ಇಚ್ಛೆ. ತಮ್ಮ ಮನಸ್ಸಿಗೆ ಬಂದಂತೆ ಅವರು ನಿನ್ನನ್ನು ಉಪಯೋಗಿಸಿಕೊಳ್ಳಬಹುದು.

ರತ್ನಾವಳಿಗೆ ಮತ್ತೆ ಭಯವುಂಟಾಯಿತು. ಅವಳು "ನೀವು ಈ ಅವಧಿಯಲ್ಲಿ ಹೆಣ್ಣು ಮಕ್ಕಳನ್ನು ಮಾರಿರುವಿರಾ?" ಎಂದು ಕೇಳಿದಳು

ಹಲವರು ಹೆಂಗಸರನ್ನು ಮಾರಿದ್ದೇವೆ.

ಈಗವರು ಹೇಗಿದ್ದಾರೆ? ಮಾರಾಟದ ತರುವಾಯದ ಅವರ ಸ್ಥಿತಿಯು ಹೇಗಿದೆ?

ನಾನರಿಯೆನು. ಮಾರಾಟ ಮಾಡಿದೆವೆಂದರೆ ನಮ್ಮ ಕೆಲಸ ತೀರಿತು. ಅವರ ಮುಂದಿನ ಗತಿಯೇನೆಂಬುದನ್ನು ನಾವು ಎಷ್ಟು ಮಾತ್ರಕ್ಕೂ ಯೋಚಿಸುವುದಿಲ್ಲ ಇರಲಿ ನನಗೆ ಬೇರೆ ಕೆಲಸವಿದೆ. ನಾನು ಹೋಗುವೆನು.

ಬೇಡ. ತುಸ ನಿಲ್ಲು. ನಾನು ಇನ್ನೊಂದು ಮಾತ ಕೇಳುವೆನು.

ಬೇಗ ಕೇಳು. ಹೆಚ್ಚು ಕಾಲ ಇಲ್ಲಿರಲಾರೆನು.

ನನ್ನನ್ನು ಮಾರುವುದರಿಂದ ನಿಮಗೆ ಎಷ್ಟು ಹಣವು ಸಿಗುವುದು?

ನಿನ್ನಂತಹ ರೂಪವತಿ ಯುವತಿಯನ್ನು ನಾವು ತೀರ ಕಡಿಮೆ ಯೆಂದರೆ ಇನ್ನೂರು ರೂಪಾಯಿಗಳಿಲ್ಲದೆ ಮಾರಲಾರೆವು.

ನಾನು ನಿನಗೆ ಇನ್ನೂರು ರೂಪಾಯಿಗಳನ್ನು ಕೊಡುವೆನು. ನೀನು ನನ್ನ ಸಂಗಡ ನಡೆ.

ಎಲ್ಲಿಗೆ?

ಕಾಶಿಗೆ.

ನಾನು ಬರಲಾರೆನು. ಕಳ್ಳನು ಬೇರೆ ಮಾತಾಡದೆ ಹೊರಟು

ಹೋದನು. ರತ್ನಾವಳಿಯು ವಿಚಾರಕ್ಕೊಳಗಾದಳು. ತಾನು ಗುಹೆಯಿಂದ ಹೊರಬಿದ್ದು ಹೋಗಲಿಕ್ಕೆ ಸಮರ್ಥಳಿರಲಿಲ್ಲ. ಅನ್ಯರು ತನ್ನ ಶೋಧಕ್ಕಾಗಿ ಬಂದರೆ, ಅವರಿಗೆ ಗುಹೆಯಾಗಲಿ ರತ್ನಾವಳಿಯಾಗಲಿ ಕಣ್ಣಿಗೆ ಬೀಳುವಂತಿರಲಿಲ್ಲ. ಈ ಸ್ಥಿತಿಯಲ್ಲಿರುವ ಅವಳು ಮಾಡಬೇಕೇನು?

ರತ್ನಾವಳಿಯು ಎರಡು ದಿನಗಳಿಂದ ಉಪವಾಸವಿದ್ದಳು. ದುಶ್ಚಿಂತೆಯ ಅತಿರೇಕದಿಂದ ಅವಳ ಹಸಿವೆಯು ಹಿಂಗಿಹೋಗಿತ್ತು. ಆದರೆ ಕಳ್ಳನು ಇರಿಸಿಹೋದ ಹಣ್ಣುಗಳನ್ನು ಮುಟ್ಟಲಿಲ್ಲ. ಹೇಗಾದರೂ ಮಾಡಿ ಈ ಸ್ಥಳದಿಂದ ಪಾರಾಗಲಿಕ್ಕೆ ಬೇಕೆಂದು ನಿರ್ಧರಿಸಿಕೊಂಡಳು. ಗುಹೆಯನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸಹತ್ತಿದಳು. ಮುಂದೆ ಹೊರಟು ಗುಹೆಯ ಬಾಗಿಲಿಗೆ ಬಂದಳು. ಗವಿಯ ಬಾಗಿಲಕ್ಕೆ ದೊಡ್ಡ ಬಂಡೆಗಲ್ಲು ಆನಿಸಲ್ಪಟ್ಟಿತ್ತು. ಅದನ್ನು ಸರಿಸುವ ಶಕ್ತಿಯು ಅವಳಲ್ಲಿರಲಿಲ್ಲ. ಆದರೂ ಅವಳು ಒಂದೆರಡು ಸಲ ಪ್ರಯತ್ನಿಸಿ ನೋಡಿದಳು. ವಿಫಲ ಮನೋರಥಳಾಗಿ, ಮತ್ತೆ ತನ್ನ ಮೊದಲಿನ ಸ್ಥಳಕ್ಕೆ ಹೋಗಿ ಕುಳಿತಳು.

ರತ್ನಾವಳಿಯು ಮತ್ತೂ ಯೋಚಿಸಿದಳು. ಯಾವ ಯೋಚನೆಯೂ ಬಗೆ ಹರಿಯಲಿಲ್ಲ. ತನ್ನ ಉದ್ಧಾರವು ಮಾನವೀಯ ಪ್ರಯತ್ನಕ್ಕೆ ಅಶಕ್ಯವೆಂದು ಕೊನೆಯಲ್ಲಿ ನಿರ್ಣಯ ಮಾಡಿಕೊಂಡಳು. ಕೈ ಜೋಡಿಸಿ ಕುಳಿತು ಶ್ರೀಹರಿಯನ್ನು ಪ್ರಾರ್ಥಿಸಿಕೊಳ್ಳಹತ್ತಿದಳು:—"ದಯಾಘನನೆ, ನನಗೀಗ ನಿನ್ನ ಹೊರತು ಅನ್ಯ ರಕ್ಷಕರಿಲ್ಲ! ಪತಿಯು ಎಲ್ಲಿರುವನೊ ಏನೊ! ತಂದೆ-ತಾಯಿಗಳ ಸಹಾಯವು ದೊರೆಯುವಂತಿಲ್ಲ. ಬಂಧು ಬಳಗದವರಿಂದ ಪ್ರಯೋಜನವಾಗುವಂತಿಲ್ಲ. ಆದ್ದರಿಂದ ನಾನು ಈಗ ಮರೆತು ನಿನ್ನನ್ನು ಮೊರೆ ಹೊಕ್ಕಿದ್ದೇನೆ. ಕರುಣಾಸಾಗರ, ದಯೆದೋರು. ಅಬಲೆಯನ್ನುದ್ಧರಿಸು. ಆರ್ತ ರಕ್ಷಕನಾದ ನೀನು ಕಾಲಕಾಲಕ್ಕೆ ಪ್ರಕಟನಾಗಿ ಅಬಲೆಯರನ್ನೂ, ಅನಾಥರನ್ನೂ, ಅಶಕ್ತರನ್ನೂ

ಸಂರಕ್ಷಿಸಿ, ದೀನೋದ್ಧಾರನೆಂಬ ಬಿರುದನ್ನು ಸಾರ್ಥಕ ಮಾಡಿಕೊಂಡಿರುವೆ. ರಾಜಸಭೆಯಲ್ಲಿ ವಿಡಂಬನೆಯು ನಡೆದಿರಲು ದ್ರೌಪದಿಯು ಕೂಗಿಕೊಳ್ಳಲು ಓಡಿ ಹೋಗಿ ಸತಿಯ ಮಾನವನ್ನು ಕಾಯ್ದ ದೇವೋತ್ತಮನೆ ದಯೆದೋರು! ಬಹು ದಿವಸಗಳಿಂದ ಶಿಲೆಯಾಗಿ ಬಿದ್ದುಕೊಂಡಿದ್ದ ಅಹಲ್ಯೆಯನ್ನುದ್ಧರಿಸಿದ ದೇವಶಿಖಾಮಣಿಯೆ ಕರುಣೆ ದೋರು. ಸತಿಗೆ ಮರ್ಯಾದೆ ರಕ್ಷಣೆಗಿಂತ ಹೆಚ್ಚಿನದೇನೂ ಇಲ್ಲ. ನಾನೀಗ ಮಾನರಕ್ಷಣೆಯ ವಿಷಯದಲ್ಲಿ ತುಂಬ ಭಯಗೊಂಡಿದ್ದೇನೆ. ಕಳ್ಳರು ಯಾವ ಕಾಲಕ್ಕೆ ಏನು ಮಾಡುವರೆಂಬುದರ ನಿಯಮವಿಲ್ಲ ಕಾರಣ ಭಗವಂತನೆ, ಈ ದೀನಳ ಮೊರೆಯನ್ನು ಕೇಳು. ಕೃಪಾವಶನಾಗಿ ನನ್ನನ್ನುದ್ಧರಿಸು!''

ರತ್ನಾವಳಿಯು ಬಹಳವಾಗಿ ಬೇಡಿಕೊಂಡಳು. ಹಂಬಲಿಸಿದಳು. ಕಣ್ಣೀರು ಸುರಿಸಿದಳು ಆದರೂ ಅವಳ ಉದ್ಧಾರಕ್ಕೆ ಯಾರೂ ಸಿದ್ಧರಾಗಿ ಬರಲಿಲ್ಲ. ರತ್ನಾವಳಿಯು ನಿರುಪಾಯಳಾದಳು ಆದರೂ ಆಶೆಯು ತಪ್ಪಲಿಲ್ಲ. ಪಾರಾಗಿ ಹೋಗುವುದಕ್ಕೆ ಮಾರ್ಗವು ದೊರೆಯಬಹುದೇ? ಎಂಬುದನ್ನು ಇನ್ನೊಮ್ಮೆ ತಪಾಸಿಸಬೇಕೆಂದು ಆಲೋಚಿಸಿದಳು. ಇದಕ್ಕಾಗಿ ಎದ್ದು ನಿಲ್ಲುವುದಕ್ಕೆ ಯತ್ನಿಸಿದಳು; ಆದರೆ ಅವಳಿಂದ ಏಳಲಿಕ್ಕಾಗಲಿಲ್ಲ ಕಣ್ಣಿಗೆ ಬವಳಿ ಬಂದು ಬಿದ್ದು ಬಿಟ್ಟಳು.

ರತ್ನಾವಳಿಯು ಮತ್ತೆ ಜಾಗ್ರತಳಾಗಿ ನೋಡಿದಳು. ಎಲ್ಲೆಲ್ಲಿಯೂ ಕತ್ತಲೆ ನಿಸ್ತಬ್ಧತೆ. ಅವಳು ಪುನಃ ವಿಚಾರಕ್ಕೊಳಗಾದಳು. ವಿಚಾರ ಮಾಡಿ ಮಾಡಿ ಅವಳ ತಲೆಯು ಕೆಟ್ಟು ಹೋಗಿತ್ತು. ಅವಳಿಗೆ ಯಾವ ಹಂಚಿಕೆಯೂ ಗೊತ್ತಾಗಲಿಲ್ಲ. ಕಡೆಗೆ ಅವಳು ಆತ್ಮಹತ್ಯೆಯ ಆಲೋಚನೆ ನಡಿಸಿದಳು. ಗುಹೆಯ ಬಂಡೆಗಲ್ಲಿಗೆ ತಲೆಯನ್ನಪ್ಪಳಿಸಿ, ಸತ್ತು ಹೋಗಬೇಕೆಂದು ಗೊತ್ತುಮಾಡಿಕೊಂಡಳು. ಸಿದ್ಧಳಾದಳು. ಅವಳು ಇನ್ನು ಗುಹೆಯ ಕಲ್ಲಿಗೆ ತಲೆಯನ್ನು ಗಟ್ಟಿಸತಕ್ಕವಳು. ಇಷ್ಟರಲ್ಲಿ 'ತಂಗೀ, ಹೀಗೆ ಅವಿಚಾರಕ್ಕೊಳಗಾಗ ಬೇಡ! ಆತ್ಮಹತ್ಯೆಯು ಮಹಾ ಪಾತಕವು!

ಶಾಂತಳಾಗು' ಎಂಬ ಶಬ್ದಗಳನ್ನು ಕೇಳಿದಳು.

ರತ್ನಾವಳಿಯು ಇದು ಕಳ್ಳರ ಸರದಾರನ ದನಿಯುಲ್ಲವೆಂಬದನ್ನು ಕಂಡು ಹಿಡಿದಳು. ಆದರೂ ಅವಳ ಭಯವು ಇಲ್ಲದಾಗಲಿಲ್ಲ. ಅವಳು "ನೀವಾರು?" ಎಂದು ಕೇಳಿದಳು.

ಈಗ ಪರಿಚಯದಿಂದ ಪ್ರಯೋಜನವಿಲ್ಲ. ಏಳು; ನನ್ನೊಡನೆ ನಡೆ. ನಾನು ನಿನ್ನನ್ನು ಈ ಸ್ಥಳದಿಂದ ಪಾರುಮಾಡಲಿಕ್ಕೆ ಬಂದಿದ್ದೇನೆ.

ನಾನು ನಿಮ್ಮನ್ನು ಹೇಗೆ ನಂಬಲಿ? ನೀವು ಇಲ್ಲಿಂದ ನನ್ನನ್ನು ಕರೆದೊಯ್ದು ಸಂಕಟಕ್ಕೆ ಗುರಿಮಾಡಲಾರಿರಿ, ಎಂಬದನ್ನು ನಾನು ಹೇಗೆ ಗೊತ್ತುಮಾಡಿಕೊಳ್ಳಲಿ? ರತ್ನಾವಳಿಯು ಕೇಳಿದಳು.

ನೀನು ಈಗ ಅನುಭವಿಸುತ್ತಿರುವ ವಿಪತ್ತಿಗಿಂತ ದೊಡ್ಡ ವಿಪತ್ತು ಮತ್ತೊಂದಿಲ್ಲವಷ್ಟೆ? ಅಂದಬಳಿಕ ನೀನು ನನ್ನ ಸಂಗಡ ಬರಲಿಕ್ಕೆ ಯಾಕೆ ಸಂಕೋಚಗೊಳ್ಳುತ್ತಿರುವೆ?

ನೀವೆನ್ನುವುದು ನಿಜ; ಆದರೆ ನೀವು ನನ್ನನ್ನು ಇಲ್ಲಿಂದ ಹೇಗೆ ಕರೆದೊಯ್ಯುವಿರಿ? ಸಮೀಪದಲ್ಲಿ ಕಳ್ಳರ ಹಿಂಡಿದೆ. ಅವರ ಕಣ್ಣಿನಲ್ಲಿ ಮಣ್ಣೆರಚುವುದು ಹೇಗೆ? ನಾವು ಪಾರಾಗಿ ಹೋಗುತ್ತಿರುವುದನ್ನು ನೋಡಿ, ಅವರು ಸುಮ್ಮನಿರುವರೆ?

ನಿನಗಿದರ ಚಿಂತೆ ಬೇಡ. ನಾನು ಎಲ್ಲವನ್ನೂ ನೋಡಿಕೊಳ್ಳುವೆನು. ಈಗ ತುಡುಗರು ಆತ್ಮ ಕಲಹದಲ್ಲಿ ತೊಡಗಿದ್ದಾರೆ. ಬೇಗ ನೇಳು. ನಡೆ.

ಅವರು ತಮ್ಮ ತಮ್ಮೊಳಗೆ ಯಾಕೆ ಬಡಿದಾಡುತ್ತಿರುವರು? ರತ್ನಾವಳಿಯು ಕೇಳಿದಳು.

ನಿನಗೋಸುಗ. ಇನ್ನು ಹೆಚ್ಚಿಗೆ ಮಾತಾಡುವುದಕ್ಕೆ ಅವಕಾಶವಿಲ್ಲ. ಬೇಗನೆ ಹೊರಡು.

ರತ್ನಾವಳಿಯು ಕಾಲಚೂಟಿಯಿಂದ ಗುಹೆಯ ಬಾಗಿಲಕ್ಕೆ ಬಂದಳು.

ಮುಂಜಾನೆ ಆನಿಸಿದ್ದ ಆ ಬಂಡೆಗಲ್ಲು ಈಗ ಅಲ್ಲಿರಲಿಲ್ಲ. ರತ್ನಾವಳಿಯು ಗುಹೆಯಿಂದ ಹೊರಬಿದ್ದಳು. ಎಲ್ಲೆಲ್ಲಿಯೂ ಕತ್ತಲೆ. ಆಗಂತುಕನು ಚನ್ನಾಗಿ ಕಾಣುತ್ತಿರಲಿಲ್ಲ. ದಾರಿಯೂ ಕಾಣಿಸುತ್ತಿದ್ದಿಲ್ಲ. ರತ್ನಾವಳಿಯು "ನೀವು ಯಾರು? ಇಲ್ಲಿಗೆ ಹೇಗೆ ಬಂದಿರಿ?" ಎಂದು ಕೇಳಿದಳು. ಆಗಂತುಕನು ಈಗ ಮಾತಾಡಬೇಡ. ಸುಮ್ಮನೆ ನನ್ನನ್ನು ಹಿಂಬಾಲಿಸಿ ಬಾ ಎಂದು ಹೇಳಿ ಮುಂದೆ ನಡೆದನು. ರತ್ನಾವಳಿಯು ಅವನನ್ನು ಹಿಂಬಾಲಿಸಿ ನಡೆದಳು. ಕಳ್ಳರ ವಾಸಸ್ಥಳದಲ್ಲಿ ಕೋಲಾಹಲವು ನಡೆದಿತ್ತು. ರತ್ನಾವಳಿಗೆ ಈ ಗದ್ದಲವು ಕೇಳಿಸುತ್ತಲಿತ್ತು. ರತ್ನಾವಳಿಯು ಆಗಂತುಕನ ಮಾತಿನ ಸತ್ಯತೆಯನ್ನು ಮನಗಂಡಳು.

ದಾರಿಯು ತೀರ ಕಡಿದು; ಸರಳವಾದುದಲ್ಲ. ನಡೆದು ಹೋಗುವುದು ಬಹು ಬಿಕ್ಕಟ್ಟಿನ ಕೆಲಸವಾಗಿತ್ತು. ಆದರೂ ರತ್ನಾವಳಿಯು ಆಗಂತುಕನನ್ನು ಅನುಸರಿಸಿ ಹೊರಟು, ಆ ಅರಣ್ಯವನ್ನು ದಾಟಿದಳು. ಮುಂದೆ ಒಂದು ಗುಡ್ಡವನ್ನೇರಿ ಹೋಗಬೇಕಾಗಿತ್ತು. ಈ ಹಾದಿಯಂತೂ ಮೊದಲಿಗಿಂತ ಭಯಾನಕವಾಗಿತ್ತು. ದಟ್ಟವಾದ ಅರಣ್ಯ. ದಾರಿಯಲ್ಲಿ ಅಲ್ಲಲ್ಲಿ ಗಿಡಗಂಟೆಗಳು ರತ್ನಾವಳಿಯು ಭಯಗ್ರಸ್ತಳಾಗಿ:- ಇನ್ನೆಷ್ಟು ಕಾಲ ಹೀಗೆ ದಾರಿಯನ್ನು ಕ್ರಮಿಸಬೇಕು?

ಹೇಗೆ ಹೇಳಲಿಕ್ಕಾದೀತು? ನಿರ್ಭಯ ಸ್ಥಳವು ಬರುವ ವರೆಗೆ ನಾವು ದಾರಿಯನ್ನು ನಡೆಯಲಿಕ್ಕೆ ಬೇಕು.

ಆ ನಿರಾಪದ ಸ್ಥಳವು ಇನ್ನೆಷ್ಟು ದೂರವಿದೆ? ನಾನು ನಡೆದು ನಡೆದು ಬೇಸತ್ತಿದ್ದೇನೆ. ಕಾಲುಗಳು ಕಿತ್ತದಂತಾಗಿವೆ. ಇನ್ನು ನಡೆಯಲಾರೆನು. ರತ್ನಾವಳಿಯು ಹೇಳಿದಳು.

ಹೀಗಿದ್ದರೆ, ಸ್ವಲ್ಪ ಕುಳಿತುಕೊಂಡು ದಣುವಾರಿಸಿಕೊಳ್ಳು.

ರತ್ನಾವಳಿಯು ವಿಶ್ರಮಿಸುವದರಲ್ಲಿದ್ದಳು. ಇಷ್ಟರಲ್ಲಿ ಒಂದು ವನ್ಯಮೃಗವು ಭಯಂಕರ ಗರ್ಜನೆ ಮಾಡುತ್ತ ಹತ್ತಿರದಲ್ಲಿ ಹಾಯ್ತು!

ಕೋದಂತಾಯಿತು. ರತ್ನಾವಳಿಯ ಭಯವು ಮತ್ತಷ್ಟು ಹೆಚ್ಚಿತು. ಅವಳು ಕುಳಿತುಕೊಳ್ಳದೆ:-ನಡೆಯಿರಿ, ನಾನು ಬರುವೆನು. ಇಲ್ಲಿ ಕುಳಿತುಕೊಳ್ಳುವದು ನನ್ನಿಂದಾಗದು, ಎಂದು ಹೇಳಿದಳು.

ಮುಂದೆ ಕೆಲವು ದಾರಿಯನ್ನು ಕ್ರಮಿಸಿದ ಬಳಿಕ ಆಗಂತುಕನು ನಿಂತುಕೊಂಡನು. ರತ್ನಾವಳಿಯೂ ನಿಂತಳು. ರತ್ನಾವಳಿ, ನಿನಗೇನು ಬೇಕು? ಎಂದು ಆಗಂತುಕನು ಕೇಳಿದನು. ರತ್ನಾವಳಿಗೆ ವಿಸ್ಮಯವಾಯಿತು. ಅವಳು "ನನ್ನ ಹೆಸರು ತಮಗೆ ಹೇಗೆ ಗೊತ್ತಾಯಿತು?" ಎಂದು ಕೇಳಿದಳು.

ನೀನು ಯಾವ ಪ್ರಶ್ನೆಯನ್ನೂ ಮಾಡಬೇಡ. ನಾನು ಕೇಳಿದ್ದಕ್ಕೆ ಉತ್ತರಗೊಡುತ್ತ ಹೋಗು. ಆಗಂತುಕನು ಅಧಿಕಾರ ಸೂಚಕ ಸ್ವರದಿಂದುಚ್ಚರಿಸಿದನು.

ನನಗೇನು ಬೇಕಾಗಿದೆಯೆಂದು ಕೇಳಿದಿರಲ್ಲವೆ? ಅದು ನನಗೆ ತಿಳಿಯದು! ರತ್ನಾವಳಿಯು ನುಡಿದಳು.

ಕಳ್ಳರ ಕೈಯಿಂದ ಪಾರಾದರೆ ಸಾಕೆಂದು ನೀನು ಅಪೇಕ್ಷಿಸಿದ್ದಿಯಷ್ಟೆ? ನಾನು ನಿನ್ನ ಇಚ್ಛೆಯಂತೆ ಪಾರುಮಾಡಿರುವೆನು. ನಿನಗೆ ಇನ್ನೇನು ಬೇಕು?

ಆ ನನ್ನ ಇಚ್ಛೆಯನ್ನು ತಾವು ಹೇಗೆ ತಿಳಿದಿರಿ? ರತ್ನಾವಳಿಯು ಕೇಳಿದಳು.

ಕೇವಲ ಉತ್ತರಕೊಡುತ್ತ ಹೋಗೆಂದು ನಾನು ನಿನಗೆ ಆಗಲೇ ಹೇಳಲಿಲ್ಲವೆ? ನಿನ್ನ ಪ್ರಶ್ನೆಗಳಿಗೆ ನಾನು ಉತ್ತರ ಕೊಡಲಾರೆನು. ಹೇಳು, ಈಗ ನಿನಗೆ ಬೇಕಾದುದೇನು?

ನನ್ನ ಪತಿರಾಜರು ಬೇಕು!

ನಿನ್ನ ಪತಿಯು ರಘುನಾಥನ ಉಪಾಸನೆಯನ್ನು ಬಿಟ್ಟುಕೊಟ್ಟು ಮತ್ತೆ ನಿನ್ನ ಬೆನ್ನು ಹತ್ತಬೇಕೆಂದು ನೀನು ಆಶಿಸುತ್ತಿರುವೆಯಾ?

ಇಲ್ಲ, ನಾನು ಹೀಗೆ ಇಚ್ಛಿಸುವದಿಲ್ಲ! ಇವರು ಶ್ರೀರಾಮನ ಉಪಾಸನೆಯಲ್ಲಿ ಕೃತಕಾರ್ಯರಾಗಿ ಮುಕ್ತರಾಗಬೇಕೆಂದೇ ನನ್ನ ಅಪೇಕ್ಷೆಯುಂಟು. ನೀವೂ ಹೀಗೆ ಆಶೀರ್ವಾದಿಸಿರಿ. ನನ್ನ ಪತಿರಾಯರಿಗೆ ಕ್ಷುದ್ರ ವಿಚಾರಗಳುಂಟಾಗದಿರಲಿ. ಇವರು ತಮ್ಮ ಸಾಧನೆಯಲ್ಲಿ ಭರದಿಂದ ಉನ್ನತಿಯನ್ನು ಹೊಂದಲಿ.

ಆಗಂತುಕನು ಮತ್ತೆ ಮುಂದೆ ನಡೆದನು. ರತ್ನಾವಳಿಯು ಬೆನ್ನ ಹತ್ತಿ ನಡೆದಳು. ಮುಂದೆ ಒಂದು ಮೈದಾನವು ಹತ್ತಿತು. ಆಗಂತುಕನು ಮತ್ತೆ ನಿಂತು:-'ನಿನಗೇನು ಬೇಕು ಸಂಕೋಚವಿಲ್ಲದೆ ಹೇಳು, ಎಂದು ಕೇಳಿದನು.

ರತ್ನಾವಳಿಯು ನಿಂತಳು:-ನಾನು ಬೇರೊಂದು ಬಗೆಯಿಂದ ನನ್ನ ಪತಿರಾಜರನ್ನು ಹೊಂದಲಾರೆನೆ? ಇವರು ಸಾಧನಾಭ್ರಷ್ಟರಾಗದಂತೆ ನಾನಿವರ ಸಾನ್ನಿಧ್ಯದಲ್ಲಿರಲಿಕ್ಕೆ ಶಕ್ಯವಿಲ್ಲವೆ? ಎಂದು ಕೇಳಿದಳು.

"ಸಾಧ್ಯವಿದೆ."

ಇದನ್ನು ನನಗೆ ದಯಪಾಲಿಸಿರಿ. ಇವರು ಮತ್ತೆ ಹಿಂದಡಿಯನ್ನಿಡಕೂಡದು. ಈಗ ಅನುಸರಿಸಿದ್ದ ಮಾರ್ಗದಲ್ಲಿ ಕ್ರಮವಾಗಿ ಉನ್ನತಿಯನ್ನು ಹೊಂದುತ್ತ ಹೋಗಬೇಕು. ನಾನು ಹತ್ತಿರವಿದ್ದು, ಇವರ ಉದ್ದಿಷ್ಟ ಸಾಧನೆಗೆ ಸಹಾಯಕಳಾಗಬೇಕು.

ಇದಕ್ಕೆ ಸಾಧನೆಯು ಬೇಕು. ಮನಃಸಂಯಮನವೂ ತಪಸ್ಯೆಯೂ ಅವಶ್ಯವಾದುದು!

ನಾನು ಸಿದ್ಧಳಿದ್ದೇನೆ. ನೀವು ಆಜ್ಞಾಪಿಸಿದಂತೆ ನಾನು ವರ್ತಿಸುವೆನು.

ನೀನು ಬಹು ಕಾಲ ತಪಸ್ಸನ್ನಾಚರಿಸಬೇಕು.

ನೀವಾರೆಂಬದನ್ನು ನಾನರಿಯೆನು. ಆದರೂ ನಿಸ್ಸಂದೇಹಳಾಗಿ ನಿಮ್ಮನ್ನು ನಂಬಲಿಕ್ಕೆ ಅಡ್ಡಿಯಿಲ್ಲವೆಂದು ನನ್ನ ಮನಸ್ಸು ನನಗೆ ಹೇಳು

ತ್ತಿದೆ. ನಾನು ನಿಮ್ಮ ಮೇಲೆ ಸಂಪೂರ್ಣ ವಿಶ್ವಾಸವಿರಿಸಿದವಳಾಗಿದ್ದೇನೆ. ಅಪ್ಪಣೆಯಾಗಲಿ ನಾನು ತಮ್ಮ ಹೇಳಿಕೆಯಂತೆ ನಡೆಯಲು ಸಿದ್ಧಳಿದ್ದೇನೆ.

ಇಲ್ಲಿಯೇ ಇರು. ಇನ್ನು ನೀನು ಮುಂದೆ ಬರುವ ಕಾರಣವಿಲ್ಲ. ಆಗಂತುಕನು ಹೇಳಿದನು.

ಇಲ್ಲಿಯೆ? ರತ್ನಾವಳಿಯು ಆಶ್ಚರ್ಯದಿಂದ ಕೇಳಿದಳು.

ಅಹುದು; ಇಲ್ಲಿಯೇ ಇರಬೇಕು. ಇರಲಿಕ್ಕಾಗದೇನು?

ರತ್ನಾವಳಿಯು ಚಕಿತದೃಷ್ಟಿಯನ್ನು ಚಲ್ಲಿ ಸುತ್ತಲೂ ನೋಡಿದಳು. ಚನ್ನಾಗಿ ಕಾಣುವಂತಿರಲಿಲ್ಲ. ಮುಸುಮುಸುಕು ಕತ್ತಲೆಯಲ್ಲಿ ನೋಡಿ, ಆ ಅರಣ್ಯದ ನಿಜಸ್ವರೂಪವನ್ನು ಊಹಿಸಿದಳು. ಅರಣ್ಯಾವೃತವಾದ ಈ ಪರ್ವತದಲ್ಲಿ-ಭಯಂಕರ ಮೃಗಗಳಿಗೆ ಆಶ್ರಯಸ್ಥಳವಾಗಿದ್ದ-ಈ ಗಹನ ವನದಲ್ಲಿ ನಾನೊಬ್ಬಳೇ ಇರಬೇಕೆ? ಎಂಬ ವಿಚಾರವು ಹುಟ್ಟುತ್ತಲೆ, ಅವಳು ಭಯಕಂಪಿತಳಾದಳು. ತುಸ ಹೊತ್ತಿನ ಮೇಲೆ ಅವಳು ತನ್ನೆದುರಿನಲ್ಲಿ ನಿಂತಿದ್ದ ಸಂನ್ಯಾಸಿಯನ್ನುದ್ದೇಶಿಸಿ:—ನಾನು ಈ ಅರಣ್ಯದಲ್ಲಿ ಒಬ್ಬಳೇ ಇರಲಿಯಾ? ನನಗೆ ಬಹಳ ಹೆದರಿಕೆಯುಂಟಾಗಿದೆ! ಎಂದು ಅಂದಳು.

ಭೀತಳಾಗದಿರು! ನಿನಗೆ ಯಾರಿಂದಲೂ ಅಪಾಯವಾಗದು! ಅಟವಿಯ ಮೃಗಗಳು ನಿನ್ನನ್ನು ಮುಟ್ಟಲಾರವು. ದುರ್ಜನರು ನಿನ್ನ ಸನಿಯಕ್ಕೆ ಬರಲಾರರು!

ಹೀಗಿದ್ದರೆ, ನಾನು ನಿರ್ಭಯತೆಯಿಂದಿರಬಲ್ಲೆನು! ರತ್ನಾವಳಿಯು ಹೇಳಿದಳು.

ಸ್ಥಾನಾಂತರ ಮಾಡಬೇಡ. ಇಲ್ಲಿಯೆ ವಾಸವಾಗಿರು. ಯೋಗ್ಯ ಕಾಲದಲ್ಲಿ ನಾನು ನಿನ್ನನ್ನು ಕರೆದೊಯ್ಯುವೆನು.

ತಪಸ್ಸನ್ನು ಹೇಗೆ ಆಚರಿಸಬೇಕೆಂದನ್ನು ನಾನರಿಯೆನು. ನೀವು ನನಗೆ ಮಾರ್ಗವನ್ನು ತೋರಿಸಿಕೊಡಬೇಕು ರತ್ನಾವಳಿಯು ನುಡಿದಳು.

ಆಗಲಿ, ನಾನು ಹೇಳಿಕೊಡುವೆನು. ಕುಳಿತುಕೊಳ್ಳು.

ಕತ್ತಲೆಯು ವಿರಲವಾಗುತ್ತ ನಡೆದಿತ್ತು. ಸಂನ್ಯಾಸಿಯ ಅಪ್ಪಣೆ ಯಂತೆ ರತ್ನಾವಳಿಯು ಕುಳಿತಳು. ಸಂನ್ಯಾಸಿಯೂ ಕುಳಿತನು. ಹೆಚ್ಚುತ್ತ ಲಿದ್ದ ಪ್ರಕಾಶದಲ್ಲಿ ರತ್ನಾವಳಿಯು ಎದುರಿನಲ್ಲಿ ಕುಳಿತಿದ್ದ ಸಂನ್ಯಾಸಿಯನ್ನು ಅವಲೋಕಿಸಿದಳು. ತಾನು ಇವನನ್ನು ಹಿಂದೆ ಎಲ್ಲಿಯೋ ನೋಡಿರ ಬೇಕೆಂದು ಅವಳಿಗೆ ಅನಿಸಿತು. ಅವಳು ಗೇನಿಕೆಹಾಕಹತ್ತಿದಳು. ತಾನು ಕಾಶಿಗೆ ಹೊರಡುವಾಗ್ಗೆ ಕನಸಿನಲ್ಲಿ ಕಾಣಿಸಿಕೊಂಡ ಮೂರ್ತಿಯಿದೇ ಎಂದು ಅವಳಿಗೆ ನೆನಪಾಯಿತು. ಅವಳ ಭಕ್ತಿ-ಆದರಗಳು ಮತ್ತಷ್ಟು ಹೆಚ್ಚಿದುವು. ಇವನು ದೇವರಾಗಲಿ, ಅವತಾರಿಕ ಪುರುಷನಾಗಲಿ ಆಗಿರ ಬೇಕೆಂದು ಅವಳು ಭಾವಿಸಿದಳು. ಭಕ್ತಿಯುತಳಾಗಿ ಕೈ ಮುಗಿದಳು. ಪೂರ್ವಾಕಾಶವು ಅರುಣ ಪ್ರಭೆಯಿಂದ ಕೆಂಪು ಒಡೆಯುತ್ತ ನಡೆದಿತ್ತು.

ಮನಸ್ಸನ್ನು ಸ್ಥಿರಪಡಿಸು. ನಾನು ಹೇಳುವ ಉಪದೇಶವನ್ನು ಗ್ರಹಿಸು. ಸಂನ್ಯಾಸಿಯು ಕಿವಿಯಲ್ಲಿ ಮಂತ್ರೋಪದೇಶವನ್ನು ಮಾಡಿ ದನು. ತರುವಾಯ ಎದ್ದು ನಿಂತು, "ಅಮ್ಮಾ, ನಾನಿನ್ನು ಹೋಗಿ ಬರುವೆನು." ಎಂದು ಹೇಳಿದನು.

ರತ್ನಾವಳಿಯು ನಮಸ್ಕಾರ ಮಾಡಿ:—"ಮಹಾರಾಜ, ನಾನು ಯಾವುದನ್ನವಲಂಬಿಸಿ, ಇಲ್ಲಿ ಇರಲಿ?" ಎಂದು ಕೇಳಿದಳು.

ಈ ಮಂತ್ರವು ನಿನ್ನನ್ನುದ್ಧರಿಸುವುದು. ನೀನು ಯಾವುದಕ್ಕೂ ಚಿಂತಿಸದಿರು. ನಿರ್ಮಲ ಮನಸ್ಸಿನಿಂದಲೂ, ಶ್ರದ್ಧೆಯಿಂದಲೂ ಮಂತ್ರ ವನ್ನು ಜಪಿಸು ಸಂನ್ಯಾಸಿಯು ನುಡಿದನು.

"ಮಹಾತ್ಮರೆ,"

ಏನಾದರೂ ಕೇಳುವುದಿದೆಯೆ? ನಿಸ್ಸಂಕೋಚಳಾಗಿ ಕೇಳು.

ಮಹಾರಾಜ, ನೀವಾರು? ಈ ದಾಸಿಯ ಮೇಲೆ ನಿಮ್ಮ ವರ್ಚಸ್ಸನ್ನು ಕೂಡಿಸಿ, ಆಜ್ಞೆಯಂತೆ ನಡೆಯ ಹಚ್ಚಿದ ನೀವಾರು? ಮಂತ್ರ ಬಲ್ಲ ಹಾವಾಡಿಗನು ಹಾವನ್ನು ಮನಬಂದಂತೆ ಕುಣಿಸುವಂತೆ ನನ್ನನ್ನು

ಸಂಪೂರ್ಣವಾಗಿ ಕೈಯಲ್ಲಿ ತಕ್ಕೊಂಡ ಶಕ್ತಿಶಾಲಿಗಳಾದ ತಾವು ಯಾರು? ರತ್ನಾವಳಿಯು ಕೇಳಿದಳು.

ನಾನು ನಿನ್ನ ಪತಿಯ ಗುರು.

ನೀವು ನನ್ನ ಪತಿರಾಯರ ಗುರುಗಳೆ? ಮಹಾತ್ಮರೆ, ನಿಲ್ಲಿರಿ. ತಮ್ಮ ಅನಘ ಪಾದಗಳ ಮೇಲೆ ನನ್ನ ಈ ದೀನ ಹಣೆಯನ್ನಿಕ್ಕುವೆನು. ರತ್ನಾವಳಿಯು ಸಂನ್ಯಾಸಿಯ ಕಾಲಮೇಲೆ ಬಿದ್ದಳು ಸಂನ್ಯಾಸಿಯು ಕೃತಕಾರ್ಯಳಾಗೆಂದು ಆಶೀರ್ವದಿಸಿ ಹೊರಟು ಹೋದನು. ರತ್ನಾವಳಿಯು ಮೋರೆಯನ್ನು ಮೇಲಕ್ಕೆತ್ತಿ ನೋಡಿದಾಗ ಅಲ್ಲಿ ಆ ತೇಜಸ್ವಿ ಮನುಷ್ಯನಿರಲಿಲ್ಲ ಉಷಾಲೋಕಿತವಾದ ಆ ಅರಣ್ಯದಲ್ಲಿ ರತ್ನಾವಳಿಯೊಬ್ಬಳೇ ಒಬ್ಬಳು!

---

# ೧೨ ಮಾರುತಿಯ ಮಂದಿರದಲ್ಲಿ.

ಅಯೋಧ್ಯೆಯ ಮಾರುತಿಯ ಮಂದಿರವು, ಬಹು ಪುರಾತನ ಕಾಲದ್ದು; ಹಾಗು ಪ್ರಖ್ಯಾತವಾದದ್ದು. ಈ ದೇವಾಲಯವು ಎತ್ತರ ಸ್ಥಳದಲ್ಲಿದ್ದುದರಿಂದ ದೇವದರ್ಶನಾಭಿಲಾಷಿಗಳು ಹಲವು ಮೆಟ್ಟಲುಗಳನ್ನೇರಿ ಹೋಗಬೇಕಾಗುತ್ತಿತ್ತು. ಗುಡಿಯು ದೊಡ್ಡದು. ಮೂರ್ತಿಯು ಭವ್ಯವಾದದ್ದು. ಹನುಮಂತನು ಶ್ರೇಷ್ಠತಮ ಭಕ್ತನು. ಭಕ್ತಿಯೋಗಿಗಳಿಗೆ ಆದರ್ಶಸ್ವರೂಪನು. ಭಕ್ತಿಮಾರ್ಗದಲ್ಲಿ ಸಂಚರಿಸಬೇಕೆನ್ನುವವರು ಮೊದಲು ಮಾರುತಿಯ ಪ್ರಸನ್ನತೆಗೆ ಯತ್ನಿಸಬೇಕು. ಅಂಜನೇಯನ ಕೃಪೆಯು ತರುವಾಯ ಸೀತಾರಾಮರ ಸೇವೆಗೆ ತೊಡಗಬೇಕು. ಇದರಿಂದ ನೋಡಲು ಸೀತಾರಾಮರ ಕೃಪಾಸಂಪಾದನೆಗೆ ಹನುಮಂತನು

ಮಧ್ಯಸ್ಥನಾಗಿರುವನೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಈ ಕಾರಣದಿಂದ ಈ ಮಹಾವೀರಮಂದಿರಕ್ಕೆ ಬಹುಜನ ಸಾಧುಗಳೂ, ಸಂನ್ಯಾಸಿಗಳೂ, ಗೃಹಸ್ಥಾಶ್ರಮಿಗಳಾದ ಸಾಮಾನ್ಯಯಾತ್ರಿಕರೂ ಬರುತಲಿದ್ದರು. ದೇವಾಲಯವು ಸದಾ ಯಾತ್ರಿಕರಿಂದ ತುಂಬಿರುತ್ತಿತ್ತು.

ಮುಖ್ಯ ದೇವಾಲಯದ ಎರಡೂ ಪಕ್ಕಗಳಲ್ಲಿ ಹಲವು ಕೋಣೆಗಳಿದ್ದವು. ಭಕ್ತರು ಯಾತ್ರಿಕರ ವಾಸಸ್ಥಳದ ಸೌಕರ್ಯಕ್ಕಾಗಿ, ಈ ಕೋಣೆಗಳನ್ನು ಕಟ್ಟಿಸಿದ್ದರು. ಯಾರು ನಿಜವಾದ ಸಂನ್ಯಾಸಿಗಳೋ, ಯಾರು ನಿರ್ಜನ ಸ್ಥಳದಲ್ಲಿದ್ದು ಯೋಗಾಭ್ಯಾಸ ಮಾಡಬೇಕೆಂದಿಚ್ಛಿಸುವರೋ ಅವರು ಈ ಸ್ಥಳಕ್ಕೆ ಬರುತ್ತಿರಲಿಲ್ಲವೆಂಬದನ್ನು ಹೇಳಲಿಕ್ಕೆ ಬೇಡ; ಆದರೆ ಯಾರು ಹೊಟ್ಟೆ ಹೊರಕೊಳ್ಳಲಿಕ್ಕೆ ವೈರಾಗಿಗಳಾಗಿರುವರೋ ಅವರು ಈ ಕೋಣೆಗಳಲ್ಲಿ ತಮ್ಮ ವಾಸ್ತವ್ಯವನ್ನು ಹೂಡುತ್ತಿದ್ದರು. ಇಂತಹ ಜನರಿಂದ ಆ ಕೋಣೆಗಳು ಸದಾ ತುಂಬಿರುತ್ತಿದ್ದವು. ಉದರಂಭರಣಿಗಳಾದ ಬಾವಾಜಿಗಳಿಗೆ ಇಲ್ಲಿ ತುಂಬ ಅನುಕೂಲತೆಯಿತ್ತು. ಬೆಚ್ಚಗಿನ ವಾಸಸ್ಥಳವಿತ್ತು. ಅನ್ನಪಾನಗಳು ಹೊತ್ತು ಹೊತ್ತಿಗೆ ದೊರೆಯುತ್ತಿದ್ದವು. ಮೇಲಾಗಿ ಇವರು ಯಾತ್ರಿಕರಿಂದ ದಕ್ಷಿಣೆಯನ್ನು ವಸೂಲ ಮಾಡಿಕೊಂಡು, ಸಿದ್ಧಿಯ ಸೇವೆಯಲ್ಲಿ ತೊಡಗಿ ಬ್ರಹ್ಮಾನಂದಮಗ್ನರಾಗಬಹುದಿತ್ತು.

ಕೋಣೆಗಳು ತೀರ ಸಣ್ಣವಿದ್ದವು. ಒಂದು ಕೋಣೆಯಲ್ಲಿ ಒಬ್ಬನು ಮಾತ್ರ ಪ್ರಶಸ್ತವಾಗಿ ವಾಸಿಸಬಹುದಾಗಿತ್ತು. ಈ ಕೋಣೆಗಳಲ್ಲಿ ಇಂಥವರೇ ಇರಬೇಕೆಂಬ ನಿರ್ಬಂಧವಿರಲಿಲ್ಲ. ಬೇಕಾದವನು ಬಂದು ತೆರವಿದ್ದ ಕೋಣೆಯನ್ನು ಹೊಗಬಹುದು. ವಾಸವಾಗಿರಬಹುದು. ಕೋಣೆಗಳು ಸದಾ ಮುಕ್ತದ್ವಾರಗಳು. ಯಾವನು ಮೊದಲು ವಾಸವಾಗುವನೋ ಅವನ ಸ್ವಾಮಿತ್ವಕ್ಕೊಳಪಟ್ಟುದು. ಅವನನ್ನು ಆ ಕೋಣೆಯಿಂದ ಹೊರದೂಡುವ ಅಧಿಕಾರವು ಯಾವನಿಗೂ ಇರಲಿಲ್ಲ

ಒಂದು ಕೋಣೆಯಲ್ಲಿ ಒಬ್ಬ ಸಾಧುವು ಕುಳಿತಿದ್ದನು ಅವನ ಸರಂಜಾಮುದಲ್ಲಿ ಯಾವ ಕೊರತೆಯೂ ಇರಲಿಲ್ಲ. ವಿಪುಲವೂ, ಶುಭ್ರವೂ ಆದ ಜಡೆ-ಗಡ್ಡ-ಮೀಸೆಗಳು; ಮೈಯಲ್ಲಿ ಕೌಪೀನ; ಕೊರಳಲ್ಲಿ ದೊಡ್ಡ ರುದ್ರಾಕ್ಷಿಗಳ ಸರ. ಹತ್ತಿರದಲ್ಲಿಯ ಜೋಳಿಗೆಯು ಉಪಯುಕ್ತ ವಸ್ತುಗಳಿಂದ ಪೂರ್ಣವಾಗಿದೆ. ಒಂದು ಕಡೆಯಲ್ಲಿ ನೀರು ತುಂಬಿದ ಚೆಂಬು.

ಈ ವೈರಾಗಿಯಲ್ಲಿ ಆಡಂಬರದ ಎಲ್ಲ ಒಡವೆಗಳಿದ್ದವು; ಆದರೆ ಅತ್ಯವಶ್ಯವಾದ ಭಕ್ತಿ ಹಾಗು ಶಾಂತತೆ ಮಾತ್ರ ಇರಲಿಲ್ಲ. ಇವನು ಈಗ ಕಣ್ಣುಮುಚ್ಚಿ ಭಜನೆಗೆ ತೊಡಗಿದನು; ಆದರೆ ಭಜನೆಯಲ್ಲಿ ಮನಸ್ಸು ತೊಡಗಿರಲಿಲ್ಲ. ಅದು ಬೇರೆ ವಿಚಾರದಲ್ಲಿ ತೊಡಗಿತ್ತು. ವೈರಾಗಿಯು ನಡುನಡುವೆ ಕಣ್ತೆರೆದು, ಯಾರಾದರೂ ಬರುತ್ತಿರುವರೆ ಹೇಗೆಂಬದನ್ನು ನೋಡುತಲಿದ್ದನು

ತುಸ ಹೊತ್ತಿನಲ್ಲಿ ಮತ್ತೊಬ್ಬ ವೈರಾಗಿಯು ಅಲ್ಲಿಗೆ ಬಂದನು. ಬಾಗಿಲ ಹತ್ತರ ನಿಂತನು. ಕುಳಿತಿದ್ದ ವೈರಾಗಿಯು ಕಣ್ಣು ಹೊರಳಿಸಿ ನೋಡಿ, ಮತ್ತೆ ಕಣ್ಣು ಮುಚ್ಚಿಕೊಂಡನು. ಮೊದಲಿಗಿಂತಲೂ ಉಚ್ಚ ಸ್ವರದಿಂದ ಭಜನೆಯು ಮಾಡಹತ್ತಿದನು. ಆಗಂತುಕ ವೈರಾಗಿಯು:— ಸ್ವಾಮಿ, ಎಂದು ಕೂಗಿದನು. ಕುಳಿತ ವಿರಾಗಿಯು ಕಣ್ಣು ತೆರೆದು ನೋಡಲಿಲ್ಲ ಮೊದಲಿಗಿಂತಲೂ ಜೋರಿನಿಂದ ಭಜನೆಯನ್ನು ನಡಿಸಿದನು:-“ಭಕ್ತೋದ್ಧಾರಾ ರಘುರಾಮಾ”

ಸ್ವಾಮಿ, ಕೇಳಬೇಕು. ಆಗಂತುಕ ವೈರಾಗಿಯು ನುಡಿದನು.

ಭಕ್ತಪಾವನ ಸೀತಾರಾಮಾ.

ಈ ಕೋಣೆಯು ನನ್ನದು. ಆಗಂತುಕನು ಅಂದನು.

ಭವಭಯ ಹರಣ ಭವರೋಗ ನಾಶ.

ಈ ಸ್ಥಳದಿಂದ ತಾವು ಎದ್ದು ಹೋಗಬೇಕು. ಆಗಂತುಕನು ಎಂದನು.

ದೀನೋದ್ಧಾರಾ ರಘುರಾಮಾ.

ಸ್ವಾಮಿ, ಕೇಳಿರಿ. ಈ ಕೋಣೆಯಲ್ಲಿ ನಾನು ನನ್ನ ಸಾಮಾನು ಗಳನ್ನಿರಿಸಿ, ಸ್ನಾನ ಮಾಡಿಕೊಂಡು ಬರಲಿಕ್ಕೆ ಹೋಗಿದ್ದೆನು. ಈ ಸಾಮಾನುಗಳೆಲ್ಲವೂ ನನ್ನವು. ಆಗಂತುಕನು ಹೇಳಿದನು.

ದೀನ ದಯಾಳು ಸೀತಾರಾಮ. ಕುಳಿತಿದ್ದ ಬೈರಾಗಿಯ ಭಜನೆಯ ಸ್ವರವು ಕ್ರಮವಾಗಿ ಏರುತ್ತ ನಡೆದು ಸಪ್ತಮಕ್ಕೆ ಮುಟ್ಟಿತು.

ನೀವು ಒಳ್ಳೇ ಮಾತಿನಿಂದ ಹಾದಿಗೆ ಬರುವಂತೆ ಕಾಣುವದಿಲ್ಲ. ಇದೋ ನೋಡಿರಿ:—

ಏನು ಮಾಡುವಿರಿ? ಕುಳಿತಿದ್ದ ಬೈರಾಗಿಯು ಕಣ್ದೆರೆದು ಕೇಳಿದನು.

ನಿಮ್ಮ ಕುತ್ತಿಗೆಗೆ ಕೈಗೊಟ್ಟು ಹೊರದಬ್ಬುವೆನು!

ನಾವು ಸಾಮಾನ್ಯ ಸಾಧುಗಳಲ್ಲ! ಚೆನ್ನಾಗಿ ನೋಡಿ ಮಾತಾಡಿರಿ. ನಮ್ಮಂಥ ಜ್ಞಾನಿಗಳ ಮೇಲೆ ನೀವು ಕೈಯೆತ್ತುವಿರಾ? ಕುಳಿತ ಬೈರಾಗಿಯು ಕೇಳಿದನು.

ಆಗಂತುಕ ಬೈರಾಗಿಯು ಬಹಳ ಗೊಂದಲದಲ್ಲಿ ಬಿದ್ದನು. ಕೂತಿದ್ದ ವಿರಾಗಿಯು ಒಳ್ಳೇ ಮಾತಿನಿಂದ ಹಾದಿಗೆ ಬರಲಿಲ್ಲ. ತೋರಿದ ಭಯಕ್ಕೆ ಬೆದರಲಿಲ್ಲ. ಇನ್ನು ಕೈಗೆ ಕೈಹತ್ತಬೇಕಾಗಿತ್ತು. ಇದು ಆಗಂತುಕ ಬೈರಾಗಿಗೆ ಬೇಡಾದ ಮಾತಾಗಿತ್ತು. ಯಾಕೆಂದರೆ ಇವನು ಕೂತ ಸಾಧುವಿನಂತೆ ಲಜ್ಜೆಯನ್ನು ಪೂರಾ ಬಿಟ್ಟವನಾಗಿರಲಿಲ್ಲ. ಕಾರಣ ಲತ್ತಾಲತ್ತಿಗೆ ಉದ್ಯುಕ್ತನಾಗಲಿಲ್ಲ. ಕೋಪದಿಂದ ಮಾತಾಡಹತ್ತಿದನು:-‘‘ನೀವು ದೊಡ್ಡ ಜ್ಞಾನಿಗಳೆಂದು ಹೇಳಿಕೊಳ್ಳುತ್ತಿರುವಿರಿ ....’’

‘‘ನಾವು ದೊಡ್ಡ ಸಾಧುಗಳಲ್ಲವೇ? ನಮ್ಮ ಹೆಸರು ಲಭವಿಜ ನಾರಾಯಣ ನಮ್ಮ ಗುರುಗಳ ಹೆಸರು ಹರಿಕಿಂಕರವಲ್ಲಭ—’’

‘‘ನಿಮ್ಮ ಪುರಾಣವು ನನಗೆ ಬೇಡ; ನೀವು ಸಾಧುಗಳಲ್ಲ; ಕಳ್ಳರು!’’

‘‘ಏನು? ಏನೆನ್ನುವೆ! ಬಾಯಸೊಳಕೊಂಡು ಮಾತಾಡು! ಮಹಾ

ಪಂಡಿತರಾದ ನಮ್ಮ ಗುರುಗಳು ದಿನಾಲು ಇಪ್ಪತ್ತು ಲಕ್ಷ ರಾಮನಾಮವನ್ನು ಜಪಿಸುತ್ತಿರುವರು. ಅವರ ಶಿಷ್ಯರಾಗಿದ್ದ ನಾವು ಪ್ರತಿದಿನ ಹತ್ತು ಲಕ್ಷ ಜಪಮಾಡುತ್ತಿದ್ದೇವೆ! ನಿನ್ನಂತಹ ಕ್ಷುದ್ರನು—''

ದೂರದಿಂದ ಗಾಯನಸ್ವರವು ಕೇಳಬರಹತ್ತಿತು. ಗಾಯಕನು ಅನ್ನುತ್ತಿರುವ ಪದದ ಭಾವವು ಹೀಗೆ ಇತ್ತು:—''ದುಷ್ಟರು, ಶಿಷ್ಟರು, ಕಳ್ಳರು, ಠಕ್ಕರು ಮೊದಲಾದವರೆಲ್ಲರೂ ರಾಮನಾಮವನ್ನುಚ್ಚರಿಸುತ್ತಿರುವರು; ಆದರೆ ಪ್ರೇಮವಿಲ್ಲದ ನಾಮೋಚ್ಚರಣೆಯಿಂದ ಆನಂದಕಿಶೋರನು ಮೆಚ್ಚುವದಿಲ್ಲ.''

ಬೈರಾಗಿಗಳಿಬ್ಬರೂ ಗಾಯನವನ್ನು ಕೇಳಿದರು. ಅರ್ಥವನ್ನು ಗ್ರಹಿಸಿದರು. ಲಛಮೀನಾರಾಯಣನು ಹೇಳಹತ್ತಿದನು:—''ತಮ್ಮಾ, ಕಲಹ ಮಾಡುವದರಲ್ಲಿ ಪ್ರಯೋಜನವಿಲ್ಲ. ಅತ್ತ ನೋಡು, ಯಾರೋ ಹಾಡುತ್ತ ಬರುತ್ತಿರುವರು.''

''ತಾವೇ ಎದ್ದು ಹೋಗಿ ನೋಡಬಾರದೆ?''

''ಹೋಗಲಿ ಬಿಡು. ಭಿಕ್ಷುಕನಿರಬಹುದು. ಅವನಿಗೆ ಅಷ್ಟೊಂದು ಮಹತ್ವಕೊಟ್ಟು ಉಪಯೋಗವಿಲ್ಲ.'' ಲಛಮೀನಾರಾಯಣನು ಹೇಳಿದನು.

ಮತ್ತೆ ಗಾಯನವು ಕೇಳಹತ್ತಿತು. ಅದರ ಸಾರವಿಂತು: ''ನಾನು ಸಾಧನ-ಭಜನಗಳೆಂದರೇನೆಂಬದನ್ನರಿಯೆನು! ಕೇವಲ ನಿನ್ನ ನಾಮವೊಂದನ್ನು ನಂಬಿದ್ದೇನೆ! ಧರ್ಮ-ಕರ್ಮಗಳೆಂದರೇನೆಂಬದನ್ನು ತಿಳಿಯೆನು! ಕೇವಲ ನಿನ್ನ ನಾಮ-ಗಾಯನ ಮಾಡುತ್ತಿರುವೆನು!''

''ಎಂತಹ ಮೂರ್ಖನವ! ಏನನ್ನೂ ಅರಿಯನಂತೆ! ನಾವು ಎಲ್ಲವನ್ನೂ ಬಲ್ಲೆವು!'' ಲಛಮೀನಾರಾಯಣನು ನುಡಿದನು. ಇನ್ನೊಬ್ಬ ಬೈರಾಗಿಯ ಹೆಸರು ಹರಿಸಹಾಯ. ಇವನಿಗೆ ಲಛಮೀನಾರಾಯಣನ ವಾಚಾಳತೆಯು ಸೇರಲಿಲ್ಲ. ಸಿಟ್ಟಿನಿಂದ ಹೇಳಹತ್ತಿದನು: ''ಅರಣ್ಯಪಂಡಿತರೆ, ಆತ್ಮಪೌರುಷವನ್ನು ಮಾಡಿಕೊಳ್ಳಬೇಡಿರಿ! ಸುಮ್ಮನಿದ್ದು ಗಾಯನವನ್ನು ಕೇಳಿರಿ!''

ಪುನಃ ಗಾಯನವು ಕೇಳಿಸಿತು. ಅದರ ಮರ್ಮವು ಹೀಗೆ: “ನನ್ನ ಹತ್ತಿರದಲ್ಲಿ, ಎಡ-ಬಲಗಳಲ್ಲಿ, ಹೃದಯಾಭ್ಯಂತರದಲ್ಲಿ, ಹೃದಯದ ಹೊರಗೆ, ಆಕಾಶದಲ್ಲಿ, ಪಾತಾಳದಲ್ಲಿ ಎಲ್ಲೆಲ್ಲಿಯೂ ನೀನೇ ಇರುವೆಯೆಂಬುದನ್ನು ಬಲ್ಲೆನು.”

“ಅಯ್ಯೋ, ಗಾಯಕನು ಅಳುತ್ತಿರುವನಲ್ಲ! ಪಾಪ, ಹೆಂಡತಿಯು ಸತ್ತಿರಬಹುದು!” ಲಕ್ಷ್ಮೀನಾರಾಯಣನೆಂದನು.

ಮೂರ್ಖಶಿಖಾಮಣಿಗಳೆ, ಮಾತ ಬಳಸಿ ಗದ್ದಲ ಮಾಡಬೇಡಿರಿ. ಸುಮ್ಮನಿದ್ದು ಚಿತ್ತಗೊಟ್ಟು ಕೇಳಿರಿ. ಹರಿಸಹಾಯನು ನುಡಿದನು. ಮತ್ತೆ ಗಾಯನವು ಕೇಳಹತ್ತಿತು. ಅದರ ಅಭಿಪ್ರಾಯವು ಹೀಗೆ ಇತ್ತು:- ಶ್ರೀ ರಾಮನೇ, ನಿನ್ನ ನಾಮವೊಂದೇ ನನ್ನ ಆಶೆ, ಭರವಸೆ, ಸಾಧನ ನನಲ್ಲಿ ಬೇರೆ ಸಂಬಲವೇನೂ ಇಲ್ಲ. ನಾನು ಕಂಗಾಲರಲ್ಲಿ ಕಂಗಾಲನು. ನನಗೆ ಬೇರೆ ಏನೂ ಬೇಡ. ನೀನು ಬೇಕು. ಶ್ರೀರಾಮ, ರಘುರಾಮ, ಸೀತಾರಾಮ ಈ ದೀನನು ಬೇಡಿಕೊಳ್ಳುವನು. ಕರುಣಿಸಿ ಮೈದೋರು; ದರ್ಶನ ಕೊಡು.

ಓಹೋ, ಭಜನೆ ಮಾಡಲಾರಂಭಿಸಿದನು. ನಾವು ಇವನಿಗಿಂತಲೂ ಚೆನ್ನಾಗಿ ಭಜನೆ ಮಾಡಬಲ್ಲೆವು. ಲಕ್ಷ್ಮೀನಾರಾಯಣನು ನುಡಿದನು.

ದಿಗ್ಗಜಪಂಡಿತನೇ, ಸುಮ್ಮನಿರು. ನಾಯಿಯಂತೆ ಬೊಗಳಬೇಡ. ಹರಿಸಹಾಯನೆಂದನು. ಗಾಯಕನು ಮೆಲ್ಲಮೆಲ್ಲನೆ ಬರುತಲಿದ್ದನು. ಇಬ್ಬರೂ ವೈರಾಗಿಗಳು ಉತ್ಸುಕತೆಯಿಂದ ನೋಡಿದರು. ಪ್ರೌಢವಯಸ್ಸಿನ ಸಂನ್ಯಾಸಿ. ಸುಂದರ ಕಾಂತಿಯುಕ್ತವಾದ ದೇಹವುಳ್ಳವನು ಪ್ರೇಮನಯನಗಳುಳ್ಳವನು. ತಪಸ್ಸಿನ ತೇಜವು ಮೋರೆಯಲ್ಲಿ ಒಡೆದು ಕಾಣುತ್ತಿತ್ತು. ಹರಿಸಹಾಯನು ಎದುರಿಗೆ ಹೋಗಿ ಗಾಯಕನಿಗೆ ನಮಸ್ಕರಿಸಿದನು. ಲಕ್ಷ್ಮೀನಾರಾಯಣನು ಕೂತ ಸ್ಥಳ ಬಿಟ್ಟು ಕದಲಲಿಲ್ಲ. ಎದ್ದು ಹೋದರೆ, ಆಕ್ರಮಿಸಿರುವ ಸ್ಥಳವು ಕೈಬಿಟ್ಟು ಹೋಗುವದಲ್ಲಿಯೊ?

ಎಂಬ ಹೆದರಿಕೆಯಿತ್ತು. ಮೇಲಾಗಿ ಆತ್ಮಗರಿಮೆಯೂ ಒಂದು ಕಾರಣ ವಿರಬಹುದು.

ಅಣ್ಣಗಳಿರಾ, ನೀವು ಜಗಳಾಡುತ್ತಿರುವಿರೇಕೆ? ತುಳಸೀದಾಸನು ಕೇಳಿದನು. ಆಗಂತುಕ ಗಾಯಕನು ತುಳಸಿದಾಸನಾಗಿದ್ದನೆಂಬದನ್ನು ಬೇರೆಯಾಗಿ ಹೇಳಲಿಕ್ಕೆ ಬೇಡ.

ಈ ಸಾಧುವು ನನ್ನನ್ನು ಹೊಡೆಯ ಬಂದಿದ್ದಾನೆ! ಲಘವಿೂನಾರಾಯಣನು ಹೇಳಿದನು.

ನಾನು ಸ್ನಾನಕ್ಕೆಂದು ಹೊರಬಿದ್ದು ಹೋಗಿರುವಾಗ, ಈ ಭಂಡನು ಇಲ್ಲಿಗೆ ಬಂದು, ನನ್ನ ಸ್ಥಳವನ್ನೂ ಸಾಮಾನುಗಳನ್ನೂ ಆಕ್ರಮಿಸಿದ್ದಾನೆ. ಎಷ್ಟು ಹೇಳಿದರೂ ಬಿಟ್ಟುಕೊಡಲೊಲ್ಲನು! ಹರಿಸಹಾಯನು ಹೇಳಿದನು.

ಅಣ್ಣಗಳಿರಾ, ಈ ಸ್ಥಾನಕ್ಕೋಸುಗ ಏಕೆ ಕಲಹಪ್ರವೃತ್ತರಾಗಿರುವಿರಿ? ನೀವೀ ಸ್ಥಳದಲ್ಲಿ ಎಷ್ಟು ದಿವಸ ಇರಬಲ್ಲಿರಿ? ತುಳಸೀದಾಸನು ಕೇಳಿದನು. ಯಾರೂ ಉತ್ತರ ಕೊಡಲಿಲ್ಲ. ತುಳಸೀದಾಸನು ಮತ್ತೆ ಕೇಳಿದನು:—ಅಪ್ಪಗಳಿರಾ, ನೀವೀ ಜಗತ್ತಿನಲ್ಲಿ ಎಷ್ಟು ದಿನ ಇರುವಿರಿ?

ರಘುನಾಥನು ಇಟ್ಟಷ್ಟು ದಿವಸ. ಲಘವಿೂನಾರಾಯಣನು ಆರ್ದ್ರತೆಯಿಂದ ಹೇಳಿದನು.

ಅಷ್ಟು ದಿವಸ ನೀವೇನು ಮಾಡುವಿರಿ? ತುಳಸೀದಾಸನು ಕೇಳಿದನು.

ಸಾಧನ-ಭಜನಗಳನ್ನು ಮಾಡುವೆವು. ಲಘವಿೂನಾರಾಯಣನು ಹೇಳಿದನು.

ಬಂಧುಗಳೆ, ನೀವೀಗ ಆಚರಿಸುತ್ತಿರುವದು ಯೋಗ್ಯವೆ? ಈ ವರ್ತನವು ಸಾಧಕರಿಗೆ ಯೋಗ್ಯವಾದುದಲ್ಲ. ಕೊಂಚ ಸ್ಥಳಕ್ಕಾಗಿ ಕಲಹಿಸುವದು ಕ್ಷುದ್ರಬುದ್ಧಿಯ ಪ್ರಾಪಂಚಿಕರ ಕೆಲಸ. ಆತ್ಮಕಲಹಕ್ಕೆ ಪ್ರವೃತ್ತರಾಗುವದು ಬುದ್ಧಿಹೀನರಾದ ಹೊಟ್ಟೆ ಹೊರಕೊಳ್ಳುವವರ ಹೋರೆ. ನಾಯಿಗಳಂತೆ ಬೊಗಳುತ್ತ ನಡೆಯುವದು ಉದರ ಪೂಜಕರ ಧಂದೆ.

ವೈರಾಗಿಗಳಾಗಿದ್ದ ನಿಮಗಿದು ಸಲ್ಲದು!

ಸಾಧು, ನೀನು ಸರಿಯಾಗಿ ಹೇಳಿದೆ. ಈ ಮನುಷ್ಯನು ಕೇವಲ ಹೊಟ್ಟೆಯುಪಾಡಿಗಾಗಿ ಅಲೆಯುವನು. ಸದಾ ಪ್ರಾಪಂಚಿಕ ವಿಚಾರ ಮಾಡುತ್ತಿರುವನು. ಭಜನ-ಪೂಜನಗಳನ್ನೆಷ್ಟು ಮಾತ್ರಕ್ಕೂ ಅರಿಯನು. ಲಕ್ಷ್ಮೀನಾರಾಯಣನು ಹರಿಸಹಾಯನನ್ನು ತೋರಿಸಿ ಹೇಳಿದನು.

ಅಣ್ಣಾ, ನೀನೂ ಕೂಡ ಆ ಸಾಧನ-ಭಜನಗಳ ದಾರಿಯನ್ನರಿಯೆ! ತಿಳಿದಿದ್ದರೆ, ನೀನು ಈ ಸ್ಥಳಕ್ಕಾಗಿ ಹೀಗೆ ಬಡಿದಾಡುತ್ತಿದ್ದಿಯಾ? ತುಳಸೀದಾಸನು ಹೇಳಿದನು.

ಸ್ಥಳವಿಲ್ಲದಿದ್ದರೆ, ಎಲ್ಲಿ ಕುಳಿತು ಸಾಧನೆಯನ್ನು ಮಾಡಬೇಕು? ಸಾಧಕನಿಗೆ ಸ್ಥಾನವು ಬೇಡವೆ? ಲಕ್ಷ್ಮೀನಾರಾಯಣನು ಕೇಳಿದನು.

ಸ್ಥಳಕ್ಕೇನು ಕೊರತೆಯಯ್ಯಾ? ಎತ್ತರವಾದ ಪರ್ವತಗಳಿವೆ. ವಿಸ್ತಾರವಾದ ಮೈದಾನಗಳಿವೆ. ನಿಬಿಡವಾದ ಅರಣ್ಯಗಳಿವೆ. ಸಾಧಕನು ಇಂತಹ ನಿರ್ಜನ ಸ್ಥಳವನ್ನಾಶ್ರಯಿಸಬೇಕು. ನಿಮಗೆ ಕೇವಲ ಹೊಟ್ಟೆ ಹೊರಕೊಳ್ಳುವದು ಬೇಕಿದ್ದರೆ, ಆ ಮಾತು ಬೇರೆ! ಉದರಪೂರಣಕ್ಕಾಗಿ ಸಂನ್ಯಾಸಿಯ ವೇಷ ಹಾಕಿಕೊಳ್ಳುವದು ನಿಂದ್ಯವಾದದ್ದು. ತುಳಸೀದಾಸನು ಹೇಳಿದನು.

ಅಡವಿಯಲ್ಲಾಗಲಿ, ಪರ್ವತದ ಮೇಲಾಗಲಿ ವಾಸಿಸಿದರೆ ಆಹಾರ ದೊರೆಯುವದು ಹೇಗೆ? ಕಲ್ಲು-ಮಣ್ಣುಗಳನ್ನು ತಿಂದು ಇರಲಿಕ್ಕಾದೀತೇ? ಲಕ್ಷ್ಮೀನಾರಾಯಣನು ಕೇಳಿದನು.

ಭಗವಂತನಲ್ಲಿ ವಿಶ್ವಾಸವಿದ್ದರೆ, ಕಲ್ಲು-ಮಣ್ಣುಗಳನ್ನು ತಿನ್ನಬೇಕಾಗುವದಿಲ್ಲ. ಆ ಸರ್ವಶಕ್ತನು ತನ್ನ ಆಶ್ರಿತರಿಗೆ ಆಹಾರವನ್ನೊದಗಿಸಿ ಕೊಡುವನು. ತುಳಸೀದಾಸನು ಹೇಳಿದನು.

ನಿನ್ನ ಮಾತು ಕೇಳಿ ನನಗೆ ನಗೆ ಬರುತ್ತಿದೆ! ಆ ಭಗವಂತನು ನಮಗೆ ಆಹಾರವನ್ನು ತಂದು ಕೊಡುವನೇ? ಲಕ್ಷ್ಮೀನಾರಾಯಣನು ಉಪಹಾಸ ಮಾಡಿದನು

ನಗಬೇಡಣ್ಣಾ! ನಿಜವಾಗಿಯೂ ಶ್ರೀ ಹರಿಯು ತನ್ನನ್ನು ಸೇರಿದವರಿಗೆ ನಿತ್ಯವೂ ಆಹಾರವನ್ನೊದಗಿಸಿ ಕೊಡುತ್ತಿರುವನು! ಒಂದು ಬಾರಿ ಹೋಗಿ ನೋಡು. ಆ ದಯಾಮಯನು ಎಷ್ಟು ಜನರಿಗೆ ದಿನಾಲು ಆಹಾರವನ್ನು ಪೂರೈಸಿಕೊಡುವನೆಂಬುದನ್ನು ಪರೀಕ್ಷಿಸು. ಗಿಡಗಳಲ್ಲಿ ರುಚಿಕರ ಹಣ್ಣುಗಳು, ನೆಲದಲ್ಲಿ ರಸಭರಿತವಾದ ಗಡ್ಡೆ-ಬೇರುಗಳು, ಕಲ್ಲಿನಲ್ಲಿ ನೀರು! ಇನ್ನೇನು ಬೇಕಯ್ಯಾ? ಅಲ್ಲಿ ಹೋಳಿಗೆ-ತುಪ್ಪ ಸಿಗುವದಿಲ್ಲೆಂಬುದು ನಿಜ. ಭಗವಂತನು ಬೇಕಿದ್ದರೆ, ಪಕ್ವಾನ್ನಗಳ ಹಂಬಲವನ್ನು ಬಿಡಬೇಕು. ಪಕ್ವಾನ್ನಗಳು ಬೇಕಿದ್ದರೆ, ಭಗವಂತನನ್ನು ಮರೆಯಬೇಕು! ಎರಡರ ಉಪಾಸನೆಯನ್ನೂ ಮಾಡುವೆನೆಂದರೆ ಒಂದು ಸಹ ಕೈಗೆ ಹತ್ತದು! ಇಂಥವರಿಗೆ ಸಾಧುವಿನ ವೇಷದಲ್ಲಿರುವದೊಂದೇ ಫಲ! ಇತ್ತ ಪ್ರಾಪಂಚಿಕ ಸುಖವಿಲ್ಲ; ಅತ್ತ ಪಾರಮಾರ್ಥಿಕ ಚಿರಸೌಖ್ಯವೂ ಇಲ್ಲ! ತುಳಸೀದಾಸನು ಹೇಳಿದನು.

ಸ್ವಾಮೀ, ಅರಣ್ಯದಲ್ಲಿ ತಂಡಿ ತಾಗಿದರೆ ಏನು ಮಾಡಬೇಕು? ಅಲ್ಲಿ ಬೆಂಕಿ ದೊರೆಯದು! ಅಲ್ಲಿ ಅಸಹ್ಯವಾದ ಚಳಿಯಿಂದ ನಾವು ನಮ್ಮ ರಕ್ಷಣೆಯನ್ನು ಹೇಗೆ ಮಾಡಿಕೊಳ್ಳಬೇಕು? ಲಛಮೀನಾರಾಯಣನು ಕೇಳಿದನು.

ಅಣ್ಣಾ, ನಿರರ್ಥಕ ಮಾತ ಬೆಳೆಸುತ್ತಿರುವೆ. ಮುಖ್ಯವಾಗಿ ನಾನು ಹೇಳುವ ಒಂದೇ ಒಂದು ಮಾತನ್ನು ನೆನಪಿನಲ್ಲಿಟ್ಟುಕೋ. ಆ ಮಾತು ಯಾವುದೆಂದರೆ "ಆ ಭಗವಂತನ ಅನುಗ್ರಹಕ್ಕೆ ಪಾತ್ರರಾದವರಿಗೆ ಯಾವ ಕೊರತೆಯೂ ಉಂಟಾಗದು!" ತುಳಸೀದಾಸನು ಹೇಳಿದನು.

ಹೀಗಿದ್ದರೆ, ಮಹಾನ್ ಮಹಾನ್ ಸಾಧುಗಳೂ ಕೂಡ ಜನವಸತಿಯ ಪ್ರದೇಶದಲ್ಲಿ ಸಂಚರಿಸುತ್ತಿರುವದೇಕೆ? ಲಛಮೀನಾರಾಯಣನು ಕೇಳಿದನು.

ಅವರು ಹೀಗೆ ತಾವಾಗಿ ಸಂಚರಿಸುವದಿಲ್ಲ. ಲೋಕೋಪಕಾ

ರವು ಆ ಮಹನೀಯರ ಕರ್ತವ್ಯವು. ಜ್ಞಾನಮಾರ್ಗದ ಸಾಧಕರು ಲೋಕಾಲಯಗಳಿಂದ ದೂರವಿರುವರು. ಇಂಥವರಿಗೆ ಜನದಟ್ಟಣೆಯ ಪ್ರದೇಶವು ಹಿತಕರವಲ್ಲ ಆದರೆ ಸಿದ್ಧರೂ, ಭಕ್ತಿಯೋಗಿಗಳೂ ಸಾಂಸಾರಿಕರಿಗೆ ಸನ್ಮಾರ್ಗವನ್ನು ತೋರಿಸಲಿಕ್ಕೆ ಸಂಚರಿಸುವರು.

ನೀನೇನು ಮಾಡುವೆ?

ನಾನು ನನ್ನ ಸ್ವಂತ ಇಚ್ಛೆಯಿಂದ ಯಾವ ಕೆಲಸವನ್ನೂ ಮಾಡುವದಿಲ್ಲ ಗುರುಗಳ ಅಪ್ಪಣೆಯಂತೆ ವರ್ತಿಸುತ್ತಿರುವೆನು ಅವರ ಅನುಜ್ಞೆಯಂತೆ ಈಗ ನಾಮಗಾಯನ ಮಾಡುತ್ತ ಸಂಚರಿಸುತ್ತಿಹೆನು. ಆ ಅಪಾರ ಮಹಿಮನ ಕರುಣಾಯಾಚನೆ ಮಾಡುತ್ತ ಅಡ್ಡಾಡುತ್ತಿರುವೆನು....ತುಳಸೀದಾಸನ ಕಂಠವು ಗದ್ಗದಿತವಾಯಿತು. ಕಣ್ಣುಗಳಿಂದ ಪ್ರೇಮಾಶ್ರುಗಳುದಿರಲಾರಂಭಿಸಿದವು. ತುಳಸೀದಾಸನು ಬೇರೆ ಮಾತಾಡದೆ ಮೆಲ್ಲಮೆಲ್ಲನೆ ಮುಂದೆ ನಡೆದನು. ಹರಿಹರಾಯನು ಹಿಂಬಾಲಿಸಿ ಹೋದನು. ಮುಂದೆ ಕೆಲ ಹೊತ್ತಿನ ಮೇಲೆ ತುಳಸೀದಾಸನು ಅಕಸ್ಮಾತ್ತಾಗಿ ಹಿಂದಿರುಗಿ ಹರಿಹರಾಯನನ್ನು ನೋಡಿದನು "ತಮ್ಮಾ, ನೀನೇಕೆ ನನ್ನನ್ನನುಸರಿಸಿ ಬರುತ್ತಿರುವೆ?" ಎಂದು ಕೇಳಿದನು.

ತಮ್ಮ ಮುಖದಿಂದ ಭಗವಂತನ ನಾಮಶ್ರವಣ ಮಾಡುವುದಕ್ಕೋಸುಗ.

ಇನ್ನು ನಾನು ಹಾಡಲಾರೆನು. ಅವನ ನಾಮೋಚ್ಚಾರಣೆ ಮಾಡುತ್ತಲೆ ನನ್ನ ಕುತ್ತಿಗೆಯ ನರಗಳು ಉಬ್ಬುವವು. ಮುಂದೆ ಸ್ವಲ್ಪ ಹೊತ್ತಿನಲ್ಲಿ ನನ್ನ ಬಾಯಿಂದ ಶಬ್ದಗಳೇ ಹೊರಡದಂತಾಗುವುದು. ತುಳಸೀದಾಸನು ಹೇಳಿದನು.

ಮಹಾರಾಜ, ನಾನು ಪಾಪಿಷ್ಠನು ಶ್ರೀಹರಿಯ ನಾಮವನ್ನು ಜ್ಞರಿಸಲಿಕ್ಕೆ ಅಸಮರ್ಥನು. ನಾಮವನ್ನು ಅನ್ನಬೇಕೆಂದು ಪ್ರಯತ್ನಿಸುತ್ತಲೆ, ಮನಸ್ಸು ಬೇರೆ ಕಡೆಗೆ ಹರಿದು ಹೋಗುವದು ಪ್ರವೃತ್ತಿಯು

ನನ್ನನ್ನು ಸಾಧನೆಯ ಮಾರ್ಗದಲ್ಲಿ ಮುಂದಡಿಯನ್ನಿಡಗೊಡಲೊಲ್ಲದು! ಮನಸ್ಸು ಆಗಾಗ್ಗೆ ವಿಷಯಗಳ ಕಡೆಗೆ ನನ್ನನ್ನು ಜಗ್ಗುತ್ತಿದೆ. ನಿಮ್ಮ ಕೃಪೆಗೆ ಪಾತ್ರನಾದ ಹೊರತು ನನಗೆ ನನ್ನ ಉದ್ಧಾರದ ಮಾರ್ಗವು ದೊರೆಯದು! ದಯವಿಟ್ಟು ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಮಾಡಿಕೊಂಡು, ಉಪದೇಶ ಮಾಡಿರಿ. ಮಾರ್ಗದರ್ಶಕರಾಗಿರಿ. ಹರಿಸಹಾಯನು ತುಳಸೀದಾಸನ ಪಾದಗಳ ಮೇಲೆ ಬಿದ್ದನು.

ತಮ್ಮಾ, ಏಳು. ನಾನು ಅತಿ ಕ್ಷುದ್ರ ಮನುಷ್ಯನು! ನಿನ್ನ ಮೇಲೆ ಕೃಪೆ ಮಾಡುವುದೇನು? ನಿನಗೆ ಉಪದೇಶ ಮಾಡಲೇನು?

ಸ್ವಾಮಿ, ಹೀಗೆ ಮಾತಾಡಿದರೆ ನಾನು ಕೇಳುವವನಲ್ಲ! ರತ್ನವನ್ನು ಮರೆಯಲ್ಲಿಟ್ಟರೂ ಅದು ತನ್ನ ಬೆಳಕನ್ನು ಕೆಡವತಕ್ಕದ್ದೇ! ನಾನು ನಿಮ್ಮನ್ನು ಗುರುತಿಸಿದ್ದೇನೆ. ನೀವು ಭಕ್ತ ಶಿಖಾಮಣಿಗಳೂ, ಪರಮ ಜ್ಞಾನಿಗಳೂ ಆದ ತುಳಸೀದಾಸರು! ನನ್ನನ್ನು ಸನ್ಮಾರ್ಗಕ್ಕೆ ಹಚ್ಚಲಿಕ್ಕೆ ಸಂಪೂರ್ಣ ಯೋಗ್ಯರು!

ಹೀಗೆ ನಿನ್ನ ವಿಶ್ವಾಸವಿದ್ದರೆ, ನನ್ನೊಡನೆ ಬಾ. ನಾನು ಬೇಡೆನ್ನುವುದಿಲ್ಲ. ತುಳಸೀದಾಸನು ನುಡಿದು ಮುಂದೆ ಸಾಗಿದನು. ಹರಿಸಹಾಯನು ಅವನನ್ನು ಹಿಂಬಾಲಿಸಿ ನಡೆದನು.

# ೧೪ ರಾಮಾಯಣ ರಚನೆ.

ಹರಿಸಹಾಯನ ವಯಸ್ಸು ಮೂವತ್ತಕ್ಕೆ ಏರಿರಲಿಲ್ಲ. ಇವನಲ್ಲಿ ಬಾಲ್ಯ ಕಾಲದಿಂದಲೂ ಧಾರ್ಮಿಕ ಭಾವನೆಯು ಜಾಗೃತವಾಗಿತ್ತು; ಆದರೆ ಅದಕ್ಕೆ ಪರಿಸ್ಥಿತಿಯು ಸಹಾಯವಿರಲಿಲ್ಲ. ಗುರೂಪದೇಶದ ಬೆಂಬಲವಿರಲಿಲ್ಲ ಹರಿಸಹಾಯನಲ್ಲಿ ಆತ್ಮಸಂಯಮಕ್ಕೆ ಅವಶ್ಯವಾದ ಮಾನಸಿಕ ಬಲವಿರಲಿಲ್ಲ. ಕಾರಣ ಅವನಲ್ಲಿಯ ಧಾರ್ಮಿಕ ಭಾವನೆಯು ಸಾರ್ಥಕವಾಗಿದ್ದಿಲ್ಲ. ವಯಸ್ಸು ಹೆಚ್ಚಿದಂತೆ ಅವನು ಷಡ್ರಿಪುಗಳ ಬಲೆಯಲ್ಲಿ ಸಿಕ್ಕನು. ವಿಷಯೋಪಭೋಗಗಳ ಬೆನ್ನಹತ್ತಿದನು. ಈ ವೇಳೆಯಲ್ಲಿ ಅವನು ಆಗಾಗ್ಗೆ ನಿರಾಶೆಯನ್ನು ಹೊಂದಿ ದುಃಖಿತನಾಗುತ್ತಿದ್ದನು; ಹಾಗು ಭಗವಂತನ ಮೊರೆ ಹೋಗುತ್ತಿದ್ದನು. ಆದರೆ ಅದು ಕೇವಲ ಪ್ರಾಪಂಚಿಕ ಸುಖಪ್ರಾಪ್ತಿಗಾಗಿ. ಈ ಸಮಯದಲ್ಲಿ ಅವನಿಗೆ ಮುಕ್ತಿಯ ಇಚ್ಛೆಯುಂಟಾಗಿರಲಿಲ್ಲ; ಆದರೆ ಒಂದು ದಿನ ಪ್ರಬಲವಾದ ನಿರಾಶೆಯು ಹೊಡೆತದಲ್ಲಿ ಸಿಕ್ಕು ಗೃಹತ್ಯಾಗಿಯಾದನು. ಸಂಗಡ ತುಸ ಹಣವನ್ನೂ ತಕ್ಕೊಂಡಿದ್ದನು. ಪ್ರವಾಸಿಯಾದ ಇವನು ಆ ಹಣವು ತೀರುತ್ತಲೆ, ನಿರುಪಾಯನಾಗಿ ಸಂನ್ಯಾಸಿಯ ವೇಷವನ್ನು ಧರಿಸಿದನು. ಸಂನ್ಯಾಸ ಧರ್ಮಪಾಲನೆಗೆ ಜಪ-ತಪಗಳ ಅವಶ್ಯಕತೆಯಿತ್ತು; ಆದರೆ ಈ ಕಾರ್ಯಗಳಲ್ಲಿ ಹರಿಸಹಾಯನ ಮನಸ್ಸು ರಮಿಸುತ್ತಿದ್ದಿಲ್ಲ.

ಹರಿಸಹಾಯನು ಜನರ ತೋರಿಕೆಗಾಗಿ ಭಜನ-ಪೂಜನಗಳನ್ನು ಮಾಡಬೇಕಾಗುತ್ತಿತ್ತು. ಕಾರಣ ಅವನು ಮನಸ್ಸಿಲ್ಲದಿದ್ದರೂ, ಹೇಗಾದರೂ ಮಾಡಿ, ಈ ಕಾರ್ಯಗಳನ್ನು ಮಾಡುತಲಿದ್ದನು; ಆದರೆ ಮನಸ್ಸು ವಿಷಯಗಳ ಕಡೆಗೆ ಹರಿಯುತಲಿತ್ತು. ಹೀಗಾಗಿ ಹರಿಸಹಾಯನಿಗೆ

ಶಾಂತಿಯು ದೊರೆಯಲಿಲ್ಲ. ಒಮ್ಮೊಮ್ಮೆ ಅವನು ಹೀಗೆ ಡಾಂಭಿಕ ವೃತ್ತಿಯಿಂದಿರುವದಕ್ಕಿಂತ ಮತ್ತೆ ಸಾಂಸಾರಿಕನಾಗುವದು ಒಳ್ಳೆಯದೆಂದು ಆಲೋಚಿಸುತ್ತಿದ್ದನು ಪುನಃ ಮನೆಯನ್ನು ಸೇರುವ ನಿರ್ಧಾರ ಮಾಡಿ ಕೊಳ್ಳುತ್ತಿದ್ದನು.

ಮನಸ್ಸಿನ ಚಂಚಲತೆಯ ಈ ಸ್ಥಿತಿಯಲ್ಲಿರುವ ಹರಿಸಹಾಯನಿಗೆ ತುಳಸೀದಾಸನ ದರ್ಶನವಾಯಿತು. ಪೂರ್ವಜನ್ಮದ ಪುಣ್ಯದ ಬಲದಿಂದ ಹರಿಸಹಾಯನಿಗೆ ಯೋಗ್ಯ ಗುರುವು ದೊರೆತನು. ಸತ್ಸಹವಾಸದಿಂದ ಅವನ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವಾಯಿತು. ಹರಿಸಹಾಯನು ತುಳಸೀದಾಸನ ಸಹಚರನಾಗಿ ಶಾಂತಿಯನ್ನು ಪಡೆಯುಹತ್ತಿದನು. ತುಳಸೀದಾಸನು ಹರಿಸಹಾಯನು ಮಾಡುತ್ತಿರುವ ಸೇವೆಯಿಂದ ಸಂತುಷ್ಟನಾಗಿ ಮಂತ್ರೋಪದೇಶ ಮಾಡಿದನು. ತನ್ನ ಶಿಷ್ಯನನ್ನಾಗಿ ಮಾಡಿಕೊಂಡು ಅವನಿಗೆ ಬಾಲಾಜಿ ಎಂಬ ಹೊಸ ಹೆಸರ ಕೊಟ್ಟನು.

ತುಳಸೀದಾಸನು ಅಯೋಧ್ಯೆಯಲ್ಲಿ ಯಾವುದೊಂದು ಮನೆಯಲ್ಲಿ ಇರಬಯಿಸಲಿಲ್ಲ. ಮಾರುತಿಯ ಮಂದಿರದಲ್ಲಿ ವಾಸವಾಗಿರುವದಕ್ಕೂ ಒಪ್ಪಲಿಲ್ಲ. ಸರಯೂ ನದಿಯ ತೀರದಲ್ಲಿರುವ ಒಂದು ದೊಡ್ಡ ಮರದ ಕೆಳಗೆ ವಾಸಿಸಹತ್ತಿದನು. ಹಿಂಭಾಗದಲ್ಲಿ ದಟ್ಟವಾದ ಅಡವಿ. ಮುಂದೆ ಸರಯೂ ನದಿ. ತುಳಸೀದಾಸನು ಬೆಚ್ಚಗಿನ ಜಾಗೆಯ ಅಪೇಕ್ಷೆ ಮಾಡಿದವನಲ್ಲ. ಆದರೂ ಬಾಲಾಜಿಯು ಗುರುವಿನ ಸಂರಕ್ಷಣೆಗಾಗಿ ಒಂದು ಕುಟೀರವನ್ನು ನಿರ್ಮಿಸುವ ಸಂಕಲ್ಪ ಮಾಡಿಕೊಂಡನು. ಆ ಅರಣ್ಯದಲ್ಲಿ ಉಪಕರಣಗಳ ಕೊರತೆಯಿದ್ದಿಲ್ಲ. ಬಾಲಾಜಿಯು ಕೂಡಲೆ ಉದ್ಯೋಗಕ್ಕೆ ತೊಡಗಿದನು. ಬಾಲಾಜಿಗೆ ಈ ಕೆಲಸದಲ್ಲಿ ಒಬ್ಬ ಅಪರಿಚಿತ ಕಿಶೋರನು ನೆರವಾಗಹತ್ತಿದನು. ಇವನಾರೆಂಬದನ್ನು ಬಾಲಾಜಿಯು ಅರಿಯನು. ವಿಚಾರಿಸುವ ಗೋಜಿಗೂ ಹೋಗಲಿಲ್ಲ. ಗುಡ್ಡಗಾಡ ಜನರ ಈ ಹುಡುಗನು ತುಳಸೀದಾಸನಲ್ಲಿ ಭಕ್ತಿಯುಳ್ಳವನಾಗಿ

ಹೀಗೆ ಮಾಡುತ್ತಿರಬಹುದೆಂದು ಭಾವಿಸಿ ಸುಮ್ಮನಿದ್ದನು. ಬಾಲಾಜಿಯೂ, ಕಿಶೋರನೂ ಕೂಡಿ ಗುಡಿಸಲವನ್ನು ಹಾಕಹತ್ತಿದರು. ಸಾಮಾನುಗಳು ಬೇಕಾದಾಗ ಕಿಶೋರನು ಹೋಗಿ ತಂದುಕೊಡುವನು. ಬಾಲಾಜಿಯು ಆ ಸಾಮಾನುಗಳನ್ನು ಉಪಯೋಗಿಸಿ, ಗುಡಿಸಲವನ್ನು ಕಟ್ಟುವನು. ಮುಂದೆ ಕೆಲಹೊತ್ತಿನ ಮೇಲೆ ತುಳಸೀದಾಸನು ಈ ಹುಡುಗನನ್ನು ನೋಡಿದನು. ಇವನಾರೆಂಬುದು ತುಳಸೀದಾಸನಿಗೂ ಗೊತ್ತಾಗಲಿಲ್ಲ.

ಆ ಹುಡುಗನು ಒಂದು ಉಗುಟ ದೋತರವನ್ನುಟ್ಟಿದ್ದನು. ಅದು ತೀರ ಮೈಗೆ ಹತ್ತಿಯಿತ್ತು. ಮೈಮೇಲೆ ಬೇರೆ ಒಟ್ಟೆಯಿರಲಿಲ್ಲ. ಮೈಯು ಅನಾವರಣವಾಗಿತ್ತು. ದೇಹವು ಲಾವಣ್ಯಮಯ; ಮುಖವು ಮಂದಹಾಸಯುಕ್ತ; ಕಣ್ಣುಗಳು ತೀಕ್ಷ್ಣವಾದವುಗಳು; ಕಾಲಲ್ಲಿ ಮೆಟ್ಟುಗಳಿರದಿದ್ದರೂ, ಪಾದಗಳು ತೀರ ಜಳಜಳ ಇದ್ದವು. ನೋಡಿದವರು ಆ ಪಾದಗಳು ನೆಲಕ್ಕೆ ಹತ್ತಿರಲಿಕ್ಕಿಲ್ಲವೆಂದು ಅನ್ನುವಂತಿದ್ದವು. ತುಳಸೀದಾಸನು ಕುತೂಹಲವಶನಾಗಿ ಕಿಶೋರನ ಹತ್ತಿರ ಬಂದನು. ಮುಗ್ಧನಾಗಿ ಎವೆಯಿಕ್ಕದೆ ನೋಡಹತ್ತಿದನು. ಆ ಹುಡುಗನೂ ತುಳಸೀದಾಸನನ್ನು ಓರೆಗಣ್ಣಿನಿಂದ ನೋಡಿದನು. ತುಳಸೀದಾಸನು "ತಮ್ಮಾ, ನೀನು ಯಾರು?" ಎಂದು ಕೇಳಿದನು.

ನಾನು ನಿಮ್ಮ ಮಗನು.

ಆ ಹುಡುಗನು ತಲೆಯ ಮೇಲೆ ಎಲೆಯ ದೊಡ್ಡ ಪೆಂಡೆಯನ್ನು ಹೊತ್ತಿದ್ದನು. ತುಳಸೀದಾಸನ ಲಕ್ಷ್ಯವು ಈಗ ಆ ಪೆಂಡಿಯ ಕಡೆಗೆ ಹರಿಯಿತು. ಅವನಿಗೆ ಕನಿಕರವುಂಟಾಯಿತು. ಆ ಎಲೆಯ ಹೊರೆಯನ್ನು ಕೂಡಲೆ ಕೆಳಗೆ ಚೆಲ್ಲಿಸಿ ಬಿಡಬೇಕೆಂದಾಲೋಚಿಸಿ :— ಈ ವಯಸ್ಸಿನಲ್ಲಿ ಕೋಮಲ ದೇಹದ ನೀನು ಇಂಥ ಕಷ್ಟದ ಹೊರೆಯನ್ನೇಕೆ ಮಾಡುತ್ತಿರುವೆ? ಇದು ನಿನಗೆ ಹಿತಕರವಲ್ಲ. ಆ ಹೊರೆಯನ್ನು ಕೆಳಗೆ ಬಿಸಾಟಿ

ಬಿಡು, ಎಂದು ನುಡಿದನು.

ಕಷ್ಟವೇತರದು? ಇಂತಹ ಕೆಲಸವನ್ನು ಮಾಡಿ ಮಾಡಿ ನನ್ನ ಮೈಯುಂಡು ಹೋಗಿದೆ. ನೀವು ಚಿಂತಿಸುವ ಕಾರಣವಿಲ್ಲ. ಆ ಕಿಶೋರನು ನುಡಿದನು.

ಹೀಗೆಂದರೆ ಹೇಗೆ? ನಿನ್ನಂತಹ ತರಳನಿಂದ ಈ ತರದ ಕೆಲಸ ಮಾಡಿಸಿಕೊಳ್ಳಲಿಕ್ಕೆ ನಾನು ಒಪ್ಪಲಾರೆನು. ಆ ಬಜ್ಜಿಯನ್ನು ಒಗೆದು ಬಿಡು ಬಾಲಾಜಿಯು ನಿನಗೆ ಸಿಟ್ಟುಮಾಡುವದಿಲ್ಲ. ನಾನು ಅವನಿಗೆ ಹೇಳುವೆನು. ಇಲ್ಲಿ ಬಾ. ನನ್ನ ಹತ್ತಿರ ಕುಳಿತುಕೊಳ್ಳು. ತುಳಸೀದಾಸನೆಂದನು.

ಸ್ವಾಮಿ, ಹಾಗೆ ಕುಳಿತುಕೊಂಡರೆ ಹೇಗೆ ನಡೆದೀತು? ನಮ್ಮಂಥವರಿಗೆ ಆಲಸ್ಯತನವು ಒಳ್ಳೇದಲ್ಲ!

ನೀನು ಬಡವನಿರುವಿಯಾ? ತಮ್ಮಾ, ಮಾಡುವದೇನು? ನಾನು ನಿನ್ನ ಬಡತನವನ್ನು ಹಿಂಗಿಸಲಾರದವನಾಗಿದ್ದೇನೆ. ಯಾಕೆಂದರೆ ನಿನಗೆ ಕೊಡಲಿಕ್ಕೆ ನನ್ನ ಬಳಿಯಲ್ಲೇನೂ ಇಲ್ಲ.

ನೀವೂ ನನ್ನಂತೆಯೇ ದರಿದ್ರರೇ ಇರುವಿರೇನು?

ಹೌದಣ್ಣಾ, ನಾನು ಅಷ್ಟದರಿದ್ರನು!

ಹೀಗಿದ್ದರೆ, ನಿಮಗೂ ನನಗೂ ಚೆನ್ನಾಗಿ ಕೂಡಿತೆನ್ನಬೇಕು! ನೀವೂ ದರಿದ್ರರು; ನಾನೂ ದರಿದ್ರನು. ಕಂಗಾಲನ ಮಗನು ಕಂಗಾಲನು! ಕಿಶೋರನು ನಗಹತ್ತಿದನು.

ನಿನ್ನನ್ನು ಹತ್ತಿರ ಕುಳ್ಳಿರಿಸಿಕೊಳ್ಳಬೇಕು, ನಿನ್ನ ಸಂಗಡ ಪ್ರೀತಿಯ ಮಾತಾಡಬೇಕು, ನಿನ್ನ ಮೈಮೇಲೆ ಕೈಯಾಡಿಸಬೇಕು, ಎಂದು ನನ್ನ ಮನಸ್ಸು ಹಾತೊರೆಯುತ್ತದೆ. ಇತ್ತ ಬಾ ನನ್ನ ಹತ್ತರ ಕುಳಿತುಕೋ.

ಛೀ, ನಾನು ಬರುವದಿಲ್ಲ ನನ್ನನ್ನು ಮುಟ್ಟಬೇಡಿರಿ. ಯಾಕೆಂದರೆ, ನಾನು ಹೀನ ಜಾತಿಯವನು.

ತುಳಸೀದಾಸನು ಹಿಂದಕ್ಕೆ ಸರಿದನು. ಕಿಶೋರನು ಮುಗುಳು ನಗೆ ನಗುತ್ತ:—ನೀವು ಈ ಅರಣ್ಯಕ್ಕೆ ಯಾಕೆ ಬಂದಿರುವಿರಿ? ಎಂದು ಕೇಳಿದನು

ಈ ಸ್ಥಳವು ನಿರ್ಜನವಾಗಿರುವದು.

ಆದರೇನಾಯಿತು? ಮನುಷ್ಯರು ವಾಸಿಸದಿದ್ದ ಈ ಅಡವಿಯಿಂದ ನಿಮಗೆ ಉಪಯೋಗವೇನು? ನೀವು ಏತಕ್ಕಾಗಿ ಈ ನಿರ್ಮಾನುಷ ಪ್ರದೇಶವನ್ನು ಹುಡುಕಿಕೊಂಡು ಬಂದಿರುವಿರಿ?

ನಾನು ಈ ಶಾಂತವಾದ ಸ್ಥಳದಲ್ಲಿ ಕುಳಿತು ರಾಮಾಯಣವನ್ನು ರಚಿಸಬೇಕೆಂದು ಮಾಡಿದ್ದೇನೆ. ತುಳಸೀದಾಸನು ಹೇಳಿದನು

ಅದೇನು? ರಾ-ಮಾ-ಯ-ನ ವೆಂದಿರಲ್ಲವೆ?

ರಾಮಾಯನವಲ್ಲ, ರಾಮಾಯಣ

ರಾಮಾಯಣವೆಂದರೇನು? ನನಗೆ ಹೊಳೆಯುವಂತೆ ಹೇಳಿರಿ.

ರಾಮಾಯಣವೆಂದರೆ, ಶ್ರೀ ರಾಮನ ಕೀರ್ತಿಕಥೆಯು.

ಶ್ರೀ ರಾಮನೆಂದರೆ ಯಾರು?

ಅಯೋಧ್ಯೆಯ ಅರಸನಾದ ದಶರಥನ ಹಿರಿಯ ಮಗನು. ಯುವ ರಾಜನು, ಮುಂದೆ ರಾಜನಾಗುವ ಬದಲು ತಂದೆಯ ವಚನಪಾಲನೆಗೋಸುಗ ಅರಣ್ಯವಾಸಿಯಾದನು. ಧರ್ಮಪತ್ನಿಯಾದ ಸೀತೆಯನ್ನು ರಾವಣನು ಕದ್ದೊಯ್ಯಲು, ಶ್ರೀರಾಮನು ರಾವಣನನ್ನೂ ಇತರ ರಾಕ್ಷಸರನ್ನೂ ಸಂಹರಿಸಿ, ಸೀತೆಯನ್ನು ಕರೆತಂದನು. ವನವಾಸದ ಹದಿನಾಲ್ಕು ವರುಷ ಮುಗಿಯುತ್ತಲೆ, ಅಯೋಧ್ಯೆಗೆ ಬಂದು, ಸಿಂಹಾಸನವೇರಿ ಧರ್ಮದಿಂದ ರಾಜ್ಯವಾಳಿದನು

ಇಷ್ಟೆಯೊ? ಈ ಸಾಮಾನ್ಯ ಸಂಗತಿಯನ್ನು ಬರೆಯುವದಕ್ಕೆ ಈ ಏಕಾಂತ ಸ್ಥಳವು ಬೇಕಾಯಿತೆ? ಮತ್ತೆಲ್ಲಿಯಾದರೂ ಇದ್ದರೆ, ಇದನ್ನು ಬರೆಯುವದಕ್ಕಾಗುತ್ತಿದ್ದಿಲ್ಲವೆ?

ನೀನಿನ್ನೂ ಹುಡುಗ. ಈ ವಿಷಯದಲ್ಲಿ ನಿನ್ನ ಮುಂದೆ ಹೆಚ್ಚಾಗಿ ಹೇಳಿದರೆ, ನೀನದನ್ನು ಗ್ರಹಿಸಲಾರೆಯಾ! ಶ್ರೀ ರಾಮನು ಸಾಮಾನ್ಯ ಮನುಷ್ಯನಲ್ಲ; ಶ್ರೀ ಹರಿಯೇ ದುಷ್ಟನಿಗ್ರಹ-ಶಿಷ್ಟಪರಿಪಾಲನೆಗಳಿಗಾಗಿ ಈ ಭಾರತಭೂಮಿಯಲ್ಲಿ ರಾಮನೆಂಬ ರುಚಿರನಾಮದಿಂದ ಜನ್ಮತಾಳಿದನು. ತನ್ನ ಅನಂತವಾದ ಲೀಲೆಗಳನ್ನು ತೋರಿ ತಾನು ಮನುಷ್ಯನಲ್ಲ, ಅವತಾರಿಕನು ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಟ್ಟನು. ಶ್ರೀರಾಮನ ಆ ಅನಂತ ಲೀಲೆಗಳನ್ನು ವರ್ಣಿಸುವದೂ, ಅವುಗಳ ರಹಸ್ಯವನ್ನು ಸಾಮಾನ್ಯ ಮನುಷ್ಯರಿಗೆ ತಿಳುಹಿಕೊಡುವದೂ ಅಂಥಿಂಥ ಕೆಲಸವಲ್ಲ. ಗುರುತರವಾದ ಕಾರ್ಯವದು! ಕೊನೆಗಾಣಿಸಬೇಕಾದರೆ ಶಾಂತವಾದ ಸ್ಥಳದಲ್ಲಿ ಬಹು ಕಾಲ ಸಾಧನೆಯು ಮಾಡಬೇಕು! ತುಳಸೀದಾಸನು ಹೇಳಿದನು.

ನೀವು ಆ ಶ್ರೀರಾಮನನ್ನು ಪ್ರೀತಿಸುವಿರಾ?

ನಾನು ನನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಅವನನ್ನು ಪ್ರೀತಿಸುವೆನು. ಕೇವಲ ನಾನೊಬ್ಬನೇ ಏಕೆ; ಅಸಂಖ್ಯ ಮಾನವರು ಅವನನ್ನು ಮನಃಪೂರ್ವಕ ಪ್ರೀತಿಸುವರು. ದೇವರೆಂದು ತಿಳಿದು, ಅವನ ಪ್ರತಿಮೆಯನ್ನು ಜಗುಲಿಯ ಮೇಲಿಟ್ಟು ದಿನಾಲು ಪೂಜಿಸುವರು. ಅಗಣಿತ ಸಾಧುಗಳು ಅವನನ್ನು ತಮ್ಮ ಹೃದಯಮಂದಿರದಲ್ಲಿ ಪ್ರತಿಷ್ಠಾಪಿಸಿಕೊಂಡು ಧ್ಯಾನಿಸುತ್ತಿರುವರು. ತುಳಸೀದಾಸನು ಹೇಳಿದನು.

ಇಷ್ಟು ಜನರನ್ನು ತನ್ನ ಅನುರಾಗಿಗಳನ್ನಾಗಿ ಮಾಡಿಕೊಳ್ಳಬೇಕಾದರೆ, ಆವನು ಮಂತ್ರವುಳ್ಳವನಾಗಿರಲಿಕ್ಕೆ ಬೇಕು! ಮುದ್ದುಮಾತುಗಳಿಂದ ಜನರನ್ನು ಮಂಕುಗೊಳಿಸಲಿಕ್ಕೆ ಬೇಕು!

ಛೆ, ಬಾಲಕನೆ, ಹೀಗೆ ಮಾತಾಡಬೇಡ. ಆ ದೇವದೇವೋತ್ತಮನ ವಿಷಯದಲ್ಲಿ ಹೀಗೆ ನುಡಿವುದು ಮಹಾ ಪಾಪವು. ಇನ್ನು ಹೀಗೆಂದಿಗೂ ಮಾತಾಡದಿರು!

ಹೀಗಿದ್ದರೆ, ನಾನು ಬೇರೊಂದು ಮಾತು ಕೇಳುತ್ತೇನೆ. ಸರಿಯಾಗಿ ಉತ್ತರ ಹೇಳಿರಿ. ಅಸಂಖ್ಯ ಜನರು ಶ್ರೀ ರಾಮುನನ್ನು ಪ್ರೀತಿಸುತ್ತಿರುವರೆಂದು ಹೇಳಿದಿರಿ ಹಾಗೆ ಜನರು ನನ್ನನ್ನೇಕೆ ಪ್ರೀತಿಸಬಾರದು? ನನಗೂ ಜನಪ್ರಿಯನಾಗುವ ಲವಲವಿಕೆಯು ಬಹಳವಿದೆ. ನಾನೇನು ಮಾಡಿದರೆ ಜನರು ನನ್ನಲ್ಲಿ ಅನುರಕ್ತರಾದಾರು? ರಾಮಾಯಣವನ್ನು ರಚಿಸ ಹೊರಟ ವರಕವಿಗಳು ತಾವು! ಶ್ರೀರಾಮುನ ಆಚರಣೆಯ ಸಗಮ ರಹಸ್ಯವನ್ನು ಸಾಮಾನ್ಯರಿಗೆ ಬೋಧಿಸ ಹೊರಟ ಪರಮ ಜ್ಞಾನಿಗಳು ತಾವು! ನನಗೆ ಜನಪ್ರಿಯನಾಗುವ ಹಂಚಿಕೆಯನ್ನು ಹೇಳಿಕೊಡಲಾರಿರಾ?

ತಮ್ಮಾ, ನಿನ್ನ ಮಾತು ಕೇಳಿ ನಗೆ ಬರುತ್ತದೆ ಅಗಣಿತ ಜನರ ಅನುರಾಗವನ್ನು ತಕ್ಕೊಂಡು ನೀನು ಮಾಡುವದೇನು? ನಾನು ನಿನ್ನನ್ನು ಪ್ರೀತಿಸುತ್ತೇನೆ ನೀನು ನನ್ನೊಬ್ಬನ ಪ್ರೀತಿಯಿಂದ ಸಂತುಷ್ಟನಾಗಲಾರೆಯಾ? ತುಳಸೀದಾಸನು ಮಂದಹಾಸದಿಂದ ನುಡಿದನು.

ನೀವು ಹುಡುಗಾಟಿಕೆ ಮಾಡುವಂತೆ ಕಾಣುತ್ತದೆ! ನನಗೆ ಹುಡುಗಾಟಿಕೆಯ ಪ್ರೀತಿಯು ಬೇಡ! ನೀವೊಬ್ಬರು ನನ್ನನ್ನು ನಿಜವಾಗಿ ಪ್ರೀತಿಸುತ್ತಿದ್ದರೆ, ನಾನು ಕುಂಟ ಸಂತೋಷಪಡುತ್ತಿದ್ದೆನು; ಆದರೆ ನಿಮ್ಮ ಪ್ರೇಮವು ಸ್ಥಿರವಾದುದಲ್ಲ; ಸ್ಥಿರವಾದದ್ದಾಗಿರುವ ಸಂಭವವಿಲ್ಲ ಯಾಕೆಂದರೆ, ತಾವು ಉಚ್ಚಜಾತಿಯವರು; ನಾನು ಹೀನಜಾತಿಯವನು. ತಾವು ಸುಧಾರಿಸಿದವರು; ನಾನು ಕಾಡುಮನುಷ್ಯನು. ನೀವು ಪರಮ ಜ್ಞಾನಿಗಳು; ನಾನು ಮೂರ್ಖಶಿಖಾಮಣಿಯು. ಹೀಗಿರಲು ನೀವು ನನ್ನನ್ನು ಪ್ರೀತಿಸುವದೆಂತು?

ತಮ್ಮಾ, ನಾನು ನಿಜವಾಗಿಯೂ ನಿನ್ನನ್ನು ಪ್ರೀತಿಸುತ್ತೇನೆ. "ಬಾಹ್ಯ ಉಪಾಧಿಗಳು ಪ್ರೀತಿಗೆ ಕಾರಣವಿಲ್ಲ; ಅಂತರಂಗ ಹೇತುವೇ ಕಾರಣವು." ಎಂದು ಒಬ್ಬ ಕವಿಯು ಹೇಳಿದ್ದಾನೆ. ನಿನ್ನ ಆ ಜಾತಿ-ಗೋತ್ರಗಳು ನನ್ನ ಪ್ರೀತಿಗೆ ಅಡ್ಡಿಯನ್ನುಂಟುಮಾಡಲಾರವು. ಆದಾವ ಕಾರಣವಿದೆಯೋ

ಏನೋ! ನೋಡಿದ ಕೂಡಲೆ ನಾನು ನಿನ್ನನ್ನು ಪ್ರೀತಿಸಿದೆನು. ಈ ಪ್ರೀತಿಯು ಅಸ್ಥಿರವಾದುದಲ್ಲ. ಚಿರಕಾಲವಿರುವದೆಂದು ನಂಬು.

ನಿಜವಾಗಿಯೂ ನೀವು ನನ್ನನ್ನು ಪ್ರೀತಿಸುವಿರಾ? ಪರಮಾಶ್ಚರ್ಯದ ಸಂಗತಿ! ನನಗೆ ಪರಮ ಸಂತೋಷದ ಸಂಗತಿ! ಕಿಶೋರನು ನಗಹತ್ತಿದನು.

ತಮ್ಮಾ, ನಾನು ಸುಳ್ಳಾಡುವವನಲ್ಲ. ನೀನು ನನ್ನ ಪ್ರೀತಿಯ ವಿಷಯದಲ್ಲಿ ಎಳ್ಳಷ್ಟು ಸಹ ಸಂದೇಹಗೊಳ್ಳಬೇಡ. ನೀನು ನನ್ನ ಹತ್ತಿರ ಇರು. ನಾನು ಅನುದಿನವೂ ನಿನ್ನನ್ನು ಹತ್ತಿರಿರಿಸಿಕೊಂಡು ರಕ್ಷಿಸುವೆನು. ತುಳಸೀದಾಸನು ಹೇಳಿದನು.

ವಿಚಾರಮಾಡಿ ಹೇಳಿರಿ ಇನ್ನೂ ನನ್ನ ಗುಣಗಳು ನಿಮಗೆ ಹೊಳೆದಿಲ್ಲ! ನಾನಿಷ್ಟು ದಿನ ನಿಮ್ಮಿಂದ ದೂರವಿದ್ದೆನು ದೂರದ ಗುಡ್ಡ ಕಣ್ಣಿಗೆ ನುಣ್ಣಗೆ! ಸಮೀಪಕ್ಕೆ ಬಂದರೆ ಹುರುಳಿಲ್ಲ! ನಿಮ್ಮ ಆಶ್ರಯವನ್ನು ಹೊಂದಿದ ನಾನು ದಿನಾಲು ಹೊಸ ಹೊಸ ಬೇಡಿಕೆಗಳನ್ನು ಬೇಡುತ್ತ ಕಾಡಹತ್ತಿದೆನೆಂದರೆ, ಈ ಪೀಡೆಯು ತೊಲಗಿದರೆ ಸಾಕೆಂದು ನಿಮಗೆ ಅನಿಸದಿರದು!

ಮಗು, ಹಾಗೆಂದಿಗೂ ಆಗದು! ನೀನು ನಿಸ್ಸಂಕೋಚನಾಗು!

ನೋಡಿರಿ; ನಾನು ನಿಮ್ಮ ಹತ್ತಿರ ಬೇರೆ ಯಾರನ್ನೂ ಬರಗೊಡುವವನಲ್ಲ. ನೀವು ಬೇರೆ ಯಾರನ್ನೂ ಪ್ರೀತಿಸಲಾಗದು!

ಹಾಗೇ ಆಗಲಿ ನಾನು ನಿನ್ನೊಬ್ಬನನ್ನೇ ಪ್ರೀತಿಸುವೆನು. ತುಳಸೀದಾಸನು ಹೇಳಿದನು.

ಹಾಗ ಶ್ರೀ ರಾಮನು ನಿಮ್ಮ ಬಳಿಗೆ ಬಂದರೆ?

ಅವನು ಮನುಷ್ಯನಲ್ಲ! ದೇವರು!

ಅಂತೆಯೇ ಅವನು ಹೆಚ್ಚಿನವನೇನು? ಅವನು ಬರುತ್ತಲೆ ನನ್ನನ್ನು ಅಟ್ಟಿಬಿಡುವಿರಷ್ಟೆ? ಬೇಡ; ನನಗೆ ನಿಮ್ಮ ಸಹವಾಸವು ಬೇಡ! ಕಿಶೋ

ರನು ಕೋಪವನ್ನು ನಟಿಸಿ ನುಡಿದನು.

ಆ ಶ್ರೀರಾಮನು ಬರಲಿಕ್ಕೆಲ್ಲಿ ಕುಳಿತಿರುವನು? ನಾನು ಈ ವರೆಗೆ ಅವನನ್ನು ಬಹಳವಾಗಿ ಕರೆದೆನು. ಬೇಡಿಕೊಂಡೆನು. ಆರ್ತಸ್ವರದಿಂದ ಅರಚಿಕೊಂಡೆನು. ಅತ್ತು ಕರೆದು ಹೇಳಿಕೊಂಡೆನು. ಆದರೂ ಅವನು ಬರಲಿಲ್ಲ! ತುಳಸೀದಾಸನು ಹೇಳಿದನು.

ಎಂದಾದರೊಂದು ದಿನವಾದರೂ ಬರುವನಷ್ಟೆ?

ಬರುವನೆ? ಅವನು ಒಂದೇ ಕಿರುವನೆಂಬುದ ನೀನು ಹೇಗೆ ತಿಳಿದೆ?

ವಾ, ಇದರಲ್ಲೇನು ಅಂಥ ಗಹನ ವಿಚಾರವಿದೆ? ನಾನು ಸಣ್ಣವ ನಿದ್ದಾಗ್ಗೆ ಏನಾದರೂ ಬೇಕಾದರೆ, ತಾಯಿ-ತಂದೆಗಳನ್ನು ಕೂಗುತ್ತಿದ್ದೆನು. ಒರದಿದ್ದರೆ ಅಳುತ್ತಿದ್ದೆನು. ಅವರು ಕೂಡಲೆ ಬಂದು ನನ್ನನ್ನು ಸಮಾಧಾನಪಡಿಸುತ್ತಿದ್ದರು!

ತಾಯಿ-ತಂದೆಗಳಂತೆ ಆ ಶ್ರೀಹರಿಯು ನನ್ನ ವಿಷಯದಲ್ಲಿ ಪುತ್ರ ವಾತ್ಸಲ್ಯವನ್ನು ತೋರಬಹುದೆ? ಅವನು ನನ್ನ ಸಮಾಧಾನಕ್ಕೋಸುಗ ಧಾವಿಸಿ ಬಂದಾನೆ?

ತಿಳಿದವರಾದ ನಿಮಗೆ ಅಜ್ಞನಾದ ನಾನು ಹೇಳುವುದೇನು? ನೀವೇ ನಿಮ್ಮಲ್ಲಿ ವಿಚಾರಿಸಿಕೊಳ್ಳಿರಿ! ಆ ಹರಿಯು ದಯಾಮಯನೆಂದೂ ಭಕ್ತವತ್ಸಲನೆಂದೂ ನೀವು ಅನ್ನುತ್ತಿರುವಿರಷ್ಟೆ?

ಅಹುದು! ಅವನು ದಯಾಮಯನೂ ಅಹುದು; ಭಕ್ತ ವತ್ಸಲನೂ ಅಹುದು ಕಿಶೋರನೆ, ನೀನಾರು? ಕಾಡು ಮನುಷ್ಯನೆಂದು ಹೇಳಿಕೊಳ್ಳುತ್ತಿರುವೆ! ಅಲ್ಲ, ನೀನು ಕಾಡುಮನುಷ್ಯನಲ್ಲ! ನಾನು ಮೋಹವಶನಾಗಿ ಆ ಹರಿಯ ವಿಷಯದಲ್ಲಿ ಸಂದೇಹಗ್ರಸ್ತನಾಗಿರುವಾಗ, ನೀನು ಆ ಸಂದೇಹವನ್ನು ಹೊಡೆದೋಡಿಸಿದೆ! ನನ್ನ ಮನಸ್ಸಿನಲ್ಲಿ ಮತ್ತೆ ಆಶೆಯನ್ನುಂಟು ಮಾಡಿದೆ! ನಿನಗೆ ಅಜ್ಞಾನಿಯೆಂದಾಗಲಿ, ಕಾಡು ಮನುಜನೆಂದಾಗಲಿ ಅನ್ನುವುದು ಹೇಗೆ?

ಕಿಶೋರನು ಉತ್ತರ ಕೊಡಲಿಲ್ಲ. ನಗ ನಗುತ್ತ ಗಾಯನವನ್ನಾರಂಭಿಸಿದನು. ತಲೆಯ ಮೇಲಿನ ಹೊರೆಯನ್ನು ಚಲ್ಲಿಕೊಟ್ಟು ಮೆಲ್ಲ ಮೆಲ್ಲನೆ ಹಿಂದೆ ಸರಿಯುಹತ್ತಿದನು. ತುಳಸೀದಾಸನು ತಡೆಯ ಹೋಗ ಲಿಲ್ಲ. ಸುಮ್ಮನೆ ನೋಡುತ್ತ ನಿಂತುಬಿಟ್ಟನು. ಕಿಶೋರನ ಸುಂದರ ನಗೆ ಮೊಗವು ತುಳಸೀದಾಸನನ್ನು ಪೂರಾ ಮೋಹಗೊಳಿಸಿ ಬಿಟ್ಟಿತ್ತು.

ಕಿಶೋರನು ಹಾಡುಹಾಡುತ್ತ ಸಮೀಪದ ಅರಣ್ಯದಲ್ಲಿ ಕಣ್ಮರೆಯಾಗಿ ಹೋದನು! ತುಳಸೀದಾಸನು ಹಾಗೆಯೆ ನೋಡುತಲಿದ್ದನು. ಕೆಲ ಹೊತ್ತಿನ ಮೇಲೆ ಎಚ್ಚತ್ತು ಸಿಟ್ಟುಸಿರಬಿಟ್ಟು:—ಬಾಲಕನೆ, ನೀನಾರು? ನನ್ನನ್ನು ಹುಚ್ಚನನ್ನಾಗಿ ಮಾಡಿಕೋದೆ! ಇನ್ನು ನೀನು ಬರಲಾರೆಯಾ? ಎಂದು ಅಂದನು.

ಬರುವೆನು ನಾಂ ಕರೆದಾಗಳೆ |
ಬರದಿರಲೆನಗೆಂದಿಗೂ ಸಹಜವಲ್ಲವು ಕೇಳ್ಳೆ ||
ನರವರ ತಿಳಿ ನೀನೀ ಹರಿ |
ಶರಣಾಗತ ಭಕ್ತ ದಾಸನೆಂಬುದ ಮನದಿಂ || ೧ ||

ತುಳಸೀದಾಸನು ಗಾಯನವನ್ನು ಕೇಳಿದನು ಶ್ರೀಹರಿಯು ಕಿಶೋರನಾಗಿ ಬಂದು, ತನ್ನನ್ನು ವಂಚಿಸಿ ಹೋದುದನ್ನರಿತು ಇಂತು ನುಡಿದನು:—"ರಘುರಾಮನೆ, ಈಗ ಹೊಳೆಯಿತು! ಹೀಗೆ ನೀನು ಬಾರಿ ಬಾರಿಗೂ ನನ್ನನ್ನು ಮೋಸಗೊಳಿಸುತ್ತಿರುವೆಯೇಕೆ? ಪಾಮರನು ನಾನು! ನಿನ್ನ ನಿಜ ರಹಸ್ಯವನ್ನರಿವ ಶಕ್ತಿಯು ನನ್ನದಲ್ಲ! ನಿಷ್ಠುರನಾಗಬೇಡ. ಕೃಪಾವಶನಾಗಿ ನಿಜರೂಪದಿಂದ ಬಂದು ನನಗೆ ದರ್ಶನ ಕೊಡು. ಇನ್ನು ನಾನು ನಿನ್ನನ್ನು ಬಿಟ್ಟಿರಲಾರೆನು ಬಾ. ಬೇಗ ಬಾ. ಪುನಃ ನನಗೆ ದರ್ಶನ ಸುಖವನ್ನು ಉಂಟುಮಾಡು. ಶ್ರೀರಾಮನೆ, ಈಗ ನೀನೆಲ್ಲಿರುವೆ?" ತುಳಸೀದಾಸನು ಮೂರ್ಛಿತನಾಗಿ ಬಿದ್ದು ಬಿಟ್ಟನು!

* * * * *

ತುಳಸೀದಾಸನು ಈ ಪ್ರಶಾಂತವಾದ ಆಶ್ರಮದಲ್ಲಿ ವಾಸಿಸಿ, ರಾಮಾಯಣವನ್ನು ರಚಿಸಲಾರಂಭಿಸಿದನು. ಪೂರ್ಣಗೊಳಿಸಲಿಕ್ಕೆ ಒಂದು ವರ್ಷ ಹಿಡಿಯಿತು.† ರಾಮಾಯಣವು ಪೂರ್ಣವಾದ ಬಳಿಕ ತುಳಸೀದಾಸನು ಮತ್ತೆ ಕಾಶಿಗೆ ಹೋದನು. ಈಗ ಇವನ ಪ್ರಖ್ಯಾತಿಯು ಎಲ್ಲೆಲ್ಲಿಯೂ ಹರಡಿತ್ತು.

---

## ೧೪ ಸಾಧಕಳು.

ರತ್ನಾವಳಿಯು ಮೊದಲು ಸ್ವಲ್ಪ ಭಯಗೊಂಡಳು. ಇದು ವರೆಗೆ ಸ್ವಗೃಹದಲ್ಲಿ ಆತ್ಮೀಯರ ಮಧ್ಯದಲ್ಲಿ ಕಾಲ ಕಳೆದಿದ್ದ ತಾನು, ಇನ್ನು ಈ ನಿರ್ಜನಾರಣ್ಯದಲ್ಲಿ ತಪಸ್ಸಾಧನೆಯಲ್ಲಿ ಕಾಲಕಳೆಯಬಹುದೇ? ಎಂಬ ಆಲೋಚನೆಯು ಅವಳಿಗುಂಟಾಯಿತು. ಅವಳು ಕ್ಷಣಕಾಲ ಅಲ್ಲಿಯೇ ಕುಳಿತು ಯೋಚಿಸಿದಳು. ಗುರುದೇವನ ಅಪ್ಪಣೆಯಂತೆ ನಡೆಯುವುದನ್ನು ನಿರ್ಧರಿಸಿಕೊಂಡಳು.

ಪೂರ್ವದಿಕ್ಕಿನಲ್ಲಿ ಸೂರ್ಯನುದಯಿಸಿ, ಮೆಲ್ಲಮೆಲ್ಲನೆ ಮೇಲಕ್ಕೇರುವುದರಲ್ಲಿದ್ದನು. ಬೆಳಕು ಹೆಚ್ಚುತ್ತ ನಡೆದಿತ್ತು. ಅದರಿಂದ ಬಗೆಬಗೆಯ ಹಕ್ಕಿಗಳು ನಾನಾವಿಧಗಳಾದ ಸುಸ್ವರಗಳಿಂದ ಅತ್ತಿತ್ತ ಹಾರಾಡುತಲಿದ್ದವು. ನಿರ್ಧಾರದ ತರುವಾಯ ರತ್ನಾವಳಿಯು ವನಶೋಭೆಯನ್ನು ಲಕ್ಷ್ಯವಿಟ್ಟು ನೋಡಿದಳು. ಅದೃಷ್ಟಪೂರ್ವವಾದ ಈ ವನಶೋಭೆಯು ಅವಳನ್ನು ಬಹಳವಾಗಿ ಸಂತೋಷಗೊಳಿಸಿತು. ಈ ಸ್ಥಳದಲ್ಲಿ ಅವಳಿಗೆ ಯಾವ ಕೊರತೆಯೂ ಉಂಟಾಗುವಂತಿದ್ದಿಲ್ಲ. ಈ ಮೈದಾನದಲ್ಲಿ ವಿಸ್ತಾರವಾದ

---

† ತುಳಸೀದಾಸನು ವಿಕ್ರಮ ಸಂವತ್ಸರ ೧೬೩೧ರ ಚೈತ್ರಮಾಸದಲ್ಲಿ ರಾಮಾಯಣವನ್ನು ಪೂರ್ಣಗೊಳಿಸಿದನು. ಈಗ ಇವನಿಗೆ ನಾಲ್ವತ್ತುಮೂರು ವರ್ಷಗಳಾಗಿದ್ದವು.

ಹಾಸುಗೆಯಂತಿದ್ದ ಬಂಡೆಗಲ್ಲೊಂದಿತ್ತು. ಇದರ ಸಮೀಪದಲ್ಲಿ ಒಂದು ಗುಹೆಯಿತ್ತು. ಜಲಾಶಯವೂ ಬಳಿಯಲ್ಲಿಯೇ ಇತ್ತು. ಅಲ್ಲಲ್ಲಿ ಹಣ್ಣು-ಹಂಪಲಗಳ ಗಿಡಗಳಿದ್ದವು. ರತ್ನಾವಳಿಯು ಇವೆಲ್ಲವುಗಳನ್ನು ನೋಡಿ, ಜಗನ್ನಿಯಾಮಕನ ರಚನಾಕೌಶಲ್ಯವನ್ನು ಮನದಂದು, ಭಕ್ತಿಯುತಳಾಗಿ ಆ ದಯಾಮಯನಿಗೆ ನಮಸ್ಕರಿಸಿದಳು.

ರತ್ನಾವಳಿಯು ಗುರುವು ಹೇಳಿಕೊಟ್ಟಂತೆ ಉತ್ಸಾಹದಿಂದ ಸಾಧನೆಗೆ ತೊಡಗಿದಳು. ಮೊದಮೊದಲು ಈ ಆಚರಣೆಯು ತುಸ ಕಠಿಣವೆನಿಸಿದರೂ ಅವಳು ಹಿಂದೆಗೆಯಲಿಲ್ಲ. ಮುಂದೆ ಸಾಧನೆಯ ಪರಿಪಾಠವೇ ಬಿದ್ದುಹೋಯಿತು. ಅವಳ ಸಾಧನೆಯು ಕ್ರಮವು ಯಂತ್ರದಂತೆ ನಿಯಮಿತ ರೀತಿಯಿಂದ ನಡೆಯಹತ್ತಿತು. ಅವಳು ಕ್ರಮೇಣ ಮಾನಸಿಕ ಸಾಮರ್ಥ್ಯವನ್ನು ಪಡೆದಳು. ಸಾಧನೆಯಲ್ಲಿ ಭರದಿಂದ ಮುಂದಡಿಯನ್ನಿಡಹತ್ತಿದಳು.

ಹೀಗೆ ಎರಡು ವರುಷಗಳು ಕಳೆದವು. ರತ್ನಾವಳಿಯು ಸಾಧನೆಯ ಮಾರ್ಗದಲ್ಲಿ ನಡೆಯುವುದಕ್ಕೆ ಪೂರಾ ಅಭ್ಯಸ್ತಳಾಗಿದ್ದಳು. ಈಗ ವಳಿಗೆ ಭಯವಿಲ್ಲ, ಭಾವನೆಯಿಲ್ಲ; ಮನಸ್ಸಿನ ಹೊಯ್ದಾಟವಿಲ್ಲ.

ಒಂದು ದಿನ ರತ್ನಾವಳಿಯು ಫಲಾನ್ವೇಷಣಕ್ಕಾಗಿ ಅಡವಿಯಲ್ಲಿ ಅಡ್ಡಾಡುತ್ತಿದ್ದಳು. ಭಯಂಕರ ಹುಲಿಯೊಂದು ಅವಳ ಸಮೀಪಕ್ಕೆ ಬಂತು. ರತ್ನಾವಳಿಯು ಮೊದಲು ಕೊಂಚ ಭಯಪಟ್ಟಳು; ಆದರೆ ಆ ಭಯವು ಬಹಳ ಕಾಲವಿರಲಿಲ್ಲ. ಅವಳು ಧೈರ್ಯತಂದುಕೊಂಡು ಕಣ್ಣುಮುಚ್ಚಿ ನಿಂತು ಗುರುವಿನ ಧ್ಯಾನಮಾಡಹತ್ತಿದಳು. ಹುಲಿಯು ರತ್ನಾವಳಿಯ ತೀರ ಸನಿಯಕ್ಕೆ ಬಂತು. ಸ್ವಲ್ಪ ವೇಳೆ ನಿಂತು ನೋಡಿತು. ಬಳಿಕ ಬಂದ ದಾರಿಯಿಂದ ತಿರುಗಿ ಹೋಯಿತು. ರತ್ನಾವಳಿಯು ಕಣ್ದೆರೆದು ನೋಡುವಷ್ಟರಲ್ಲಿ ಹುಲಿಯು ಕಾಣದಾಗಿತ್ತು. ಅವಳು ಗುರುವಿನ ಮಹಿಮೆಯನ್ನು ಸ್ತುತಿಸುತ್ತ ಗುಹೆಗೆ ನಡೆದಳು.

ರತ್ನಾವಳಿಯು ಮತ್ತೊಂದು ದಿನ ಅರಣ್ಯದಲ್ಲಿ ಸಂಚರಿಸುತ್ತಿರುವಾಗ, ಕೆಲವರು ಕಳ್ಳರು ಬಂದರು. ರತ್ನಾವಳಿಯು ಅವರನ್ನು ದಿಟ್ಟಿಸಿ ನೋಡಿದಳು. ಕಾಶೀಯಾತ್ರೆಗೆ ಹೊರಟಿದ್ದ ತನ್ನನ್ನು ಹೊತ್ತುಕೊಂಡೊಯ್ದು ಗುಹೆಯಲ್ಲಿರಿಸಿದ ಕಳ್ಳರು ಇವರೇ ಎಂದು ಅವಳಿಗೆ ಅನಿಸಿತು. ಅವಳು ಬೆದರಿದಳು. ಮತ್ತೆ ತನ್ನನ್ನೆತ್ತಿಕೊಂಡೊಯ್ದರೆ ಏನು ಮಾಡಬೇಕೆಂಬ ಯೋಚನೆಯುಂಟಾಯಿತು. ಅವಳು ಹಲವು ಬಗೆಯಾಗಿ ಆಲೋಚಿಸಿದಳು. ಈ ಪ್ರಸಂಗದಲ್ಲಿ ಅವಳಿಗೆ ಗುರುವಿನ ಸ್ಮರಣೆಯಾಯಿತು. ಕೂಡಲೆ ಧೈರ್ಯ ಬಂದಂತಾಯಿತು. ಅವಳು ಸ್ಥಿರಳಾಗಿ ನಿಂತುಕೊಂಡು, ಹತ್ತಿರ ಬಂದ ಕಳ್ಳರನ್ನುದ್ದೇಶಿಸಿ:—"ದುಷ್ಟರೆ, ನನ್ನನ್ನು ಮುಟ್ಟುವ ಶಕ್ತಿ ನಿಮಗಿಲ್ಲ. ನೀವು ನನ್ನನ್ನು ಹಿಡಿಯ ಬಂದರೆ, ಸುಟ್ಟು ಬೂದಿಯಾಗಿ ಹೋಗುವಿರಿ! ನಡೆಯಿರಿ, ದೂರ ಹೋಗಿರಿ!" ಎಂದು ಗದ್ದರಿಸಿದಳು. ಕಳ್ಳರು ಕೆಲಹೊತ್ತು ರತ್ನಾವಳಿಯ ಮೋರೆಯನ್ನು ನೋಡುತ್ತ ನಿಂತರು. ಅಲ್ಲಿ ಹೊಳೆಯುತ್ತಿರುವ ತೇಜವನ್ನು ನೋಡಿ, ತಲೆಬಾಗಿಸಿದರು. ರತ್ನಾವಳಿಗೆ ನಮಸ್ಕಾರ ಮಾಡಿ, ಪಶ್ಚಾತ್ತಾಪವನ್ನು ಪ್ರಕಟಿಸಿ ಹೊರಟು ಹೋದರು. ರತ್ನಾವಳಿಯ ವಿಸ್ಮಯಕ್ಕೆ ಪಾರಾವಾರವಿಲ್ಲದಾಯಿತು. ಅವಳು ಗುರುಮಹಿಮೆಯ ಮಹತಿಯನ್ನು ಪ್ರತ್ಯಕ್ಷ ಕಂಡು ಶ್ರದ್ಧಾಮಯಳಾದಳು. ಗುಹೆಗೆ ಬಂದು ಆಸನಸ್ಥಳಾಗಿ ಕುಳಿತು ಗುರುವಿನ ಧ್ಯಾನ ಮಾಡಹತ್ತಿದಳು. ರತ್ನಾವಳಿಯ ಪ್ರಾರ್ಥನೆಯಂತೆ ಗುರುವು ಪ್ರತ್ಯಕ್ಷನಾದನು. ರತ್ನಾವಳಿಯ ಎದುರಿಗೆ ಬಂದು ನಿಂತನು. ರತ್ನಾವಳಿಯು ಭಕ್ತಿಯಿಂದ ಗುರುವಿನ ಚರಣಗಳಿಗೆರಗಿದಳು.

ವತ್ಸೆ, ಏಳು. ಇನ್ನು ನೀನು ಇಲ್ಲಿರುವುದು ಬೇಡ. ಈ ವರೆಗೆ ಇಲ್ಲಿ ಕಾಲ ಕಳೆದುದು ನಿನಗೆ ಮಹಾ ಪ್ರಯಾಸದ ಸಂಗತಿಯಾಗಿರಬಹುದಲ್ಲವೆ? ಗುರುವು ಕೇಳಿದನು.

ಇಲ್ಲ. ನಾನು ತೀರ ಸಮಾಧಾನದಿಂದ ಕಾಲ ಕಳೆದಿರುವೆನು; ತಮ್ಮ ಅನುಗ್ರಹದಿಂದ ನನಗೆ ಯಾವ ಕೊರತೆಯೂ ಉಂಟಾಗಲಿಲ್ಲ. ರತ್ನಾವಳಿ ಹೇಳಿದಳು.

ಹಾಗಾದರೆ, ನೀನು ಇಲ್ಲಿಯೆ ಇರಬಯಸುವೆಯಾ?

ಮಹಾರಾಜ, ನನಗೆ ಸ್ವಂತದ ಇಚ್ಛೆಯಿಲ್ಲ. ತಮ್ಮ ಅಪ್ಪಣೆಯೆ ನನ್ನ ಇಚ್ಛೆಯು. ತಾವು ಎಲ್ಲಿ ಇರಬೇಕೆಂದು ಅನುಜ್ಞೆ ಮಾಡುವಿರೊ, ನಾನು ಅಲ್ಲಿರುವೆನು.

ಮಗಳೆ, ನಾನು ನಿನ್ನ ವಿಷಯದಲ್ಲಿ ತುಂಬ ಪ್ರಸನ್ನನಾಗಿದ್ದೇನೆ. ನಿನಗೇನು ಬೇಕು? ಬೇಡಿಕೊಳ್ಳು, ಕೊಡುವೆನು.

ನನಗೆ ಮತ್ತೇನೂ ಬೇಡ ನೀವು ಪ್ರಸನ್ನರಾಗಿರುವುದೇ ನಿಜ ವಿದ್ದರೆ, ನಿಮ್ಮ ನಿಜಸ್ವರೂಪವನ್ನಷ್ಟು ತೋರಿಸಿ ಬಿಡಿರಿ!

ವತ್ಸೆ, ನೀನು ನಿನಗೆ ತಕ್ಕಂತೆಯೆ ಬೇಡಿಕೊಂಡೆ; ಆದರೆ ಈಗ ಅದನ್ನು ಪೂರ್ಣ ಮಾಡಲಿಕ್ಕೆ ಬರುವಂತಿಲ್ಲ. ಯಾಕಂದರೆ, ಅದಕ್ಕೆ ಬಲವಾದ ಸಾಧನೆಯು ಬೇಕು. ನೀನು ಇನ್ನು ಮೇಲೆ ಅದನ್ನು ಆರಂಭಿಸಬೇಕು

ಅಪ್ಪಣೆಯಾಗಲಿ. ತಾವು ಹೇಳಿದ ಮಾರ್ಗದಲ್ಲಿ ನಡೆಯುವದಕ್ಕೆ ನಾನು ಸಿದ್ಧಳಿದ್ದೇನೆ.

ನೀನು ನನ್ನ ಸತ್ಯಸ್ವರೂಪವನ್ನು ನೋಡಬೇಕಿದ್ದರೆ, ನೀವಿಬ್ಬರೂ ಕೂಡಿ ಸಾಧನೆಗೆ ತೊಡಗಬೇಕು. ಗುರುವು ಹೇಳಿದನು.

ನಾವಿಬ್ಬರು ಯಾರು? ರತ್ನಾವಳಿಯು ವಿಸ್ಮಯದಿಂದ ಕೇಳಿದಳು.

ಮತ್ತಾರು? ತುಳಸೀದಾಸ; ಅವನೇ ನಿನಗೆ ಮಾರ್ಗದರ್ಶಕನಾಗುವನು.

ಪತಿರಾಯರ ದರ್ಶನಾಪೇಕ್ಷೆಯು ಈಗ ನನಗಿಲ್ಲ. ನಿಮ್ಮ ನಿಜ ಸ್ವರೂಪವನ್ನು ಒಮ್ಮೆಯಾದರೂ ಕಾಣಬೇಕೆಂಬ ಅಪೇಕ್ಷೆಯು ಮಾತ್ರ ಉಂಟು. ನನ್ನ ಈ ಆಕಾಂಕ್ಷೆಯನ್ನು ನೀವು ಪೂರ್ಣಮಾಡಿದರೆ ಸಾಕು.

ಬೇರೆ ನನಗೇನೂ ಬೇಡ. ರತ್ನಾವಳಿಯು ಹೇಳಿದಳು.

ಮಗಳೆ, ಕಾಲಾಂತರದಲ್ಲಿ ಎಲ್ಲವೂ ಸಾಧಿಸುವುದು. ನೀನೀಗ ಕಾಶಿಗೆ ನಡೆ.

ಇವರು ಕಾಶಿಯಲ್ಲಿರುವರೆ?

ಅಹುದು ನೊನ್ನೆ ನೊನ್ನೆ ಅಯೋಧ್ಯೆಯಿಂದ ಕಾಶಿಗೆ ಬಂದಿರುವನು. ನೀನು ಈಗ ತುಳಸೀದಾಸನ ಸಹವಾಸವನ್ನು ಪಡೆಯಲಾರೆ. ಅವನೊಡನೆ ಮಾತನಾಡಲಾರೆ. ಯೋಗ್ಯ ಸಮಯದಲ್ಲಿ ನಾನು ನಿಮ್ಮ ಮಿಲನವಾಗುವಂತೆ ಮಾಡುವೆನು. ಗುರುವು ಹೇಳಿದನು.

ಹೀಗಿದ್ದರೆ, ಕಾಶಿಗೆ ಹೋಗುವ ಅವಸರವೇಕೆ?

ನೀನು ತುಳಸೀದಾಸನನ್ನು ಆದರ್ಶಸ್ಥಾನದಲ್ಲಿಟ್ಟುಕೊಂಡು ಸಾಧನೆ ಮಾಡಬೇಕಾಗಿದೆ. ಇಲ್ಲದಿದ್ದರೆ ನಿನ್ನ ಸಾಧನೆಯು ಸಫಲವಾಗುವಂತಿಲ್ಲ. ಕಾರಣ ನಾನು ನಿನಗೆ ಕಾಶಿಗೆ ಹೋಗೆಂದು ಹೇಳುತ್ತಿರುವೆನು. ಗುರುವು ಹೇಳಿದನು.

ಇವರೊಡನೆ ನಾನು ಕೂಡಿರಲಾಗದೆಂದು ನೀವೇ ಹೇಳಿದಿರಲ್ಲ!

ಅಹುದು, ಕೂಡಿರಲಾಗದು; ಆದರೆ ನೇತ್ರಾಂತರದಲ್ಲಿ ಅವನಿಗೆ ತಿಳಿಯದ ಹಾಗೆ ಇರಲಿಕ್ಕೆ ಅಡ್ಡಿಯಿಲ್ಲ. ದೂರದಲ್ಲಿದ್ದು ಅವನ ಕಾರ್ಯಕಲಾಪಗಳನ್ನು ಅವಲೋಕಿಸಲಿಕ್ಕೆ ಅಡ್ಡಿಯಿಲ್ಲ.

ನಾನು ಕಾಶಿಯ ದಾರಿಯನ್ನರಿಯೆನು!

ನೀನು ಹೊರಡು. ನೆಟ್ಟಗೆ ಕಾಶಿಗೆ ಹೋಗುವೆ. ಯಾವುದಕ್ಕೂ ಚಿಂತಿಸಬೇಡ. ನಾನು ಯಾವಾಗಲೂ ನಿನ್ನನ್ನು ಛಾಯೆಯಂತೆ ಅನುಸರಿಸುವೆನೆಂಬುದನ್ನು ಮರೆಯದಿರು. ನೀನು ವಿಪತ್ಪ್ರಸಂಗದಲ್ಲಿ ನನ್ನನ್ನು ನೆನೆದರೆ ಸಾಕು; ನಾನು ಕೂಡಲೆ ನಿನ್ನೆದುರಿಗೆ ಬಂದು ನಿಲ್ಲುವೆನು.

ಕಾಶಿಯಲ್ಲಿ ನನಗೆ ಇಂತಹ ಗುಹೆಯು ದೊರೆದೀತೆ? ರತ್ನಾವಳಿಯು ಕೇಳಿದಳು.

ಇನ್ನು ಗುಹೆಯು ಪ್ರಯೋಜನವಿಲ್ಲ, ಕಾಶಿಯಲ್ಲಿ ಒಬ್ಬ ಭಕ್ತಳು ನಿನಗೆ ಆಶ್ರಯ ಕೊಡುವಳು. ನೀನು ಅವಳ ಆಶ್ರಯದಲ್ಲಿದ್ದು, ನಾನು ಹೇಳಿದಂತೆ ಮಾಡು.

ಆಗಲಿ, ತಮ್ಮ ಇಷ್ಟದಂತೆ ನಡೆಯುವೆನು. ಇನ್ನು ತಮ್ಮ ದರ್ಶನವಾಗುವದೆಂದು?

ಕರೆದಾಗ ಬರುವೆನೆಂದು ನಾನು ಆಗಲೆ ಹೇಳಲಿಲ್ಲವೆ? ಗುರುವು ಕೇಳಿದನು.

ರತ್ನಾವಳಿಯು ಸಾಷ್ಟಾಂಗ ನಮಸ್ಕಾರ ಮಾಡಿ, ಎದ್ದು ನೋಡಿದಳು. ಗುರುವು ಅಂತರ್ಧಾನನಾಗಿದ್ದನು!

---

## ೧೫ ಪುನರ್ಜೀವನ.

ತುಳಸೀದಾಸನ ಹೇಳಿಕೆಯಂತೆ ಸೀತಾಪತಿಯೂ ಅವನ ಹೆಂಡತಿಯೂ ಕಾಶಿಗೆ ಹೋಗಿ ವಾಸವಾಗಿದ್ದರು. ಹುಲಸೀಗೋವಿಯು ನೊಸೆಯನ್ನು ಹುಡುಕಿಸಿ ಹುಡುಕಿಸಿ ಕಡೆಗೆ ನಿರಾಶಳಾಗಿ ಕಾಶಿಗೆ ಹೋಗಿ ಸೀತಾಪತಿಯ ಮನೆಯಲ್ಲಿ ಆಶ್ರಯ ಹೊಂದಿದ್ದಳು ಸೀತಾಪತಿಯ ಹಿರಿಯ ಮಗ ರಾಮದಾಸನು ಪ್ರಪಂಚದ ಭಾರವನ್ನು ಹೊತ್ತುಕೊಂಡು ಬಿಲ್ವಗ್ರಾಮದಲ್ಲಿದ್ದನು. ಜಾನಕೀವಲ್ಲಭನು ಅಸೂಯೆಯಿಂದ ತನ್ನ ಈ ದಾಯಾದಿಯೊಡನೆ ಸರಿಯಾಗಿ ನಡೆಕೊಳ್ಳುತ್ತಿದ್ದಿಲ್ಲ. ಕಾಲುಕೆದರಿ ಜಗಳ ತೆಗೆಯುತ್ತಿದ್ದನು. ರಾಮದಾಸನು ಕಲಹಪ್ರವೃತ್ತನಾಗದಿರಲು, ಜಾನಕೀವಲ್ಲಭನು ಮತ್ತಷ್ಟು ಕೋಪಗೊಂಡು ಹಲವು ರೀತಿಗಳಿಂದ ಉಪದ್ರವ ಕೊಡುತ್ತಿದ್ದನು. ರಾಮದಾಸನು ಈ ಪೀಡೆಗಳನ್ನು, ಸುಮ್ಮನೆ ಇದ್ದು ಸಹಿಸಿಕೊಳ್ಳುತ್ತಿದ್ದನು.

ಜಾನಕೀವಲ್ಲಭನಿಗೆ ರಾಮದಾಸನ ಈ ತಾಳ್ಮೆಯು ಸಹನವಾಗುತ್ತಿದ್ದಿಲ್ಲ. ಇವನು ರಾಮದಾಸನು ತನ್ನೊಡನೆ ಕಲಹಿಸಿ, ಕೇಡುಬಗೆದಿದ್ದರೂ ತಾಳಿಕೊಳ್ಳುತ್ತಿದ್ದನು; ಆದರೆ ರಾಮದಾಸನು ಎಲ್ಲ ಪ್ರಸಗಂಗಳಲ್ಲಿ ಸಹನಶೀಲತೆಯನ್ನು ತೋರಿ, ಜನರಿಂದ ಹೊಗಳಿಸಿಕೊಳ್ಳುತ್ತಿರುವದು ಜಾನಕೀವಲ್ಲಭನಿಗೆ ತೀರ ಅಸಹ್ಯವಾಯಿತು. ಈ ಸಂತಾಪದಿಂದ ಉರಿಯುತ್ತಿದ್ದ ಇವನು ಒಂದು ದಿನ ಮಧ್ಯರಾತ್ರಿಯಲ್ಲಿ ಜನರೆಲ್ಲರೂ ಮಲಗಿ ನಿದ್ರಿಸುತ್ತಿರುವಾಗ ರಾಮದಾಸನ ಮನೆಗೆ ಬೆಂಕಿಯು ಹಚ್ಚಿದನು! ಅಗ್ನಿನಾರಾಯಣನು ತನ್ನ ಕಾಯಕವನ್ನು ಭರದಿಂದ ಸಾಗಿಸಹತ್ತಿದ್ದನ್ನು ನೋಡಿ, ಪರಮಾನಂದಬಟ್ಟು, ತನ್ನ ಮನೆಗೆ ಬಂದು ಮಲಗಿದನು.

ಉರಿಯು ಒಳ್ಳೇ ಭರದಿಂದ ಉರಿಯುತ್ತಿರುವಾಗ ನೆರೆಹೊರೆಯವರಿಗೆ ಎಚ್ಚರಾಯಿತು ಅನೇಕರು ನೆರೆದರು ಮನೆಯೊಳಗಿನ ಜನರನ್ನು ಹೊರಗೆ ಕರೆತರುವದಕ್ಕೂ, ಬೆಂಕಿಯನ್ನು ನೊಂದಿಸುವದಕ್ಕೂ ತೊಡಗಿದರು. ಗ್ರಾಮವಾಸಿಗಳಲ್ಲಿ ರಾಮದಾಸನನ್ನು ಪ್ರೀತಿಸದಿರುವವರು ವಿರಳ. ಕಾರಣ ಈ ಪ್ರಸಂಗದಲ್ಲಿ ಕೂಡಿದವರೆಲ್ಲರು ಸಹಾನುಭೂತಿಯನ್ನು ತೋರಿ ಮನಮುಟ್ಟಿ ಕೆಲಸ ಮಾಡುತ್ತಿದ್ದರು. ಆದರೂ ಅವರಿಂದ ಉರಿಯನ್ನು ನೊಂದಿಸಲಿಕ್ಕಾಗಲಿಲ್ಲ ವೇಳೆಯು ಮೀರಿ ಹೋಗಿತ್ತು. ಎಷ್ಟು ಪ್ರಯತ್ನ ಪಟ್ಟರೂ ಅಗ್ನಿಯು ಶಾಂತವಾಗಲಿಲ್ಲ.

ಗಟ್ಟಿಗರ ಪ್ರಯತ್ನದಿಂದ ರಾಮದಾಸನ ಕುಟುಂಬದ ಜನರು ಹೊರಗೆ ತರಲ್ಪಟ್ಟರು; ಆದರೆ ರಾಮದಾಸನು ಮಾತ್ರ ಬೇಗ ಸಿಗಲಿಲ್ಲ. ಸಾಹಸಿಯೊಬ್ಬನು ಒಳ್ಳೇ ಪ್ರಯತ್ನ ಮಾಡಿ ಕೊನೆಯಲ್ಲಿ ರಾಮದಾಸನನ್ನು ಹೊತ್ತು ತಂದನು; ಆದರೆ ರಾಮದಾಸನ ದೇಹದಲ್ಲಿ ಪ್ರಾಣವಿರಲಿಲ್ಲ! ಕೂಡಿದವರು ಬಹಳವಾಗಿ ಹಳಹಳಿಸಿದರು. ರಾಮದಾಸನ ಕುಟುಂಬದವರು ದೊಡ್ಡ ದನಿತೆಗೆದು ಅಳಹತ್ತಿದರು!

ಬೆಳಗಾಗ ಬಂದಂತೆ ಜನರು ಹೆಚ್ಚಾಗಿ ಕಲೆಯಹತ್ತಿದರು. ಅಗ್ನಿ-

ಸಾಲಿಕಾಯಣಾನು ನಡಿಸಿದ್ದ ಅನಾಹುತವನ್ನು ನೋಡಿ, ಮರಮರನೆ ಮರು ಗಿದರು ರಾಮದಾಸನಂಥ ಸಾಧು ಸ್ವಭಾವದ ಮನುಷ್ಯನ ಮೇಲೆ ಕೈಯೆತ್ತಿದ ನೀಚನಾರೆಂಬುದು ಯಾರಿಗೂ ಹೊಳೆಯಲಿಲ್ಲ. ಬೆಳಗಾಗು ತ್ತಲೆ ಜನರು ರಾಮದಾಸನ ಉತ್ತರಕ್ರಿಯೆಗೆ ತೊಡಗಿದರು.

ರಾಮದಾಸನ ಹೆಂಡತಿಯು ಹೆಸರು ವಸುಂಧರೆ. ಒಳ್ಳೇ ಪತಿ ವ್ರತೆ; ದೇವ-ಬ್ರಾಹ್ಮಣರಲ್ಲಿ ತುಂಬ ವಿಶ್ವಾಸವುಳ್ಳವಳು. ಈ ಪ್ರೌಢ ರಮಣಿಯು ಪತಿಯ ದುರ್ಮರಣವನ್ನು ನೋಡಿ, ಒಂದೆರಡು ತಾಸು ರೋದಿಸಿದಳು. ಬಳಿಕ ಮನಸ್ಸನ್ನು ಗಟ್ಟಿಮಾಡಿಕೊಂಡು, ಪತಿಯ ಶವದೊಡನೆ ಚಿತೆಯಲ್ಲಿ ಹಾರಿಕೊಳ್ಳಲಿಕ್ಕೆ ಸಿದ್ಧಳಾದಳು. ಅವಳು ಅಳು ತ್ತಿದ್ದ ಸಣ್ಣ ಮಕ್ಕಳನ್ನು ನೋಡಿ ಮೋಹಗೊಳ್ಳಲಿಲ್ಲ. ಹಲವರು ಬೇಡವೆಂದು ಹೇಳುತ್ತಿರುವುದನ್ನು ಲಕ್ಷಿಸಲಿಲ್ಲ ತನ್ನ ನಿರ್ಧಾರವನ್ನು ಆಪ್ತೇಷ್ಟರಿಗೆ ಸ್ಪಷ್ಟವಾಗಿ ಹೇಳಿಬಿಟ್ಟಳು. ಜನರು ವಸುಂಧರೆಯ ಈ ನಿಶ್ಚಯವನ್ನು ಕೇಳಿ, ಪತಿಗೆ ತಕ್ಕ ಸತಿಯೆಂದು ತಮ್ಮತಮ್ಮೊಳಗೆ ಮಾತಾಡಿ ಕೊಳ್ಳಹತ್ತಿದರು

ಗ್ರಾಮದಲ್ಲಿ ರಾಮದಾಸನ ಯಜಮಾನರ ಹಲವು ಮನೆಗಳಿದ್ದವು. ಅವರೆಲ್ಲರು ಒಂದು ಉತ್ತರ ಕ್ರಿಯೆಯ ಸಿದ್ಧತೆಗೆ ತೊಡಗಿದ್ದರು. ಕಾರಣ ಕೆಲಸವು ಬೇಗ ಪೂರಯಿಸಿತು ವಾಹಕರು ಶವವನ್ನು ಹೊತ್ತುಕೊಂಡು ಸುಡುಗಾಡದ ಕಡೆಗೆ ನಡೆದರು. ಪುರುಷರನೇಕರು ಕೊನದ ಬೆನ್ನ ಹತ್ತಿ ಸಾಗಿದರು.

ತುಸ ಹೊತ್ತಿನಲ್ಲಿ ಹೆಂಗಳೆಯರದೊಂದು ತಂಡವು ಮಸಣಗಟ್ಟೆಯ ಕಡೆಗೆ ಹೊರಟಿತು ಮುಂಭಾಗದಲ್ಲಿ ಸತಿ ಹೋಗುವುದಕ್ಕೆ ಸಿದ್ಧಳಾದ ವಸುಂಧರೆಯಿದ್ದಳು. ಹಿಂದೆ ಹಲವರು ಹೆಂಗಸರಿದ್ದರು. ಸುವಾಸಿ ನಿಯರು ವಸುಂಧರೆಯನ್ನು ಎರೆದಿದ್ದಾರೆ. ಹೊಸ ಬಟ್ಟೆಯನ್ನುಡಿಸಿದ್ದಾರೆ. ಹಣೆಯಲ್ಲಿ ಎದ್ದು ಕಾಣುವಂತೆ ಕುಂಕುಮ ಹಚ್ಚಿದ್ದಾರೆ. ಕೂದಲನ್ನಿಳಿ

ಬಿಟ್ಟುಕೊಂಡು ಸಾಗಿದ್ದ ವಸುಂಧರೆಯು ದೈತ್ಯ ಸಂಹಾರಕ್ಕೆ ಹೊರಟ ಚಂಡಿಯಂತೆ ತೋರುತ್ತಿದ್ದಳು. ಯಮದಾಸನಿಗೆ ಸದ್ಗತಿಯಾಗಲೇ ಬೇಕು, ಇಲ್ಲವಾದರೆ ಈ ಸತಿಯು ಯಮನೊಡನೆ ಹೋರಾಡಿ ಪತಿಯನ್ನು ಸ್ವರ್ಗಕ್ಕೆ ಕರೆದೊಯ್ಯುದಿರಳೆಂದು ಕೆಲವರು ಮಾತಾಡಿಕೊಳ್ಳುತ್ತಿದ್ದರು. ವಸುಂಧರೆಗಾದರೂ ಕೇವಲ ಪತಿಯ ಆಲೋಚನೆ. ಬೇರೆ ಆಲೋಚನೆಗೆ ಅವಳು ತನ್ನ ಮನಸ್ಸಿನಲ್ಲಿ ತಿಲಮಾತ್ರವೂ ಅಂಬುಗೊಟ್ಟಿರಲಿಲ್ಲ.

ಶವಕ್ಕೂ ಈ ಸ್ತ್ರೀಸಮೂಹಕ್ಕೂ ಬಹಳ ಅಂತರವಾಗಿ ಹೋಗಿತ್ತು. ಹೆಂಗಳೆಯರ ತಂಡವು ಮೆಲ್ಲ ಮೆಲ್ಲನೆ ಮುಂದೆ ನಡೆದಿತ್ತು. ಮಧ್ಯ ಮಾರ್ಗಕ್ಕೆ ಬಂದ ಒಳಿರ ಸಾಧುವೊಬ್ಬನು ತನ್ಮಯನಾಗಿ ಭಗವಂತನ ನಾಮಸ್ಮರಣೆ ಮಾಡುತ್ತ ಎದುರಿಗೆ ಬರುತ್ತಿರುವುದನ್ನು ಹೆಂಗಸರು ನೋಡಿದರು. ಸಾಧುವನ್ನು ಪರೀಕ್ಷಿಸುವ ಸಂಕಲ್ಪ ಮಾಡಿಕೊಂಡರು. ಕೆಲವರು ಹೆಂಗಸರು ವಸುಂಧರೆಯನ್ನು ಒತ್ತಾಯದಿಂದ ಸಾಧುವಿನ ಹತ್ತಿರ ಕರೆದೊಯ್ದರು. ವಸುಂಧರೆಯು ಸಹಚರಿಯರ ಆಗ್ರಹದಿಂದ ಸಾಧುವಿನ ಚರಣಗಳಿಗೆರಗಿದಳು ಸಾಧುವು ಒಮ್ಮೆಲೆ ಜಾಗ್ರತನಾಗಿ ಹಿಂದು ಮುಂದಿನದನ್ನು ನೋಡದೆ 'ಸೌಭಾಗ್ಯವತಿಯಾಗಿ ಬಹು ಕಾಲ ಬಾಳು' ಎಂದು ಆಶೀರ್ವಾದ ಮಾಡಿಬಿಟ್ಟನು!

ವೃದ್ಧೆಯೊಬ್ಬಳು ಮುಂದೆ ಬಂದು:-ಸಾಧುಮಹಾರಾಜ, ನಿಮ್ಮ ನುಡಿಯು ನಿಜವಾಗುವ ಸಂಭವವಿಲ್ಲ. ಇವಳು ಸದ್ಯೋವಿಧವೆಯು, ಸಹಗಮನಕ್ಕೆ ಹೊರಟಿದ್ದಾಳೆ; ಎಂದು ಹೇಳಿದಳು

ಅಮ್ಮಾ, ಹೀಗೆ ಮಾತಾಡಿ ಸಾಧುಗಳ ಮನಸ್ಸನ್ನು ನೋಯಿಸ ಬೇಡ! ನನ್ನ ಹಣೆಯು ಬರಹಕ್ಕೆ ಇವರೇನು ಮಾಡುವರು? ಸಾಧುಗಳಲ್ಲಿ ಸದಾ ಸುವಿಚಾರಗಳು ತಲೆದೋರುವವು. ಈ ವಿಚಾರಗಳಿಗನುರೂಪ ವಾಗಿ ಅವರು ಯಾವಾಗಲೂ ಜನರ ಕಲ್ಯಾಣವನ್ನೇ ಸೂಚಿಸುವರು. ಈ ಸಾಧುಗಳ ಮಾತಿರಲಿ; ನಾನು ಚಿಕ್ಕವಳಿದ್ದಾಗ ಒಬ್ಬ ಮಹಾತ್ಮರು

ನಮ್ಮ ಮನೆಗೆ ಬಂದಿದ್ದರು. ನನ್ನ ತಾಯಿ-ತಂದೆಗಳು ಮಾಡಿದ ಸತ್ಕಾರದಿಂದ ಸಂತುಷ್ಟರಾಗಿ ಕುಳಿತಿದ್ದ ಆ ಸಾಧುವರ್ಯರು ನನ್ನನ್ನು ನೋಡಿ, 'ಅಖಂಡ ಸೌಭಾಗ್ಯವತಿಯಾಗುವಳೆಂ'ದು ಹೇಳಿದ್ದರು. ನಾನಿದು ವರೆಗೆ ಆ ಮಹನೀಯರ ಮಾತಿನಲ್ಲಿ ಪೂರ್ಣನಂಬಿಗೆಯಿಟ್ಟಿದ್ದೆನು; ಆದರೆ ಇಂದು ಆ ವಿಶ್ವಾಸವು ನಿರರ್ಥಕವಾಯಿತು. ವಸುಂಧರೆಯು ನುಡಿದಳು.

ವತ್ಸೆ, ಹೀಗೆ ಮಾತಾಡಬೇಡ ಸಾಧುಗಳ ವಚನವೆಂದಿಗೂ ಸಟಿಯಾಗದು. ಸಾಧುಗಳೂ ಸಾಮಾನ್ಯರಂತೆ ಸಟಿ-ದಿಟಗಳನ್ನು ಬೆರಸಿ ಮಾತಾಡಹತ್ತಿದರೆ, ಅವರಿಗೆ ಸಮಾಜದಲ್ಲಿ ಗೌರವವು ಹೇಗೆ ದೊರೆದೀತು? ಅವರು ಜನರ ಮನಸ್ಸನ್ನು ಹೇಗೆ ತಮ್ಮ ಕಡೆಗೆ ಎಳೆಕೊಂಡಾರು? ಲೋಕಕಲ್ಯಾಣಕ್ಕೋಸುಗ ಸಂಚರಿಸುತ್ತಿದ್ದ ಅವರು ತಮ್ಮ ಕರ್ತವ್ಯವನ್ನು ಕೊನೆಗಾಣಿಸುವುದೆಂತು? ಇರಲಿ, ನಿನಗೆ ಹಾಗೆ ಹೇಳಿದ ಆ ಸಾಧುಗಳು ಯಾರು? ತುಳಸೀದಾಸನು ಕೇಳಿದನು.

ಬಾಬಾ ನಾನಕ. ವಸುಂಧರೆಯು ಹೇಳಿದಳು.

ಅವರು ಸಿದ್ಧರು! ಅವರ ಮಾತಿನಲ್ಲಿ ಹುಸಿಯಿರದು! ನೀನವರ ಮಾತಿನಲ್ಲಿ ನಂಬುಗೆಯನ್ನು ಈಗಲೂ ಕಳೆದುಕೊಳ್ಳದಿರು! ಆ ಮಹಾತ್ಮರ ಯೋಗ್ಯತೆಯು ಅವರ ದಾಸಾನುದಾಸನಾದ ನನಗಿರದಿದ್ದರೂ, ನಾನಿಂದು ಅವರ ನುಡಿಯು ಚಿರಸತ್ಯವಾದುದೆಂಬುದನ್ನು ನೋಡಬಯಸಿದ್ದೇನೆ! ಅಮ್ಮಾ, ಈಗ ನಿನ್ನ ಆ ಪತಿಯು ಎಲ್ಲಿ? ತುಳಸೀದಾಸನು ಕೇಳಿದನು.

ಪರಮ ಧಾರ್ಮಿಕರಾದ ನನ್ನ ಪತಿರಾಯರು ಸ್ವರ್ಗಕ್ಕೆ ಹೋಗಿರುವರು! ನಾನವರ ದರ್ಶನಕ್ಕಾಗಿ ಈಗ ಸಡಗರದಿಂದ ಹೊರಟಿರುವೆನು! ವಸುಂಧರೆಯು ಹೇಳಿದಳು.

ವೀರಾಂಗನೆ, ಚಿಂತಿಸದಿರು. ನಿನ್ನ ಈ ಪತಿಧರ್ಮಪಾಲನೆಯು ತತ್ಪರತೆಯು ನಿನಗೆ ಹಿತವನ್ನುಂಟು ಮಾಡುವುದು. ನೀನು ಮತ್ತೆ ಪತಿಯ ಸೇವೆಮಾಡುವುದಕ್ಕೆ ಅಧಿಕಾರಿಣಿಯಾಗುವೆ. ನಿನ್ನ ಪತಿಯ ಶವವೆಲ್ಲಿ?

ಆ ದೇಹದಲ್ಲಿ ಇನ್ನೂ ಪ್ರಾಣವಿದ್ದರೂ ಇರಬಹುದು. ತುಳಸೀದಾಸನು ನುಡಿದನು.

ಇಲ್ಲಿ ಈ ವಿಷಯವಾಗಿ ಮಾತಾಡುತ್ತ ನಿಲ್ಲುವುದು ಉಪಯುಕ್ತವಲ್ಲ. ಅಂಗೈಯಲ್ಲಿರುವುದಕ್ಕೆ ಕನ್ನಡಿಯೇಕೆ? ಸಾಧುಗಳೆ, ನೀವು ನಮ್ಮ ಸಂಗಡ ಬನ್ನಿರಿ. ಇವಳ ಪತಿಯ ಶವವು ದಹನಕ್ಕೋಸ್ಕರ ರುದ್ರಭೂಮಿಗೆ ಒಯ್ಯಲ್ಪಟ್ಟಿದೆ. ನೀವು ಅಲ್ಲಿಗೆ ಬಂದರೆ, ಎಲ್ಲವನ್ನೂ ನೋಡುವಿರಿ. ಮತ್ತೊಬ್ಬ ಪ್ರೌಢ ನಾರಿಯು ನುಡಿದಳು.

ಅಮ್ಮಗಳಿರಾ, ನಡೆಯಿರಿ. ನಾನು ನಿಮ್ಮ ಹಿಂದೆ ಬರುವೆನು. ನನಗೆ ಆ ಹೆಣವನ್ನು ತೋರಿಸಿರಿ. ತುಳಸೀದಾಸನು ನುಡಿದನು ಎಲ್ಲರೂ ಮಸಣದ ಕಡೆಗೆ ಸಾಗಿದರು.

ದಹನಭೂಮಿಯಲ್ಲಿ ಜನರು ಶವವನ್ನು ಒಂದು ಕಡೆಯಲ್ಲಿರಿಸಿದ್ದರು. ಹರಟೆಹೊಡೆಯುತ್ತ ಚಿತೆಯನ್ನು ರಚಿಸುತ್ತಿದ್ದರು. ಬರುತ್ತಿರುವ ಹೆಂಗಸರನ್ನು ನೋಡಿದರು. ಅವರ ಹಿಂದೆ ಇದ್ದ ತೇಜಃಪುಂಜ ಸಾಧುವನ್ನು ನೋಡಿ ಬೆರಗಾದರು. ಬೇರೆ ಬೇರೆ ವಿಚಾರಗಳಿಗೊಳಗಾದರು.

ಹೆಂಗಸರು ಶವದ ಸಮೀಪಕ್ಕೆ ಬಂದರು ವಸುಂಧರೆಯು ಪತಿಯ ಪಾದಪ್ರಾಂತದಲ್ಲಿ ಕುಳಿತು:—ಸ್ವಾಮಿ, ಇಲ್ಲಿ ನೋಡಿರಿ!........ ಮುಂದೆ ಅವಳಿಂದ ಮಾತಾಡಲಿಕ್ಕಾಗಲಿಲ್ಲ.

ಒಳ್ಳೆ ಸಾತ್ವಿಕವೃತ್ತಿಯ ಬ್ರಾಹ್ಮಣನ ಮರಣವು ಹೀಗೆ ಅಕಸ್ಮಾತ್ತಾಗಿ ಆದೀತೆಂದು ಯಾರೂ ಎಣಿಸುವ ಸಂಭವವಿರಲಿಲ್ಲ. ದೈವದಲ್ಲಿದ್ದದ್ದು ಹುಸಿಹೋಗುವುದಿಲ್ಲೆಂಬುದು ನಿಜ! ಇಲ್ಲವಾದರೆ, ಈ ಬ್ರಾಹ್ಮಣನು ಅಕಾಲದಲ್ಲಿ ಮನೆಯಲ್ಲಿ ಸುಟ್ಟುಕೊಂಡು ಸಾಯುತ್ತಿದ್ದನೆ? ಮನೆಯೊಳಗಿನವರೆಲ್ಲರೂ ಪಾರಾಗಿ, ಇವನೊಬ್ಬನೇ ಸತ್ತಿರುವುದು ಆಶ್ಚರ್ಯವಲ್ಲವೇ? ಮುದುಕೆಯೊಬ್ಬಳು ಮಾತಾಡಿದಳು.

ಗಂಡಸರಾರೂ ಮಾತಾಡಲಿಲ್ಲ. ಅವರೆಲ್ಲರು ಗೂಢದಲ್ಲಿ ಬಿದ್ದು

ಹೋಗಿದ್ದರು. ಈ ಸಾಧುವಾರು? ಇಲ್ಲಿಗೆ ಬಂದಿರುವುದೇಕೆ? ಹೆಂಗಸರು ಹೀಗೆ ಮಾತಾಡುತ್ತಿರುವುದೇಕೆ? ಎಂಬುದನ್ನವರು ಅರಿಯರು. ಇವನು ಯಾರೇ ಆಗಲಿ, ಮುಂದೇನು ನಡೆಯುವದೋ ನೋಡಿದರಾಯಿತು, ಎಂದು ಕುತೂಹಲತೆಯಿಂದ ನೋಡುತ್ತ ನಿಂತರು.

ಅಮ್ಮಗಳಿರಾ, ನೀವಿನ್ನು ಸುಮ್ಮನಿರ್ರಿ. ಮೃತಪ್ರಾಣಿಯ ಆತ್ಮವು ಸಮೀಪದಲ್ಲಿಯೇ ಸಂಚರಿಸುತ್ತಿರಬಹುದು. ನೀವು ಈ ಬ್ರಾಹ್ಮಣನ ಹಾಗು ಇವನ ಸತಿಯ ಹಿತಚಿಂತಕರಷ್ಟೆ? ಆ ಪರಮ ಕಾರುಣಿಕ ಪರಮೇಶ್ವರನು ಆ ಆತ್ಮವನ್ನು ಈ ದೇಹದಲ್ಲಿ ಪುನಃ ಪ್ರತಿಷ್ಠಾಪಿಸಲಿ! ಎಂದು ಪ್ರಾರ್ಥಿಸಿಕೊಳ್ಳಿರಿ, ಎಂದು ಹೇಳಿ ತುಳಸೀದಾಸನು ಶವದ ಕಟ್ಟುಗಳನ್ನು ಬಿಚ್ಚಹತ್ತಿದನು. ಎಲ್ಲರೂ ಆತುರತೆಯಿಂದ ತಟಸ್ಥರಾಗಿದ್ದು ನೋಡುತ್ತಿದ್ದರು.

ರಾಮದಾಸನ ದೇಹವು ಉರಿಯಲ್ಲಿ ಸಿಕ್ಕು ಬೆಂದು ಹೋಗಿತ್ತು. ಮೈಯೆಲ್ಲವೂ ಕಪ್ಪುವಡೆದು ಕೆಟ್ಟುಹೋಗಿತ್ತು. ತುಳಸೀದಾಸನು ಮೇಲಿನ ಆವರಣವನ್ನು ತೆಗೆದನು. ಜೋಳಿಗೆಯಲ್ಲಿಯ ಚಂಬುವಿನಲ್ಲಿದ್ದ ನೀರನ್ನು ಶವಕ್ಕೆ ಪ್ರೋಕ್ಷಿಸಿದನು. ಕೈ ಜೋಡಿಸಿ ಕುಳಿತು ಪ್ರಾರ್ಥನೆ ಮಾಡಹತ್ತಿದನು. ನೆರೆದವರೆಲ್ಲರು ವಿಸ್ಮಯಾತಿರೇಕದಿಂದ ನೋಡಿದರು. ಶವವು ಮೆಲ್ಲ ಮೆಲ್ಲನೆ ಚೇತನೆ ಹೊಂದುವುದರಲ್ಲಿತ್ತು. ವಸುಂಧರೆಯ ಸಂತೋಷಕ್ಕೆ ಮೇರೆಯಿಲ್ಲದಾಯಿತು. ಕೂಡಿದವರ ಆಶ್ಚರ್ಯಕ್ಕೆ ಸೀಮೆಯಿಲ್ಲದಾಯಿತು. ಅಲ್ಪಾವಕಾಶದಲ್ಲಿ ರಾಮದಾಸನು ಸಚೇತನನಾಗಿ ಎದ್ದು ಕುಳಿತನು. ಎಲ್ಲರೂ ಭಕ್ತಿಯುತರಾಗಿ ಸಾಧುವಿಗೆ ನಮಸ್ಕಾರ ಮಾಡ ಬಂದರು. ಸಾಧುವು ಇವರನ್ನು ತಡೆದು:-"ನೀವಿನ್ನು ರಾಮದಾಸನ ಶುಶ್ರೂಷೆಗೆ ತೊಡಗಿರಿ. ಇವನನ್ನು ಸಾವಧಾನತೆಯಿಂದ ಮನೆಗೆ ಒಯ್ಯಿರಿ. ನಾಲ್ಕಾರು ದಿವಸ ಚೆನ್ನಾಗಿ ಉಪಚಾರ ಮಾಡಿರಿ. ಇದರಿಂದ ರಾಮದಾಸನು ಮೊದಲಿನಂತೆ ದೇಹಾರೋಗ್ಯವನ್ನು ಹೊಂದು

ವನು" ಎಂದು ಹೇಳಿದನು. ಕೂಡಿದವರ ಲಕ್ಷವು ರಾಮದಾಸನ ಕಡೆಗೆ ಹರಿಯಿತು. ಈ ಸಮಯದಲ್ಲಿ ಸಾಧುವು ಎದ್ದು ಭರದಿಂದ ಹೋಗಹತ್ತಿದನು. ಒಬ್ಬಿಬ್ಬರು ಸ್ವಾರ್ಥಸಾಧನೆಯ ಆಶೆಯಿಂದ ಅವನ ಬೆನ್ನಹತ್ತಿದರು; ಆದರೆ ಸಾಧುವು ಇವರ ಕೈಗೆ ಸಿಗಲಿಲ್ಲ.

ವಾಚಕ ಮಹಾಶಯ, ಈ ಸಾಧುವು ತುಳಸೀದಾಸನಾಗಿದ್ದನೆಂಬದನ್ನು ನಾವು ನಿಮಗೆ ಇಲ್ಲಿ ಬೇರೆಯಾಗಿ ಹೇಳುವ ಕಾರಣವಿಲ್ಲ

## ೧೬ ಪತಿತಪಾವನ.

ಜಾನಕೀವಲ್ಲಭನು ಕೃತಕೃತ್ಯನಾಗಿದ್ದನು ಒಂದು ದಿನ ಆಲೋಚಿಸುತ್ತ ಬಂದಿದ್ದ ಕೆಲಸವನ್ನು ಇಂದು ಕೊನೆಗಾಣಿಸಿದ್ದನು ಇವನ ಆ ವಿಧ್ವಂಸಕ ಕಾರ್ಯವು ಬೊಬ್ಬಾಟವಿಲ್ಲದೆ ಕೊನೆಗೊಂಡಿತ್ತು. ಇದಕ್ಕಾಗಿ ಪರಮಾನಂದವಾಗಬೇಕಾಗಿತ್ತು; ಆದರೆ ಇವನಿಗೆ ಅಂದು ಹಾಸಿಗೆಯ ಮೇಲೆ ಬೀಳುತ್ತಲೆ, ಸಂತೋಷದ ಬದಲು ತಳಮಳವಾಗಹತ್ತಿತು ನಿದ್ರೆಯಂತೂ ಈ ಸ್ವಜನದ್ರೋಹಿಯನ್ನು ಬಿಟ್ಟು ಬಹು ದೂರ ಹೋಗಿ ಬಿಟ್ಟಿತು. ಜಾನಕೀವಲ್ಲಭನು ಬಹಳವಾಗಿ ವ್ಯಥೆಯನ್ನನುಭವಿಸಹತ್ತಿದನು. ಹತ್ತಿಪ್ಪತ್ತು ಚೇಳು ಒಮ್ಮೆಲೆ ಕಡಿದರೆ, ಹೇಗೆ ತಳಮಳವಾಗುವದೋ ಹಾಗೆ ಜಾನಕೀವಲ್ಲಭನಿಗೆ ವ್ಯಥೆಯಾಗಹತ್ತಿತು; ಆದರೆ ಹೀಗೆ ತನಗೆ ವ್ಯಸನವೇಕಾಗುತ್ತಿರಬಹುದೆಂಬುದನ್ನು ಇವನು ತಿಳಿಯದಾದನು. ಬಹಳವಾಗಿ ಆಲೋಚಿಸಿದನು. ಉಂಟಾಗಿದ್ದ ತಳಮಳದ ಉಪಶಮನದ ಔಷಧವೇನಾದರೂ ಇರಬಹುದೆ? ಎಂದು ಗೇಣಿಕೆ ಹಾಕಿದನ . ಯಾವುದೂ ಬಗೆ ಹರಿಯಲಿಲ್ಲ. ಇವನು ಆ ಅವ್ಯಕ್ತ ವೇದನೆಯಿಂದ ಒದ್ದಾಡುತ್ತ ಬೆಳಗುಗಳೆಯ ಬೇಕಾಯಿತು.

ಇದೊಂದು ವೇಳೆ ಜಾನಕೀವಲ್ಲಭನ ಆಯುಷ್ಯದಲ್ಲಿ ಅತಿ ಮಹತ್ವದ್ದು. ಈ ಶುಭ ವೇಳೆಯಲ್ಲಿ ಹೊರಗೆ ಅಶುಭ ಕಾರ್ಯವು ನಡೆದಿದ್ದರೂ, ಜಾನಕೀವಲ್ಲಭನ ಮನಸ್ಸಿನಲ್ಲಿ ಅವನ ವೃತ್ತಿಗೆ ತೀರ ವಿಪರೀತವಾದ ಶುಭ ವಿಚಾರಗಳು ಬರಹತ್ತಿದುವು. ತಾನಿದುವರೆಗೆ ಮಾಡಿದ್ದೇನು? ಎಂದು ಇವನು ಆಲೋಚಿಸಹತ್ತಿದನು. ಎದೆಯೊಡೆದು ಹೋಯಿತು. ಇವನ ಅವಿವೇಕತನದ ಕೃತಿಗಳಿಗೆ ಅಳತೆಯಿರಲಿಲ್ಲ. ಇವನಾಚರಿಸದ ಪಾಪಕೃತ್ಯವಿರಲಿಲ್ಲ. ಇವನಿಂದ ಆಚರಿತವಾಗದ ಪರಹಿಂಸೆಯಿರಲಿಲ್ಲ. ಅವು ಒಂದೊಂದಾಗಿ ಜಾನಕೀವಲ್ಲಭನ ನೇತ್ರ ಪಥದ ಮುಂದೆ ಬಂದು ನಿಲ್ಲಹತ್ತಿದುವು. ಜಾನಕೀವಲ್ಲಭನು ಸಿನೇಮಾದ ಚಿತ್ರಪಟಗಳನ್ನವಲೋಕಿಸುತ್ತಿರುವಂತೆ, ತನ್ನ ಕೃತಿಯ ದುಷ್ಪರಿಣಾಮದ ದುಶ್ಚಿತ್ರಗಳನ್ನು ನೋಡಹತ್ತಿದನು.

ಈ ಚಿತ್ರಪಟದಲ್ಲಿಯ ಕಡೆಯ ದೃಶ್ಯವು ರಾಮದಾಸನ ಕೊಲೆಯುದಿತ್ತು. ಭ್ರಾತೃಹತ್ಯೆ ಹಾಗು ಬ್ರಹ್ಮಹತ್ಯೆಯ ಮಹಾ ಪಾತಕಗಳ ಈ ನೋಟವು ಅತ್ಯಂತ ಭಯಾನಕವಾಗಿತ್ತು. ತಾನು ಮನೆಯಿಂದ ಕಳ್ಳನಂತೆ ಸದ್ದು ಮಾಡದೆ ಅಂಜುತ್ತಂಜುತ್ತ ಹೊರಬಿದ್ದು, ಎಷ್ಟು ಮಾಡಿದರೂ ಸಪ್ಪಳವಾಗುತ್ತಲೆ ಪೆಟ್ಟು ಬೀಳುವದು, ರಾಮದಾಸನ ಮನೆಗೆ ಬೆಂಕಿಯು ಹತ್ತಿದ್ದು, ಬೆಂಕಿಯು ಧಗಧಗಿಸಿ ಉರಿಯುತ್ತಿರುವದನ್ನು ನೋಡಿ ಆಸುರೀಯ ಹಾಸ್ಯ ಮಾಡಿದ್ದು, ಭಯಂಕರ ಅಗ್ನಿಯಿಂದ ಮನೆಯ ಕಟ್ಟಿಗೆಗಳು ಛಟ್ ಛಟ್ ಸಪ್ಪಳವಾಗಿ ಮುರಿದು ಬೀಳಲಾರಂಭಿಸಿದ್ದು; ಜಾನಕೀವಲ್ಲಭನಿಂದ ಮುಂದೆ ನೋಡಲಿಕ್ಕಾಗಲಿಲ್ಲ. ಕೈಗಳಿಂದ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡನು; ಆದರೆ ನಿಯತಿಯು ಅವನಿಗೆ ವಿಶ್ರಾಂತಿಯು ಕೊಡಲಿಲ್ಲ. ಜಾನಕೀವಲ್ಲಭನಿಗೆ ಮತ್ತೆ ಕಾಣಹತ್ತಿತು. ರಾಮದಾಸನ ಕುಟುಂಬದ ಜನರೆದ್ದು ಚೀರಾಡಹತ್ತಿದ್ದು, ಬಾಲಕರು ಭಯಗೊಂಡು ರೋದಿಸಹತ್ತಿದ್ದು, ಹೆಣ್ಣುಮಕ್ಕಳು

ಹೊರಬೀಳುವ ದಾರಿಯನ್ನು ಕಾಣದೆ ಹೌಹಾರಿದ್ದು, ರಾಮದಾಸನೆದ್ದು ಸತಿಸುತರ ಈ ಅಳಲನ್ನು ಲೆಕ್ಕಿಸದೆ, ಗೃಹದೇವನ ರಕ್ಷಣೆಗೆ ಧಾವಿಸಿದ್ದು, ಶಾಲಿಗ್ರಾಮ ಶಿಲೆಯ ಸಂರಕ್ಷಣೆಗೆ ಪ್ರಯತ್ನಿಸಿದ್ದು. ಈ ಪ್ರಯತ್ನದಲ್ಲಿರುವಾಗಲೆ ಮನೆಯು ಕಳಚಿಬಿದ್ದು, ಶಾಲಿಗ್ರಾಮ ಶಿಲೆಯೊಡನೆ ಸಮಾಧಿತನಾದದ್ದು. ಇತ್ತ ಹೊರ ಮನೆಯಲ್ಲಿ ಹೆಣ್ಣುಮಕ್ಕಳು ಹುಡುಗರು ಗತಿಗಾಣದೆ ಒದರಾಡಿ, ಚೀರಾಡಿ, ಅತ್ತು, ಕರೆದು, ಅತ್ತಿತ್ತ ಓಡಾಡಿ ಕಡೆಯಲ್ಲಿ ಸ್ವಗೃಹದಲ್ಲಿ ಅನಾಥರಾಗಿ ಜೀವಂತ ಸಮಾಧಿಯನ್ನು ಹೊಂದಿದ್ದು. ಜಾನಕೀವಲ್ಲಭನು ಥರ ಥರನೆ ನಡುಗಿದನು. ಚಿಟ್ಟನೆ ಚೀರಿ ಕಣ್ತೆರೆದನು. ಸೂರ್ಯನು ಮೇಲಕ್ಕೇರಿ ಬಂದಿದ್ದನು. ಮನೆಯ ಕಿಟಕಿಗಳ ಮಾರ್ಗವಾಗಿ ಕಿರಣಗಳು ಒಳ ಹೊಕ್ಕಿದ್ದುವು. ಕೋಣೆಯಲ್ಲೆಲ್ಲ ಬೆಳಕು ಬಿದ್ದಿತ್ತು ಹತ್ತಿರದಲ್ಲಿ ಮತ್ತೆ ಯಾರೂ ಇರಲಿಲ್ಲ. ಜಾನಕೀವಲ್ಲಭನು ಹಾಸಿಗೆಯಿಂದೆದ್ದು ಹುಚ್ಚನಂತೆ ಹೊರಟನು. ಎಲ್ಲಿಗೆ ಹೋಗಬೇಕು? ಏನು ಮಾಡಬೇಕು? ಎಂಬ ವಿಚಾರವನ್ನೇನೂ ಅವನು ಮಾಡಿದವನಲ್ಲ. ಅಸ್ತವ್ಯಸ್ತವಾದ ಉಡುಗೆಯಿಂದ ಬರಿ ಮೈಯಿಂದ ಬಕ್ಕ ನೆತ್ತಿಯಿಂದ ಶಾಗಿದ್ದನು ಇನ್ನು ಹಿಲಬಾಗಿಲದಿಂದ ಹೊರಬೀಳತಕ್ಕವನು. ಎದುರಿನಲ್ಲಿ ಸಾಧುವೊಬ್ಬನು ಭಜನೆ ಮಾಡುತ್ತ ಬರುತ್ತಿರುವುದನ್ನು ನೋಡಿದನು. ಮೈಮೇಲೆ ತುಸ ಎಚ್ಚರಿಕೆಯುಂಟಾದಂತಾಯಿತು. ಜಾನಕೀವಲ್ಲಭನು ಅಲ್ಲಿಯೇ ನಿಂತು ಸಾಧುವನ್ನು ನೋಡಹತ್ತಿದನು. ತಾನು ಹಿಂದೆ ಒಮ್ಮೆ ಈ ಸಾಧುವನ್ನು ಎಲ್ಲಿಯೋ ನೋಡಿರಬೇಕೆಂದು ಅವನಿಗೆ ಅನಿಸಿತು; ಆದರೆ ಎಲ್ಲಿ ನೋಡಿರಬೇಕೆಂಬುದು ಹೊಳೆಯಲಿಲ್ಲ. ಸಾಧುವು ಉಚ್ಚಸ್ವರದಿಂದ ಭಜನೆ ಮಾಡುತ್ತ ಮುಂದೆ ಹೋಗುತಲಿದ್ದನು. ಜಾನಕೀವಲ್ಲಭನು ಅವನನ್ನು ಮುಂದೆ ಹೋಗಗೊಡಲಿಲ್ಲ. ಓಡಿ ಹೋಗಿ ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಎದ್ದು ನಿಂತು ತನ್ನ ಮನೆಗೆ ಬರಬೇಕೆಂದು ಆಗ್ರಹ ಮಾಡ ಹತ್ತಿದನು.

ಜುಲುಮೆ ಮಾಡಬೇಡಯ್ಯಾ! ಜನರು ಕರೆದತ್ತ ಹೋಗುವವನು ನಾನಲ್ಲ. ಹಿಂದೆಯೊಮ್ಮೆ ನಾನೇ ನಾನಾಗಿ ನಿನ್ನ ಮನೆಗೆ ಬಂದಿದ್ದೆನು. ಆಗ ನೀನು ಭಿಕ್ಷೆಯ ಹಾಕದೆ ಸಿಟ್ಟಿಗೆದ್ದು ನನ್ನನ್ನು ಮನೆಯಿಂದ ಹೊರ ದೂಡಲು ಪ್ರಯತ್ನಿಸಿದ್ದೆ! ನಿನ್ನಂತಹ ಪಾಪಿಷ್ಠನ ಮನೆಗೆ ನಾನು ಬರಲಾರೆ! ತುಳಸೀದಾಸನು ಹೇಳಿದನು. ಆ ಸಾಧುವು ತುಳಸೀದಾಸನಾಗಿದ್ದನು.

ಸ್ವಾಮಿ, ಹಿಂದಿನದನ್ನು ಮರೆತು ಬಿಡಿರಿ. ಆ ವರೆಗಿನ ಜಾನಕೀವಲ್ಲಭನು ಬೇರೆ; ಇಂದಿನ ಜಾನಕೀವಲ್ಲಭನು ಬೇರೆ. ಜ್ಞಾನಿಗಳಾದ ತಮಗೆ ನಾನು ಈ ಸಂಗತಿಯನ್ನು ಒಡೆದು ಹೇಳಬೇಕೆಂಬ ಹಾಗೇನೂ ಇಲ್ಲ. ನೀವು ನನ್ನ ಪರೀಕ್ಷೆ ಮಾಡುತ್ತಿರುವಂತೆ ಕಾಣುತ್ತದೆ! ಜಾನಕೀವಲ್ಲಭನು ನುಡಿದನು.

ಅಯ್ಯಾ, ನಿನ್ನ ಪರೀಕ್ಷೆ ತಕೊಂಡು ನಾನೇನು ಮಾಡಲಿ? ನೀನೇನು ನನ್ನ ಶಿಷ್ಯನಾಗಿ ನನ್ನೊಡನೆ ಅಲೆಯಬೇಕಾಗಿದೆ? ನಿನ್ನ ಉಸಾಬರಿ ನನಗೆ ಬೇಡ. ನಿನ್ನಂತಹ ಮಹಾಪಾತಕಿಯ ನೆರಳು ಕೂಡ ನಮಗೆ ತ್ಯಾಜ್ಯವಾದದ್ದು. ತುಳಸೀದಾಸನೆಂದನು

ನೀವೇ ಹೀಗೆಂದ ಬಳಿಕ ನನಗೆ ಆಶ್ರಯಗೊಡುವವರಾರು? ನನಗೆ ಉದ್ಧಾರದ ಆಶೆಯೆಲ್ಲಿ? ಜಾನಕೀವಲ್ಲಭನು ಕೇಳಿದನು.

ಎಲ್ಲಿಯ ಉದ್ಧಾರ? ಎಲ್ಲಿಯ ಆಶ್ರಯ? ನಿನಗೆ ಆಶ್ರಯಕ್ಕೇನು ಕೊರತೆ? ಭವ್ಯವಾದ ಮನೆಯಿದೆ. ಹೇಳಿದಂತೆ ಕೇಳಿಕೊಂಡು ಹೋಗುವ ಹೆಂಡತಿಯಿದ್ದಾಳೆ ಸುಖೋಪಭೋಗದ ಆಶೆಯೊಡನೆ ಪರಹಿಂಸೆಯ ಪ್ರಬಲವಾಸನೆಯಿದೆ ರಾಕ್ಷಸೀಯ ಶಕ್ತಿಯಿದೆ. ಇನ್ನೇನು ಬೇಕು? ತುಳಸಿದಾಸನು ಕೇಳಿದನು.

ಮಹಾರಾಜ, ಈಗ ನನಗೆ ಇವುಗಳಲ್ಲೊಂದೂ ಬೇಡ! ಜಾನಕೀವಲ್ಲಭನು ಬಹಳ ಮೆತ್ತಗಾಗಿ ಮಾತಾಡಿದನು.

ನಿನಗೆ ಬೇಕಾದುದೇನು?

ಸತ್ಪುರುಷರ ಸಹವಾಸ-ಉದ್ಧಾರದ ದಾರಿ.

ನಿನಗೆ ನಿಜವಾಗಿಯೂ ಪಶ್ಚಾತ್ತಾಪವಾಗಿದೆಯೆ?

ನಾನು ಹೇಳಿಕೊಳ್ಳುವದರಿಂದ ಪ್ರಯೋಜನವಿಲ್ಲ. ನೀವೇ ನಿಮ್ಮ ದಿವ್ಯದೃಷ್ಟಿಯಿಂದ ತಿಳಿದು ನೋಡಿ, ನನಗೆ ಸರಿಯಾದ ದಾರಿಯನ್ನು ತೋರಿಸಿರಿ!

ಪಾತಕಿಯೆ, ನಿನಗೆ ನಿಜವಾಗಿಯೂ ಪಶ್ಚಾಪವಾಗಿದ್ದರೆ, ಹಾಗು ಈ ಪಶ್ಚಾತ್ತಾಪವು ಕ್ಷಣಿಕವಾಗಿರದಿದ್ದರೆ, ಉದ್ಧಾರದ ಮಾರ್ಗವನ್ನು ಹುಡುಕಿಕೊಳ್ಳುವದು ದುಸ್ತರವಲ್ಲ! ಪಶ್ಚಾತ್ತಾಪವು ತೀಕ್ಷ್ಣವಾಗಿದ್ದ ಮಾನದಿಂದ ಮನಸ್ಸು ಬೇಗ ಶುದ್ಧವಾಗುತ್ತ ಹೋಗುವದು. ನೀನು ಈಗಲೆ ಕಾಶಿಗೆ ಹೊರಡು. ಅಲ್ಲಿ ನಿನಗೆ ಸನ್ಮಾರ್ಗವನ್ನು ತೋರುವ ಸದ್ಗುರು ದರ್ಶನ ಕೊಡುವನು. ತುಳಸೀದಾಸನು ಹೇಳಿದನು

ಜಾನಕೀವಲ್ಲಭನು ಮತ್ತೆ ಸಾಷ್ಟಾಂಗ ನಮಸ್ಕಾರಮಾಡಿದನು. ತುಳಸೀದಾಸನು ತೀವ್ರವೇಗದಿಂದ ನಡೆದು ಹೋಗಿಬಿಟ್ಟನು. ಜಾನಕೀವಲ್ಲಭನು ಎದ್ದು ನೋಡುವಷ್ಟರಲ್ಲಿ ತುಳಸೀದಾಸನು ಅಲ್ಲಿರಲಿಲ್ಲ. ಅತ್ತಿತ್ತ ನೋಡಿದನು. ಎಲ್ಲಿಯೂ ಕಾಣಲಿಲ್ಲ. ಜಾನಕೀವಲ್ಲಭನು ತಿರುಗಿ ಮನೆಯೊಳಗೆ ಕಾಲಿಡಲಿಲ್ಲ. ಹಾಗೆಯೆ ಕಾಶಿಯ ದಾರಿಯನ್ನು ಹಿಡಿದು ನಡೆದನು.

††† ††† ††† ††† †††

ಕಾಶಿಯಲ್ಲಿ ಬ್ರಾಹ್ಮಣಸಮಾಜನಿಯಾಮಕ ಸಂಘವೊಂದಿತ್ತು. ಇದರ ಸದಸ್ಯರ ಸಂಖ್ಯೆ ಐದು ಮಾತ್ರ. ಈ ಸಂಘವು ಇತರ ಬ್ರಾಹ್ಮಣರಿಂದ ಅನುಮೋದಿಸಲ್ಪಟ್ಟದ್ದಲ್ಲ. ಮನ್ನಣೆಹೊಂದಿದ್ದೂ ಅಲ್ಲ. ಆದರೂ ಬಹು ಜನ ಬ್ರಾಹ್ಮಣರು ಈ ಸಂಘಕ್ಕೆ ಅಥವಾ ಸಂಘದ ಮೆಂಬರರಿಗೆ ಬಾಗಿ ನಡೆಯುತ್ತಿದ್ದರು. ಇದರಿಂದ ಸಂಘದ ಸಭ್ಯರು ತಾವು ಶ್ರೇಷ್ಠ

ರೆಂದು ತಿಳಕೊಳ್ಳಲಿಕ್ಕೆ ಆಸ್ಪದವಾಗಿತ್ತು. ಈ ಶ್ರೇಷ್ಠರು ಬ್ರಾಹ್ಮಣ ಸಮಾಜದ ಮೇಲೆಲ್ಲ ತಮ್ಮ ವರ್ಚಸ್ಸಿರಬೇಕೆಂದು ಯತ್ನಿಸುತ್ತಿದ್ದರು. ತಮ್ಮ ಹಿರಿಯತನವನ್ನು ಒಪ್ಪದವರನ್ನು ಹಣ್ಣಿಗೆ ತರುವ ಆಲೋಚನೆ ಮಾಡುತ್ತಿದ್ದರು. ಅದರಂತೆ ಕೃತಿಮಾಡಲಿಕ್ಕೂ ಹಿಂದೆಗೆಯುತ್ತಿದ್ದಿಲ್ಲ.

ಈ ಸಂಘದ ಅಧಿವೇಶನವು ಪ್ರತಿದಿನ ಗಂಗಾನದಿಯ ದಂಡೆಯಲ್ಲಿ ಯಾವುದೊಂದು ಸುಕಾಲವಾದ ಹಗಲು ವೇಳೆ ಕೂಡುತ್ತಿತ್ತು. ಮೆಂಬರರು ಈ ಸಭೆಯಲ್ಲಿ ಧರ್ಮದ ಆಲೋಚನೆ ಮಾಡುತ್ತಿದ್ದರು. ವಿದ್ಯೆಯ ಆಲೋಚನೆ ಮಾಡುತ್ತಿದ್ದರು. ಪರನಿಂದೆಯನ್ನು ಮಾಡುತ್ತಿದ್ದರು. ಊರೊಳಗಿನ ವಿಶಿಷ್ಟವರ್ತಮಾನಗಳನ್ನೆತ್ತಿ ಚರ್ಚಿಸುತ್ತಿದ್ದರು. ನಿಯಮಿತ ವೇಳೆಯಾಯಿತೆಂದರೆ, ಸಭಾಭಂಗಮಾಡಿ, ಸಾಯಂಕಾಲದ ಆಹ್ನಿಕ ತೀರಿಸಿಕೊಂಡು ಮನೆಗೆ ಹೋಗುತ್ತಿದ್ದರು.

---

ಈ ಮೆಂಬರರಲ್ಲಿಯ ಪ್ರತಿಯೊಬ್ಬನಿಗೆ ತಾನು ಪಂಡಿತನಾಗಿರುವೆ ನೆಂಬ ವಿಷಯದಲ್ಲಿ ಬಲವಾದ ವಿಶ್ವಾಸವಿತ್ತು. ಈ ಹೆಮ್ಮೆಯು ಸಭಾ-ಪತಿಯಾಗಿದ್ದ ವೇದಾಂತವಾಗೀಶನಲ್ಲಿ ಹೆಚ್ಚಿತ್ತು. ಇವರು ಅಂತರಂಗ ದಲ್ಲಿ ಒಬ್ಬರನ್ನೊಬ್ಬರು ಪ್ರೀತಿಸುವ ಸಂಭವವಿರಲಿಲ್ಲ ಆದರೂ ಈ ಬುದ್ಧಿ ಜೀವಿಗಳು ತಮ್ಮಲ್ಲಿ ಸಂಪೂರ್ಣ ಐಕ್ಯವಿದ್ದಂತೆ ನಟಿಸುತ್ತಿದ್ದರು. ಬಹಿ ರಂಗದ ಚಕಮಕಲಹವು ತಮ್ಮ ಪ್ರತಿಷ್ಠೆಗೆ ತೀರ ವಿಘಾತುಕವೆಂಬುದನ್ನು ಈ ಬುದ್ಧಿವಂತರು ಅರಿತಿದ್ದರು. ಹೀಗೆಯೇ ಪ್ರತಿಯೊಂದು ಪ್ರಸಂಗ ದಲ್ಲಿ ಸ್ವಾರ್ಥಸಾಧನೆಯೂ ಗರ್ವವೂ ತಮಗೆ ಅಹಿತಕರವೆಂದು ತಿಳಿದಿದ್ದರೆ ಚೆನ್ನಾಗುತ್ತಿತ್ತು; ಆದರೆ ಆಚರಣೆಯು ಮಾತ್ರ ಸ್ವಾರ್ಥಸಾಧನೆಯ ತತ್ಪರತೆಯನ್ನೂ ಒಣ ಹೆಮ್ಮೆಯನ್ನೂ ವ್ಯಕ್ತಮಾಡದಿರುತ್ತಿರಲಿಲ್ಲ

ಅಪರಾಹ್ಣಕಾಲ. ಸೂರ್ಯಾಸ್ತವಿನ್ನೂ ಆಗಿರಲಿಲ್ಲ. ಸೌಮ್ಯಕಿರಣ ಗಳು ಎಲ್ಲೆಲ್ಲಿಯೂ ಹರಡಿ ಗಂಗಾನದಿಯ ನೋಟವನ್ನು ಮತ್ತಷ್ಟು ಮನೋಹರಗೊಳಿಸಿದ್ದುವು. ನಿತ್ಯದಂತೆ ಕೇದಾರಘಾಟದ ಹತ್ತಿರದ ಬಂಡೆ

ಗಲ್ಲವೇಲೆ ಬ್ರಾಹ್ಮಣ ಸಮಾಜ ನಿಯಾಮಕ ಸಂಘದ ಸಭೆಯು ನೆರೆದಿತ್ತು. ಒಬ್ಬ ಮೆಂಬರನು:-"ತುಳಸೀದಾಸನು ನಿಜವಾಗಿಯೂ ಸಿದ್ಧನೆ?" ಎಂದು ಕೇಳಿದನು.

ಕೇವಲ ಸಿದ್ಧನಲ್ಲ; ಭೂತಸಿದ್ಧನು! ವೇದಾಂತವಾಗೀಶನೆಂದನು.

ಛೆ, ಹೀಗೆ ನಿಂದೆಮಾಡಿ ಉಪಯೋಗವಿಲ್ಲ. ಅವನು ಸಾಮಾನ್ಯನಲ್ಲ. ಅವನಲ್ಲಿ ಏನೋ ಒಂದಿದೆ! ಒಬ್ಬ ಮೆಂಬರನು ನುಡಿದನು.

ಒಂದೇ ಏಕೆ? ಹಲವಿವೆ! ಕಣ್ಣುಗಳಿವೆ. ಕಾಲುಗಳಿವೆ ಇತರ ಮನುಷ್ಯರಂತೆ ಎಲ್ಲವೂ ಇವೆ. ಮತ್ತೇನು? ಮತ್ತೊಬ್ಬ ಮೆಂಬರನು ನಗುತ್ತ ಹೇಳಿದನು.

ಅವನಲ್ಲಿ ಸಾಮಾನ್ಯ ಮಾನವರಲ್ಲಿರದ ವಿಶಿಷ್ಟ ಶಕ್ತಿಯೊಂದಿರಲಿಕ್ಕೆ ಬೇಕು! ಇಲ್ಲವಾದರೆ, ಅವನು ಹೀಗೆ ಪ್ರಸಿದ್ಧಿಯನ್ನು ಪಡೆಯುತ್ತಿದ್ದನೆ? ಮೊದಲಿನ ಮೆಂಬರನು ಕೇಳಿದನು.

ಅದೇನೊ! ನನಗೆ ತಿಳಿಯದು. ಗಂಗಾಮಾತೆಗೇ ಗೊತ್ತು! ಮತ್ತೊಬ್ಬನು ಹಾರಿಸಿಕೊಂಡು ಮಾತಾಡಿದನು.

ಅವಳೂ ತಿಳಿಯುವಂತಿಲ್ಲ ಯಾಕೆಂದರೆ, ಅವನು ನಮ್ಮಂತೆ ಸಂಧ್ಯಾವಂದನೆಯನ್ನು ಮಾಡುವದಿಲ್ಲ. ಗಂಗಾದೇವಿಯ ದರ್ಶನಕ್ಕೆ ಬರುವದಿಲ್ಲ! ವೇದಾಂತವಾಗೀಶನು ಹೇಳಿದನು.

ಸ್ವಾಮಿ ಪಂಡಿತರೆ, ನನಗೆ ಉಪಾಯವನ್ನು ಹೇಳಿಕೊಡಿರಿ. ಹಿಂದಿನಿಂದ ಒಬ್ಬ ಅಪರಿಚಿತ ಮನುಷ್ಯನು ಉಚ್ಚರಿಸಿದನು. ಸಭಿಕರು ವಿಸ್ಮಿತರಾದರು. ಹಿಂದುರಿಗಿ ನೋಡಿದರು. ಆಗಂತುಕನು ಒಂದು ದೋತರವನ್ನುಟ್ಟಿದ್ದನು ಅದು ಹೊಲಸೂ, ಹರಕವೂ ಆಗಿತ್ತು. ಮೈಮೇಲೆ ಉತ್ತರೀಯವಿರಲಿಲ್ಲ ಮೈ ಹೊಲಸಾಗಿ ಹೋಗಿತ್ತು. ನೋಡಿದವರಿಗೆ ಉನ್ಮಾದಗ್ರಸ್ತನೆಂದು ಭಾಸವಾಗುವಂತಿದ್ದನು. ಇವನು ಜಾನಕೀವಲ್ಲ

ಏತರ ಉಪಾಯ? ವಾಗೀಶನು ಆಶ್ಚರ್ಯತೆಯಿಂದ ಕೇಳಿದನು.

ಜಾನಕೀವಲ್ಲಭನು ಕುಸ ಮುಂದೆ ಬಂದು:-"ಸ್ವಾಮಿ, ನನ್ನ ಪಾಪಪರಿಹಾರದ ಉಪಾಯ. ಬಹು ಜನರನ್ನು ವಿಚಾರಿಸಿದೆನು. ಯಾರೂ ಹೇಳಿಕೊಡಲಿಲ್ಲ ಈಗ ನಿಮ್ಮ ಹತ್ತಿರ ಬಂದಿರುವೆನು. ದಯವಿಟ್ಟು ಉಪಾಯವನ್ನು ಹೇಳಿಕೊಡಿರಿ," ಎಂದು ಅಂದನು.

ಇದಕ್ಕೇಕೆ ಇಷ್ಟು ಚಿಂತಿಸುವೆ? ಪಾಪವನ್ನು ಕಳೆದ ಕೊಳ್ಳಬೇಕೆಂದು ಹೇಳಿದವರಾರು? ಇಷ್ಟು ಅವಸರವೇಕೆ? ಘಟಿಸಿದ ಪಾಪಗಳು ಯೋಗ್ಯ ಸಮಯದಲ್ಲಿ ತಾವೇ ತಾವಾಗಿ ನಾಶವಾಗುವವು ನಾವೂ ನಿನ್ನಂತೆಯೇ ಪಾಪಿಗಳು; ಆದರೆ ನಿನ್ನಂತೆ ಕ್ಷಾಲನಕ್ಕಾಗಿ ಹಾತೊರೆಯುವುದಿಲ್ಲ. ಒಬ್ಬ ಮೆಂಬರನು ಹೇಳಿದನು.

ಸ್ವಾಮಿ, ನೀವು ಸಾಮಾನ್ಯ ಪಾಪಕೃತಿಗಳನ್ನಾಚರಿಸಿರಬಹುದು. ಕಾರಣ ಅವು ಈಗ ನಿಮಗೆ ತಾಪಗೊಡುವದಿಲ್ಲ; ಆದರೆ ನನ್ನ ಪಾಪಗಳು ಅಂಥಿಂಥವಲ್ಲ. ನೀವು ನನ್ನ ಪಾಪದ ಕತೆಯನ್ನು ಕೇಳಿದರೆ, ಭಯದಿಂದ ಗದಗದನೆ ನಡುಗಬಹುದು! ಜಾನಕೀವಲ್ಲಭನು ಹೇಳಿದನು.

ಅದೆಂತಹ ಪಾಪವಯ್ಯಾ? ನಮಗರಿಯದ ಪಾತಕವಿದೆಯೆ? ನಾವಿದುವರೆಗೆ ಹಲವರು ಪಾತಕಿಗಳನ್ನು ನೋಡಿದ್ದೇವೆ; ಆದರೆ ನಿನ್ನಂತೆ ಪಶ್ಚಾತ್ತಾಪ ಪಡುವವರನ್ನು ಕಂಡಿದ್ದಿಲ್ಲ. ಮತ್ತೊಬ್ಬ ಸಭಿಕನು ಅಂದನು.

ಪೂರ್ವಕೃತ ಪಾಪವು ನನ್ನನ್ನು ದಹಿಸುತ್ತಲಿದೆ. ನಾನದರ ತಾಪವನ್ನು ತಡೆಯಲಾರದವನಾಗಿದ್ದೇನೆ. ಅಂತೆಯೇ ನಿಮಗೆ ಶರಣು ಬಂದಿರುವೆನು. ಉಪಾಯವನ್ನು ಹೇಳಿಕೊಡಿರೆಂದು ಅಂಗಲಾಚಿ ಬೇಡಿಕೊಳ್ಳುತ್ತಿರುವೆನು. ಜಾನಕೀವಲ್ಲಭನು ಹೇಳಿದನು.

ಆಗಲಿ, ನೀನು ಯಾವ ಪಾಪವನ್ನು ಮಾಡಿರುವೆ? ವಾಗೀಶನು ಕೇಳಿದನು.

ನಾನು ಬಂಧುದ್ರೋಹಿಯು. ಬ್ರಹ್ಮಹತ್ಯೆಯ ಮಹಾಪಾತಕಿಯು.

ಸಭಿಕರು ನೀರವವಾಗಿ ಜಾನಕೀವಲ್ಲಭನನ್ನು ನೋಡುತ್ತ ಕುಳಿತರು. ಏನು ಮಾತಾಡಬೇಕೆಂಬುದು ಅವರಿಗೆ ಹೊಳೆಯಲಿಲ್ಲ. "ಸುಮ್ಮನಾದಿರಲ್ಲ! ಹೇಳಿರಿ, ನನಗೆ ಹಂಚಿಕೆಯನ್ನು ಹೇಳಿಕೊಡಿರಿ! ಬೆಂಕಿಯಲ್ಲಿ ಹಾರಿಕೊಂಡು ಸತ್ತರೆ, ನನ್ನೀ ಪಾಪವು ಪರಿಹಾರವಾದೀತೇ? ಮರಣದ ತರುವಾಯದಲ್ಲಾದರೂ ನನಗೆ ಶಾಂತಿಯು ಸಿಕ್ಕೀತೇ?" ಜಾನಕೀವಲ್ಲಭನು ಕೇಳಿದನು.

ಯಾರೂ ಮಾತಾಡಲಿಲ್ಲ. ಜಾನಕೀವಲ್ಲಭನು ಮತ್ತೆ ಕೇಳಿದನು:- ನನ್ನ ಈ ಮಹಾ ಪಾತಕಕ್ಕೆ ಪ್ರಾಯಶ್ಚಿತ್ತವಿಲ್ಲವೆ? ಪಾಪದ ಪರಿಹಾರದ ಉಪಾಯವಿಲ್ಲವೆ?

ಅಯ್ಯಾ, ನೀನು ಮಾಡಿದ ಪಾಪವು ಸಾಮಾನ್ಯವಾದುದಲ್ಲ! ಒಬ್ಬ ಮೊಂಬರನು ಸುಮ್ಮನಿರಲಾರದೆ ಮಾತಾಡಿದನು.

ಸ್ವೇಚ್ಛಾಕೃತ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವಿಲ್ಲವೆಂದು ಶಾಸ್ತ್ರವು ಹೇಳುತ್ತಿದೆ! ಈ ಅಸಾಮಾನ್ಯವಾದ ಪಾಪದ ಪರಿಹಾರದ ಉಪಾಯವಿಲ್ಲ. ವೇದಾಂತ ವಾಗೀಶನು ನಿರ್ಣಯವನ್ನು ಹೇಳಿದನು.

ಪ್ರಾಯಶ್ಚಿತ್ತವಿಲ್ಲವೆ? ನನ್ನ ಪಾಪದ ಪರಿಹಾರಕ್ಕೆ ಮಾರ್ಗವಿಲ್ಲವೆ? ಎಂದು ಗಟ್ಟಿಯಾಗಿ ಉಚ್ಚರಿಸಿ, ಜಾನಕೀವಲ್ಲಭನು ನೆಲದ ಮೇಲೆ ಬಿದ್ದು ಹೊರಳಾಡಹತ್ತಿದನು. ಪಂಡಿತರು ನೋಡಿ ಹುಚ್ಚನೆಂದೇ ಭಾವಿಸಿದರು. ಆತ್ಮಹತ್ಯೆ ಮಾಡಿಕೊಂಡು ತಮಗೆಲ್ಲಿ ಪೇಚು ತರುವನೋ? ಎಂದು ಗಾಬರಿಯಾದರು. ಕೆಲ ಹೊತ್ತಿನ ಮೇಲೆ ಜಾನಕೀವಲ್ಲಭನು ಎದ್ದು ಕುಳಿತು:-"ಸ್ವಾಮಿ, ನೀವು ಬೇಡಿದ್ದನ್ನು ಕೊಡುವೆನು. ಹೇಳಿದಂತೆ ಕೇಳುವೆನು. ನನಗೆ ಶಾಂತಿಯುಂಟಾಗುವಂತೆ ಮಾಡಿರಿ" ಎಂದು ಹೇಳಿದನು.

ಪಾಪವೆಂದ ಬಳಿಕ ಅದಕ್ಕೆ ಪ್ರಾಯಶ್ಚಿತ್ತವಿರಲೇ ಬೇಕು. ತರು

ಶಾಘನನಾದ ಪರಮೇಶ್ವರನು ರೋಗದೊಡನೆ ಅದಕ್ಕೆ ಪ್ರತೀಕಾರದ ಔಷಧಿಯನ್ನು ನಿರ್ಮಿಸಿರುವಂತೆ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಗೊತ್ತು ಮಾಡಿಟ್ಟಿರಲಿಕ್ಕೆ ಬೇಕು. ಆ ಭಗವಂತನ ಸೃಷ್ಟಿಯಲ್ಲಿ ಎಂಥ ಪಾತಕಿಯು ಆಗಲಿ, ಉದ್ಧಾರದ ಮಾರ್ಗವನ್ನು ಕಂಡುಕೊಳ್ಳಲಿಕ್ಕೆ ಬೇಕು. ಒಬ್ಬ ಮೆಂಬರನು ಕನಿಕರದಿಂದ ನುಡಿದನು.

ಸ್ವಾಮೀ, ಹೀಗೆ ಹೇಳಿರಿ ನನ್ನನ್ನು ನಿರಾಶಗೊಳಿಸ ಬೇಡಿರಿ. ಜಾನಕೀವಲ್ಲಭನು ನುಡಿದನು

ಅಯ್ಯಾ, ಏನು ಮಾಡುವುದಿದೆ? ನಿನಗೆ ಆಶೆಯನ್ನುಂಟು ಮಾಡ ಲಿಕ್ಕೆ ಮಾರ್ಗವಿಲ್ಲದಾಗಿದೆ. ಯಾಕೆಂದರೆ, ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತ ವಿಲ್ಲೆಂದು ಶಾಸ್ತ್ರವು ಖಂಡಿತವಾಗಿ ಹೇಳುತ್ತಿದೆ. ವಾಗೀಶನು ಹೇಳಿದನು.

ಶಾಸ್ತ್ರದ ಸಿದ್ಧಾಂತವು ಚರಮ ನಿರ್ಣಯವೆಂದು ಹೇಳಲಿಕ್ಕಾಗದು ಶಾಸ್ತ್ರಗಳಿಗಿಂತಲೂ ಜಗನ್ನಿಯಾಮಕನ ವಿಧಾನವು ಶ್ರೇಷ್ಠವಾದುದು. ನಾವು ಭಗವಂತನ ವಿಧಾನವನ್ನನುಸರಿಸುವುದು ಒಳ್ಳೇದು. ಆ ಮೆಂಬ ರನು ನುಡಿದನು.

ಹೀಗೆಂದರೆ ಹೇಗೆ? ಶಾಸ್ತ್ರಗಳು ಸುಳ್ಳಾದಾವೆ? ಪ್ರಾಚೀನ ಋಷಿ ಗಳು ಭಗವಂತನ ವಿಧಾನವನ್ನನುಸರಿಸಿಯೇ ಶಾಸ್ತ್ರಗಳನ್ನು ನಿರ್ಮಿಸಿದ್ದಾರೆ. ನಮಗಿಂತಲೂ ಆ ಪ್ರಾಚೀನ ಜ್ಞಾನಿಗಳಿಗೆ ಪರಮೇಶ್ವರನ ವಿಧಾನದ ಅರಿವು ಹೆಚ್ಚಾಗಿರಲಿಕ್ಕಿಲ್ಲವೆ? ಆ ಪ್ರಾಚೀನ ಮಹನೀಯರ ಸಿದ್ಧಾಂತಗಳಲ್ಲಿ ಸಂದೇಹಗೊಳ್ಳುವುದಾಗಲಿ, ವಿರುದ್ಧಾಚರಣೆ ಮಾಡುವುದಾಗಲಿ ಅಧರ್ಮ ವೆನಿಸುವುದು. ಕಾರಣ ನಾನು ಶಾಸ್ತ್ರಗಳು ಸ್ಪಷ್ಟವಾದವುಗಳೆಂದೂ, ದೋಷರಹಿತವಾದವುಗಳೆಂದೂ ನಿಶ್ಚಿತವಾಗಿ ಹೇಳುತ್ತೇನೆ ಶಾಸ್ತ್ರದಲ್ಲಿ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವಿಲ್ಲ ವೇದಾಂತ ವಾಗೀಶನು ನುಡಿದನು.

ಇಲ್ಲವೆ? ನಿಜವಾಗಿಯೂ ಇಲ್ಲವೆ? ಜಾನಕೀವಲ್ಲಭನು ಕೇಳಿದನು.

ಅಗ್ನಿಕಾಷ್ಠಭಕ್ಷಣವು ಬಹು ಪಾಪಗಳಿಗೆ ಪ್ರಾಯಶ್ಚಿತ್ತರೂಪವಾಗಿ

ಶಾಸ್ತ್ರದಲ್ಲಿ ಉಲ್ಲೇಖಿತವಾಗಿದೆ; ಆದರೆ ಇದು ಬ್ರಹ್ಮಹತ್ಯೆಯ ಮಹಾ ಪಾತಕಕ್ಕೆ ಉಪಯೋಗ ಬೀಳುವಂತಿಲ್ಲ. ಬ್ರಹ್ಮಹತ್ಯೆಯ ಮಹಾ ಪಾಪಕ್ಕೆ ಶಾಸ್ತ್ರದಲ್ಲಿ ಒಂದೇ ಒಂದು ಪ್ರಾಯಶ್ಚಿತ್ತವು ಸೂಚಿಸಲ್ಪಟ್ಟಿದೆ. ವೇದಾಂತ ವಾಗೀಶನು ಹೇಳಿದನು.

ಇದೆಯೆ? ಹೇಳಿರಿ. ನಿಸ್ಸಂಕೋಚವಾಗಿ ಹೇಳಿರಿ. ಜಾನಕೀ ವಲ್ಲಭನು ಆಶಾನ್ವಿತನಾಗಿ ಕೇಳಿದನು.

ಅಶ್ವಮೇಧಯಜ್ಞ ಮಾಡಬೇಕು! ಆದರೆ ಈ ಕಲಿಕಾಲದಲ್ಲಿ ಅಶ್ವ ಮೇಧಯಜ್ಞ ಮಾಡುವಂತಿಲ್ಲ! ವಾಗೀಶನು ಹೇಳಿದನು.

ಅದೇಕೆ? ಜಾನಕೀವಲ್ಲಭನು ಕೇಳಿದನು.

ಆ ಶಾಸ್ತ್ರದಲ್ಲಿಯೆ ಕಲಿಯುಗದಲ್ಲಿ ಅಶ್ವಮೇಧವು ವರ್ಜ್ಯವೆಂದು ಹೇಳಲ್ಪಟ್ಟಿದೆ. ಮೇಲಾಗಿ ಅದು ನಮ್ಮ ನಿಮ್ಮಂತಹರ ಕೆಲಸವಲ್ಲ. ಅದನ್ನು ಕೊನೆಗಾಣಿಸುವುದು ಸಾಮ್ರಾಟರಿಗೆ ಮಾತ್ರ ಸಾಧ್ಯವು. ವಾಗೀ ಶನು ನುಡಿದನು.

ಅಯ್ಯೋ ಭಗವಂತನೆ, ಯಾವ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲವೊ ಅಂತಹ ಪಾಪವನ್ನಾಚರಿಸಲಿಕ್ಕೆ ನನಗೆ ಏಕೆ ಪ್ರವೃತ್ತಿಯನ್ನುಂಟು ಮಾಡಿದೆ? ನಾನು ಇನ್ನೆಲ್ಲಿ ಹೋಗಲಿ? ಯಾರನ್ನು ಆಶ್ರಯಿಸಲಿ? ನನಗೆ ಆಶ್ರಯ ಕೊಡುವವರು ಯಾರೂ ಇಲ್ಲಲ್ಲವೆ? ಜಾನಕೀವಲ್ಲಭನು ಶೋಕಿಸ ಹತ್ತಿದನು.

ಸೂರ್ಯಾಸ್ತವಾಗಿತ್ತು. ಕತ್ತಲೆಯು ಮುಸುಕುವುದರಲ್ಲಿತ್ತು. ಸಭಿ ಕರು ಸಮಯವಾಯಿತೆಂದು ಸಭಾಭಂಗ ಮಾಡಿ ಎದ್ದು ಹೋದರು. ಜಾನಕೀವಲ್ಲಭನು ಹೃದಯತಾಪದಿಂದ ಹೊರಳಾಡುತ್ತ:-ಸ್ವಾಮಿ, ನನಗೆ ಸಮಾಧಾನ ಹೇಳದೆ ಹೋಗಿ ಬಿಟ್ಟಿರಾ? ನನ್ನ ಪಾತಕದ ಪರಿಹಾರಕ್ಕೆ ಮಾರ್ಗವಿಲ್ಲವೇ-ಇಲ್ಲವೆ? ನಾನು ಉದ್ಧಾರದ ಆಶೆಯನ್ನು ಸಂಪೂರ್ಣ ವಾಗಿ ಬಿಟ್ಟುಬಿಡಲಿಯಾ? ಹಾಗಾದರೆ, ಈಗ ನಾನೇನು ಮಾಡಲಿ?

ಆತ್ಮಹತ್ಯೆ ಮಾಡಿಕೊಳ್ಳುವೆನು! ಈಗಳಿನ ಈ ತಾಪದಿಂದ ಮುಕ್ತನಾಗುವೆನು! ಎಂದು ನುಡಿದನು.

ಬೇಡ, ಏಳು. ನನ್ನೊಡನೆ ಬಾ ನಿನಗೆ ಸರಿಯಾದ ದಾರಿಯನ್ನು ತೋರುವೆನು. ಪಶ್ಚಾತ್ತಾಪದಿಂದ ದಹಿಸದ ಪ್ರಾಯಶ್ಚಿತ್ತದಿಂದ ನಾಶವಾಗದ ಪಾಪಗಳಿಲ್ಲ ಬುದ್ಧಿವಂತನಾದ ಮಾನವನು ದೃಢಮನಸ್ಸಿನಿಂದ, ಸಾಹಸಭರದಿಂದ, ಸತತ ಪರಿಶ್ರಮದಿಂದ ಕೈತೊಳೆದುಕೊಂಡು ಬೆನ್ನ ಹತ್ತಿದನೆಂದರೆ ಕೊನೆಗಾಣದ ಕಾರ್ಯವಿಲ್ಲ. ಪಶ್ಚಾತ್ತಾಪದಿಂದ ತಳಮಳಿಸುತ್ತಿರುವ ಪಾಪಿಯೇ ಕೇಳು. ಪ್ರಯತ್ನದಿಂದ ನರನು ನಾರಾಯಣನಾಗುವದು ಸಾಧ್ಯವಿರುವಾಗ ಘಟಿಸಿದ ಪಾಪಗಳ ಕ್ಷಾಲನೆಮಾಡಿಕೊಳ್ಳಲಾರನೆ? ಆ ಭಗವಂತನು ನಿನ್ನಂತಹ ಜೀವಿಗಳನ್ನುದ್ದೇಶಿಸಿ ಇಂತು ಹೇಳಿದ್ದಾನೆ:—

ಕ್ಲೈಬ್ಯಂ ಮಾಸ್ಮಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥†

ಭಗವಂತನ ಈ ವಾಣಿಯಲ್ಲಿ ನಿನಗೆ ವಿಶ್ವಾಸವು ಹುಟ್ಟಲಾರದೆ? ತುಳಸೀದಾಸನು ಕೇಳಿದನು.

ಜಾನಕೀವಲ್ಲಭನು ಎದ್ದು ವಿಸ್ಮಯದಿಂದ ನೋಡಿದನು. ಅಂಧುಕ ಪ್ರಕಾಶದಲ್ಲಿ ಆ ಸಾಧುವನ್ನು ಗುರುತಿಸಿದನು. ಮೇಲಿಂದ ಮೇಲೆ ಬಂದು ತನ್ನನ್ನು ಎಚ್ಚರಗೊಳಿಸುತ್ತಿರುವ ಈ ಸಾಧುವು ಯಾರಾಗಿರಬಹುದು? ಎಂದು ಅವನು ಬಹಳವಾಗಿ ಆಲೋಚಿಸಿದನು ಉತ್ತರವು ದೊರೆಯಲಿಲ್ಲ ಯಾರೇ ಇರಲಿ, ತನ್ನ ಉದ್ಧಾರವು ಶಕ್ಯವಿದ್ದರೆ, ಅದು ಇವನಿಂದಲೇ ಎಂಬ ವಿಷಯದಲ್ಲಿ ಜಾನಕೀವಲ್ಲಭನಿಗೆ ಸಂದೇಹವಿಲ್ಲದಾ

---

† ಪಾರ್ಥನೆ, ಇಂಥ ಹೇಡಿತನಕ್ಕೆ ಈಡಾಗ ಬೇಡ ನಿನ್ನಂಥವನಿಗೆ ಇದು ಉಚಿತವಲ್ಲ. ನೀನು ಶತ್ರುಗಳಿಗೆ ತಾಪವೀಯುವವನು. ಈ ಕೀಳುತನದ ಎದೆಗುಂದನ್ನು ದೂಡಿಹಾಕಿ ಚಟ್ಟನೆ ಏಳು. [ಗೀತಾ ಅಧ್ಯಾಯ ೨ ಶ್ಲೋಕ ೩]

ಯಿತು ಅವನು ಭಕ್ತಿಭರದಿಂದ ಸಾಧುವಿನ ಕಾಲಮೇಲೆ ಬಿದ್ದು:— ಸ್ವಾಮಿಊ, ಭವಸಾಗರದಲ್ಲಿ ಈಸಲಾಗದ ನಾನು ಒದ್ದಾಡುತ್ತ ಚಡಪಡಿಸುತ್ತ ಮರಣವು ಈಗೊ ಆಗೊ ಎಂದು ಭಯದಿಂದ ಸಾಗಿರುವೆನು. ಈ ಸಮಯದಲ್ಲಿ ಒಂದು ಹುಲ್ಲುಕಡ್ಡಿ ಸಿಕ್ಕರೂ, ನಾನದನ್ನು ಆಶ್ರಯಿಸತಕ್ಕವನು. ಇಂತಹ ಸಮಯದಲ್ಲಿ ನಿಮ್ಮಂತಹ ಮಹನೀಯರು ನನ್ನ ಉದ್ಧಾರಕ್ಕಾಗಿ ನೆರವಾಗಬಂದಿರುವದು ನನ್ನ ಪ್ರಾಚೀನ ಸುಕೃತದ ಫಲವೆಂದು ನನಗೆ ಅನಿಸುತ್ತಿದೆ. ಯಾಕೆಂದರೆ, ನಿಮ್ಮಂತಹ ಸಾಧುಗಳ ದರ್ಶನವನ್ನೊದಗಿಸುವ ಪುಣ್ಯಕಾರ್ಯವನ್ನು ನಾನೀ ಜನ್ಮದಲ್ಲಿ ಆಚರಿಸಿದವನಲ್ಲ. ಇದೇ ಈಗ ಇಲ್ಲಿಂದ ಎದ್ದು ಹೋದ ಪಂಡಿತರು ನನ್ನ ಉದ್ಧಾರವು ಅಶಕ್ಯ ಕಾರ್ಯವೆಂದು ಹೇಳಿದರು. ನಾನು ನಿರಾಶನಾಗಿ ಹೋಗಿದ್ದೆನು. ನಿಮ್ಮ ಮಾತಿನಿಂದ ನಾನು ಮತ್ತೆ ಆಶಾನ್ವಿತನಾಗಿರುವೆನು ನಾನು ಹಿಂದೆ ಎರಡು ಸಲ ನಿಮ್ಮನ್ನು ಕಂಡಿರುವೆನು. ಹೀಗೆ ನನ್ನನ್ನು ಸನ್ಮಾರ್ಗಕ್ಕೆ ಹಚ್ಚುವದಕ್ಕೆ ಪರಿಶ್ರಮ ವಹಿಸುತ್ತಿರುವ ತಾವಾರು? ಎಂದು ಅಂದನು.

ನಾನು ಯಾರೇ ಇರಲಿ, ಪರಿಚಯದ ಅವಶ್ಯವು ನಿನಗಿಲ್ಲ. ನೀನು ಈಗ ಏಳು. ಭಗವತ್ಕೃಪೆಯಿಂದ ನೀನಿನ್ನು ಶಾಂತಿಯನ್ನು ಪಡೆಯುವೆ. ತುಳಸೀದಾಸನು ಹೇಳಿದನು.

ನನಗೆ ಈ ಜನ್ಮದಲ್ಲಿಯೇ ಆಗಲಿ, ಪರಜನ್ಮದಲ್ಲಿಯೆ ಆಗಲಿ ಶಾಂತಿಯು ಸಿಕ್ಕೀತೆ?

ಯಾಕೆ ಹೀಗೆ ನಿರಾಶೆಯು ಮಾಡುತ್ತಿರುವೆ?

ನಾನು ಘೋರ ಪಾತಕಿಯು!

ಚಿಂತಿಸದಿರು. ಎಂತಹ ಪಾಪವೇ ಇರಲಿ, ಸಾಧನೆಯ ಬಲದಿಂದ ಕ್ಷಯಿಸಲೇ ಬೇಕು.

ನಾನು ಬ್ರಹ್ಮಹತ್ಯೆಯು ಮಹಾ ಪಾಪವನ್ನು ಸ್ವೇಚ್ಛೆಯಿಂದ ಆಚರಿಸಿದ್ದೇನೆ!

ಆದರೂ ಚಿಂತೆಮಾಡಬೇಡ! ನನಗೆಲ್ಲವೂ ಗೊತ್ತಿದೆ! ನಾನು ನಿನಗೆ ಸರಿಯಾದ ಮಾರ್ಗವನ್ನು ತೋರಿಸುವೆನು. ತುಳಸೀದಾಸನು ಹೇಳಿದನು.

ನೀವು ನನಗೆ ದೇವರ ಸಮಾನರು. ನನ್ನನ್ನು ರಕ್ಷಿಸಿರಿ.

ವತ್ಸ, ಕಾಯುವವನೂ, ಕೊಲ್ಲುವವನೂ ಆ ಶ್ರೀ ಹರಿಯು. ಅವನ ಕೃಪೆಯಾಗುತ್ತಲೆ, ನೀನು ಸಕಲ ಪಾಪಗಳಿಂದ ಮುಕ್ತನಾಗುವೆ.

ನೀವೇ ನನ್ನ ಶ್ರೀ ಹರಿಯು. ನಾನು ನಿಮ್ಮನ್ನೆ ನಂಬಿದ್ದೇನೆ.

ನಾನವನ ಸೇವಕನು. ಇರಲಿ. ನೀನು ಈಗ ನದಿಗೆ ಹೋಗಿ ಸ್ನಾನ ಮಾಡಿಕೊಂಡು ಬಾ ಉತ್ತರಮುಖನಾಗಿ ದಂಡೆಯಲ್ಲಿ ಕುಳ್ಳಿರು. ನಾನು ನಿನಗೆ ಮಂತ್ರೋಪದೇಶ ಮಾಡುವೆನು.

ಜಾನಕೀವಲ್ಲಭನು ತುಳಸೀದಾಸನು ಹೇಳಿದಂತೆ ವರ್ತಿಸಿದನು. ತುಳಸೀದಾಸನು ಜಾನಕೀವಲ್ಲಭನು ತನ್ನ ಆಜ್ಞಾಪಾಲನೆಯಲ್ಲಿ ತೋರಿದ ತತ್ಪರತೆಯನ್ನು ಕಂಡು, ಸಮಾಧಾನಪಟ್ಟು, ನೀನಿನ್ನು ನಾನು ಉಪದೇಶಿಸುತ್ತಿರುವ ಮಂತ್ರದ ಜಪಮಾಡುತ್ತ ಹೋಗು ಕ್ರಮವಾಗಿ ಮಂತ್ರದ ಮೂರುತಿಯು ಪ್ರಕಟವಾಗುವದು. ಆ ಬಳಿಕ ನೀನು ಭಜನ-ಪೂಜನಗಳನ್ನಾರಂಭಿಸಬೇಕು, ಎಂದು ಹೇಳಿ ಮಂತ್ರೋಪದೇಶ ಮಾಡಿದನು.

ವತ್ಸ, ಈ ನಾಮವು ಎಲ್ಲ ವಿಧಗಳಾದ ಪಾಪಗಳನ್ನು ಸಕಲಸಮಯುಗಳಲ್ಲಿ ನಾಶಿಸತಕ್ಕದು. ಈ ಮಂತ್ರಜಪದಿಂದ ಮಹಾನ್ ಮಹಾನ್ ಪಾಪಿಗಳು ಉದ್ಧಾರಾಗಿದ್ದಾರೆ. ನೀನೂ ಉದ್ಧಾರಾಗುವೆ; ಆದರೆ ಜಪ ಮಾಡುವ ಸಮಯದಲ್ಲಿ ವಿಶ್ವಾಸಪೂರ್ಣನಾಗಿರಬೇಕು. ಏಕಮನಸ್ಸಿನಿಂದ ಜಪಮಾಡಬೇಕು. ತುಳಸೀದಾಸನು ಹೇಳಿದನು.

ಮಹಾರಾಜ, ಇದು ಮಂತ್ರವಲ್ಲ. ರಾಮ ನಾಮ. ಈ ನಾಮವು ನನಗೆ ಗೊತ್ತಿತ್ತು. ಇಷ್ಟರಿಂದಲೇ ನನ್ನ ಉದ್ಧಾರವಾದೀತೆ?

ಜಾನಕೀವಲ್ಲಭನು ಕೇಳಿದನು.

ವತ್ಸ, ಇದು ಕೇವಲ ನಾಮವಲ್ಲ-ಮಹಾಮಂತ್ರ! ಈ ಮಂತ್ರ ಪ್ರಭಾವದಿಂದ ನಾಶವಾಗದ ಪಾಪಗಳೇ ಇಲ್ಲ! ಈ ರಾಮನಾಮ ಜಪದಿಂದ ಧ್ವಂಸವಾಗದ ಪಾಪಗಳನ್ನು ಮನುಷ್ಯನೆಂದೂ ಆಚರಿಸಲಾರನು! ನೀನು ಮನಸ್ಸಮಾಧಾನಕ್ಕಾಗಿ ಸಂಪೂರ್ಣ ವಿಶ್ವಾಸದಿಂದ ಜಪಮಾಡುತ್ತ ಹೋಗು. ಬೇಗನೇ ಶಾಂತಿಯನ್ನು ಹೊಂದುವೆ. ತುಳಸೀದಾಸನು ಕೂಡಲೆ ಅದೃಶ್ಯನಾಗಿ ಹೋದನು. ಜಾನಕೀವಲ್ಲಭನು ಗುರುವಿನ ಆದೇಶದಂತೆ ಜಪಮಾಡುತ್ತ ಕುಳಿತನು.

---

## ೧೭ ಸೇರಿಗೆ ಸವ್ವಾಸೇರು!



ವೇದಾಂತವಾಗೀಶನು ನಿಜವಾಗಿಯೂ ಪಂಡಿತನು. ಹಲವು ಶಾಸ್ತ್ರಗಳಲ್ಲಿ ಇವನಿಗೆ ಅಸಾಧಾರಣ ಗತಿಯಿತ್ತು. ಅಂತೆಯೆ ಕಾಶಿಯ ವಿದ್ವಾಂಸರು ಇವನ್ನನನುಸರಿಸಿ ಕೊಂಡಿದ್ದರು. ಸಂದೇಹದ ಪ್ರಸಂಗಗಳಲ್ಲಿ ಇವನ ಮತ ತಕ್ಕೊಳ್ಳುತ್ತಿದ್ದರು. ಇದರಿಂದ ಮೊದಲೆ ಗರ್ವಿಯಾದ ವಾಗೀಶನು ಮತ್ತಷ್ಟು ಸೊಕ್ಕಿನವನಾಗಿದ್ದನು. ಇವನಲ್ಲಿ ಮತ್ತೊಂದು ದುರ್ಗುಣವಿತ್ತು. ಅದಾವುದೆಂದರೆ, ಅಸೂಯೆ. ಪರೋತ್ಕರ್ಷವು ಇವನಿಗೆ ಸೇರುತ್ತಿರಲಿಲ್ಲ. ಕಾಶಿಯಲ್ಲಿ ಈಗ ತನಗಿರುವ ಖ್ಯಾತಿಗೆ ಯಾರಿಂದೂ ಭಂಗಬರಬಾರದೆಂಬ ಅಪೇಕ್ಷೆಯು ಇವನಿಗಿತ್ತು. ಇಂದ್ರನು ತನ್ನ ಸ್ಥಾನರಕ್ಷಣೆಗೋಸುಗ ತಪಸ್ವಿಗಳ ತಪಸ್ಸಾಮರ್ಥ್ಯವನ್ನು ನಾನಾ ಮಾರ್ಗದಿಂದಾದರೂ ಕಳೆಯಲಿಕ್ಕೆ ಯತ್ನಿಸಿದಂತೆ, ವಾಗೀಶನು ಯಾವುದೊಂದು ವ್ಯಕ್ತಿಯು ತನ್ನನ್ನು ಹಿಂದೂಡಲೆಲ್ಲಿ ಸಿದ್ಧವಾಗುವದೊ ಎಂಬ

ಶಂಕೆಯಲ್ಲಿರುತ್ತಿದ್ದನು; ಯಾವನೊಬ್ಬನು ಜನರ ಬಾಯಿಯಲ್ಲಿ ಆಡ ಹತ್ತಿದನೆಂದರೆ ಸಾಕು; ಆ ಮನುಷ್ಯನು ತನ್ನ ಶ್ರೇಷ್ಠತೆಗೆ ಅಡ್ಡಾಗಿ ಬರುವನಲ್ಲವೆ ಎಂದು ಸಂದೇಹಗ್ರಸ್ತನಾದ ಇವನು ಆ ಮನುಷ್ಯನ ದುರ್ನಾಮವನ್ನು ಹರಡುವುದಕ್ಕೆ ಬದ್ಧಪರಿಕರನಾಗುತ್ತಿದ್ದನು. ಈ ವಿಷಯದಲ್ಲಿ ಇವನು ಒಳಿತು-ಹೀನಗಳನ್ನಾಗಲಿ, ಯುಕ್ತಾಯುಕ್ತತೆಯನ್ನಾಗಲಿ ಆಲೋಚಿಸುತ್ತಿರಲಿಲ್ಲ. ಹೇಗಾದರೂ ಮಾಡಿ ಆ ಮನುಷ್ಯನ ದುರ್ಲೌಕಿಕವಾದರೆ ಸಾಕು; ತನ್ನ ಜೀವನವು ಸ್ಥಿರವಿರುವುದು ಎಂಬುದು ಇವನ ದೃಢಭಾವನೆ.

ವೇದಾಂತ ವಾಗೀಶನು ಅಧ್ಯಾಪನದ ಕಾರ್ಯವನ್ನು ಸಾಗಿಸುತ್ತಿದ್ದನು. ಇವನ ಪಾಂಡಿತ್ಯದ ಖ್ಯಾತಿಯನ್ನು ಕೇಳಿದ ಹಲವರು ವಿದ್ಯಾರ್ಥಿಗಳು ಇವನನ್ನಾಶ್ರಯಿಸಲಿಕ್ಕೆ ಬರುತ್ತಿದ್ದರು. ವಾಗೀಶನಾದರೂ ಇವರಿಗೆ ಆಶ್ರಯಗೊಟ್ಟು, ಮನಃಪೂರ್ವಕವಾಗಿ ವಿದ್ಯಾದಾನ ಮಾಡುತ್ತಿದ್ದನು. ಈ ಅಧ್ಯಾಪನಾ ಕಾರ್ಯವು ವಾಗೀಶನ ಹೊರ ಮನೆಯಲ್ಲಿ ನಡೆಯುತ್ತಿತ್ತು.

ಮುಂಜಾವಿನ ಸಮಯ. ಸೂರ್ಯನು ಬಹಳವಾಗಿ ಮೇಲಕ್ಕೇರಿರಲಿಲ್ಲ. ವಿದ್ಯಾರ್ಥಿಗಳು ಬೆಳಗಿನ ಆಹ್ನಿಕವನ್ನು ತೀರಿಸಿಕೊಂಡು ಅಭ್ಯಾಸಕ್ಕೆ ಸಿದ್ಧರಾಗಿ ಕುಳಿತಿದ್ದರು. ಕಿಶೋರ ಯೌವನ ತರುಣ ವಯಸ್ಸಿನ ಈ ವಿದ್ಯಾರ್ಥಿಗಳು ಸದೃಢ ದೇಹದಿಂದ, ಸ್ವಚ್ಛ ಶರೀರದಿಂದ, ತೇಜಃಪುಂಜರಾಗಿರುವರಲ್ಲದೆ, ಭಸ್ಮ-ರುದ್ರಾಕ್ಷಿಗಳಿಂದ ವಿಭೂಷಿತರಾಗಿ ಚಂದ ಕಾಣುತ್ತಿದ್ದರು. ತುಸ ಹೊತ್ತಿನಲ್ಲಿ ವೇದಾಂತ ವಾಗೀಶನೂ ಅಲ್ಲಿಗೆ ಬಂದನು. ವಿದ್ಯಾರ್ಥಿಗಳು ಗುರುಗಳಿಗೆ ನಮಸ್ಕರಿಸಿ ಸರಿಯಾಗಿ ಕುಳಿತರು.

ಇಂದು ಶಾಸ್ತ್ರಾಧ್ಯಯನವು ಸಾಗಲಿಲ್ಲ. ಒಬ್ಬ ವಿದ್ಯಾರ್ಥಿಯು ಗುರುವನ್ನು ಕುರಿತು:—"ಸ್ವಾಮಿ, ತುಳಸೀದಾಸನ ಅಸಾಧಾರಣ

ಶಕ್ತಿಯು ಜನರನ್ನು ದಂಗುಗೊಳಿಸಿದೆ. ಈ ಪುಣ್ಯ ಕ್ಷೇತ್ರದಲ್ಲಿ ಎಲ್ಲಿ ನೋಡಿದರೂ ಅವನ ಚರ್ಚೆಯೇ ಚರ್ಚೆ! ನಿಜವಾಗಿಯೂ ಅವನು ಮಹಾತ್ಮನೆ?'' ಎಂದು ಕೇಳಿದನು.

ಅಲ್ಲ. ಅವನು ಮಹಾತ್ಮನಲ್ಲ! ಅವನ ಅದ್ಭುತ ಕಾರ್ಯಗಳಲ್ಲಿ ಒಂದೆರಡನ್ನು ನಾನು ಕೇಳಿದ್ದೇನೆ: ಆದರೆ ಅವು ಅವನ ಶಕ್ತಿಯಿಂದ ಸಾಧ್ಯವಾದವುಗಳಲ್ಲ. ಅವನು ಒಬ್ಬ ಬ್ರಹ್ಮದೈತ್ಯನಿಂದ ಉಪದೇಶ ಹೊಂದಿದ್ದಾನೆ! ಪಿಶಾಚಿಗೆ ಅಸಾಧ್ಯವಾದ ಕೆಲಸವಿಲ್ಲ! ತುಳಸೀದಾಸನು ಮೆರೆಯುತ್ತಿರುವುದು ಆ ಬ್ರಹ್ಮದೈತ್ಯನ ಬಲದಿಂದ! ಇಂತಹ ಕೆಲಸಕ್ಕೆ ನಮ್ಮಂತಹ ವಿದ್ವಾಂಸರು ತಿಲಮಾತ್ರವೂ ಬೆಲೆಗೊಡಲಾಗದು! ವಾಗೀಶನು ಹೇಳಿದನು.

ಏನೇ ಇರಲಿ, ತುಳಸೀದಾಸನು ವಿನಯಿಯು, ನಿರಹಂಕಾರಿಯು, ಎಂದು ಜನರಾಡಿಕೊಳ್ಳುತ್ತಿರುವರು. ಎಲ್ಲಿ ಹೋದರೂ ಅವನ ಗುಣ ವರ್ಣನೆಯು ಕಿವಿಗೆ ಬೀಳುತ್ತಿದೆ. ಮತ್ತೊಬ್ಬನೆಂದನು.

ಸಹಜವೆ ಇದೆ. ಯಾವನಿಗೆ ವಿದ್ಯೆಯಿಲ್ಲ, ಬುದ್ಧಿಯಿಲ್ಲ, ಜ್ಞಾನವಿಲ್ಲ, ಅವನು ಏತರ ಬಲದಿಂದ ಅಹಂಕಾರಿಯಾಗಬೇಕು? ಒಬ್ಬ ಮನುಷ್ಯನು ನಿರಹಂಕಾರಿಯಾದ ಮಾತ್ರಕ್ಕೆ ಸ್ತುತಿಗೆ ಪಾತ್ರನಾದಾನೆ? ಬುದ್ಧಿಹೀನರು ಮನಬಂದಂತೆ ಹರಟೆ ಹೊಡೆಯುತ್ತಿರಬಹುದು ವಾಗೀಶನು ನುಡಿದನು.

ತುಳಸೀದಾಸನು ಧರ್ಮಪರಾಯಣನು. ಅವನು ಈ ವರೆಗಿದ್ದ ಅಸಿಯ ದಂಡೆಯಲ್ಲಿಯೂ ತನ್ನ ಆಶ್ರಮದ ಹತ್ತಿರ ಭವ್ಯವಾದ ಮಂದಿರವನ್ನು ಕಟ್ಟಿಸಿದ್ದಾನೆ. ಸೀತಾರಾಮರ ಮೂರ್ತಿಗಳನ್ನು ಪ್ರತಿಷ್ಠಿಸಿದ್ದಾನೆ ತ್ರಿಕಾಲಗಳಲ್ಲಿ ಪೂಜೆಯು ಸಾಂಗವಾಗಿ ಸಾಗುವಂತೆ ವ್ಯವಸ್ಥೆ ಮಾಡಿಸಿದ್ದಾನೆ. ಇನ್ನೊಬ್ಬನೆಂದನು.

ಇದೆಲ್ಲವೂ ಜನರ ತೋರಿಕೆಗಾಗಿ. ಯಾವನ ಗುರುವು ಬ್ರಹ್ಮ

ದೈತ್ಯನೋ ಅವನಿಗೆ ನಿಜವಾದ ಧರ್ಮಜ್ಞಾನವಿದ್ದೀತೆ? ಅವನು ಬ್ರಹ್ಮದೈತ್ಯನ ಮಾಯೆಯಿಂದ ಮೋಹಿತನಾಗಿ ನಿಜಜ್ಞಾನವನ್ನೂ ಧರ್ಮದಾರಿಯನ್ನೂ ತ್ಯಜಿಸಿದ್ದಾನೆ. ಇಂಥವನನ್ನು ಆಶ್ರಯಿಸುವವರು ಮೂರ್ಖರಲ್ಲದೆ ಮತ್ತೇನು? ವಾಗೀಶನು ಅಂದನು.

ಹೀಗಿದ್ದರೆ, ಈಗಾಗಲೆ ಅವನಿಗೆ ಹಲವರು ಶಿಷ್ಯರು ದೊರೆತಿರುವುದು ಹೇಗೆ? ಸಾವಿರಾರು ಜನರು ಭಕ್ತಿವಶರಾಗಿ ತುಳಸೀದಾಸನ ಹಾಗೂ ಸೀತಾರಾಮರ ದರ್ಶನಕ್ಕೆ ಹೋಗುತ್ತಿರುವುದೇಕೆ? ಮೊದಲನೆಯ ವಿದ್ಯಾರ್ಥಿಯು ಕೇಳಿದನು.

ಬಾಲನೆ, ನಿನಗಿನ್ನೂ ವ್ಯವಹಾರಜ್ಞಾನವಿಲ್ಲ. ನೀನು ವ್ಯವಹಾರದಲ್ಲಿ ವ್ಯವಹರಿಸ ಹತ್ತಿದೆಯೆಂದರೆ, ಇದರ ಮರ್ಮವನ್ನು ತಿಳಿಯುವೆ. ನಮ್ಮ ಜನರ ಧಾರ್ಮಿಕ ಭಾವನೆಯು ಕುರಿಗಳ ಬುದ್ಧಿಯಷ್ಟು ಆಗ್ರಹವಿದೆ! ಒಬ್ಬಿಬ್ಬರು ವಿಶ್ವಾಸವಿಟ್ಟು ಒಂದು ಸ್ಥಳದಲ್ಲಿ ಕಲೆಯ ಹತ್ತಿದರೆಂದರೆ ತೀರಿತು, ಕುರಿಗಳಂತೆ ಸಾವಿರಾರು ಜನರು ಅವರ ಬೆನ್ನ ಹತ್ತಿದರೇ! ವಾಗೀಶನು ಹೇಳಿದನು.

ಗುರುಗಳೇ, ನಿಸ್ಸಾರವಾದ ವಸ್ತುವನ್ನು ಆಶ್ರಯಿಸುವವರಾರು? ತುಳಸೀದಾಸನನ್ನು ಜನರು ಭಕ್ತಿಯಿಂದ ಆಶ್ರಯಿಸುವಂತೆ ನಿಮ್ಮನ್ನೇಕೆ ಆಶ್ರಯಿಸಬಾರದು? ಒಂದು ವೇಳೆ ಮೊದಲು ತಿಳಿಯದೆ ಹಾಗೆ ಮಾಡಿದ್ದರೆ, ಅವರು ಕಾಲಾಂತರದಲ್ಲಿ ತಮ್ಮ ಭ್ರಮೆಯನ್ನು ತಿಳಿಯದಿದ್ದಾರೆಯೆ? ಆಗವರು ಆ ವಸ್ತುವನ್ನು ತ್ಯಜಿಸದಿದ್ದಾರೆಯೆ? ತುಳಸೀದಾಸನ ಭಕ್ತರ ಸಂಖ್ಯೆಯು ದಿನಾಲು ಬೆಳೆಯುತ್ತಲಿದೆ. ಇದರಿಂದ ನೋಡಲಾಗಿ, ತುಳಸೀದಾಸನಲ್ಲಿ ನಿಜವಾದ ಯೋಗ್ಯತೆಯು ಇರಲಿಕ್ಕೆ ಬೇಕೆಂಬುದು ಸ್ಪಷ್ಟವಾಗುತ್ತದೆ. ಬೇರೊಬ್ಬ ವಿದ್ಯಾರ್ಥಿಯು ನುಡಿದನು.

ಇದರ ರಹಸ್ಯವನ್ನು ನೀನರಿಯೆ! ಕೆಲವರು ಭಂಡರು ಶಿಷ್ಯಸಂಗ್ರಹಕ್ಕಾಗಿ ಕಣ್ಕಟ್ಟಿನ ವಿದ್ಯೆಯನ್ನಾರಂಭಿಸುವರು! ಇದಕ್ಕೆ ನಾಲ್ಕಾರು

ಜನರು ಒಲಿಬಿದ್ದರೆ ಸಾಕು! ಈ ನಾಲ್ಕಾರು ಜನರನ್ನು ಕೈಯಲ್ಲಿ ತಕೊಂಡು ಇವರ ಮುಖಾಂತರ ನಾಲ್ಕಾರು ಸಾವಿರ ಅನುಯಾಯಿಗಳನ್ನು ಸಂಗ್ರಹಿಸಿಕೊಳ್ಳುವರು. ಧಂಧರ ಹೋರೆಯು ಇದು! ನಿಜವಾದ ಜ್ಞಾನಿಗಳಿಗೆ ಶಿಷ್ಯರೇಕೆ? ದೇವಾಲಯವೇಕೆ? ದೇವ ಮೂರ್ತಿಯೇಕೆ? ಎಲ್ಲವೂ ಆಡಂಬರ! ಸಾಮಾನ್ಯ ಜನರನ್ನು ವಂಚಿಸುವ ಸಾಧನ! ವಾಗೀಶನು ಆಧ್ಯಕ್ಷತೆಯಿಂದ ಹೇಳಿದನು.

ಸ್ವಾಮಿ, ತುಳಸೀದಾಸನು ಮೃತ ವ್ಯಕ್ತಿಯನ್ನು ಪುನರ್ಜೀವನಗೊಳಿಸಿದ್ದು, ಕಟ್ಟಿಗೆಯು ತುಂಡು ಬೆಳೆಯುವಂತೆ ಮಾಡಿದುದು ಇವೆಲ್ಲವು ಕಣ್ಕಟ್ಟಿನ ವಿದ್ಯೆಯ ಫಲಗಳೇ ಏನು? ಮೊದಲಿನ ವಿದ್ಯಾರ್ಥಿಯು ಕೇಳಿದನು.

ನಾನು ಮೃತ ಮನುಷ್ಯನನ್ನು ಬದುಕಿಸಿದ್ದರ ಕತೆಯನ್ನು ಕೇಳಿದ್ದೇನೆ; ಹಾಗು ಈ ಬಗ್ಗೆ ಆಲೋಚಿಸುತ್ತಿದ್ದೇನೆ. ಕಟ್ಟಿಗೆಯು ತುಂಡು ಬೆಳೆದ ಸಂಗತಿಯನ್ನು ಕೇಳಿಲ್ಲ. ಅದೇನು ಹೇಳು ನೋಡುವಾ. ವಾಗೀಶನೆಂದನು.

ಮೊನ್ನೆ ಸೀತಾರಾಮನ ದೇವಾಲಯದ ಕಟ್ಟುವಿಕೆಯ ಕೆಲಸವು ನಡೆದಾಗ, ಒಂದು ಹಲಗೆಯು ಸಣ್ಣದಿದ್ದುದರಿಂದ ನಿಯೋಜಿತ ಕೆಲಸಕ್ಕೆ ಅನುಪಯುಕ್ತವಾಗಿತ್ತು. ಬಡಿಗನು ತುಳಸೀದಾಸನ ಹತ್ತಿರ ಬಂದು:- ಸ್ವಾಮಿ, ಈ ಕಟ್ಟಿಗೆಯ ಬದಲು ಇನ್ನೊಂದನ್ನು ತರಿಸಿಕೊಡಿರಿ, ಎಂದು ಬಿನ್ನಯಿಸಿಕೊಂಡನು. ತುಳಸೀದಾಸನು ನಗುತ್ತ:—ಗಿಡದಲ್ಲಿದ್ದ ಕಟ್ಟಿಗೆಯು ತಾನೇ ತಾನಾಗಿ ಬೆಳೆಯುವುದು ಸಹಜವಾಗಿರುವಾಗ ಮನೆಯಲ್ಲಿಯ ಕಟ್ಟಿಗೆಯೇಕೆ ಬೆಳೆಯಬಾರದು? ಎಂದು ಕೇಳಿದನು. ಬಡಿಗನಿಗೆ ಏನು ತಿಳಿಯಿತೋ ಏನೋ! ಬೇರೆ ಮಾತಾಡದೆ ಕಟ್ಟಿಗೆಯನ್ನು ತಕೊಂಡು ಹೋಗಿಬಿಟ್ಟನು. ಮುಂದೆ ಒಂದೆರಡು ದಿನಗಳ ತರುವಾಯ ಬಡಿಗನು ನೋಡಿದಾಗ ಆ ಕಟ್ಟಿಗೆಯು ದೊಡ್ಡದಾಗಿ ನಿಯೋಜಿತ ಕೆಲ

ಸಕ್ಕೆ ಉಪಯುಕ್ತವಾಗಿರುವುದನ್ನು ಕಂಡನು. ಅವನ ಆಶ್ಚರ್ಯಕ್ಕೆ ಆಳತೆಯಿಲ್ಲದಾಯಿತು. ಅವನು ಆ ಕಟ್ಟಿಗೆಯನ್ನು ತುಳಸೀದಾಸನ ಬಳಿಗೆ ತಂದು ನಡೆದ ಸಂಗತಿಯನ್ನು ಅರಿಕೆಮಾಡಿಕೊಂಡನು. ಅಲ್ಲಿದ್ದವರೆಲ್ಲರೂ ಆಶ್ಚರ್ಯಾತಿರೇಕದಿಂದ ಬಾಯಿಮೇಲೆ ಕೈಯಿಟ್ಟುಕೊಂಡರು!

ನೀನಿನ್ನೂ ಚಿಕ್ಕ ವಯಸ್ಸಿನವನು. ಕಾರ್ಯಸಾಧಕರ ಕೈಚಳಕತೆಯನ್ನು ನೀನರಿಯೆ! ಇದೊಂದು ಕಣ್ಕಟ್ಟ ವಿದ್ಯೆಯ ಉತ್ಕೃಷ್ಟ ಉದಾಹರಣೆಯಾಗಿದೆಯೆಂಬದರಲ್ಲಿ ಸಂದೇಹವಿಲ್ಲ.

ತುಳಸೀದಾಸನು ಕಣ್ಕಟ್ಟ ವಿದ್ಯೆಯಿಂದ ಸಾಮಾನ್ಯ ಜನರನ್ನು ವಂಚಿಸಬಹುದು; ಆದರೆ ದಿಲ್ಲಿಯ ಮಹಾಪರಾಕ್ರಮಿಯೂ ಪರಮ ಧೂರ್ತನೂ ಆದ ಬಾದಶಹನನ್ನು ವಂಚಿಸಲಿಕ್ಕೆ ಸಾಧ್ಯವೆ? ಆ ವಿದ್ಯಾರ್ಥಿಯು ಕೇಳಿದನು.

ಸಾಧ್ಯವಿಲ್ಲ.

ಬಾದಶಹನು ತುಳಸೀದಾಸನನ್ನು ಮರ್ಯಾದೆಯಿಂದ ಕಂಡು ಬಹುಮಾನಕೊಟ್ಟು ಕಳುಹಿದ್ದೇಕೆ? ಮತ್ತೆ ಆ ವಿದ್ಯಾರ್ಥಿಯು ಕೇಳಿದನು.

ನಾನು ಈ ಸಂಗತಿಯನ್ನರಿಯೆನು. ಏನಾಯಿತು ಹೇಳು. ಗುರುವು ಅಂದನು

ಬಾದಶಹನು ತುಳಸೀದಾಸನ ಖ್ಯಾತಿಯನ್ನು ಕೇಳಿ, ಆದರದಿಂದ ಕರಿಸಿಕೊಂಡನು. ತುಳಸೀದಾಸನು ಬಾದಶಹನ ವಿನಂತಿಯನ್ನು ಮಾನ್ಯಮಾಡಿ ದರಬಾರಕ್ಕೆ ಹೋದನು. ಬಾದಶಹನು ಸತ್ಕರಿಸಿ ಕುಳ್ಳಿರಿಸಿ, ಯಾವುದೊಂದು ಅದ್ಭುತಕಾರ್ಯವನ್ನು ಮಾಡಿತೋರಿಸಬೇಕೆಂದು ಹೇಳಿಕೊಂಡನು; ಆದರೆ ತುಳಸೀದಾಸನು ಒಪ್ಪಲಿಲ್ಲ. ಅದ್ಭುತ ಕಾರ್ಯ ಮಾಡುವ ಶಕ್ತಿಯು ಪಾಮರನಾದ ತನ್ನಲ್ಲಿಲ್ಲವೆಂದು ವಿನಯವನ್ನು ಪ್ರಕಟಿಸಿದನು.

ಇದು ವಿನಯವೆ? ಆ ಶಕ್ತಿಯು ಅವನಲ್ಲಿದ್ದರೆ, ಸುಮ್ಮನಿರುತ್ತಿ

ದ್ದನೆ? ಬಾದಶಹನ ಎದುರಿನಲ್ಲಿ ಅಸಾಧಾರಣ ಕೃತಿಯನ್ನು ತೋರಿಸಿ, ಹೇರಳ ಸಂಭಾವನೆಯನ್ನು ಸಂಪಾದಿಸಿ, ಜಗದ್ವಿಖ್ಯಾತನಾಗುವ ಸುಯೋಗವನ್ನು ವ್ಯರ್ಥಗಳೆಕೊಳ್ಳುತ್ತಿದ್ದನೆ? ಗುರುವು ಕೇಳಿದನು.

ತುಳಸೀದಾಸನ ಮಾತಿನಿಂದ ಬಾದಶಹನಿಗೆ ಸಿಟ್ಟು ಬಂತು. ಬಾದಶಹನು ತುಳಸೀದಾಸನನ್ನು ಸೆರೆಯಲ್ಲಿರಿಸಿದನು. ಶಿಷ್ಯನು ಗುರುವಿನ ಮಾತಿನ ಕಡೆಗೆ ಲಕ್ಷ್ಯಗೊಡದೆ ನುಡಿದನು.

ಒಳ್ಳೇದು ಮಾಡಿದನು. ಮೋಸಗಾರರಿಗೆ ತಕ್ಕ ಶಿಕ್ಷೆಯಾಗಲೇಬೇಕು. ಗುರುವು ಆನಂದದಿಂದ ನುಡಿದನು.

ನಾನು ಹೇಳುವುದನ್ನು ಪೂರ್ಣವಾಗಿ ಕೇಳಿಕೊಳ್ಳಿರಿ. ಬಾದಶಹನಿಗೆ ಅಂದು ಸಮಾಧಾನವೆಂಬುದು ದೊರೆಯಲಿಲ್ಲ. ಯಾವುದೋ ಒಂದು ಊಹಿಸಲಾಗದ ಚಿಂತೆಯು ಅವನ ಮನಸ್ಸಿನಲ್ಲಿ ಹಾಹಾಕಾರವನ್ನೆಬ್ಬಿಸಿತು. ಬಾದಶಹನು ಕಾರಣವನ್ನು ತಿಳಿಯದೆ, ತಳಮಳದಿಂದ ಕಾಲಕಳೆದನು. ರಾತ್ರಿ ಮಲಗುವ ಮುಂದೆ ಸಾಧುವಿನ ಛಲವು ತನ್ನ ಈ ಮನಸ್ಸಿನ ಚಾಂಚಲ್ಯದ ಕಾರಣವಿರಬಹುದೆ? ಎಂಬ ವಿಚಾರವು ಅವನಿಗುಂಟಾಯಿತು. ಈ ವಿಚಾರದಲ್ಲಿರುವ ಅವನಿಗೆ ಅರೆನಿದ್ದೆಯಲ್ಲಿ ಒಂದು ಕನಸು ಬಿತ್ತು. ಈ ಕನಸಿನಲ್ಲಿ ಬಾದಶಹನ ಗುರುವು ಕಾಣಿಸಿಕೊಂಡು ತುಳಸೀದಾಸನನ್ನು ಬಂಧಮುಕ್ತಮಾಡಿ ಸತ್ಕರಿಸಿ ಕಳುಹಬೇಕೆಂದು ಅಪ್ಪಣೆ ಮಾಡಿದನು. ಬಾದಶಹನು ಬೆಳಗಾಗುತ್ತಲೆ, ತುಳಸೀದಾಸನನ್ನು ಕಾರಾಗಾರದಿಂದ ಮುಕ್ತಮಾಡಿ ಪಶ್ಚಾತ್ತಾಪವನ್ನು ಪ್ರಕಟಿಸಿ, ಬಹುಮಾನಮಾಡಿ ಕಳುಹಿಕೊಟ್ಟನು.

ಆಶ್ಚರ್ಯವೆ ಸರಿ! ತುಳಸೀದಾಸನು ಬಾದಶಹನಿಗೂ ಮಂಕುಬೂದಿಯನ್ನು ತಿನಿಸಿದನೆನ್ನಬೇಕು! ಧೂರ್ತರ ಮೋಸಗಾರಿಕೆಯು ಅವರ ಪ್ರಾಚೀನ ಜನ್ಮ ಪುಣ್ಯವು ಸಂಚಿತವಾಗಿರುವ ವರೆಗೆ ಎಲ್ಲೆಲ್ಲಿಯೂ ಸಫಲವಾಗುತ್ತಲೆ ಹೋಗುವುದು! ಇರಲಿ. ಈ ಸಂಗತಿಯನ್ನು ನಿನಗೆ ಹೇಳಿ-

ದವರಾರು? ನೀನಾದರೋ ನೋಡಿ ಬಂದವನಿಗಿಂತ ಹೆಚ್ಚು ನಿಶ್ಚಯಾತ್ಮಕವಾಗಿ ನುಡಿದೆ! ಗುರುವು ಅಂದನು.

ಇಷ್ಟರಲ್ಲಿ ಬ್ರಾಹ್ಮಣ ಸಮಾಜ ನಿಯಾಮಕ ಸಂಘದ ಸಭ್ಯನೊಬ್ಬನು ಅಲ್ಲಿಗೆ ಬಂದನು. ಗುರು-ಶಿಷ್ಯರ ಸಂವಾದವು ನಿಂತಿತು. ಆಗಂತುಕನು ತರ್ಕಾಲಂಕಾರನೆಂಬ ಉಪನಾಮದಿಂದ ಕಾಶಿಯಲ್ಲಿ ಹೆಸರಾಗಿದ್ದನು.

ಏನು ಸ್ವಾಮಿ, ಈಸಮಯದಲ್ಲಿ ಇಲ್ಲಿಗೆ ಬರೋಣವಾಯಿತು? ವಾಗೀಶನು ಕೇಳಿದನು.

ತಮಗೆ ಒಂದು ಸುದ್ದಿಯನ್ನು ತಿಳಿಸಲಿಕ್ಕೆ ಬಂದಿದ್ದೇನೆ. ತರ್ಕಾಲಂಕಾರನು ಹೇಳಿದನು.

ಸಾಯಂಕಾಲದ ಅಧಿವೇಶನದಲ್ಲಿ ಹೇಳಲಿಕ್ಕೆ ಬರುತ್ತಿತ್ತಲ್ಲ?

ಈಗಲೇ ಹೇಳುವುದು ಅವಶ್ಯವೆಂದು ತೋರಿದ್ದರಿಂದ ಇಲ್ಲಿಗೆ ಬಂದು ತಮ್ಮ ಅಧ್ಯಾಪನಾಕಾರ್ಯದಲ್ಲಿ ತೊಂದರೆಯನ್ನುಂಟು ಮಾಡಬೇಕಾಯಿತು ಕ್ಷಮಿಸಿರಿ. ತರ್ಕಾಲಂಕಾರನೆಂದನು.

ಅದೇನಿಲ್ಲ. ಹೇಳಿರಿ.

ಮೊನ್ನೆ ಒಬ್ಬನು ತಾನು ಬ್ರಹ್ಮಹತ್ಯೆಯ ಮಹಾಪರಾಧ ಮಾಡಿರುವೆನೆಂದು ನಮ್ಮ ಹತ್ತಿರ ಬಂದಿರಲಿಲ್ಲವೆ?

ಅಹುದು. ಏನಾಯಿತು? ಆತ್ಮಹತ್ಯೆ ಮಾಡಿಕೊಂಡನೇನು? ಈ ಮನುಷ್ಯನು ದುರ್ಮರಣಕ್ಕೆ ಆಹುತಿಯಾಗುವನೆಂದು ನಾನು ಅಂದೇ ತರ್ಕಿಸಿದ್ದೆನು. ವಾಗೀಶನು ಹೇಳಿದನು.

ಇಲ್ಲ. ಹೀಗಾಗಿಲ್ಲ. ಅವನು ಸತ್ತಿದ್ದರೆ, ನಾವು ಚಿಂತೆ ಮಾಡುವ ಕಾರಣವಿರಲಿಲ್ಲ ಅವನು ಬದುಕಿರುವದರಿಂದಲೇ ನಾವು ಅವನ ಆಲೋಚನೆಗೆ ಪ್ರವೃತ್ತರಾಗಬೇಕಾಗಿದೆ.

ಗೂಢವಾಗಿ ಮಾತಾಡಿದಿರಿ ನನಗೆ ಇದರ ಅರ್ಥ ಹೊಳೆಯು

ಲ್ಲ. ವಾಗೀಶನು ಹೇಳಿದನು.

ತುಳಸೀದಾಸನನ್ನು ನೀವು ಬಲ್ಲಿರಷ್ಟೆ? ಅವನು ಆ ಬ್ರಹ್ಮಘಾತುಕಿ ಯನ್ನು ಪಾವನಗೊಳಿಸಿದನಂತೆ.

ಒಪ್ಪುವರಾರು? ಬ್ರಾಹ್ಮಣನನ್ನು ಕೊಂದ ಪಾತಕಿಯು ಪರಿಶುದ್ಧ ನಾಗುವುದೆಂತು? ತುಳಸೀದಾಸನೊಬ್ಬನು ವೃಥಾ ಮೇಲೆ ಹುಚ್ಚು ಹಾಕಿ ಕೊಂಡು ಹೀಗೆಂದರೆ, ಇತರರು ಸಮ್ಮತಿಸುವ ಸಂಭವವಿದೆಯೆ? ವಾಗೀ ಶನು ಅಂದನು.

ಹೇಳುವೆನು, ಕೇಳಿರಿ. ಆ ಮಹಾ ಪಾತಕಿಯು ಈಗ ತೀರ ಪುನೀತನಾಗಿರುವನಂತೆ! ಈಗವನಲ್ಲಿ ಮೊದಲಿನ ಪಾಪವು ರವಷ್ಟು ತಿಲಕು ಉಳಿದಿಲ್ಲವಂತೆ! ಇದರ ದಿಗ್ದರ್ಶನಕ್ಕಾಗಿ ನಾಳಿನ ದಿನ ಭೋಜನ ಸಮಾ ರಂಭವು ನಡೆಯತಕ್ಕದ್ದಿದೆ. ಈ ಭೋಜನ ಸಮಾರಂಭಕ್ಕೆ ಕಾಶಿ ಯೊಳಗಿನ ಎಲ್ಲ ಬ್ರಾಹ್ಮಣರಿಗೆ ಆಮಂತ್ರಣವು ಕೊಡಲ್ಪಡುವದು ತುಳಸೀ ದಾಸನು ತನ್ನ ಆ ನೂತನ ಶಿಷ್ಯನೊಡನೆ ಬ್ರಾಹ್ಮಣರ ಪಂಕ್ತಿಯಲ್ಲಿ ಭೋಜನ ಮಾಡತಕ್ಕವನು.

ನಾನು ಈ ಭೋಜನ ಸಮಾರಂಭವನ್ನು ತಡೆದು ನಿಲ್ಲಿಸುವೆನು! ವಾಗೀಶನು ಹೇಳಿದನು.

ಸಾಧ್ಯವಿಲ್ಲ. ತುಳಸೀದಾಸನ ಶಿಷ್ಯರ ಸಂಖ್ಯೆಯು ಹೆಚ್ಚುತ್ತ ನಡೆದಿದೆ! ಘೋರ ಕಲಿಕಾಲ! ಧರ್ಮಾಧರ್ಮಗಳನ್ನು ಸರಿಯಾಗಿ ವಿಚಾ ರಿಸುವವರು ವಿರಳ!

ಇರಲಿ. ಈ ಸಮಯದಲ್ಲಿ ನಾವು ನಮ್ಮ ಶಕ್ತಿಯನ್ನು ತೋರಿಸ ಲಿಕ್ಕೆ ಬೇಕು. ಹೇಗಾದರೂ ಮಾಡಿ ಆ ಬ್ರಾಹ್ಮಣ ಭೋಜನವು ವ್ಯರ್ಥ ವಾಗುವಂತೆ ಮಾಡಲಿಕ್ಕೆ ಬೇಕು. ಯಾವ ಬ್ರಾಹ್ಮಣನೂ ನಾಳಿನ ದಿನ ಆಮಂತ್ರಣವನ್ನು ಸ್ವೀಕರಿಸಕೂಡದೆಂದು ನಾನು ಎಲ್ಲರಿಗೂ ಹೇಳಿ ಕಳು ಹುವೆನು. ನಾನಂತೂ ಔಣ ಹೇಳಬಂದವರಿಗೆ ಚನ್ನಾಗಿ ಸಂಭಾವನೆ

ಮಾಡಿ ಕಳುಹುವೆನು! ವಾಗೀಶನು ನುಡಿದನು.

ಇದರಿಂದ ತುಳಸೀದಾಸನಿಗೆ ಏನು ಮಾಡಿದಂತಾಯಿತು. ತರ್ಕಾಲಂಕಾರನು ಮೆಲ್ಲನೆ ಕೇಳಿದನು. ವಾಗೀಶನು ವಿದ್ಯಾರ್ಥಿಗಳ ಕಡೆಗೆ ನೋಡಿದನು. ಶಿಷ್ಯರು ಗುರುವಿನ ಭಾವವನ್ನು ತಿಳಿದರು. ವೇಳೆಯೂ ಬಹಳವಾಗಿತ್ತು. ವಿದ್ಯಾರ್ಥಿಗಳೆಲ್ಲರೂ ಎದ್ದು ಹೋದರು.

ನಾವು ತುಳಸೀದಾಸನ ಪಾರುಪತ್ಯವನ್ನು ಮಾಡಲೇಬೇಕು. ನಾನು ಇದರ ಆಲೋಚನೆಯನ್ನು ಈ ಮೊದಲೇ ಮಾಡಿಟ್ಟಿರುವೆನು. ಇನ್ನು ಕೆಲ ದಿನಗಳಲ್ಲಿ ಸಾಭಾಜಿಯ ಪುಣ್ಯತಿಥಿಯ ಆರಾಧನೆಯು ಜರುಗತಕ್ಕದ್ದಿದೆಯಷ್ಟೆ? ವಾಗೀಶನು ಕೇಳಿದನು.

ಅದು ಇಲ್ಲಿ ನಡೆಯತಕ್ಕದ್ದಲ್ಲ ಪುಷ್ಕರದಲ್ಲಿ ಆಗತಕ್ಕದ್ದು.

ಸುಡುಗಾಡಿನಲ್ಲಿ ನಡೆಯಲೊಲ್ಲದೇಕೆ! ಎಲ್ಲಿಯಾದರೇನು? ನಮಗೆಲ್ಲರಿಗೆ ನಿಮಂತ್ರಣ ಪತ್ರಿಕೆಗಳು ಬರುವವು ನಾವೆಲ್ಲರೂ ಹೋಗಲಿಕ್ಕೆ ಬೇಕು.

ಇದರಲ್ಲಿ ವಿಶೇಷವೇನು? ತರ್ಕಾಲಂಕಾರನು ಕುತೂಹಲತೆಯಿಂದ ಕೇಳಿದನು.

ತುಳಸೀದಾಸನಿಗೆ ನಿಮಂತ್ರಣ ಪತ್ರಿಕೆಯು ಮುಟ್ಟದಂತೆ ನಾನು ಮಾಡುವೆನು!

ಹೇಗೆ ಮಾಡುವಿರಿ?

ಕಾಶಿಯ ಪಂಡಿತರಿಗೆ ಆಮಂತ್ರಣ ಪತ್ರಿಕೆಗಳನ್ನು ಮುಟ್ಟಿಸುವ ಕೆಲಸವು ನನ್ನ ಕಡೆಗಿರುವುದು. ನಾನು ನಾಳಿನ ಭೋಜನ ಸಮಾರಂಭಕ್ಕೆ ಹೋದವರೆಲ್ಲರೂ ಸಮಾಜಚ್ಯುತರೆಂದು ಸಾರುತ್ತೇನೆ; ಹಾಗು ಇವರಿಗೆ ಸಾಭಾಜಿಯ ಸಮಾರಾಧನೆಯ ಔತಣದ ಓಲೆಗಳನ್ನು ಕಳುಹುವದಿಲ್ಲ.

ಸರಿಯಾದ ಕೆಲಸ. ಸೇರಿಗೆ ಸವ್ವಾಸೇರು! ತರ್ಕಾಲಂಕಾರನು

ಆನಂದದಿಂದುಚ್ಚರಿಸಿದನು.

ವಾಚಕ ಮಹಾಶಯ, ತರ್ಕಾಲಂಕಾರನ ದೃಷ್ಟಿಯಿಂದ ವಾಗೀಶನು ಬಲಶಾಲಿಯೆಂದು ನಿರ್ಣಯಿಸಲ್ಪಟ್ಟರೂ, ನಿಜವಾದ ಸನ್ಮಾನೇರಾವುದೆಂಬದು ಮುಂದೆ ತಮಗೆ ಗೊತ್ತಾಗುವುದು.

## ೧೮ ಮಾಹಾತ್ಮ್ಯ.

ಹಿಂದೀ ಭಾಷೆಯಲ್ಲಿ ಭಕ್ತಮಾಲ ಗ್ರಂಥವನ್ನು ರಚಿಸಿ ಪ್ರಖ್ಯಾತನಾದ ನಾಭಾಜಿಯು ಪರಮ ಸಾಧುವು. ಇವನೂ, ತುಳಸೀದಾಸನ ಗುರುವಾಗಿದ್ದ ಜಗನ್ನಾಥದಾಸನೂ ಸಮಕಾಲೀನರು. ಈ ಅವಧಿಯಲ್ಲಿ ನಾಭಾಜಿಯು ದೇಹವಿರಿಸಿದ್ದನು. ಜಗನ್ನಾಥದಾಸನು ಗುಪ್ತರೀತಿಯಿಂದಿದ್ದನು. ನಾಭಾಜಿಯು ದೇಹವಿಟ್ಟ ಸ್ಥಳದಲ್ಲಿ ಅಂದರೆ ಪುಷ್ಕರದಲ್ಲಿ ಮೃತ್ಯುತಿಥಿಯ ದಿವಸ ಪ್ರತಿವರ್ಷ ಆರಾಧನೆಯು ನಡೆಯುತ್ತಿತ್ತು. ಈ ಆರಾಧನೆಗೆ ದೂರ ದೂರದ ಸಾವಿರಾರು ಬ್ರಾಹ್ಮಣರು ಬರುತ್ತಿದ್ದರು. ಆರಾಧನೆಯು ಒಳ್ಳೇ ವಿಜೃಂಭಣೆಯಿಂದ ನಡೆಯುತ್ತಿತ್ತು.

ಪುಷ್ಕರದಲ್ಲಿ ನಾಭಾಜಿಯ ಸಮಾಧಿಯಿತ್ತು. ಇದರ ಮೇಲೆ ಮಂದಿರವನ್ನು ಕಟ್ಟಿದ್ದರು. ಈ ಮಂದಿರದ ಸುತ್ತಲೂ ವಿಸ್ತಾರವಾದ ಪ್ರಾಂಗಣವಿತ್ತು. ಪ್ರಾಂಗಣದ ನಾಲ್ಕು ಕಡೆಗಳಲ್ಲಿ ಇಮಾರತುಗಳಿದ್ದವು. ಇವು ಜಾಗ್ರತವಾಗಿದ್ದ ಈ ಸ್ಥಳಕ್ಕೆ ಸೇವೆಗೆಂದು ಬಂದವರ ಹಾಗು ಆರಾಧನೆಯ ಸಮಯದಲ್ಲಿ ಕಲೆಯುತ್ತಿದ್ದ ಜನರ ವಾಸಕ್ಕಾಗಿ ನಿರ್ಮಿಸಲ್ಪಟ್ಟಿದ್ದವು.

ಪ್ರಾಂಗಣವು ಯಾವಾಗಲೂ ಬೈಲಾಗಿಯೇ ಇರುತ್ತಿತ್ತು; ಆದರೆ ಆರಾಧನೆಯ ಸಮಯದಲ್ಲಿ ಹಂದರ ಹಾಕಿರುತ್ತಿದ್ದರು. ಆರಾಧನೆಯ ಮುಖ್ಯ ಕಾರ್ಯಕ್ರಮಗಳು ಇಲ್ಲಿಯೇ ಜರುಗುತ್ತಿರುವದರಿಂದ ಮೇಲೆ

ಗುಡಾರಗಳನ್ನು ಹಾಕಿ ಗಾಳಿಮಳೆಗಳಿಂದ ಉಪದ್ರವವಾಗದಂತೆ ಮಾಡು ತ್ತಿದ್ದರು.

ಈ ಆರಾಧನೆಯ ಎಲ್ಲ ಕಾರ್ಯಕ್ರಮಗಳನ್ನು ಸಾಂಗವಾಗಿ ನೆರವೇರಿಸಲಿಕ್ಕೆ ವ್ಯವಸ್ಥಾಪಕರದೊಂದು ಕಮಿಟಿಯಿತ್ತು. ಈ ಕಮಿಟಿಯವರು ಒಂದೊಂದು ಊರಿಗೆ ಒಬ್ಬೊಬ್ಬ ಮುಖ್ಯಸ್ಥನನ್ನು ಗೊತ್ತು ಮಾಡಿಕೊಂಡಿದ್ದರು; ಹಾಗು ಈ ಮುಖ್ಯಸ್ಥರ ಮುಖಾಂತರ ಆ ಆ ಸ್ಥಳಗಳ ಬ್ರಾಹ್ಮಣರಿಗೆ ಆಮಂತ್ರಣ ಪತ್ರಿಕೆಗಳನ್ನು ಕಳುಹುತ್ತಿದ್ದರು. ಇವರು ವೇದಾಂತವಾಗೀಶನು ಕಾಶಿಯ ಬ್ರಾಹ್ಮಣರ ಮುಂದಾಳುವೆಂದು ಭಾವಿಸಿದ್ದರು; ಹಾಗು ನಿಮಂತ್ರಣದ ಕಾಗದಗಳನ್ನು ಮುಟ್ಟಿಸುವ ಭಾರವನ್ನು ವೇದಾಂತವಾಗೀಶನಿಗೆ ಒಪ್ಪಿಸಿದ್ದರು.

ವೇದಾಂತವಾಗೀಶನು ಈ ಸಪರ್ ತನ್ನ ಕರ್ತವ್ಯವನ್ನು ಸರಿಯಾಗಿ ನೆರವೇರಿಸಲಿಲ್ಲ. ತುಳಸೀದಾಸನಿಗೂ ಅವನ ಅನುಯಾಯಿಗಳಿಗೂ ಆಮಂತ್ರಣ ಪತ್ರಿಕೆಗಳನ್ನು ಮುಟ್ಟಿಸಲಿಲ್ಲ. ತನ್ನ ಅನುಯಾಯಿಗಳಿಗೇ ನಿಮಂತ್ರಣದ ಕಾಗದಗಳನ್ನು ಕೊಟ್ಟನು. ಮನೆಮನೆಗೆ ಹೋಗಿ ಕರೆದನು. ಒಲ್ಲೆನೆಂದರೂ ಕೇಳದೆ, ಒತ್ತಾಯದಿಂದ ಆರಾಧನೆಗೆ ಹೊರಡಿಸಿದನು. ಅನುಯಾಯಿಗಳ ದೊಡ್ಡ ತಂಡವನ್ನು ಕಟ್ಟಿಕೊಂಡು, ನಡಗರದಿಂದ ಪುಷ್ಕರದ ಹಾದಿಯು ಹಿಡಿದನು.

ಇಂದು ನಾಭಾಜಿಯ ಪುಣ್ಯತಿಥಿ. ಪ್ರತಿವರ್ಷಕ್ಕಿಂತಲೂ ಜನರು ಹೆಚ್ಚಾಗಿ ಕಲೆತಿದ್ದರು. ಸಮಾಧಿ ಮಂದಿರವೂ ಸುತ್ತಲಿನ ಸ್ಥಳವೂ ಜನರ ಗದ್ದಲದಿಂದ ತುಂಬಿಹೋಗಿತ್ತು. ಆರಾಧನೆಯ ಮಂಟಪದಲ್ಲಿ ಒಂದೆಡೆಯಲ್ಲಿ ಪುರಾಣ, ಮತ್ತೊಂದು ಕಡೆಯಲ್ಲಿ ಹರಿಕೀರ್ತನ, ಇನ್ನೊಂದು ಕಡೆಯಲ್ಲಿ ಭಜನೆ, ಬೇರೊಂದು ಸ್ಥಳದಲ್ಲಿ ಗಾಯನ. ಹೀಗೆ ಬೇರೆ ಬೇರೆ ಭಾಗಗಳಲ್ಲಿ ಬೇರೆಬೇರೆ ಕಾರ್ಯಕ್ರಮಗಳು ಸಾಗಿದ್ದವು. ಆರಾಧನೆಗೋಸುಗ ಬಂದ ಜನರಲ್ಲಿ ಕೆಲವರು ಇವುಗಳಲ್ಲಿ ತೊಡಗಿದ್ದರು. ಮತ್ತೆ ಕೆಲ

ವರು ಹರಟೆ-ಕುಚೇಷ್ಟೆಗಳಲ್ಲಿ ಕಾಲಕಳೆಯುತ್ತಿದರು. ಇನ್ನು ಕೆಲವರು ಸ್ನಾನ-ಆಹ್ನಿಕಗಳಲ್ಲಿ ತೊಡಗಿದ್ದರು. ಹುಡುಗರು-ಹುಡಿಗೆಯರು ಮನಬಂದಂತೆ ಆಡ್ನಾಡುತ್ತಿದ್ದರು; ಲಹಿಸುತ್ತಿದ್ದರು; ಆಟವಾಡುತ್ತಿದ್ದರು. ಇವರನ್ನಾರೂ ವಿಚಾರಿಸುತ್ತಿರಲಿಲ್ಲ. ಹೀಗಾಗಿ ಎಲ್ಲಿ ನೋಡಿದರೂ ಉತ್ಸಾಹವೇ ಉತ್ಸಾಹವು ಕಂಡುಬರುತ್ತಿತ್ತು.

ಮಧ್ಯಾಹ್ನದಲ್ಲಿ ಭೋಜನ ಸಮಾರಂಭ. ಇದೊಂದು ವಿರಾಟ್ ವ್ಯಾಪಾರ. ಕೂಡಿದ ಹತ್ತಿಪ್ಪತ್ತು ಸಾವಿರ ಜನರಿಗೆ ಸರಿಯಾಗಿ ಭೋಜನವಾಗಬೇಕು ಇದಕ್ಕಾಗಿ ಪ್ರಾಂಗಣದಲ್ಲಿ ಸಾಲಾಗಿ ಬಾಳೆಯ ಎಲೆಗಳನ್ನು ಹಾಕಿದ್ದರು. ಬಡಿಸುವ ಕೆಲಸ ನಡೆದಿತ್ತು. ಬ್ರಾಹ್ಮಣರು ಎಲೆಗಳನ್ನು ಆಕ್ರಮಿಸಿ ಕುಳಿತಿದ್ದರು. ಕೆಲವರು ಮಂತ್ರ ಪಠಣಮಾಡುತ್ತಿದ್ದರು. ಹಲವರು ಹರಟೆಯು ಹೊಡೆಯುತ್ತಿದ್ದರು. ಹುಡುಗರ ಗೊಂದಲವಂತೂ ನಡೆದೇ ಇತ್ತು.

ವೇದಾಂತವಾಗೀಶನು ತನ್ನ ಬಳಿಯಲ್ಲಿ ಕುಳಿತಿದ್ದ ಅಪರಿಚಿತ ಮನುಷ್ಯನಿಗೆ ತುಳಸೀದಾಸನ ಪರಿಚಯ ಮಾಡಿಕೊಡುವ ಉದ್ದೇಶದಿಂದ ಇಂತು ಹೇಳಹತ್ತಿದನು: "ನೀವು ತುಳಸೀದಾಸನ ಗುಣಗಳನ್ನರಿಯಿರಿ. ಅವನು ನಿಮ್ಮಿಂದ ದೂರದಲ್ಲಿದ್ದದರಿಂದ ಭಕ್ತಶಿಖಾಮಣಿಯಾಗಿ ತೋರುತ್ತಿರಬಹುದು. ನಾವು ಅವನನ್ನು ದಿನಾಲು ನೋಡುತ್ತಿದ್ದೇವೆ. ನಾನು ಅವನನ್ನು ಪರೀಕ್ಷಿಸಿಬಿಟ್ಟಿದ್ದೇನೆ ಅವನಂಥ ಡಾಂಭಿಕನು ಬೇರೊಬ್ಬನಿರಲಾರನೆಂದು ಮನವರಿಕೆ ಮಾಡಿಕೊಂಡಿದ್ದೇನೆ."

ಸಮೀಪದಲ್ಲಿ ಕುಳಿತಿದ್ದ ಮತ್ತೊಬ್ಬನು:—ತುಳಸೀದಾಸನೇಕೆ ಬರಲಿಲ್ಲ? ಎಂದು ಕೇಳಿದನು ವಾಗೀಶನು ಉತ್ತರಕೊಡಲಿಲ್ಲ. ಕಾಶಿಯ ಮತ್ತೊಬ್ಬ ಬ್ರಾಹ್ಮಣನು:—ನಿಮಂತ್ರಣ ಕೊಟ್ಟಿದ್ದರೆ, ಅವನು ಬಾರದಿರುತ್ತಿರಲಿಲ್ಲ ಯಾಕೆಂದರೆ, ನಾಭಾಜಿಯು ಅವನ ಗುರುವಿನ ಕೇವಲ ಸ್ನೇಹಿತನು, ಎಂದು ಹೇಳಿದನು.

ತುಳಸೀದಾಸನಿಗೆ ಆಮಂತ್ರಣ ಪತ್ರಿಕೆಯನ್ನು ಕಳುಹಲಿಲ್ಲವೇ? ಮತ್ತೊಬ್ಬನು ಆಶ್ಚರ್ಯದಿಂದ ಕೇಳಿದನು

ಕಳುಹಿದಂತೆ ಕಾಣಲಿಲ್ಲ. ಕಾಶಿಯ ಆ ಬ್ರಾಹ್ಮಣನು ಹೇಳಿದನು.

ನಾವು ಅವನ ದಾಸಾನುದಾಸರಾಗಲಿಕ್ಕೂ ಅಯೋಗ್ಯರು. ನಮ್ಮಂತಹರಿಗೆ ಆಮಂತ್ರಣವಿದ್ದ ಬಳಿಕ ಅವನಿಗೆ ಆಮಂತ್ರಣವಿಲದಿರುವುದು ಆಶ್ಚರ್ಯವೇ ಸರಿ! ಒಬ್ಬ ಬ್ರಾಹ್ಮಣನು ನುಡಿದನು.

ಸ್ವಾಮಿ, ದೇಶಾಟನೆ ತಾವೊಬ್ಬರು ಹಾಗೆ ಭಾವಿಸಿಕೊಳ್ಳಬಹುದು! ನಮಗೆ ಆ ಭಾವನೆಯೆ ಎಂದಿಗೂ ಹುಟ್ಟದು! ನಾನು ತುಳಸೀದಾಸನಂಥ ಭಂಡನು ಈ ಪವಿತ್ರ ಬ್ರಾಹ್ಮಣ ಸಮಾಜದಲ್ಲಿ ಕುಳಿತು ಭೋಜನ ಮಾಡಲಿಕ್ಕೆ ತೀರ ಅಯೋಗ್ಯನೆಂದು ಹೇಳುತ್ತೇನೆ! ವಾಗೀಶನು ಆವೇಶದಿಂದ ನುಡಿದನು

ನೀವು ಯಾವ ದೇಶದವರಯ್ಯಾ? ಬೇರೊಬ್ಬನು ವಿದ್ರೂಪ ಸ್ವರದಿಂದ ಕೇಳಿದನು

ಇವರು ವಿಖ್ಯಾತ ಪಂಡಿತರು. ಕಾಶಿಯ ನಿವಾಸಿಗಳು. ವೇದಾಂತ ವಾಗೀಶರು. ಭಾರತವರ್ಷಕ್ಕೆ ಭೂಷಣಭೂತರು. ಕಾಶಿಯ ಒಬ್ಬ ಬ್ರಾಹ್ಮಣನು ನುಡಿದನು.

ನಾಲ್ಕಾರು ಪುಸ್ತಕಗಳನ್ನು ಓದಿ ಪಂಡಿತನಾಗಿರಬಹುದು. ವಿದ್ಯೆಯು ಬೇರೆ. ಜ್ಞಾನವು ಬೇರೆ. ಜ್ಞಾನಮಾರ್ಗದಲ್ಲಿ ಇವನಿನ್ನೂ ಹಸುಳನಾಗಿ ತೋರುತ್ತಾನೆ! ತರುಣ ಸಾಧುವೊಬ್ಬನು ನುಡಿದನು.

ನೀನು ಯಾರಿಗೆ ಈ ಮಾತಾಡುತ್ತಿರುವೆ! ಎಂಬುದರ ಅರಿವು ನಿನಗಿದೆಯೆ? ವಾಗೀಶನು ಕೋಪದಿಂದ ಕೇಳಿದನು.

ಸತ್ಪುರುಷರ ನಿಂದೆಗೆ ಉದ್ಯುಕ್ತವಾದ ನಿನ್ನ ನಾಲಿಗೆಯು ಈ ಮೊದಲೇ ಕಡಿದು ಬೀಳಬೇಕಿತ್ತು; ಆದರೆ ಅದು ಮೇಲಿಂದ ಮೇಲೆ ಮಹನೀಯರ ನಾಮವನ್ನುಚ್ಚರಿಸುತ್ತಿರುವುದರಿಂದ ತನ್ನ ಸ್ಥಳವನ್ನು ಕಾಯ್ದು

ಕೊಂಡಿದೆ! ಆ ಸಾಧುವು ನುಡಿದನು.

ಭಗವದ್ಭಕ್ತರ ನಿಂದೆ ಮಾಡುವವರು ಮಹಾ ಪಾಪಿಗಳು! ಅವರು ಅನಂತ ಕಾಲದ ವರೆಗೆ ನರಕಭೋಗಿಗಳಾಗುವರು. ಮತ್ತೊಬ್ಬನು ನುಡಿದನು.

ತುಳಸೀದಾಸನು ಭಗವದ್ಭಕ್ತನಲ್ಲ; ಅಧಾರ್ಮಿಕನು, ಭಕ್ತರ ನಿಂದೆ ಮಾಡುವವನು, ಶಾಸ್ತ್ರವಿರುದ್ಧ ವರ್ತಿಸುವವನು. ವಾಗೀಶನು ಹೇಳಿದನು.

ತುಳಸೀದಾಸನು ಆಚರಿಸಿದ ಇಂಥ ಕೆಲಸಗಳು ಯಾವವು? ಒಬ್ಬನು ಕೇಳಿದನು.

ಬ್ರಾಹ್ಮಣನನ್ನು ಕೊಂದ ಮಹಾ ಪಾಪಿಷ್ಠನನ್ನು ಪಾವನಗೊಳಿಸಿ, ಅವನೊಡನೆ ಸಹ ಭೋಜನ ಮಾಡಿದನು. ನಾನು ಬೇಗನೆ ಇದರ ಬಗ್ಗೆ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕೆಂದಿದ್ದೇನೆ! ವಾಗೀಶನಂದನು.

ಮಹಾಭಕ್ತನಾದ ತುಳಸೀದಾಸನು ಎಲ್ಲ ವ್ಯವಸ್ಥೆಗಳ ಹೊರಗಿನವನು ಅವನನ್ನು ನೀವು ಮಾಡುವುದೇನು? ಆ ಸಾಧುವು ಕೇಳಿದನು.

ಅವನನ್ನು ಸಮಾಜದಿಂದ ಬಹಿಷ್ಕರಿಸುವೆನು. ಅವನ ಬಳಿಗೆ ಬ್ರಾಹ್ಮಣರು ಹೋಗದಂತೆ ಮಾಡುವೆನು. ಅವನನ್ನು ಗುಡಿ-ಗುಂಡಾರುಗಳಿಗೆ ಬರಗೊಡುವದಿಲ್ಲ. ಅವನು ಇದಕ್ಕೆ ಹಣಿಯದಿದ್ದರೆ, ಅವನನ್ನು ಕಾಶಿಯಿಂದ ಓಡಿಸಿ ಬಿಡುವೆನು! ವಾಗೀಶನು ಗರ್ವದಿಂದ ನುಡಿದನು.

ಸಾಮಾನ್ಯಶಕ್ತಿಯುತರಾದ ನೀವು ಇಷ್ಟೊಂದು ಹೆಮ್ಮೆಯನ್ನು ತೋರಿಸುತ್ತಿರುವುದು ಒಳಿತಲ್ಲ! ಒಬ್ಬನು ಮೆಲ್ಲನೆ ನುಡಿದನು.

ನನ್ನದು ಸಾಮಾನ್ಯ ಶಕ್ತಿಯೆ? ಕಾಶಿಯಲ್ಲಿ ನನಗಸಾಧ್ಯ ಕೆಲಸ ಎಲ್ಲ ನಾನು ನನ್ನ ಮನಸ್ಸಿಗೆ ಬಂದುದನ್ನು ಸಹಜವಾಗಿ ಮಾಡಬಲ್ಲೆನು! ವಾಗೀಶನು ನುಡಿದನು.

ಹೀಗಿದ್ದರೆ, ನೀವು ಬ್ರಾಹ್ಮಣನ ಕೊಲೆ ಮಾಡಿದವನನ್ನು ಪಾವನ

ಗೊಳಿಸಬಲ್ಲಿರಾ? ಸಂತೊಬ್ಬನು ಉಪರೋಧಿಕ ಸ್ವರದಿಂದ ನುಡಿದನು. ಕೆಲವರು ನಗಹತ್ತಿದರು.

ಸಾಧ್ಯವಿಲ್ಲ! ವಿಷವು ವಿಷವೆ! ಅದನ್ನು ಅಮೃತದಲ್ಲಿ ರೂಪಾಂತರಗೊಳಿಸುವುದು ಯಾರಿಂದಲೂ ಆಗದ.! ವಾಗೀಶನು ನುಡಿದನು.

ಸಾಮಾನ್ಯರಿಗೆ ಅಸಾಧ್ಯವಿದ್ದ ಕೆಲಸವನ್ನು ಮಹನೀಯನಾದ ತುಳಸೀದಾಸನು ಮಾಡಿದ್ದಾನೆ. ಅವನು ಸತ್ತ ಮನುಷ್ಯನನ್ನು ಹೇಗೆ ಬದುಕಿಸಿದನೋ ಹಾಗೆಯೇ ಬ್ರಹ್ಮಘಾತಕಿಯನ್ನು ಪರಿಶುದ್ಧಗೊಳಿಸಿದ್ದಾನೆ! ಈ ಲೋಕದಲ್ಲಿ ಜ್ಞಾನಿಗಳಿಗೂ, ಭಗವದ್ಭಕ್ತರಿಗೂ ಅಸಾಧ್ಯವಾದ ಕೆಲಸವೆಂಬುದಿಲ್ಲ! ಆ ಸಾಧುವು ನುಡಿದನು.

ಏನಾಯಿತು? ಹೇಳಿರಿ, ನೋಡೋಣ. ನಮಗೇನೂ ಗೊತ್ತಿಲ್ಲ. ನಾಲ್ಕಾರು ಜನರು ಒಮ್ಮೆಲೆ ಕೇಳಿದರು.

ಇಷ್ಟರಲ್ಲಿ ಛಟ್ ಛಟ್ ಎಂಬ ಶಬ್ದವಾಗಿ ಹಂದರದ ಕಂಬವೊಂದು ಮುರಿಯಿತು. ನಾಲ್ಕಾರು ಕಂಬಗಳು ಕುಸಿದು ಬೀಳುವುದರಲ್ಲಿದ್ದುವು. ಬ್ರಾಹ್ಮಣರು ಹರಟೆಯನ್ನು ಬಿಟ್ಟು ನೋಡಿದರು. ಹಂದರವು ಕೂಡಲೆ ಬೀಳುವುದೆಂದು ಅವರಿಗೆ ಬೋಧೆಯಾಯಿತು. ಅವರು ಭಯಗೊಂಡರು. ಭಕ್ಷ್ಯ-ಭೋಜ್ಯಗಳ ಆಶೆಯನ್ನು ಬಿಟ್ಟು ಪಲಾಯನ ಮಾಡಹತ್ತಿದರು! ಎಲ್ಲೆಲ್ಲಿಯೂ ಗೊಂದಲವೇ ಗೊಂದಲ! ಬ್ರಾಹ್ಮಣರು ಹಂದರದ ಕಡೆಗೆ ನೋಡುತ್ತ, ಮುಂದೆ ಧಾವಿಸುವುದರಲ್ಲಿದ್ದರು.

ಇತ್ತ ಮಹಾದ್ವಾರದ ಹತ್ತಿರ ಮೂವರು ಅತಿಥಿಗಳು ಬಂದಿದ್ದರು. ವ್ಯವಸ್ಥಾಪಕನೊಬ್ಬನು ಬಾಗಿಲ ಕಾಯುತ್ತ ನಿಂತಿದ್ದನು. ಆಗಂತುಕರು ಭಿಕ್ಷುಕರಾಗಿರಬೇಕೆಂದು ಅವನು ಊಹಿಸಿದನು. ಅವನು ಅತಿಥಿಗಳ ಇಚ್ಛೆಯಂತೆ ಅವರನ್ನು ಒಳಗೆ ಹೋಗಗೊಡಲಿಲ್ಲ. ಆಗಂತುಕರು ನಿರುಪಾಯರಾಗಿ ಸುಮ್ಮನೆ ಹೊರಗೆ ನಿಂತುಬಿಟ್ಟರು. ವ್ಯವಸ್ಥಾಪಕನು ಒಳಗೆ ನಡೆದ ಗೊಂದಲವನ್ನು ನೋಡಿ, ವಿಸ್ಮಯಗೊಂಡು ಅತ್ತ ನಡೆ

ದನು. ಜನರು ಬೀಳುತ್ತೇಳುತ್ತ ಹೊರಬೀಳುವುದರಲ್ಲಿದ್ದರು. ಈ ಸಮಯದಲ್ಲಿ ಆಗಂತುಕರು ಅಡ್ಡಿಯಿಲ್ಲದೆ ಒಳ ಹೊಕ್ಕರು.

ಬ್ರಾಹ್ಮಣರಲ್ಲಿಯು ಕೆಲವರು ಹೊರಬಿದ್ದು ಹೋಗಿದ್ದರು. ಕೆಲವರು ಸುರಕ್ಷಿತ ಸ್ಥಳದಲ್ಲಿ ನಿಂತುಕೊಂಡು ಚಮತ್ಕಾರವನ್ನು ನೋಡುತ್ತಿದ್ದರು. ವ್ಯವಸ್ಥಾಪಕರು ಮುಂದೇನು ಮಾಡಬೇಕೆಂದು ಯೋಚಿಸಹತ್ತಿದರು. ಹಂದರವು ಬಿದ್ದು ಹೋಯಿತು ವ್ಯವಸ್ಥಾಪಕರು ಬಹು ಚಿಂತೆಗೊಳಗಾದರು.

ಆಗಂತುಕರಲ್ಲಿಯು ಒಬ್ಬನು ವ್ಯವಸ್ಥಾಪಕರ ಬಳಿಗೆ ಬಂದು:— ಭಕ್ತರೆ, ಚಿಂತಿಸಬೇಡಿರಿ. ಈ ಸಂಕಟವನ್ನು ಒದಗಿಸಿದ ಶ್ರೀ ಹರಿಯೇ ಸಂಕಟದಿಂದ ಪಾರುಮಾಡುವನು. ನೀವೆಲ್ಲರೂ ಅವನ ಅಗಾಧ ಶಕ್ತಿಯು ವಿಷಯದಲ್ಲಿ ನಂಬುಗೆಯಿರಿಸಿದವರಾಗಿ ಆ ಕರುಣಾಸಾಗರನನ್ನು ಪ್ರಾರ್ಥಿಸಿಕೊಳ್ಳಿರಿ, ಎಂದು ಹೇಳಿ ತಾನು ಪ್ರಾರ್ಥನೆಯನ್ನಾರಂಭಿಸಿದನು ಶ್ರೀ ರಾಮನೇ, ಭಕ್ತವತ್ಸಲನೆ, ನಾಭಾಜಿಯವರು ಪರಮ ವೈಷ್ಣವರು. ನಿನ್ನ ಪ್ರಿಯತಮ ಭಕ್ತರು. ಅವರ ದೇಹದಿಂದ ಪವಿತ್ರವಾದ ಈ ಸ್ಥಳದಲ್ಲಿ, ಅನ್ನಸಂತರ್ಪಣೆಯ ಪುಣ್ಯಕರ ಕಾರ್ಯವು ನಡೆದಾಗ, ಈ ತರದ ಉತ್ಪಾದವಾಗಬೇಕೆ? ಸಾವಿರಾರು ಬ್ರಾಹ್ಮಣರು ಕ್ಷುಧಿತರಾಗಿ ಕುಳಿತಿದ್ದಾರೆ. ಲೋಕಸೇವಾತತ್ಪರರಾದ ಈ ವ್ಯವಸ್ಥಾಪಕರು ಮಹಾ ಚಿಂತೆಗೊಳಗಾಗಿದ್ದಾರೆ ನೀನು ಸುಮ್ಮನಿದ್ದು ನೋಡುವೆಯಾ? ಭಯನಿವಾರಕ, ಇವರ ಭಯವನ್ನು ಹೋಗಲಾಡಿಸು. ಇವರನ್ನು ಒದಗಿದ ವಿಪತ್ತಿನಿಂದ ಪಾರುಮಾಡಿ ಭಕ್ತಾಭಿಮಾನಿಯೆಂಬ ನಿನ್ನ ನಾಮವನ್ನು ಸಾರ್ಥಕ ಮಾಡಿಕೊಳ್ಳು................

ತುಳಸೀದಾಸನ ಪ್ರಾರ್ಥನೆಯು ಮುಂದೆ ಸಾಗಿತ್ತು. ವ್ಯವಸ್ಥಾಪಕರೂ ಪ್ರೇಕ್ಷಕರೂ ಆಶ್ಚರ್ಯಾತಿರೇಕದಿಂದ ನೋಡಿದರು. ಹಂದರವು ಮೊದಲಿನಂತೆ ತಾನೇ ತಾನಾಗಿ ಎದ್ದು ನಿಲ್ಲುವುದರಲ್ಲಿತ್ತು. ಕೆಳಗಿನ ಎಲೆ

ಗಳು ಮೊದಲಿನಂತೆ ಇದ್ದುವು. ಒಡಿಸಿದ ಪದಾರ್ಥಗಳು ಮೊದಲಿನಂತೆಯೆ ವ್ಯವಸ್ಥಿತವಾಗಿಯೂ ಸ್ವಚ್ಛವಾಗಿಯೂ ಇದ್ದವು. ಅಲ್ಪಾವಕಾಶದಲ್ಲಿ ಹಂದರವು ಮುನ್ನಿನಂತೆ ಸ್ಥಿರವಾಗಿ ನಿಂತಿತು. ಪ್ರೇಕ್ಷಕರಲ್ಲಿಯ ಕೆಲವರು ಪ್ರಾರ್ಥನೆ ಮಾಡುತ್ತಿರುವವನ ಕಡೆಗೆ ಧಾವಿಸಿದರು. ಕೆಲವರು ತಮ್ಮ ಮೊದಲಿನ ಸ್ಥಳವನ್ನು ಆಕ್ರಮಿಸಿಕೊಂಡು ಕುಳಿತರು. ಹೊರಗಿನವರು ಮತ್ತೆ ಒಳಗೆ ಬರಹತ್ತಿದರು.

ಪ್ರಾರ್ಥನೆಯು ನಿಂತಿತು. ನಡೆದ ಪ್ರಸಂಗವನ್ನು ಕಣ್ಮುಟ್ಟ ನೋಡಿದ ಜನರ ವಿಸ್ಮಯಕ್ಕೆ ಪಾರಾವಾರವಿರಲಿಲ್ಲ ತಾವು ನೋಡಿದ್ದ ಸಂಗತಿಯು ನಿಜವಿರದೆ ಸ್ವಪ್ನವಾಗಿರಬಹುದೇನು? ಎಂದು ಕೆಲವರಿಗೆ ಭ್ರಾಂತಿಯುಂಟಾಯಿತು. ಹಲವರು ಇದೆಲ್ಲವು ಪ್ರಾರ್ಥನೆ ಮಾಡಿದ ಆಗಂತುಕನ ಅದ್ಭುತ ಶಕ್ತಿಯ ಆಟವಿರಬೇಕೆಂದು ಊಹಿಸಿದರು. ಮೊದಲು ಹೆಬ್ಬಾಗಿಲ ಹತ್ತರ ನಿಂತ ವ್ಯವಸ್ಥಾಪಕನು ನಿಜ ಸಂಗತಿಯನ್ನು ತರ್ಕಿಸಿದನು. ಪ್ರಾರ್ಥನೆ ಮಾಡಿದ ಆಗಂತುಕನ ಪಾದಗಳ ಮೇಲೆ ಬಿದ್ದು:—"ಸ್ವಾಮೀ, ತಾವು ಸಾಮಾನ್ಯ ಮನುಷ್ಯರಲ್ಲ! ನಾನು ತಾವು ಭಿಕ್ಷುಕರಿರಬೇಕೆಂದು ಭಾವಿಸಿ ಅವಜ್ಞೆಯನ್ನು ತೋರಿದೆನು ನನ್ನಿಂದ ಭಯಂಕರ ಅಪರಾಧವಾಗಿದೆ. ದಯವಿಟ್ಟು ಕ್ಷಮಿಸಬೇಕು," ಎಂದು ಬೇಡಿಕೊಂಡನು. ಇಷ್ಟರಲ್ಲಿ ಹಂದರದಲ್ಲಿ "ಇವನೇ ತುಳಸೀದಾಸ-ಇವನೇ ತುಳಸೀದಾಸ" ಎಂಬ ಕೂಗಾಟವೆದ್ದಿತು.

ತುಳಸೀದಾಸನು ಆ ವ್ಯವಸ್ಥಾಪಕನನ್ನು ಎಬ್ಬಿಸಿ:—ಅಯ್ಯಾ, ಅಪರಾಧವು ನಿನ್ನದಲ್ಲ; ನನ್ನದು. ನನ್ನ ಬರುವಿಕೆಯಿಂದಲೇ ಈ ಉತ್ಪಾತವು ಎದ್ದಿತೆಂಬುದು ನಿಜವು. ಕರೆಸಿಕೊಳ್ಳದಲೇ ಬಂದು, ಈ ಉತ್ಪಾತಕ್ಕೆ ಎಡೆಮಾಡಿಕೊಟ್ಟ ನಾನು ಅಪರಾಧಿಯಲ್ಲವೆ? ಆದರೆ ಮಾಡಲೇನು? ಗುರುವಿನ ಅಪ್ಪಣೆಯು ನನಗೆ ಶಿರಸಾಮಾನ್ಯವು. ನಾನವರ ಅನುಜ್ಞೆಯನ್ನು ಎಂದೂ ಉಲ್ಲಂಘಿಸುವವನಲ್ಲ. ಅಂತೆಯೇ ನೀವು ಕರೆಕಳುಹ

ದಿದ್ದರೂ, ಈ ಸಮಯದಲ್ಲಿ ನಾನು ಇಲ್ಲಿಗೆ ಬರಬೇಕಾಯಿತು. ಏನೇ ಇರಲಿ, ಎಲ್ಲವೂ ರಘುರಾಮನ ಇಚ್ಛಾಧೀನವು. ಸೂತ್ರಧಾರನವನು. ಅವನು ಕುಣಿಸಿದಂತೆ ನಾವೆಲ್ಲರೂ ಕುಣಿಯಲೇ ಬೇಕು, ಎಂದು ಹೇಳಿದನು ಕೆಲಕಾಲ ಸುಮ್ಮನಿದ್ದು ಮತ್ತೆ ಹೇಳಹತ್ತಿದನು:—ಮಹನೀಯರೇ, ಆ ಶ್ರೀ ಹರಿಯ ಆಟವನ್ನು ನೋಡಿದಿರಾ? ನಾನು ಇಂದು ಆ ಲೀಲಾಮಯನ ಅನಂತ ಲೀಲೆಗಳಲ್ಲಿಯ ಒಂದು ವಿಸ್ಮಯಕರ ಲೀಲೆಯನ್ನು ಕಣ್ಣಿಟ್ಟು ಕಂಡು ಧನ್ಯನಾದೆನು! ತುಳಸೀದಾಸನು ಅತ್ತಿತ್ತ ನೋಡಿದನು. ಜನರು ಬೀಳುತ್ತೇಳುತ್ತ ತನ್ನ ಹತ್ತಿರ ಬರುವುದರಲ್ಲಿದ್ದರು. ಗೊಂದಲವು ಹೆಚ್ಚುತ್ತ ನಡೆದಿತ್ತು. ತುಳಸೀದಾಸನು ವ್ಯವಸ್ಥಾಪಕ ಮಂಡಳಿಯನ್ನುದ್ದೇಶಿಸಿ ಹೇಳಹತ್ತಿದನು:-ಇನ್ನು ನಿಮಗೆ ಯಾವ ತೊಂದರೆಯೂ ಉಂಟಾಗದು. ಭೋಜನ ಸಮಾರಂಭವನ್ನು ವ್ಯವಸ್ಥಿತ ರೀತಿಯಿಂದ ಸಾಗಿಸಿರಿ.

ವ್ಯವಸ್ಥಾಪಕರು ಎಲ್ಲರನ್ನೂ ಮತ್ತೆ ಎಲೆಗಳ ಮೇಲೆ ಕುಳ್ಳಿರಿಸಿದರು. ಬಡಿಸುವ ಕೆಲಸವು ಭರದಿಂದ ನಡೆಯಿತು ಹಸಿದಿದ್ದ ಬ್ರಹ್ಮವೃಂದವು ಭೋಜನಕ್ಕೆ ಆರಂಭಮಾಡಿತು. ತುಳಸೀದಾಸನು ನಡೆದಿದ್ದ ಭೋಜನ ಸಮಾರಂಭವನ್ನು ನೋಡಿ, ಪರಮಸಂತೋಷಪಟ್ಟನು.

ತುಳಸೀದಾಸನೂ, ಅವನ ಸಂಗಡಿಗರೂ, ವ್ಯವಸ್ಥಾಪಕರೇ ಮೊದಲಾದವರೂ ಎರಡನೆಯ ಪಂಕ್ತಿಯಲ್ಲಿ ಭೋಜನ ಮಾಡಿದರು. ತುಳಸೀದಾಸನು ಭೋಜನೋತ್ತರ ವಿಶ್ರಮಿಸಿರುವಾಗ ಹಲವರು ಬಂದು ದರ್ಶನತಕೊಂಡರು. ಸಾಷ್ಟಾಂಗವೆರಗಿ ತಮ್ಮ ಭಕ್ತಿಯನ್ನು ತೋರ್ಪಡಿಸಿದರು. ತುಳಸೀದಾಸನು ಹಿತವಚನಗಳಿಂದ ಇವರೆಲ್ಲರನ್ನೂ ಆನಂದಗೊಳಿಸಿದನು. ವೇದಾಂತವಾಗೀಶನು ಮಾತ್ರ ತುಳಸೀದಾಸನನ್ನು ಕಾಣಲಿಕ್ಕೆ ಬರಲಿಲ್ಲ.

ಸಾಯಂಕಾಲರಲ್ಲಿ ವಿಸ್ತೃತವಾದ ಪ್ರಾಂಗಣದಲ್ಲಿ ಧರ್ಮಸಭೆಯು

ಕೂಡಿತು. ಆರಾಧನೆಗೆ ಆಗಮಿಸಿದ್ದ ಬ್ರಾಹ್ಮಣರಲ್ಲಿಯು ಪ್ರಮುಖರೆಲ್ಲರೂ ನೆರೆದಿದ್ದರು. ಮೊದಲು ಅಧ್ಯಕ್ಷನನ್ನಾರಿಸುವ ವಿಷಯದಲ್ಲಿ ಮತಭೇದ ವುಂಟಾಯಿತು. ಬಹುಜನರು ಈ ಸಭೆಯ ಅಧ್ಯಕ್ಷಸ್ಥಾನಕ್ಕೆ ತುಳಸೀ ದಾಸನೇ ಯೋಗ್ಯತಮನೆಂದು ಪ್ರತಿಪಾದಿಸಿದರು; ಇವರಿಗೆ ವೇದಾಂತ ವಾಗೀಶನೂ ಇವನ ಪಕ್ಷದ ಜನರೂ ವಿರೋಧಿಸಿದರು. ಕೊನೆಯಲ್ಲಿ ವೇದಾಂತವಾಗೀಶನ ಪ್ರಬಲವಿರೋಧವನ್ನು ಲೆಕ್ಕಿಸದೆ, ತುಳಸೀದಾಸನೇ ಅಧ್ಯಕ್ಷನಾಗಬೇಕೆಂದು ಬಹುಮತದಿಂದ ನಿರ್ಣಯಿಸಿದರು; ಹಾಗು ತುಳಸೀದಾಸನು ಒಲ್ಲೆನೆಂದು ಹೇಳಿದರೂ ಕೇಳದೆ, ಅವನನ್ನು ಕರೆತಂದು ಮಂಡಿಸಿದ್ದ ಉಚ್ಚಾಸನದ ಮೇಲೆ ಕುಳ್ಳಿರಿಸಿದರು.

ಒಬ್ಬ ಪಂಡಿತನು ಎದ್ದುನಿಂತು ನಾಭಾಜಿಯ ಚರಿತ್ರವನ್ನು ವಿವರಿಸಿದನು. ಕೊನೆಯಲ್ಲಿ ಶ್ರೀ ಹರಿಯು ಮೃತವ್ಯಕ್ತಿಯ ಆತ್ಮಕ್ಕೆ ಶಾಂತಿಯನ್ನೀಯಲೆಂದು ಬೇಡಿಕೊಂಡು ತನ್ನ ಭಾಷಣವನ್ನು ಮುಗಿಸಿದನು. ಬಳಿಕ ಎರಡನೆಯ ಪಂಡಿತನು ವ್ಯಾಖ್ಯಾನವನ್ನಾರಂಭಿಸಿ, ನಾಭಾಜಿಯ ಚರಿತ್ರದಿಂದ ಸಾಮಾನ್ಯರಾದ ನಾವು ಗ್ರಹಿಸತಕ್ಕದ್ದೇನು? ಎಂಬದನ್ನು ವಿಸ್ತಾರವಾಗಿ ಹೇಳಿದನು; ಹಾಗು ನಾಭಾಜಿಯ ಆತ್ಮಕ್ಕೆ ಶಾಂತಿಯನ್ನೀಯಲೆಂದು ಭಗವಂತನನ್ನು ಬೇಡಿಕೊಂಡು ತನ್ನ ಮಾತನ್ನು ಕೊನೆಗಾಣಿಸಿದನು. ತರುವಾಯ, ನಾಭಾಜಿಯ ಉತ್ತರಾಧಿಕಾರಿಯೂ, ಈಗಳಿನ ವೈಷ್ಣವ ಸಮಾಜದ ಮುಂದಾಳುವೂ ಯಾರಾಗಿರಬೇಕೆಂಬ ವಿಷಯದ ಚರ್ಚೆ ನಡೆಯಿತು. ಹಲವರು ಈ ಬಹುಮಾನದ ಸ್ಥಳಕ್ಕೆ ತುಳಸೀದಾಸನೇ ಯೋಗ್ಯನೆಂದು ಸೂಚಿಸಿದರು. ತುಳಸೀದಾಸನು ನಾಭಾಜಿಯವರ ಪ್ರತಿನಿಧಿಯಾಗುವ ಯೋಗ್ಯತೆಯು ತನ್ನದಲ್ಲವೆಂದೂ, ಬೇರೊಬ್ಬ ಮಹನೀಯನನ್ನು ಆರಿಸಬೇಕೆಂದೂ ಹೇಳಿದನು; ಆದರೆ ಬಹು ಜನರು ತುಳಸೀದಾಸನನ್ನೇ ಈ ಬಹುಮಾನದ ಪದಕ್ಕೆ ನಿಯಮಿಸಬೇಕೆಂದು ಹಟ ಹಿಡಿದರು. ವಿರೋಧಕ ಪಂಗಡವೊಂದು ಇದ್ದೇ ಇತ್ತು. ಈ ಪಂಗ

ದದ ಮುಖ್ಯಸ್ಥನಾದ ವಾಗೀಶನು:-ಯಾವನು ಧರ್ಮ ವಿರುದ್ಧ ಕಾರ್ಯ ಮಾಡಿ, ಹಿಂದೂ ಧರ್ಮದ ಉಪಹಾಸ ನಡೆಸಿರುವನೊ, ಅವನನ್ನು ನಾವು ನಮ್ಮ ಸಮಾಜದ ಮುಂದಾಳುವೆಂದು ನಿರ್ಣಯಿಸಬೇಕೆ? ಇಂತಹ ನಾಚುಗೆಯ ಸಂಗತಿಯು ಬೇರೊಂದಿದೆಯೆ? ಎಂದು ಆವೇಶದಿಂದ ಭಾಷಣಮಾಡಹತ್ತಿದನು. ಸಭಿಕರು ಇವನನ್ನು ಮುಂದೆ ಮಾತಾಡಗೊಡಲಿಲ್ಲ. ಭಗವದ್ಭಕ್ತರ ನಿಂದೆಯನ್ನು ಕೇಳುವುದು ಮಹಾ ಪಾಪವೆಂದು ಕೆಲವರು ಕಿವಿಯ ಮೇಲೆ ಕೈಯಿಟ್ಟುಕೊಂಡರು. ಬೇರೆ ಕೆಲವರು ವಾಗೀಶನನ್ನು ಕೈಹಿಡಿದೆಳೆದು ಅವನ ಸ್ಥಳದಲ್ಲಿ ಕುಳ್ಳಿರಿಸಿದರು. ವಾಗೀಶನು ತನ್ನ ಆಟವು ನಡೆಯದೆಂದು ಮನಗಂಡು ಸುಮ್ಮನಾದನು.

ಈ ಸಭೆಯಲ್ಲಿ ಈಗಳಿನ ವೈಷ್ಣವ ಸಮಾಜದ ಮುಖಪಾತ್ರನು ತುಳಸೀದಾಸನೆಂದು ಬಹು ಮತದಿಂದ ನಿರ್ಣಯವಾಯಿತು. ವ್ಯವಸ್ಥಾಪಕ ಮಂಡಳಿಯ ಮುಖ್ಯಸ್ಥನು ವಸ್ತ್ರಾಲಂಕಾರಗಳನ್ನು ತಂದು ತುಳಸೀದಾಸನಿಗೆ ಸಮರ್ಪಿಸಿ, ನಮಸ್ಕಾರ ಮಾಡಿದನು. ಸಭೆಯಲ್ಲಿ ಮಹಾತ್ಮಾ ತುಳಸೀದಾಸ ಮಹಾರಾಜಕೀಜಯ! ಎಂಬ ಜಯಘೋಷವೆದ್ದಿತು.

ಈ ಸಮಯದಲ್ಲಿ ಜಗನ್ನಾಥದಾಸನು ಅಲ್ಲಿ ಮೈದೋರಿದನು. ಸಭೆಯು ಶಾಂತವಾದ ಬಳಿಕ:-"ಬ್ರಾಹ್ಮಣೋತ್ತಮರೆ, ಯೋಗ್ಯ ಮನುಷ್ಯನ ಕೊರಳಲ್ಲಿ ಮಾಲೆಯನ್ನು ಹಾಕಿರುವಿರಿ. ಸದ್ವಸ್ತುವನ್ನು ಹುಡುಕುವ ನಿಮ್ಮ ಜಾಣ್ಮೆಯನ್ನು ನೋಡಿ ನನಗೆ ಪರಮಾನಂದವಾಯಿತು," ಎಂದು ಹೇಳಿದನು. ತುಳಸೀದಾಸನು ಎದುರಿನಲ್ಲಿ ನಿಂತಿದ್ದ ಗುರುವನ್ನು ನೋಡಿ ಧಾವಿಸಿ ಬಂದನು. ಗುರುವಿನ ಚರಣಗಳಿಗೆರಗಿ, "ಮಹಾರಾಜ, ತಮ್ಮ ಅಪ್ಪಣೆಯಂತೆ ನಾನು ಇಂದು ಈ ಸ್ಥಳದಲ್ಲಿರುವೆನು." ಎಂದು ಹೇಳಿದನು.

ವತ್ಸ, ಒಳಿತು ಮಾಡಿದೆ. ಕರೆಯಲಿಲ್ಲೆಂದು ನೀನು ಇಲ್ಲಿಗೆ ಬರದಿದ್ದರೆ, ನಿನಗೆ ಇಂದಿನ ಈ ಮನ್ನಣೆಯು ದೊರೆಯುತ್ತಿರಲಿಲ್ಲ ನೀನು

ಇಂತಹ ಮಾನವನ್ನು ಬಯಸುವವನಲ್ಲವೆಂಬುದನ್ನು ನಾನು ಬಲ್ಲೆನಾದರೂ, ತ್ಯಾಗಕ್ಕೆ ಪುರಸ್ಕಾರವಿರಲೇ ಬೇಕೆಂಬುದು ನನ್ನ ಅಪೇಕ್ಷೆಯು. ಜಗನ್ನಾಥದಾಸನು ಅಂದನು.

ಗುರು ಮಹಾರಾಜ, ನಾನಂಥ ತ್ಯಾಗಿಯಲ್ಲ! ಈ ಬಹುಮಾನವು ನನಗೆ ಅತ್ಯಧಿಕವಾದುದು! ತಮ್ಮ ಅಮೌಲ್ಯ ಚರಣದರ್ಶನ ಹಾಗು ಈ ಬ್ರಹ್ಮವೃಂದದ ಪಾದಧೂಳಿ ಇಷ್ಟಾದರೆ ನನಗೆ ಸಾಕಿತ್ತು! ಈ ಭೂಸುರವೃಂದವು ಹೇರಿದ ಗುರುತರಭಾರವನ್ನು ವಹಿಸುವ ಯೋಗ್ಯತೆಯು ನನ್ನದಲ್ಲ! ತುಳಸಿದಾಸನು ಹೇಳಿದನು.

ಜಗನ್ನಾಥದಾಸನು ನಾಭಾಜಿಯ ಪರಮ ಸ್ನೇಹಿತನು. ಇದರಿಂದ ನಾಭಾಜಿಯ ಅನುಯಾಯಿಗಳು ಜಗನ್ನಾಥದಾಸನನ್ನು ವಂದ್ಯನೆಂದು ತಿಳಿದಿದ್ದರು. ಮೇಲಾಗಿ ಈ ಸಭೆಯಲ್ಲಿ ಜಗನ್ನಾಥದಾಸನ ಶಿಷ್ಯರೂ ಹಲವರಿದ್ದರು. ಇವರು ಬಹು ದಿನಗಳಿಂದ ತಮ್ಮ ಗುರುವಿನ ದರ್ಶನ ಹೊಂದಿರಲಿಲ್ಲ. ಈ ಭಕ್ತ ಮಂಡಳಿಗೆ ತಮ್ಮ ಗುರುವು ಹೀಗೆ ಅಕಸ್ಮಾತ್ತಾಗಿ ದರ್ಶನವಿತ್ತುದನ್ನು ನೋಡಿ ಪರಮಾನಂದವಾಯಿತು. ಇವರು ಸಾಷ್ಟಾಂಗವೆರಗುವುದಕ್ಕೆ ಮುಂದುವರಿಯ ಹತ್ತಿದರು. ಮತ್ತೆ ಸಭೆಯಲ್ಲಿ ಗದ್ದಲವೆದ್ದಿತು.

ಜಗನ್ನಾಥದಾಸನು ಜನರಿಗೆ ಶಾಂತರಾಗಲಿಕ್ಕೆ ಹೇಳಿದನು. ಸಭೆಯು ಮತ್ತೆ ಸ್ತಬ್ಧವಾಯಿತು. ಜಗನ್ನಾಥದಾಸನು ವೇದಾಂತವಾಗೀಶನನ್ನು ಕರೆದು:—"ಸ್ವಾಮೀ, ತುಳಸೀದಾಸನ ಈ ಬಹುಮಾನ ಪ್ರಾಪ್ತಿಗೆ ನಿಮ್ಮ ಅಡ್ಡಿಯಿರುವುದಷ್ಟೆ? ನಾನು ನಿಮ್ಮ ಸಮಾಧಾನಬಡಿಸಬೇಕಾಗಿದೆ. ಯಾಕಂದರೆ ನನ್ನ ಶಿಷ್ಯನು ಬಹುಮತದಿಂದ ಈ ಪದವಿಯನ್ನು ಪಡೆಯದೆ, ಸರ್ವಾನುಮತದಿಂದ ಮಹಾತ್ಮನೆಂದು ನಿರ್ಣಯಿಸಲ್ಪಡಬೇಕೆಂದು ನಾನು ಇಚ್ಛಿಸುತ್ತೇನೆ." ಎಂದು ಹೇಳಿದನು.

ವೇದಾಂತವಾಗೀಶನು ಮತ್ತೆ ತನ್ನ ಪುರಾಣವನ್ನಾರಂಭಿಸಿದನು:- ತುಳಸೀದಾಸನು ಶಾಸ್ತ್ರಕ್ಕೆ ವಿರೋಧವಾಗಿ ಬ್ರಹ್ಮಹತ್ಯಾಕಾರಿಯನ್ನು ಶುದ್ಧಗೊಳಿಸಿಕೊಂಡಿದ್ದಾನೆ.

ಆ ಪಾತಕಿಯು ಯಾರು? ಜಗನ್ನಾಥದಾಸನು ಕೇಳಿದನು.

ಇದೊ, ಇಲ್ಲಿರುವನು. ವಾಗೀಶನು ಜಾನಕೀವಲ್ಲಭನನ್ನು ತೋರಿಸಿದನು.

ನೀನು ಬ್ರಾಹ್ಮಣನನ್ನು ಕೊಂದದ್ದು ನಿಜವೆ? ಜಗನ್ನಾಥದಾಸನು ಕೇಳಿದನು

ಅಹುದು. ಜಾನಕೀವಲ್ಲಭನು ನುಡಿದನು!

ಪ್ರಾಯಶ್ಚಿತ್ತ ತಕ್ಕೊಂಡಿರುವೆಯಾ? ಜಗನ್ನಾಥದಾಸನು ಕೇಳಿದನು.

ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವಿಲ್ಲ! ವಾಗೀಶನು ನುಡಿದನು.

ಮಹಾರಾಜ, ನಿಜವಾಗಿ ಇವನಿಂದ ಬ್ರಹ್ಮಹತ್ಯೆ ಘಟಿಸಿದ್ದರೂ, ಆ ಮೃತಮನುಷ್ಯನನ್ನು ನಾನು ಬದುಕಿಸಿರುವೆನು. ಇದರಿಂದ ಇವನು ಬ್ರಹ್ಮಘಾತಕಿಯಲ್ಲ, ಬ್ರಾಹ್ಮಣನನ್ನು ಕೊಲೆಮಾಡಲಿಕ್ಕೆ ಪ್ರಯತ್ನಿಸಿದವನು ಎಂದು ಹೇಳಬಹುದಾಗಿದೆ. ಆದರೂ ನಾನು ಈ ಪ್ರಸಂಗದಲ್ಲಿ ಜಾನಕೀವಲ್ಲಭನು ಬ್ರಹ್ಮಹತ್ಯೆ ಮಾಡಿದವನು ಎಂದು ಭಾವಿಸಿ ಹೇಳುವೆನು. ಈಗ ಜಾನಕೀವಲ್ಲಭನು ಪರಿಶುದ್ಧನು. ಇವನಲ್ಲಿ ಲೇಶಮಾತ್ರವೂ ಪಾಪವಿಲ್ಲ. ತುಳಸೀದಾಸನು ಹೇಳಿದನು.

ಇವನು ಪ್ರಾಯಶ್ಚಿತ್ತವಿಲ್ಲದೆ ಹೇಗೆ ಶುದ್ಧನಾದನು? ಜಗನ್ನಾಥದಾಸನೆಂದನು.

ನಾನು ಇವನಿಗೆ ಮಂತ್ರೋಪದೇಶ ಮಾಡಿರುವೆನು. ಪಶ್ಚಾತ್ತಾಪದಿಂದ ದಗ್ಧವಾಗುತಲಿದ್ದ ಇವನ ಪಾಪಗಳು ಮಂತ್ರಜಪದಿಂದ ಪೂರಾ ನಾಶವಾಗಿವೆ. ತುಳಸೀದಾಸನು ಹೇಳಿದನು.

ಜನರು ನಿನ್ನ ಈ ಮಾತನ್ನು ನಂಬರು. ನಿನ್ನ ಮಾತಿನ ಸತ್ಯ

ತೆಯು ಪರೀಕ್ಷೆಯಾಗಲಿಕ್ಕೆ ಬೇಕು. ಜಾನಕೀವಲ್ಲಭ, ನೀನು ಪರೀಕ್ಷೆಗೆ ಸಿದ್ಧನಿರುವೆಯಾ? ಜಗನ್ನಾಥದಾಸನು ಕೇಳಿದನು. ಜಾನಕೀವಲ್ಲಭನು ತುಳಸೀದಾಸನ ಮೋರೆಯನ್ನು ನೋಡಹತ್ತಿದನು.

ಆಗಲಿ, ಪರೀಕ್ಷೆಯು ನಡೆಯಲಿ. ತುಳಸೀದಾಸನು ಹೇಳಿದನು.

ಸ್ವಾಮಿೂ, ತಾವು ಹೇಗೆ ಪರೀಕ್ಷೆ ಮಾಡಬೇಕೆನ್ನುವಿರಿ? ಜಗನ್ನಾಥದಾಸನು ವಾಗೀಶನನ್ನು ಕೇಳಿದನು. ವಾಗೀಶನು ಯೋಚಿಸ ಹತ್ತಿದನು.

ಸ್ವಾಮಿೂ, ಸಂಕೋಚಗೊಳ್ಳುವ ಕಾರಣವಿಲ್ಲ ಮನಸ್ಸಿನ ಸಂದೇಹವನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಹಿಂದೆಗೆಯುವದು ಸರಿಯಲ್ಲ. ಜಗನ್ನಾಥದಾಸನು ಹೇಳಿದನು.

ವಾಗೀಶನು ಆತ್ಯಕತೆಯಿಂದ ಮುಂದೆ ಬಂದು:—ಕಾಶಿಯ ವಿಶ್ವೇಶನ ಮಂದಿರದಲ್ಲಿ ನಂದಿಯ ಮೂರ್ತಿಯಿದೆಯಷ್ಟೆ? ಆ ಮೂರ್ತಿಯು ಜಾನಕೀವಲ್ಲಭನಿಂದ ಆಹಾರವನ್ನು ಗ್ರಹಿಸಬೇಕು. ಅಂದರೆ ನಾನು ಜಾನಕೀವಲ್ಲಭನು ಪಾಪರಹಿತನೆಂದು ಒಪ್ಪುವೆನು, ಎಂದು ಹೇಳಿದನು.

ಎಲ್ಲರೂ ಸ್ತಂಭಿತರಾಗಿ ನಿಂತಿದ್ದರು. ಇವರಲ್ಲೊಬ್ಬನು:-"ಕಲ್ಲಿನ ಮೂರ್ತಿಯು ಸಜೀವವಾಗಿ ಆಹಾರವನ್ನು ತಿನ್ನುವದು ಅಸಾಧ್ಯವು!" ಎಂದು ನುಡಿದನು.

ಹೀಗಿದ್ದರೆ, ಬ್ರಹ್ಮಘಾತುಕನು ಪವಿತ್ರನಾಗುವುದೂ ಅಸಂಭವವು. ವಾಗೀಶನಂದನು.

ಜಾನಕೀವಲ್ಲಭ, ನೀನು ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬಲ್ಲೆಯಾ? ಜಗನ್ನಾಥದಾಸನು ಕೇಳಿದನು.

ಮಹಾರಾಜ, ನನಗೇನೂ ಗೊತ್ತಿಲ್ಲ. ಗುರುಗಳ ಅಪ್ಪಣೆಯಂತೆ ನಡೆವುದು ನನ್ನ ಕೆಲಸ. ಗುರುಗಳ ಇಷ್ಟವಿದ್ದರೆ ಪರೀಕ್ಷೆಯು ನಡೆಯಬಹುದು. ಜಾನಕೀವಲ್ಲಭನು ಹೇಳಿದನು.

ವತ್ಸ, ನೀನೇನೆನ್ನುವೆ? ಜಗನ್ನಾಥದಾಸನು ಕೇಳಲು.

ತಮ್ಮ ಅಪ್ಪಣೆಯೇ ನನ್ನ ಅಪೇಕ್ಷೆಯು. ತುಳಸೀದಾಸನು ಹೇಳಿದನು.

ಆಗಲಿ, ವಿಶ್ವೇಶ್ವರನ ಮಂದಿರದಲ್ಲಿ ಬರುವ ಸೋಮವಾರ ಚತುರ್ದಶಿಯ ತಿಥಿಯಲ್ಲಿ ಪರೀಕ್ಷೆಯು ನಡೆಯಲಿ. ನೋಡಬಯಸುವವರು ಅಂದಿನ ದಿನ ಆ ಸ್ಥಳಕ್ಕೆ ಬರಬೇಕು.

ಮಹಾತ್ಮಾ ಜಗನ್ನಾಥದಾಸ ಮಹಾರಾಜಕೀಜಯ! ಮಹಾತ್ಮಾ ತುಳಸೀದಾಸ ಮಹಾರಾಜಕೀ ಜಯ! ಎಂದು ಜನರು ಉಚ್ಚಸ್ವರದಿಂದ ಜಯಘೋಷ ಮಾಡಿದರು. ಅಂದಿನ ಸಭೆಯ ಕೆಲಸವು ತೀರಿತು.

---

## ೧೯ ಪರೀಕ್ಷೆ.

ತುಳಸೀದಾಸನನ್ನು ಅಪಮಾನಗೊಳಿಸಬೇಕೆಂದು ಬಹಳ ಹುರುಪಿನಿಂದ ಪುಷ್ಕರಕ್ಕೆ ಹೋಗಿದ್ದ ವೇದಾಂತ ವಾಗೀಶನಿಗೆ ಅಲ್ಲಿ ತುಂಬ ಅಪಮಾನವಾಯಿತು. ಆರಾಧನೆಯ ಸಮಾರಂಭದಲ್ಲಿ ಮೋರೆಯೆತ್ತಿ ಅಡ್ಡಾಡುವುದಕ್ಕೂ ಮಾತಾಡುವುದಕ್ಕೂ ಇವನಿಗೆ ಮಾರ್ಗವಿಲ್ಲದಾಯಿತು. ಕಾರಣ ಇವನು ವ್ಯಥೆಗೊಂಡವನಾಗಿ ಮರುದಿನ ಬೆಳಗಾಗುವಷ್ಟರಲ್ಲಿಯೆ ಸದ್ದಿಲ್ಲದೆ ಕಾಶಿಗೆ ಹೊರಟನು. ಪುಷ್ಕರದಲ್ಲಿ ಉತ್ಸವದ ಎರಡನೆಯ ದಿವಸದ ಕಾರ್ಯಕ್ರಮಗಳಿಗೆ ಇವನು ಹಾಜರಿರಲಿಲ್ಲ.

ವೇದಾಂತವಾಗೀಶನು ತುಳಸೀದಾಸನನ್ನು ಕಟ್ಟಲಿಕ್ಕೆ ಮತ್ತೊಂದ ಹಗ್ಗವನ್ನು ಹೊಸೆದಿದ್ದನು; ಆದರೆ ಈ ಹಗ್ಗದ ಅಳತೆಯಲ್ಲಿ ತುಳಸಿದಾಸನು ಸಿಕ್ಕೇ ಸಿಗುವನೆಂಬ ಆತ್ಮವಿಶ್ವಾಸವು ಇವನಿಗಿರಲಿಲ್ಲ. ಇವನ

ತಾನು ಹರಡಿದ್ದ ಬಲೆಯಲ್ಲಿ ತಾನೇ ಬೀಳಬೇಕಾಗುವುದೋ ಏನೋ? ಎಂದು ಆಗಾಗ್ಗೆ ಸಂದೇಹಕ್ಕೊಳಗಾಗುತ್ತಿದ್ದನು. ಯಾವನು ಮೃತಮನುಷ್ಯನಿಗೆ ಜೀವದಾನ ಮಾಡಿದನೋ, ಯಾವನು ಸರಳವಾಣಿಯಿಂದ ಭಕ್ತಿರಸವು ಹೊರಸೂಸುವಂತೆ ರಾಮಾಯಣವನ್ನು ರಚಿಸಿ ವಾಲ್ಮೀಕಿಯ ಅವತಾರಿತನೆಂದೆನಿಸಿಕೊಳ್ಳುತ್ತಿರುವನೋ, ಯಾವನು ಬಾದಶಹನ ಬಹುಮಾನಕ್ಕೆ ಪಾತ್ರನಾದನೋ, ಯಾವನು ಮಹಾ ಪಾತಕಿಯನ್ನು ಭಕ್ತಶ್ರೇಷ್ಠನಾಗುವಂತೆ ಮಾಡಿದನೋ, ಯಾವನು ಬಿಗ್ಗ ಹಂದರವನ್ನು ಕೇವಲ ಭಜನೆಯ ಬಲದಿಂದೆದ್ದು ನಿಲ್ಲಿಸಿ ಮಹೀಸುರರಿಂದ ಮಹಾತ್ಮನೆಂಬ ಮನ್ನಣೆಯ ನಾಮವನ್ನು ಪಡೆದನೋ ಆ ತುಳಸೀದಾಸನಿಗೆ ಎತ್ತಿನ ಮೂರ್ತಿಯಿಂದ ಆಹಾರವನ್ನು ತಿನ್ನಿಸುವದು ಅಸಾಧ್ಯವಾದೀತೆ? ಸಾಧ್ಯವಾದ ಪಕ್ಷದಲ್ಲಿ ತನ್ನ ಗತಿಯೇನು? ಪುಷ್ಕರದಲ್ಲಿ ತುಳಸೀದಾಸನ ಕೊಂಡ ನಿಂದೆಯ ಮಾಡುತ್ತಲೆ ದ್ವಿಜವೃಂದವು ನನ್ನನ್ನು ಬೆದರಿಸಿ ಬಿಟ್ಟಿತು. ಆ ಪ್ರಸಂಗದಿಂದ ನಾನು ಸುಸೂತ್ರ ಪಾರಾಗಬೇಕಾದರೆ, ಸಾಕುಬೇಕಾಯಿತು! ಒಳ್ಳೆ ಕಠಿಣ ಪ್ರಸಂಗ! ಈ ಬಿಕ್ಕಟ್ಟಿನ ಪ್ರಸಂಗದಲ್ಲಿ ನಾನು ನನ್ನ ಗೌರವವನ್ನು ಹೇಗೆ ಕಾಯ್ದುಕೊಳ್ಳಲಿ?........ವಾಗೀಶನು ಬಹಳವಾಗಿ ಎಣಿಕೆ ಹಾಕಿದನು. ವಿಚಾರ ಮಾಡಿ ಮಾಡಿ ಬೇಜಾರಗೊಂಡನು. ಆದರೂ ಉಪಾಯವು ಹೊಳೆಯಲಿಲ್ಲ.

* * * * *

ನಾಲ್ಕಾರು ದಿನಗಳು ಕ್ರಮಿಸಿವೆ. ಪುಷ್ಕರಕ್ಕೆ ಹೋದ ಜನರೆಲ್ಲರು ತಿರುಗಿ ಕಾಶಿಗೆ ಬಂದಿದ್ದಾರೆ. ಕಾಶಿಯಲ್ಲಿ ಎಲ್ಲಿ ನೋಡಿದರೂ ಪುಷ್ಕರದ ಸುದ್ದಿ. ತುಳಸೀದಾಸನ ಗುಣವರ್ಣನೆ, ವೇದಾಂತವಾಗೀಶನ ನಿಂದೆ, ಹಟಮಾರಿತನದ ಚರ್ಚೆ. ಕಾಶಿಯ ನಿವಾಸಿಗಳೆಲ್ಲರು ತುಳಸೀದಾಸನ ಪರೀಕ್ಷೆಯ ಕಾಲವನ್ನು ಕುತೂಹಲತೆಯಿಂದ ಕಾಯ್ದುಕೊಂಡಿದ್ದರು.

ಈ ದಿನ ನಿಯಮಿತ ವೇಳೆಯಲ್ಲಿ ನಿಯಮಿತ ಸ್ಥಳದಲ್ಲಿ ಬ್ರಾಹ್ಮಣ ಸಮಾಜ ನಿಯಾಮಕ ಸಭೆಯ ಅಧಿವೇಶನವು ನೆರೆಯಿತು. ಸಭಿಕರು ಐಸ್ವರೂ ಬಂದಿದ್ದರು. ವೇದಾಂತವಾಗೀಶನ ಮೋರೆಯ ಮೇಲೆ ಕಳೆ ಯಿರಲಿಲ್ಲ. ಕಳೆದ ನಾಲ್ಕಾರು ದಿನಗಳಿಂದ ಒಂದೇ ಬಗೆಯ ವಿಚಾರ ಮಾಡಿ ಮಾಡಿ ಅವನ ತಲೆ ಕೆಟ್ಟುಹೋಗಿತ್ತು. ನಡೆಯುದೇಕಿರುವ ಪರೀಕ್ಷೆಯಲ್ಲಿ ತುಳಸೀದಾಸನು ಉತ್ತೀರ್ಣನಾದರೆ, ಈ ವರೆಗಿನ ತನ್ನ ಗೌರವವು ಅಳಿದು ಹೋಗುವುದೆಂಬ ದುಶ್ಚಿಂತೆಯು ಇವನನ್ನು ಬಹಳವಾಗಿ ಬಾಧಿಸಿತ್ತು; ಹಾಗು ಹೋಗಬಹುದಿದ್ದ ಆ ಗೌರವವನ್ನು ಹೋಗದಂತೆ ಕಾಯ್ದುಕೊಳ್ಳುವ ಹಂಚಿಕೆಯು ಎಷ್ಟೇ ತಲೆಕೆಡಿಸಿಕೊಂಡಿದ್ದರೂ ಹೊಳೆದಿರಲಿಲ್ಲ. ಕಾರಣ ಇವನು ಇಂದಿನ ಸಭೆಯ ಅಧಿವೇಶನದಲ್ಲಿ ಸಂಗಡಿಗರೊಡನೆ ಆಲೋಚಿಸಿ ಯಾವುದೊಂದು ಉಪಾಯವನ್ನು ನಿರ್ಧರಿಸಬೇಕೆಂದು ಎಣಿಕೆ ಹಾಕಿದ್ದನು.

ಸ್ವಾಮೀ, ವೇದಾಂತವಾಗೀಶರೆ, ನಿಮ್ಮ ಮೋರೆಯು ಬಾಡಿದಂತಿದೆ. ತುಳಸೀದಾಸನ ಪರೀಕ್ಷೆಯು ಸಮೀಪಿಸಿದಂತೆ ನಿಮ್ಮ ಚಿಂತೆಯು ಹೆಚ್ಚುತ್ತಿರುವಂತೆ ತೋರುತ್ತಿದೆ; ಆದರೆ ಈ ವಿಷಯದಲ್ಲಿ ನೀವು ಚಿಂತೆ ಮಾಡುವ ಕಾರಣವಿಲ್ಲ ಯಾಕೆಂದರೆ, ನಿಮ್ಮ ಸೂಚನೆಯು ಸಾಮಾನ್ಯವಾದುದಲ್ಲ! ಅಂಥಿಂಥ ಮನುಷ್ಯನು ಆ ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ಸಂಭವವಿಲ್ಲ! ಒಬ್ಬ ಸಭಿಕನು ನುಡಿದನು.

ನೀವೆನ್ನುವುದು ನಿಜ. ತುಳಸೀದಾಸನು ಅಂಥಿಂಥ ಮನುಷ್ಯನಲ್ಲ! ಅಂತೆಯೇ ಅವನು ಗೆದೆಯುವನೆಂದು ನಾನು ಅನ್ನುವೆನು. ತರ್ಕಾಲಂಕಾರನು ಹೇಳಿದನು.

ಅವನು ಅಸಾಮಾನ್ಯ ಮನುಷ್ಯನೆಂಬುದು ಯಾತರ ಮೇಲಿಂದ? ಮತ್ತೊಬ್ಬನು ಕೇಳಿದನು.

ಈ ವರೆಗೆ ಅವನು ಮಾಡಿದ ಮಹತ್ಕಾರ್ಯಗಳು ಸಾಮಾನ್ಯವಾ

ದವುಗಳೆ? ಅಂಥ ಕಾರ್ಯಗಳನ್ನು ಮಾಡಲಿಕ್ಕೆ ನಮ್ಮ-ನಿಮ್ಮಂಥವರಿಗೆ ಸಾಧ್ಯವೆ? ನಾವು ಅವನಿಗೆ ಅಲೌಕಿಕ ಪುರುಷನೆಂದು ಪ್ರಶಂಸಾಪತ್ರವನ್ನೇಕೆ ಕೊಡಬಾರದು? ಆ ಅಸಾಮಾನ್ಯ ಮನುಷ್ಯನೊಡನೆ ಪ್ರತಿಭಟಿಸಿ ಪ್ರಯೋಜನವಿಲ್ಲ! ತುಳಸೀದಾಸನ ಮಹತಿಯನ್ನು ವ್ಯಕ್ತಗೊಳಿಸುವ ಹೊಸದೊಂದು ಸಂಗತಿಯನ್ನು ನಾನು ನೋಡಿ ಬಂದಿದ್ದೇನೆ. ನಿಮ್ಮ ಇಷ್ಟವಿದ್ದರೆ, ನಾನು ಹೇಳಲಿಕ್ಕೆ ಸಿದ್ಧನಿದ್ದೇನೆ. ತರ್ಕಾಲಂಕಾರನು ನುಡಿದು ಸುಮ್ಮನಾದನು.

ಹೊಸ ಸಂಗತಿಯೇ? ಅದೇನು, ಹೇಳಿರಿ ನೋಡೋಣ! ಒಬ್ಬನು ಕೇಳಿದನು.

ನಾನು ನಿನ್ನೆ ಸಹಜವಾಗಿ ತುಳಸೀದಾಸನಿಂದ ನಿರ್ಮಿಸಲ್ಪಟ್ಟಿರುವ ಸೀತಾರಾಮನ ಗುಡಿಗೆ ಹೋಗಿದ್ದೆನು. ಅಲ್ಲಿ ಈ ಸಂಗತಿಯನ್ನು ಕೇಳಿ ತಿಳಿದೆನು. ಒಂದು ಕೆಲಸವನ್ನು ಪ್ರತ್ಯಕ್ಷ ಕಂಡು ಪರಮಾನಂದಪಟ್ಟೆನು. ತರ್ಕಾಲಂಕಾರನು ಹೇಳಿದನು.

ಭೂಮಿಕೆಯನ್ನು ಸಾಕು ಮಾಡಿರಿ! ಬೇಗನೆ ಮುಖ್ಯ ಸಂಗತಿಯನ್ನು ಹೇಳಿ ಬಿಡಿರಿ! ವಾಗೀಶನೆಂದನು.

ಸೀತಾರಾಮನ ಗುಡಿಯಲ್ಲಿ ಉಪಯೋಗಿಸತಕ್ಕ ಪಾತ್ರೆಗಳೆಲ್ಲ ಬೆಳ್ಳಿ-ಬಂಗಾರದವು. ಈ ಎಲ್ಲ ಪಾತ್ರೆಗಳ ಅಜಮಾಸು ತೂಕವು ಎಷ್ಟೆಂದರೂ ನಾಲ್ಕಾರು ಮಣಗಳಾಗಬಹುದು. ಒಬ್ಬ ರಾಜಗಳ್ಳನು ಈ ಪಾತ್ರೆಗಳನ್ನು ನೋಡಿದನು. ಅಪಹರಿಸಬೇಕೆಂದು ಆಲೋಚನೆ ಮಾಡಿದನು. ಸಾಧುವಿನ ವೇಷಹಾಕಿಕೊಂಡು ಗುಡಿಯಲ್ಲಿರಹತ್ತಿದನು. ಕಳ್ಳನು ಸಾಧುವೇಷದಿಂದ ಗುಡಿಯಲ್ಲಿರುವನೆಂಬ ವಿಚಾರವು ಮೇಲ್ವಿಚಾರಕರಲ್ಲಿ ಯಾರಿಗೂ ಹೊಳೆಯಲಿಲ್ಲ. ಅವರು ನಿರ್ಧಾಸ್ತರಾಗಿದ್ದರು. ಕಳ್ಳನು ಒಂದು ದಿನ ಮಧ್ಯರಾತ್ರಿಯಲ್ಲಿ ತನ್ನ ಕಾರ್ಯಸಾಧನಗೆ ಸುಸಮಯವು ದೊರೆದಿರುವದನ್ನು ನೋಡಿ, ಆ ಪಾತ್ರೆಗಳನ್ನು ಎಬ್ಬಿಸ ಹೋದನು;

ಆದರೆ ಅವನಿಂದ ಆ ಪಾತ್ರೆಗಳ ಹತ್ತಿರ ಹೋಗಲಿಕ್ಕಾಗಲಿಲ್ಲ. ಶ್ರೀರಾಮನು ಅಜ್ಞಾಗಾವಲಾಗಿ ಗರ್ಭಗುಡಿಯ ದ್ವಾರದಲ್ಲಿ ನಿಂತಿರುವಂತೆ ಅವನಿಗೆ ಕಾಣಿಸಿತು. ಕಳ್ಳನು ಕಾವಲುಗಾರನಾಗಿ ನಿಂತ ಇವನು ಈಗ ಹೋದಾನು, ಇನ್ನೊಂದು ಗಳಿಗೆಯ ಮೇಲೆ ಹೋದಾನು, ಎಂದು ದಾರಿಯ ಕಾಯುಹತ್ತಿದನು; ಆದರೆ ಕಳ್ಳನು ನೋಡಿದಾಗೆಲ್ಲ ಆ ಕಾವಲುಗಾರನು ಜಾಗೃತನಾಗಿರುವದನ್ನು ಕಂಡನು. ಬೆಳ್ಳಗೆ ಬೆಳಗಾಗುತ್ತಲೆ ಕಾವಲುಗಾರನು ಅದೃಶ್ಯನಾದನು. ಕಳ್ಳನಿಗೆ ತನ್ನ ಕಾರ್ಯಕ ಸಾಧಿಸಲಿಕ್ಕೆ ಅನುವು ದೊರೆಯಲಿಲ್ಲವೆಂಬುದನ್ನು ಬೇರೆಯಾಗಿ ಹೇಳಲಿಕ್ಕೆ ಬೇಡ. ತರ್ಕಾಲಂಕಾರನು ಹೇಳಿದನು.

ಕಾವಲಾಗಿ ನಿಂತವನು ಶ್ರೀರಾಮನೇ ಎಂಬುದು ಕಳ್ಳನಿಗೆ ಹೇಗೆ ಗೊತ್ತಾಯಿತು? ತುಳಸೀದಾಸನು ಆ ಬೆಲೆಯುಳ್ಳ ಸಾಮಾನುಗಳ ಸಂರಕ್ಷಣೆಗಾಗಿ ಒಬ್ಬನನ್ನು ಏಕೆ ನಿಯಮಿಸಿರಬಾರದು? ವಾಗೀಶನು ಕೇಳಿದನು.

ಮೊದಲನೆಯ ದಿನ ಕಳ್ಳನಿಗೂ ಇದೇ ಸಂದೇಹವುಂಟಾಗಿತ್ತು. ಕಳ್ಳನು ಮರುದಿನ ಹಗಲಿನಲ್ಲಿ ಕಾವಲುಗಾರನ ಶೋಧ ನಡಿಸಿದನು. ಎಲ್ಲಿಯೂ ಕಾಣಲಿಲ್ಲ. ಕಳ್ಳನು ಮರುದಿನವೂ ತನ್ನ ಕಾರ್ಯಸಾಧನೆಗೆ ತೊಡಗಿದನು. ಹಿಂದಿನ ದಿನದ ಅನುಭವವನ್ನೇ ಪಡೆದನು. ಆ ಕಾವಲುಗಾರನನ್ನು ಮಾತಾಡಿಸ ಹೋದನು; ಆದರೆ ಅವನು ಮಾತಾಡಲಿಲ್ಲ. ಮೇಲಾಗಿ ಗುಡಿಯಲ್ಲಿಯ ರಾಮನ ಮೂರ್ತಿಯಂತೆ ಕಾವಲುಗಾರನ ರೂಪವಿತ್ತು. ತರ್ಕಾಲಂಕಾರನು ಹೇಳಿದನು.

ಒಳ್ಳೇ ಆಶ್ಚರ್ಯವೆ ಸರಿ! ಶ್ರೀರಾಮನು ತುಳಸೀದಾಸನ ಸ್ವತ್ತಿನ ಸಂರಕ್ಷಣೆಗಾಗಿ ಬದ್ಧಕಂಕಣನಾದುದು ಮಹದಾಶ್ಚರ್ಯ! ಈ ತರದ ಸಂಗತಿಯನ್ನು ನಾನು ಹಿಂದೆ ಎಂದೂ ಕೇಳಿದವನಲ್ಲ! ಒಬ್ಬನು ನುಡಿದನು.

ಅಶ್ರುತಪೂರ್ವವೆಂದೇ ನಾವು ಈ ಸಂಗತಿಗೆ ಮಹತ್ವ ಕೊಡಬೇಕಾಗಿದೆ! ಇನ್ನೊಬ್ಬನು ಮಾತಾಡಿದನು.

ಇರಲಿ ಮುಂದೆ ಹೇಳುತ್ತೇನೆ ಕೇಳಿರಿ. ಆ ಕಳ್ಳನು ನಾಲ್ಕಾರು ದಿನ ಇದೇ ಕ್ರಮವನ್ನಿಟ್ಟನು. ಒಂದು ದಿನವೂ ಇವನಿಂದ ಆ ಪ್ರಹರಿಯು ಕಣ್ಣು ತಪ್ಪಿಸಲಿಕ್ಕಾಗಲಿಲ್ಲ. ಕಡೆಗೆ ಕಳ್ಳನು ನಿಜಸಂಗತಿಯನ್ನು ತರ್ಕಿಸಿದನು. ಕೃತಕರ್ಮಕ್ಕಾಗಿ ಪಶ್ಚಾತ್ತಾಪಪಟ್ಟು, ನಡೆದ ಸಂಗತಿಯನ್ನು ನಿರ್ವಂಚನೆಯಿಂದ ತುಳಸೀದಾಸನಿಗೆ ನಿವೇದಿಸಿದನು. ತುಳಸೀದಾಸನು ಈ ಸಂಗತಿಯನ್ನು ಕೇಳಿ, ಕಣ್ಣೀರ ಸುರಿಸಿ:—ರಘುನಾಯಕ, ಈ ಅಜ್ಞಾನಿಯು ಲೋಭವಶನಾಗಿ ಬೆಳ್ಳಿ-ಬಂಗಾರಗಳ ಪಾತ್ರೆಗಳನ್ನಿಟ್ಟು ಕೊಂಡದ್ದಕ್ಕಾಗಿ, ನೀನು ನಾಲ್ಕೆಂಟು ದಿನ ನಿದ್ದೆ ಕಟ್ಟಬೇಕಾಯಿತಲ್ಲವೆ? ಮಹಾಪರಾಧಿಯು ನಾನು! ಕರುಣಿಸು. ಕ್ಷಮೆಮಾಡು, ಎಂದು ಬೇಡಿಕೊಂಡು, ಆ ಪಾತ್ರೆಗಳೆಲ್ಲವನ್ನು ದಾನಮಾಡುವ ಸಂಕಲ್ಪ ಮಾಡಿದನು. ಕಳ್ಳನು ತುಳಸೀದಾಸನ ಸಂಕಲ್ಪವನ್ನು ಕೇಳಿ:-ಮಹಾರಾಜ, ನಾನೂ ನಿಮ್ಮ ಈ ಕೆಲಸಕ್ಕೆ ನೆರವಾಗಬೇಕೆಂದಿದ್ದೇನೆ ನಾನು ಅಂಥಿಂಥ ಕಳ್ಳನಲ್ಲ! ಬಹು ದಿವಸಗಳಿಂದ ಈ ಹೊರೆಯನ್ನು ಮಾಡುತ್ತಿದ್ದು ನುರಿತವನಾಗಿದ್ದೇನೆ; ಹಾಗು ವಿಪುಲ ಸಂಪತ್ತಿಯನ್ನು ಸಂಗ್ರಹಿಸಿದ್ದೇನೆ. ಈಗ ನನಗೆ ಪಶ್ಚಾತ್ತಾಪವಾಗಿದೆ ನಾನು ನನ್ನ ಸಂಪಾದನೆಯ ಸಂಪತ್ತಿಯನ್ನು ನಿಮಗೆ ಸಮರ್ಪಿಸುವೆನು. ನೀವು ಎಲ್ಲವನ್ನೂ ದಾನಮಾಡಿರಿ, ಎಂದು ಹೇಳಿದನು; ಆದರೆ ತುಳಸೀದಾಸನು ಒಪ್ಪಲಿಲ್ಲ. ಪಾಪಮಾರ್ಗದಿಂದ ಸಂಪಾದಿಸಿದ ಸಂಪತ್ತನ್ನು ಮುಟ್ಟಲಾರೆನೆಂದು ಹೇಳಿದನು. ಕಳ್ಳನು ತನ್ನ ಹಟವನ್ನು ಬಿಡಲಿಲ್ಲ ಇನ್ನು ತಾನೆಂದೂ ಕಳವು ಮಾಡುವದಿಲ್ಲೆಂದೂ, ತಮ್ಮ ಶಿಷ್ಯತ್ವವನ್ನು ವಹಿಸಿ ಸಾಧುಮಾರ್ಗದಿಂದ ಕಾಲಕಳೆಯುವೆನೆಂದೂ ಪಣಮಾಡಿದನು ಬಳಿಕ ತುಳಸೀದಾಸನು ಕಳ್ಳನ ವಿನಂತಿಯನ್ನು ಮಾನ್ಯ ಮಾಡಿದನು. ಈ ಮಹಾದಾನ ಸಮಾರಂಭವು ನಿನ್ನಿನ ದಿವಸ ನಡೆಯಿತು. ನಾನದನ್ನು ಕಣ್ಣುಟ್ಟ ಕಂಡು ಕಡು ಕೌತುಕಬಟ್ಟೆನು! ತರ್ಕಾಲಂಕಾರನು ಹೇಳಿದನು.

ಆ ಮಹಾದಾನದ ಒಟ್ಟು ಬೆಲೆಯೆಷ್ಟಾಗಬಹುದು? ಒಬ್ಬನು ಕೇಳಿದನು.

ತೀರ ಕಡಿಮೆಯೆಂದರೆ ಐದು ಲಕ್ಷ ವರಹಗಳು! ಬಂದ ಯಾಚಕರಲ್ಲಿ ಒಬ್ಬನೂ ಅತೃಪ್ತನಾಗಿ ಹೋಗಲಿಲ್ಲ! ಎಲ್ಲರೂ ಉದಾರ ಹಸ್ತದ ಆ ದಾನವನ್ನು ಸ್ವೀಕರಿಸಿ, ತುಳಸೀದಾಸನ ಜಯ ಜಯಕಾರ ಮಾಡುತ್ತ ತಮ್ಮ ಮನೆಗೆ ಹೋದರು. ತರ್ಕಾಲಂಕಾರನು ಹೇಳಿದನು.

ತಮಗೆಷ್ಟು ದೊರೆಯಿತು? ಒಬ್ಬನು ನಗುತ್ತ ಕೇಳಿದನು.

ಒಂದು ಸೇರಿಗಿಂತಲೂ ಹೆಚ್ಚಾಗಿ ತೂಕವುಳ್ಳ ಶುದ್ಧ ಬಂಗಾರದ ಎರಡು ಬಂಕಿಗಳು. ಅವು ನಮ್ಮವಳ ಕೈಗೆ ಹಾಳತವಾಗಿವೆ. ಗೃಹಿಣಿಯು ಅವುಗಳನ್ನು ನೋಡಿ ಹಿರಿಹಿರಿ ಹಿಗ್ಗಿದಳು! ತರ್ಕಾಲಂಕಾರನು ಹೇಳಿದನು.

ಅಂತೆಯೇ ನೀವಿಂದು ತುಳಸೀದಾಸನ ಸ್ತುತಿಪಾಠಕರಾಗಿರುವಂತೆ ಕಾಣುತ್ತಿದೆ! ವಾಗೀಶನು ಉಪಹಾಸ ಮಾಡಿದನು.

ತುಳಸೀದಾಸನ ಬಟ್ಟಂಗಿಯು ನಾನೊಬ್ಬನೇ ಏಕೆ; ಅಸಂಖ್ಯ ಜನರಿದ್ದಾರೆ! ಅಂದಿನ ಪುಷ್ಕರದ ಅನುಭವವು ನಿಮಗಿಲ್ಲವೆ? ಕೂಡಿದ ಬ್ರಹ್ಮವೃಂದವೆಲ್ಲವೂ "ಮಹಾತ್ಮಾ ತುಳಸೀದಾಸ ಮಹಾರಾಜಕೀ ಜಯ!" ಎಂದು ದಿಕ್ತಟವನ್ನು ತುಂಬುವಂತೆ ಜಯ ಘೋಷ ಮಾಡಲಿಲ್ಲವೆ? ಆಗ ನೀವು ಸುಮ್ಮನೇಕೆ ಇದ್ದಿರಿ? ಅಡ್ಡಿಯನ್ನೇಕೆ ಮಾಡಲಿಲ್ಲ? ತರ್ಕಾಲಂಕಾರನು ಕೇಳಿದನು.

ನಾನು ಸುಮ್ಮನಿದ್ದೆನೆ? ಯಾರು ಹೇಳುವರು? ಅಂದಿನ ಆ ಸಭೆಯಲ್ಲಿ ತುಳಸೀದಾಸನ ಗೌರವಕ್ಕೆ ವಿರೋಧವನ್ನುಂಟು ಮಾಡಿದವನು ನಾನು! ನಾನೇ ಬಲವಾಗಿ ವಿರೋಧಿಸಿದೆನು! ಆದರೆ ಮಾಡುವುದೇನು? ಅಲ್ಲಿ ನನ್ನ ಪಕ್ಷದ ಜನರು ಬಹಳವಾಗಿರಲಿಲ್ಲ. ಅಂದು ನನ್ನ ಪಕ್ಷದ ಬಹುಮತವಾಗುವಂತಿದ್ದರೆ, ತುಳಸೀದಾಸನು ಮಹಾತ್ಮನಾಗುತ್ತಿದ್ದನೆ? ವಾಗೀಶನು ಆವೇಶದಿಂದ ನುಡಿದನು.

ತುಳಸೀದಾಸನ ಶಕ್ತಿಯು ನಮ್ಮೆಲ್ಲರಿಗಿಂತ ಹಿರಿಯದಾದದ್ದು. ಅಂತೆಯೇ ಅಂದು ಬಹು ಜನರು ತುಳಸೀದಾಸನ ಪಕ್ಷವನ್ನು ಹಿಡಿದರು. ಅವನೊಡನೆ ಪ್ರತಿಭಟಿಸುವುದೆಂದರೆ, ಸೂರ್ಯನ ಮೇಲೆ ಮಣ್ಣು ತೂರಿ ಕಣ್ಣಲ್ಲಿ ಕೆಡವಿಕೊಂಡಂತೆಯೇ ಸರಿ! ತರ್ಕಾಲಂಕಾರನು ನುಡಿದನು.

ಸ್ವಾಮೀ, ತಾವು ಹೀಗೆ ಮಾತಾಡುವುದು ಒಳಿತಲ್ಲ! ಯಾರ ಯೋಗ್ಯತೆಯು ಎಷ್ಟೆಂಬುದರ ಸರಿಯಾದ ಕಲ್ಪನೆಯು ತಮಗಿಲ್ಲ. ಹೀಗಿರುವಾಗ ಮನಬಂದಂತೆ ಮಾತಾಡಿ, ನಿಮ್ಮ ಪ್ರೀತಿಯ ಜನರ ಮನಸ್ಸನ್ನು ನೋಯಿಸುವುದು ನಿಮಗೆ ಸಮಂಜಸವಾಗಿ ತೋರುತ್ತಿದೆಯೋ? ವಾಗೀಶನು ಮೆತ್ತಗಾಗಿ ಕೇಳಿದನು.

ನಿಮ್ಮ ಮನಸ್ಸನ್ನು ನೋಯಿಸುವ ಇಚ್ಛೆ ನನಗಿಲ್ಲ! ನೀವು ನನಗೆಂದಿಗೂ ಪ್ರೀತಿಯ ಜನರೇ! ನಾನು ಯಾವಾಗಲೂ ನಿಮ್ಮ ಹಿತವನ್ನೇ ಬಯಸತಕ್ಕವನು! ಆದರೆ ನೀವಾಗಿ ಕೆದರಿ ಕೇಳಿದ್ದರಿಂದ ನಿಜವಿರುವ ನಾಲ್ಕು ಮಾತುಗಳನ್ನಾಡಬೇಕಾಯಿತು. ನೀವು ಹೇಗಾದರೂ ತುಳಸೀದಾಸನ ಪರೀಕ್ಷೆ ತಕ್ಕೊಳ್ಳಲಿಕ್ಕೆ ಟೊಂಕಕಟ್ಟಿರುವಿರಿ. ಆ ಪರೀಕ್ಷೆಯ ಸಮಯವು ದೂರವಿಲ್ಲ. ಆಗ ತಮಗೆ ನಿಜ ಸಂಗತಿಯು ಹೊಳೆಯದಿರದು! ಅಲ್ಲಿಯ ವರೆಗೆ ನಾನು ತುಳಸೀದಾಸನ ಮಾತೆತ್ತುವದಿಲ್ಲೆಂದು ಪಣಮಾಡಿ ಹೇಳುತ್ತೇನೆ! ಈಗಲಾದರೂ ನಿಮಗೆ ಸಮಾಧಾನವಾಯಿತಷ್ಟೆ? ತರ್ಕಾಲಂಕಾರನೆಂದನು.

ಇಷ್ಟರಿಂದ ಸಮಾಧಾನ ಪಡುವವನು ನಾನಲ್ಲ! ಪರೀಕ್ಷೆಯಲ್ಲಿ ತುಳಸೀದಾಸನು ಅನುತ್ತೀರ್ಣನಾಗಿ ತಲೆಬೊಗ್ಗಿಸಿದಾಗ ನಾನು ಸಮಾಧಾನ ಪಡುವೆನು! ಇಲ್ಲವಾದರೆ, ಈ ವೇದಾಂತವಾಗೀಶನ ಈ ವರೆಗಿನ ಗೌರವವು ಅಸ್ತವಾದಂತೆಯೆ ಆಗುವುದು! ಆ ಬಳಿಕ ನಾನು ಇದ್ದರೂ ಅಷ್ಟೆ, ಸತ್ತರೂ ಅಷ್ಟೆ! ವಾಗೀಶನೆಂದನು.

ಸ್ವಾಮೀ, ಹೀಗೆ ನಿರಾಶರಾಗುವ ಕಾರಣವಿಲ್ಲ. ಪ್ರಯತ್ನ

ಮಾಡುವುದು ನಮ್ಮ ಕೆಲಸ. ನೀವು ನಿಮ್ಮ ಗೌರವ ರಕ್ಷಣೆಗೆ ಪ್ರಯತ್ನ ನಡಿಸಿರುವಿರಿ. ಜಯಾಪಜಯಗಳು ದೇವರನ್ನವಲಂಬಿಸಿವೆ ಆ ಭಗವಂತನು ನಿಮ್ಮ ಮೊರೆಯನ್ನೇಕೆ ಕೇಳಬಾರದು? ನಿಮಗೆ ಜಯವನ್ನೇಕೆ ಕೊಡಬಾರದು? ಒಬ್ಬನು ನುಡಿದನು.

ಏನಾಗುವುದೋ ಆಗಲಿ! ವಾಗೀಶನು ನಿಟ್ಟುಸಿರ ಬಿಟ್ಟನು.

‡‡‡ ‡‡‡ ‡‡‡ ‡‡‡ ‡‡‡

ಇಂದು ಸೋಮವಾರ. ತುಳಸೀದಾಸನ ಪರೀಕ್ಷೆಯ ದಿವಸ ಮುಂಜಾವಿನಿಂದಲೂ ವಿಶ್ವೇಶ್ವರನ ಮಂದಿರದಲ್ಲಿ ಜನರು ಕಲೆಯುತ್ತಿದ್ದಾರೆ. ಕೇವಲ ಕಾಶಿಯ ನಿವಾಸಿಗಳಷ್ಟೇ ಅಲ್ಲ; ದೂರ ದೂರದ ಜನರೂ ಪ್ರೇಕ್ಷಕರಾಗಿ ಬಂದಿದ್ದಾರೆ ಒಂದು ತಾಸು ಹೊತ್ತೇರುವಷ್ಟರಲ್ಲಿ ವಿಶ್ವೇಶ್ವರನ ಭವ್ಯ ಮಂದಿರವು ಜನರಿಂದ ತುಂಬಿ ಹೋಯಿತು. ಆದರೂ ಜನರು ಬರುತ್ತಲೇ ಇದ್ದರು.

ವೇದಾಂತವಾಗೀಶನೂ ಇವನ ಅನುಯಾಯಿಗಳೂ ಬೆಳಕು ಹರಿಯುವಷ್ಟರಲ್ಲಿಯೇ ವಿಶ್ವೇಶ್ವರನ ಮಂದಿರವನ್ನು ಸೇರಿದ್ದಾರೆ. ಸರಿಯಾದ ಸ್ಥಳವನ್ನು ಹುಡುಕಿಕೊಂಡು ಕುಳಿತು, ಅತ್ಯುತ್ಸುಕತೆಯಿಂದ ತುಳಸೀದಾಸನ ಮಾರ್ಗಪ್ರತೀಕ್ಷೆ ಮಾಡುತ್ತಿದ್ದಾರೆ; ತಮ್ಮ ತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದಾರೆ.

ಸುಮಾರು ಎರಡು ತಾಸು ಹೊತ್ತಾಯಿತು. ಗುಡಿಯಲ್ಲಿ ಕಾಲಿರಿಸಲಿಕ್ಕೆ ಸ್ಥಳವಿಲ್ಲ. ಮಂದಿರವು ಜನರಿಂದ ಕಿಕ್ಕಿರಿದು ಹೋಗಿದೆ. ಎಲ್ಲಿ ನೋಡಿದರೂ ಜನರ ಗದ್ದಲ, ಒಡೆದಾಟ. ಪ್ರತಿಯೊಬ್ಬನಿಗೂ ಮುಂದೆ ಹೋಗುವ ಆಶೆ. ಪ್ರತಿಯೊಬ್ಬನೂ ನಡೆಯುತ್ತಿರುವುದನ್ನು ಪ್ರತ್ಯಕ್ಷ ಸ್ಪಷ್ಟವಾಗಿ ಕಾಣಬೇಕೆಂಬ ಆಶೆಯುಳ್ಳವನು; ಆದರೆ ಆಗಮಿಸಿದ ಅಗಣಿತ ಜನರಿಗೆ ಸರಿಯಾಗಿ ಇಂಬುಗೊಡುವ ಅನುಕೂಲತೆಯಿರಲಿಲ್ಲ. ಎಷ್ಟೋ ಜನರು ಅನಿವಾರ್ಯದಿಂದ ಮಂದಿರದ ಹೊರಗೆ ನಿಲ್ಲಬೇಕಾಯಿತು.

ತುಳಸೀದಾಸನನೂ ಇವನ ಶಿಷ್ಯವೃಂದವೂ ಇನ್ನೂ ಬಂದಿರಲಿಲ್ಲ. ಜನರು ಹಲವು ರೀತಿಯಿಂದ ಮಾತನಾಡಹತ್ತಿದರು. ತುಳಸೀದಾಸನು ಅಪಜಯದ ಆಶಂಕೆಯಿಂದ ಬರುವದನ್ನೇ ಬಿಟ್ಟರೆ? ಎಂಬ ಆಲೋಚನೆಯು ವಾಗೀಶನಲ್ಲಿ ಉಂಟಾಗುತ್ತಲೆ ಮೋರೆಯು ಕಳೆಗೊಳ್ಳಹತ್ತಿತು. ಅವನು ಮತ್ತೆ ಕೆಲವು ವೇಳೆ ಮಾರ್ಗ ಪ್ರತೀಕ್ಷೆ ಮಾಡಿದನು. ಆದರೂ ತುಳಸೀದಾಸನು ಬರಲಿಲ್ಲ. ವಾಗೀಶನ ಆಶಾಂಕುರವು ಬೆಳೆಯಹತ್ತಿತು. ಅವನು:- ಆನಂದದಿಂದ ಹತ್ತಿರ ಕುಳಿತವರನ್ನುದ್ದೇಶಿಸಿ: | ಸ್ವಾಮಿಗಳೇ, ನೋಡಿರಿ. ತುಳಸೀದಾಸನಿನ್ನೂ ಬರಲಿಲ್ಲ. ಅವನಿಗೆ ಜಯದ ಆಶೆಯಿಲ್ಲ. ಅಂತೆಯೇ ಅವನು ಈಗಲೂ ಮನೆಯಲ್ಲಿ ವಿಶ್ರಮಿಸುತ್ತಿರಬಹುದು! ಎಂದು ನುಡಿದನು.

ಹೇಗೆ ಜಯವು ದೊರೆಯಬೇಕು? ಪರೀಕ್ಷೆಯು ಸಾಮಾನ್ಯವೆ? ವಿಶ್ವೇಶ್ವರನ ಸಾನ್ನಿಧ್ಯವಿದು! ಇಲ್ಲಿ ಮರುಳಾಟಕ್ಕೆ ಎಡೆಯಿಲ್ಲ! ಒಬ್ಬನು ನುಡಿದನು.

ಸರಿಯಾಗಿ ಮಾತನಾಡಿದಿರಿ! ವಾಗೀಶನ ಮೋರೆಯಲ್ಲಿ ಆನಂದವು ಉಕ್ಕುತಲಿತ್ತು.

ಇಷ್ಟರಲ್ಲಿ "ತುಳಸೀದಾಸ ಮಹಾರಾಜಕೀ ಜಯ! ಮಹಾತ್ಮಾ ತುಳಸೀದಾಸಕೀ ಜಯ!" ಎಂಬ ಜಯಘೋಷವೆದ್ದಿತು. ವಾಗೀಶನ ಮೋರೆಯು ಬಾಡಿತು. ಜನರು ಕುತೂಹಲತೆಯಿಂದ ತುಳಸೀದಾಸನ ಆಗಮನವನ್ನು ಪ್ರತೀಕ್ಷಿಸ ಹತ್ತಿದರು. ತುಳಸೀದಾಸನೂ, ಇವನ ಅನುಯಾಯಿಗಳೂ ಭಜನೆ ಮಾಡುತ್ತ ಮಂದಿರಕ್ಕೆ ಬಂದರು. ಕಿಕ್ಕಿರಿದು ನಿಂತಿದ್ದ ಜನರು ಜಯಘೋಷ ಮಾಡುತ್ತ ಸ್ಥಳಮಾಡಿ ಕೊಟ್ಟರು. ತುಳಸೀದಾಸನು ಶಿಷ್ಯರೊಡನೆ ಮೆಲ್ಲಮೆಲ್ಲನೆ ನಡೆದು ಹೋಗಿ ಮಂದಿರವನ್ನು ಪ್ರವೇಶಿಸಿದನು.

ತುಳಸೀದಾಸನು ಭಜನೆ ಮಾಡುತ್ತ ಹೋಗಿ ಗರ್ಭಗುಡಿಯನ್ನು ಹೊಕ್ಕನು. ಕೃತಾಂಜಲಿಯಾಗಿ ನಿಂತು, ವಿಶ್ವೇಶ್ವರನ ಪ್ರಾರ್ಥನೆಯು

ಮಾಡಿಕೊಂಡನು. ಬಳಿಕ ಹೊರಗೆ ಬಂದು ಕೂಡಿದ ಬ್ರಹ್ಮವೃಂದಕ್ಕೆ ವಂದಿಸಿ ಹೇಳಹತ್ತಿದನು:—ಜನತಾ ಜನಾರ್ದನವೆಂದು ಹೇಳಿದೆ. ಇಲ್ಲಿ ನೀವು ಅಸಂಖ್ಯ ಜನರು ನೆರೆದಿರುವಿರಿ ಮೇಲಾಗಿ ಇದು ವಿಶ್ವೇಶ್ವರನ ಮಂದಿರವು. ಅಣು-ರೇಣು-ತೃಣ-ಕಾಷ್ಠಗಳಲ್ಲಿ ವ್ಯಾಪಿಸಿ ಹೆಚ್ಚಾಗಿದ್ದ ಶ್ರೀ ಹರಿಯು ಈ ಸ್ಥಳದಲ್ಲಿ ಇಲ್ಲನೆಂದು ಅನ್ನಲಿಕ್ಕಾದೀತೆ? ನಾನು ಆ ಪರಮೇಶ್ವರನನ್ನು ಸಾಕ್ಷಿಯಾಗಿರಿಸಿ, ಈ ಪವಿತ್ರ ಸ್ಥಳದಲ್ಲಿ, ಅಗಣಿತ ಭೂಸುರರ ಸಮ್ಮುಖದಲ್ಲಿ ನನ್ನ ಈ ಶಿಷ್ಯನು ಈಗ ನಿಷ್ಪಾಪನಾಗಿರುವನೆಂದು ಹೇಳುತ್ತೇನೆ! ನೀವು ನನ್ನ ಈ ಮಾತನ್ನು ನಂಬಲಾರಿರಾ?

ಇಲ್ಲ, ನಂಬುವದಿಲ್ಲ! ಹೀಗೆ ನಂಬಬೇಕಿದ್ದರೆ, ಈ ಥಾಟಾಟೋಪ ವೇತಕ್ಕೆ ಬೇಕಿತ್ತು? ಬ್ರಾಹ್ಮಣನನ್ನು ವಧಮಾಡಿದ ಮಹಾಪಾಪಿಗೆ ಪ್ರಾಯಶ್ಚಿತ್ತವಿಲ್ಲ! ಅವನೆಂದಿಗೂ ನಿಷ್ಪಾಪನಾಗಲಾರನು! ವಾಗೀಶನು ನಿರ್ಧಾರದಿಂದ ನುಡಿದನು.

ನಿಜ ಬ್ರಹ್ಮಹತ್ಯಾಪರಾಧಿಗೆ ಶಾಸ್ತ್ರದಲ್ಲಿ ಪ್ರಾಯಶ್ಚಿತ್ತವಿಲ್ಲ. ಅಂದ ಬಳಿಕ ಪಾಪರಹಿತನಾಗುವದು ಅಸಂಭವ! ಒಬ್ಬನು ಮಾತಾಡಿದನು.

ರಾಮನಾಮವು ಈ ಅಸಾಧ್ಯ ಕಾರ್ಯವನ್ನು ಸಾಧ್ಯಗೊಳಿಸಿದೆ. ಎಲ್ಲ ಶಾಸ್ತ್ರಗಳಿಗೆ ಅತೀತನಾದವನು ಒಬ್ಬನಿದ್ದಾನೆ ಅವನೇ ಶಾಸ್ತ್ರಿಯು. ಶಾಸ್ತ್ರಗಳನ್ನು ತಿಳಿಯುವದಕ್ಕಿಂತ ಶಾಸ್ತ್ರಿಯನ್ನು ತಿಳಿವುದು ಕಠಿಣವಿದ್ದರೂ, ಅತ್ಯುಪಯುಕ್ತವಾದದ್ದು. ಶ್ರೇಷ್ಠವಾದ ಮುಕ್ತಿಯ ಚಿರಸೌಖ್ಯವನ್ನು ಕೊಡತಕ್ಕದು. ಶ್ರೀ ಹರಿಯ ನಾಮಸ್ಮರಣೆಯ ಬಲದಿಂದ ಪ್ರಲ್ಹಾದನು ಹಲವು ಅದ್ಭುತ ಸಂಕಟಗಳಿಂದ ಪಾರಾದುದನ್ನು ನೀವು ಕೇಳಿರುವಿರಿ. ಮಹಾ ಪಾಪಿಷ್ಠನಾದ ಅಜಮಿಳನು ಕೇವಲ ನಾಮಸ್ಮರಣೆಯಿಂದ ಕೈವಲ್ಯ ಪಡೆದನೆಂಬುದನ್ನು ನೀವು ಅರಿತಿರುವಿರಿ. ಹೀಗಿದ್ದರೂ ಶ್ರೀ ಹರಿಯ ನಾಮಸ್ಮರಣೆಯ ಶಕ್ತಿಯ ವಿಷಯದಲ್ಲಿ ಸಂದೇಹಗೊಳ್ಳುವಿರಾ? ಪುರಾಣದ ಆ ಕತೆಗಳು ನಿಮಗೆ ಕಟ್ಟುಕತೆಗಳಾಗಿ

ತೋರುತ್ತಿವೆಯೋ? ಇರಲಿ ಈ ಕಲಿಕಾಲದಲ್ಲೂ ಭಗವಂತನ ನಾಮಜಪದಲ್ಲಿ ಅದ್ಭುತವಾದ ಸಾಮರ್ಥ್ಯವಿದೆಯೆಂಬುದನ್ನು ತೋರುವದಕ್ಕಾಗಿ ಇಂದು ಜಾನಕೀವಲ್ಲಭನು ಸಿದ್ಧನಾಗಿದ್ದಾನೆ. ತುಳಸೀದಾಸನು ಹೇಳಿದನು.

ನಮಗೂ ಇದೇ ಬೇಕಿದೆ. ನಾವು ಕೇವಲ ಮಾತಿಗೆ ಮರುಳಾಗುವವರಲ್ಲ! ಪ್ರತ್ಯಕ್ಷ ಕೃತಿಯು ನಡೆಯಲಿ! ವಾಗೀಶನು ನುಡಿದನು.

ಇಲ್ಲಿ ಒಣ ಮಾತಿನ ಬುರುಡಿಯನ್ನು ರುಳಿಸಿದರೆ ನಡೆಯದು! ಪರೀಕ್ಷೆಯು ನಡೆಯಲಿ! ನಂದಿಯು ಆಹಾರವನ್ನು ತಕೊಳ್ಳಲಿ! ವಾಗೀಶನ ಹಸ್ತಕನೊಬ್ಬನು ನುಡಿದನು.

ಇದು ಪವಿತ್ರತಮ ಸ್ಥಳವು ಇಲ್ಲಿ ಭೂತ-ಪಿಶಾಚಿಗಳ ವಿದ್ಯೆ ನಡೆಯದು! ಇಲ್ಲಿ ಸದ್ವಸ್ತುವಿನ ಪರೀಕ್ಷೆಯಾಗದಿರದು! ಮತ್ತೊಬ್ಬ ಹಸ್ತಕನು ಮಾತಾಡಿದನು.

ತುಳಸೀದಾಸನು ಈ ಮಾತುಗಳ ಕಡೆಗೆ ಲಕ್ಷ್ಯಗೊಡಲಿಲ್ಲ ಜಾನಕೀವಲ್ಲಭನನ್ನು ಹತ್ತಿರ ಕರೆದು ಇಂತು ಹೇಳಿದನು:—"ವತ್ಸ, ಪರೀಕ್ಷೆ ಕೊಡಲಿಕ್ಕೆ ಸಿದ್ಧನಾಗು ರಾಮನಾಮ ಪಠಣದಲ್ಲಿ ಎಂತಹ ಮಹತ್ವದ ಶಕ್ತಿಯಿದೆಯೆಂಬುದನ್ನು ಈ ಬ್ರಹ್ಮವೃಂದಕ್ಕೆ ಮನಗಾಣಿಸಿ ಕೊಡು."

ಜಾನಕೀವಲ್ಲಭನು ವಿಶ್ವೇಶ್ವರನಿಗೆ ನಮಸ್ಕಾರ ಮಾಡಿದನು. ಬಳಿಕ ಗುರುವಿಗೆ ನಮಸ್ಕಾರ ಮಾಡಿದನು. ಬಳಿಕ ನಂದಿಯ ಹತ್ತಿರ ಹೋದನು. ವಾಗೀಶನ ಹಸ್ತಕನೊಬ್ಬನು ಅಕ್ಕಿಯನ್ನೂ ಕೆಲವು ಬಾಳೆಯ ಹಣ್ಣುಗಳನ್ನೂ ತಂದಿದ್ದನು. ಜಾನಕೀವಲ್ಲಭನು ಇವುಗಳನ್ನು ತಕೊಂಡನು. ನಂದಿಯ ಸಮ್ಮುಖದಲ್ಲಿರಿಸಿ, ನಮಸ್ಕಾರ ಮಾಡಿ ಇಂತು ನುಡಿದನು:—"ನಂದೀಶ್ವರನೆ, ಹಿಂದಿನ ಜನ್ಮಗಳದೇ ಆಗಲಿ, ಈ ಜನ್ಮದ್ದೇ ಆಗಲಿ ರವಷ್ಟಾದರೂ ಪಾಪವು ಈಗ ನನ್ನಲ್ಲಿಲ್ಲವಾದ್ದ ಪಕ್ಷದಲ್ಲಿ ನೀನು ಪಂಚಭೂತಾತ್ಮಕ ದೇಹವನ್ನು ಧರಿಸು; ನಿಷ್ಪಾಪನಾದ ನಾನು ಇಟ್ಟಿರುವ ಈ ಆಹಾರವನ್ನು ಸ್ವೀಕರಿಸು. ನಾನು ಈಗಲೂ ಪಾಪಿಷ್ಠನೇ

ಆಗಿದ್ದರೆ—ನನ್ನಲ್ಲಿ ಈಗ ಕೊಂಚವಾದರೂ ಪಾಪವುಳಿದಿದ್ದರೆ—ಪವಿತ್ರನಾದ ನಿನ್ನನ್ನು ಮುಟ್ಟಿದ ಅಪರಾಧಕ್ಕಾಗಿ ನನ್ನನ್ನು ಸುಟ್ಟು ಭಸ್ಮ ಮಾಡಿ ಬಿಡು!''

ನಂದಿಯಲ್ಲಿ ಜೀವ ಸಂಚಾರವಾಗುತ್ತಿರುವಂತೆ ತೋರ ಹತ್ತಿತು. ಬಾಲವು ಅಲ್ಲಾಡ ಹತ್ತಿತು. ಕಣ್ಣುಗಳು ಹೊಳೆಯ ಹತ್ತಿದುವು. ಮೂಗಿನಿಂದಲೂ ಬಾಯಿಂದಲೂ ಶ್ವಾಸೋಚ್ಛ್ವಾಸವು ನಡೆಯ ಹತ್ತಿದಂತೆ ಕಾಣಿಸಿತು. ನೆರೆದ ಜನರ ಆಶ್ಚರ್ಯಕ್ಕೆ ಸೀಮೆ ಉಳಿಯಲಿಲ್ಲ. ಅವರು ಬೆರಗಿನಿಂದ ದಂಗುಪಡೆದವರಾಗಿ ಕಲ್ಲಿನ ಮೂರ್ತಿಯಂತೆ ನಿಂತು ನೋಡುತಲಿದ್ದರು. ಜಾನಕೀವಲ್ಲಭನು ಆಹಾರದ ಪದಾರ್ಥಗಳನ್ನು ಎತ್ತಿ ಹಿಡಿದನು. ನಂದೀಶ್ವರನು ಎಲ್ಲವನ್ನೂ ಗ್ರಹಿಸಿದನು. ಬಳಿಕ ಮೊದಲಿನಂತೆ ಪ್ರತಿಮೆಯ ರೂಪದಲ್ಲಿ ಕಾಣಹತ್ತಿದನು. ಎಲ್ಲೆಲ್ಲಿಯೂ "ಮಹಾತ್ಮಾ ತುಳಸೀದಾಸ ಮಹಾರಾಜಕೀ ಜಯ!" ಎಂಬ ಜಯಘೋಷವು ಕೇಳಹತ್ತಿತು. ವಾಗೀಶನು ಕೆಳಮೋರೆ ಮಾಡಿದವನು ಆ ಮೋರೆಯನ್ನು ಮೇಲಕ್ಕೆತ್ತಲಿಲ್ಲ. ಸ್ವಪ್ನವತ್ತಾಗಿ ನಡೆದಿದ್ದ ಅದ್ಭುತ ಪ್ರಸಂಗವನ್ನು ಸ್ಮರಿಸುವುದರಲ್ಲೂ ಚರ್ಚಿಸುವುದರಲ್ಲೂ ತೊಡಗಿದ್ದ ಜನರು ವಾಗೀಶನನ್ನು ಲಕ್ಷಿಸಲಿಲ್ಲ.

———



# ೨೦ ಉಪಸಂಹಾರ

ವಾಗೀಶನು ಯಾರೊಡನೆಯೂ ಮಾತಾಡಬಯಿಸಲಿಲ್ಲ. ಮೋರೆಯನ್ನು ಮೇಲಕ್ಕೆತ್ತಿ ನೋಡಲಿಚ್ಛಿಸಲಿಲ್ಲ. ನಡೆದ ಸಂಗತಿಯನ್ನು ಆಲೋಚಿಸುತ್ತ ಮನೆಯ ಕಡೆಗೆ ಹೊರಟನು. ತುಳಸೀದಾಸನು ಹೇಳಿದ್ದ ಶಾಸ್ತ್ರಗಳಿಗಿಂತಲೂ ಶಾಸ್ತ್ರಿಯ ಮಹತ್ವವು ಹೆಚ್ಚು. ಶಾಸ್ತ್ರಗಳನ್ನು ತಿಳಿಯುವುದಕ್ಕಿಂತ ಶಾಸ್ತ್ರಿಯನ್ನು ತಿಳಿವುದು ಶ್ರೇಯಸ್ಕರವು, ಎಂಬ ವಾಕ್ಯವು ಅವನ ಮನಸಿನಲ್ಲಿ ಸದಾ ಕಟಿಯ ಹತ್ತಿತು.

ವಾಗೀಶನಿಗೆ ಅಂದು ಸ್ನಾನ-ಆಹ್ನಿಕ-ಭೋಜನಗಳಲ್ಲಿ ಮನಸ್ಸಾಗಲಿಲ್ಲ. ಭೋಜನೋತ್ತರ ಮಲಗಹೋದರೆ ನಿದ್ದೆ ಹತ್ತಲಿಲ್ಲ. ಅವನು ಯೋಚಿಸಹತ್ತಿದನು:—ನಾನಿದುವರೆಗೆ ಮಾಡಿದ್ದೇನು? ಶಾಸ್ತ್ರಗಳನ್ನು ಓದಿದೆನು. ಅವುಗಳಿಗೆ ಮನಬಂದಂತೆ ಅರ್ಥಮಾಡಿದೆನು. ಪಂಡಿತನೆಂಬ ಹೆಮ್ಮೆಯಿಂದ ಎಲ್ಲರೂ ನನಗೆ ಮಾನ ಕೊಡಬೇಕೆಂದೂ, ನಾನು ಮಾಡಿದ ಭಾಷ್ಯಕ್ಕೆ ತಲೆದೂಗಬೇಕೆಂದೂ ಆಶಿಸಿದೆನು. ಬಹುಮಟ್ಟಿಗೆ ಸಫಲ ಮನೋರಥನೂ ಆದೆನು; ಆದರೆ ಇದರಿಂದ ನನಗೆ ಪ್ರಯೋಜನವೇನು? ನಾನು ತುಳಸೀದಾಸನನ್ನು ವಿರೋಧಿಸಿದ್ದೇಕೆ? ಅವನು ನನ್ನ ಗೌರವಕ್ಕೆ ಅಡ್ಡಿಯಾಗಿ ಬಂದನಲ್ಲವೆ? ಆದರೆ ಅವನಲ್ಲಿಯ ಶಕ್ತಿಯು ನನ್ನಲ್ಲಿದೆಯೆ? ಶ್ರೇಷ್ಠಶಮಪಂಡಿತನೆಂದು ಗರ್ವಿಸುತ್ತಿದ್ದ ನನ್ನಲ್ಲಿ ಅವನ ಶತಾಂಶವಾದರೂ ಸಾಮರ್ಥ್ಯವಿದೆಯೆ? ಶ್ರೀಹರಿಯ ಕೃಪೆಗೆ ಪಾತ್ರನಾದ ಅವನು-ಶಾಸ್ತ್ರಗಳನ್ನರಿಯದಿದ್ದರೂ ಶಾಸ್ತ್ರಿಯನ್ನರಿತ ಆ ಮಹಾತ್ಮನು-ಅಸಂಖ್ಯ ಜನರು ದಂಗುಬಡೆಯುವಂತೆ ಹಲವು ಅದ್ಭುತ ಕಾರ್ಯಗಳನ್ನು ಮಾಡಿ ಕೋಟಿ ಜನರಿಂದ ಸೈ ಸೈ ಎನಿಸಿಕೊಳ್ಳುತ್ತಿರುವನು; ಆದರೆ ನಾನು? ನನಗೇನಾದರೂ ಇಂಥ ಕೆಲಸಗಳನ್ನು ಮಾಡಲಿಕ್ಕೆ ಬರುವಂತಿದೆಯೆ?

ನಾನು ಜನರ ಮನ್ನಣೆಯನ್ನು ಏಕೆ ಅಪೇಕ್ಷಿಸಬೇಕು? ಯಾವ ಕಾರಣಕ್ಕಾಗಿ ಜನರು ನನಗೆ ಗೌರವವನ್ನು ಕೊಡಬೇಕು? ಪುಸ್ತಕಗಳಲ್ಲಿದ್ದ ವಿದ್ಯೆಯನ್ನು ಮುಖೋದ್ಗತ ಮಾಡಿರುವುದಕ್ಕಾಗಿ ಅವರು ನನಗೆ ಗೌರವವನ್ನು ಕೊಡಬೇಕೆ? ಹೀಗೆ ಪಾಠಮಾಡುವುದನ್ನು-ಹೇಳಿಕೊಟ್ಟದ್ದನ್ನು ಅಂದು ತೋರಿಸುವುದನ್ನು-ಗಿಳಿಯೂ ಮಾಡಬಲ್ಲದಲ್ಲವೆ? ಬುದ್ಧಿವಂತನೆಂದು ಹೆಮ್ಮೆ ಪಡುತ್ತಿರುವ ನಾನು ಆ ಗಿಳಿಗಿಂತ ಏತರಿಂದ ಶ್ರೇಷ್ಠನಾದೇನು?............

ವಾಗೀಶನು ಬಹಳವಾಗಿ ಯೋಚಿಸಿದನು. ಒಂದು ಅನಿರ್ದಿಷ್ಟ ತಳಮಳವು ಅವನ ಕಾಂತಿಯನ್ನು ಹೋಗಲಾಡಿಸಿಬಿಟ್ಟಿತು. ಅವನಿಗೆ ಸಮಾಧಾನವೆಂಬುದು ದೊರೆಯದಾಯಿತು ಈಗಲವನು ಬ್ರಾಹ್ಮಣ ಸಮಾಜ ನಿಯಾಮಕ ಸಂಘದ ಅಧಿವೇಶನಕ್ಕೆ ಹೋಗುವುದಿಲ್ಲ. ಮನೆಗೆ ಬಂದ ಸ್ನೇಹಿತರೊಡನೆ ಸರಿಯಾಗಿ ಮಾತಾಡುವುದಿಲ್ಲ. ವಿದ್ಯಾರ್ಥಿಗಳಿಗೆ ಸರಿಯಾಗಿ ಪಾಠಹೇಳಿಕೊಡುವುದಿಲ್ಲ. ಬಹಳವೇನು? ದಿನದ ಯಾವ ಕೆಲಸಗಳಲ್ಲೂ ಇವನಿಗೆ ಮನಸ್ಸಿಲ್ಲ ಸದಾ ತುಳಸೀದಾಸನ ಆಲೋಚನೆ; ಹಾಗು ತುಳಸೀದಾಸನು ಹೇಳಿಕೊಟ್ಟ ಶಾಸ್ತ್ರಿಯ ಆಲೋಚನೆ.

ವಾಗೀಶನು ಈ ವರೆಗೆ ಶಾಸ್ತ್ರಿಯ ಬಗ್ಗೆ ಆಲೋಚನೆ ಮಾಡಿದವನಲ್ಲ. ಈ ಮಾರ್ಗದಲ್ಲಿ ವಾಗೀಶನು ಬಾಲನು. ಪರಿಣತೆಯನ್ನು ಹೊಂದಲಿಕ್ಕೆ ಗುರುವಿನ ಅವಶ್ಯಕತೆಯಿತ್ತು; ಆದರೆ ವಾಗೀಶನು ಯಾರನ್ನು ಗುರುವನ್ನು ಮಾಡಿಕೊಳ್ಳಬೇಕು? ಅವನ ಆಲೋಚನೆಯಂತೆ ಈ ಗುರುಪದಕ್ಕೆ ತುಳಸೀದಾಸನೊಬ್ಬನೇ ಅರ್ಹನಾಗಿದ್ದನು; ಆದರೆ ವಾಗೀಶನು ತುಳಸೀದಾಸನ ಹತ್ತರ ಹೋಗುವುದು ಹೇಗೆ? ತುಳಸೀದಾಸನ ಕರುಣಾಯಾಚನೆ ಮಾಡುವುದು ಹೇಗೆ? ಈ ವರೆಗೆ ಪ್ರಬಲ ರೀತಿಯಿಂದ ವಿರೋಧಿಸಿದ ನಾನು ಈಗ ಶರಣು ಹೋದರೆ ತುಳಸೀದಾಸನು ಆಶ್ರಯ

ಗೊಟ್ಟಾನೆ? ಏನೇ ಆಗಲಿ, ಒಮ್ಮೆ ಅವನ ಹತ್ತಿರ ಹೋಗಿ ಕ್ಷಮಾಯಾಚನೆ ಮಾಡಲೇ ಬೇಕು............

ಹೀಗೆ ಹದಿನೈದು ದಿವಸಗಳು ಕಳೆದು ಹೋದವು. ವಾಗೀಶನು ತುಳಸೀದಾಸನ ಕ್ಷಮೆ ಬೇಡುವುದನ್ನು ಹಲವು ಬಾರಿ ನಿರ್ಧರಿಸಿದನು; ಆದರೆ ತುಳಸೀದಾಸನ ಬಳಿಗೆ ಹೋಗಲಿಕ್ಕೆ ಧೈರ್ಯವನ್ನು ಹೊಂದಲಿಲ್ಲ. ಹೀಗಾಗಿ ವಾಗೀಶನು ಮನಸ್ಸಿನಲ್ಲಿಯೇ ಕುದಿಯುಹತ್ತಿದನು. ಅವನಿಗೆ ಸಮಾಧಾನವೆಂಬುದು ಸ್ವಲ್ಪಾದರೂ ಇರಲಿಲ್ಲ. ಕಡೆಗೆ ವಾಗೀಶನು ಈ ವಿಷಯದಲ್ಲಿ ಬ್ರಾಹ್ಮಣ ಸಮಾಜ ನಿಯಾಮಕ ಸಂಘದ ಇತರ ಮೆಂಬರರ ಆಲೋಚನೆಯನ್ನು ಕೇಳಿಕೊಳ್ಳಬೇಕೆಂದು ಗೊತ್ತುಮಾಡಿಕೊಂಡನು. ಅವರನ್ನು ತನ್ನ ಮನೆಗೆ ಕರಿಸಿಕೊಂಡನು ಅವರಿಗೆ ತನ್ನ ಮನಸ್ಸಿನ ಸ್ಥಿತಿಯನ್ನು ತಿಳಿಯಪಡಿಸಿದನು. ಬಹಳ ಆಲೋಚನೆಯ ತರುವಾಯ ತರ್ಕಾಲಂಕಾರನು ಮಧ್ಯಸ್ಥಿಕೆ ಮಾಡಲಿಕ್ಕೆ ಒಪ್ಪಿಕೊಂಡನು ಎಲ್ಲರೂ ಕೂಡಿ ಒಂದು ದಿನ ತುಳಸೀದಾಸನ ಬಳಿಗೆ ಹೋಗುವ ನಿರ್ಧಾರಮಾಡಿಕೊಂಡರು.

ವಾಗೀಶನು ತುಳಸೀದಾಸನ ಮನೆಗೆ ಹೋಗಬೇಕಾಗಲಿಲ್ಲ. ತುಳಸೀದಾಸನೇ ವಾಗೀಶನ ಮನೆಗೆ ಬಂದನು. ವಾಗೀಶನು ಬೇಡಿಕೊಳ್ಳುವ ಮೊದಲೇ ಕ್ಷಮಾಪಣೆಯನ್ನು ತೋರಿದನು. ಇದರಿಂದ ವಾಗೀಶನ ಆನಂದಕ್ಕೆ ಅಳತೆಯಿಲ್ಲದಾಯಿತು. ಅವನು ತುಳಸೀದಾಸನ ಶಿಷ್ಯನಾಗಿ ಸಂನ್ಯಾಸವನ್ನು ಗ್ರಹಿಸಿ, ಸೀತಾರಾಮನ ಮಂದಿರದಲ್ಲಿ-ತುಳಸೀದಾಸನ ಸನ್ನಿಧಿಯಲ್ಲಿ-ಶೇಷಾಯುಷ್ಯವನ್ನು ಕಳೆಯುವುದನ್ನು ನಿರ್ಧರಿಸಿಕೊಂಡನು. ಇದಕ್ಕೆ ತುಳಸೀದಾಸನು ಸಂತೋಷದಿಂದ ಸಮ್ಮತಿಸಿದನು

† † † † †

ತುಲಸೀದೇವಿಯು ಕಾಶಿಗೆ ಬಂದು ಸೀತಾಪತಿಯ ಮನೆಯಲ್ಲಿದ್ದಳೆಂದು ನಾವು ಹಿಂದೆ ಹೇಳಿದ್ದೇವೆ. ಈ ಅವಧಿಯಲ್ಲಿ ಸೀತಾಪತಿಯೂ,

ಕಾವನ ಹೆಂಡತಿಯೂ, ಹುಲಸೀದೇವಿಯೂ ಸೀತಾರಾಮನ ಮಂದಿರದಲ್ಲಿ ಆಶ್ರಯ ಹೊಂದಿದ್ದರು. ದೇವರ ಸೇವೆಯಲ್ಲಿ ಕಾಲಕಳೆಯುತ್ತಿದ್ದರು.

● ● ● ● ●

ತುಳಸೀದಾಸನು ಮಧ್ಯರಾತ್ರಿಯಲ್ಲಿ ಸೀತಾರಾಮರ ಮೂರ್ತಿಗಳ ಮುಂದೆ ಧ್ಯಾನಸ್ಥನಾಗಿ ಕುಳಿತಿದ್ದನು. ಹೊರಗೆ ಗಾಯನದ ಧ್ವನಿ ಯಾಯಿತು. ತುಳಸೀದಾಸನ ಧ್ಯಾನಭಂಗವಾಯಿತು. ಅವನು ಆಸನ ಬಿಟ್ಟೆದ್ದು, ಗಾಯನದ ಸ್ವರವನ್ನನುಸರಿಸಿ ಹೊರಟನು. ಗಾಯಿಕೆಯು ಗುಡಿಯ ಹೊರಗೆ ಗಾಯನ ಮಾಡುತ್ತ ನಿಂತಿದ್ದಳು. ತುಳಸೀದಾಸನು ಹತ್ತಿರ ಹೋಗಿ, ಸುಮ್ಮನೆ ನಿಂತು, ಭಕ್ತಿರಸಪೂರ್ಣವಾದ ಗಾಯನವನ್ನು ಕೇಳಿದನು. ಗಾಯನವು ಮುಗಿಯುತ್ತಲೆ "ರತ್ನಾವಳಿ" ಎಂದು ಕೂಗಿದನು.

ಪ್ರಭುವೆ, ಇಲ್ಲಿರುವೆನು. ರತ್ನಾವಳಿಯು ಹೇಳಿದಳು.

ಬಾ, ಒಳಗೆ ಹೋಗೋಣ.

ಇಷ್ಟು ದಿನಗಳ ಮೇಲೆ ತಮ್ಮ ಕೃಪಾದೃಷ್ಟಿಯು ನನ್ನ ಮೇಲೆ ಬಿದ್ದಿತೆ?

ಅಹುದು. ಯಾವುದಕ್ಕೂ ಕಾಲವು ಬರಬೇಕು. ಬೆಳೆಯನ್ನು ತಕ್ಕೊಳ್ಳಬೇಕಾದರೆ, ಯೋಗ್ಯ ಸಮಯದ ದಾರಿಯ ಕಾಯಬೇಕು. ಇರಲಿ. ಒಳಗೆ ಅವ್ವನಿದ್ದಾಳೆ. ಅವಳ ದರ್ಶನಕ್ಕೆ ಹೋಗೋಣ, ನಡೆ.

ಈಗ ನಾನು ಅವರ ಬಳಿಗೆ ಬರಲಿಕ್ಕೆ ಒಲ್ಲೆನು. ನಾನು ಮೊದಲ ಗುರುಮಹಾರಾಜರ ಸತ್ಯಸ್ವರೂಪವನ್ನು ಕಾಣಬೇಕಾಗಿದೆ. ನೀವು ನನಗೆ ಮಾರ್ಗವನ್ನು ತೋರಿಸಿರಿ.

ತೋರಿಸ ಬಲ್ಲೆನು. ಮೊದಲು ಅವ್ವನ ಹತ್ತಿರ ನಡೆ. ಅವಳು ನಿನಗಾಗಿ ಹಂಬಲಿಸುತ್ತಿರುವಳು. ನಿನ್ನನ್ನು ನೋಡುವ ಆಶೆಯಿಂದ ಇದು ವರೆಗೂ ಜೀವಿಸಿರುವಳು. ತುಳಸೀದಾಸನು ಹೇಳಿದನು.

ನಾನೂ ಅವರನ್ನು ಕಾಣುವ ಆಶೆಯಿಂದ ಬಹು ದಿನಗಳಿಂದ ನಿಮ್ಮ ಈ ಆಶ್ರಮದ ಸುತ್ತು ವರಿಯುತ್ತಿರುವೆನು; ಆದರೆ ನಾನು ಈಗ ಅವರನ್ನು ನೋಡಬಯಿಸುವುದಿಲ್ಲ. ನೀವು ನನ್ನನ್ನು ಮಾತ್ರ ಮಾಯೆ ಯಲ್ಲಿ ನೂಕ ಬೇಡಿರಿ. ರತ್ನಾವಳಿಯು ಹೇಳಿದಳು.

ಹೀಗಿದ್ದರೆ ಸೀತಾರಾಮರ ಹತ್ತಿರ ನಡೆ.

ಆಗಲಿ.

ಇಬ್ಬರೂ ಮಂದಿರದಲ್ಲಿ ಪ್ರವೇಶಿಸಿದರು ಸೀತಾರಾಮರಿಗೆ ನಮಸ್ಕಾರ ಮಾಡಿದರು. ಬಳಿಕ ಆಸನಸ್ಥರಾಗಿ ಕುಳಿತರು.. ತುಳಸೀ ದಾಸನು ರತ್ನಾವಳಿಯ ಬಲಗೈಯನ್ನು ತನ್ನ ಎಡಗೈಯಲ್ಲಿ ತಕ್ಕೊಂಡು ಶಕ್ತಿ ಸಂಚಾರವಾಗುವಂತೆ ಮಾಡಹತ್ತಿದನು. ರತ್ನಾವಳಿಯು ನಡುಗ ಹತ್ತಿದಳು. ಕೆಲ ಹೊತ್ತಿನ ಮೇಲೆ ತುಳಸೀದಾಸನು:—"ಈಗ ನಿನಗೆ ಏನು ಕಾಣುತ್ತಿದೆ?" ಎಂದು ಕೇಳಿದನು.

"ಸೀತಾರಾಮರ ಮೂರ್ತಿಗಳು."

ಕಣ್ಣು ಮುಚ್ಚು.

ಮುಚ್ಚಿದ್ದೇನೆ.

ಈಗೇನು ಕಾಣಿಸುತ್ತಿರುವುದು?

ಸೀತಾರಾಮರ ಮೂರ್ತಿಗಳಿಂದ ಒಂದು ಜ್ಯೋತಿಯು ಹೊರ ಹೊರಡುತ್ತಿರುವುದು. ಆ ಜ್ಯೋತಿಯು ಸೀತಾರಾಮರನ್ನು ಆವರಿಸಿ ಬಿಟ್ಟಿತು. ಆ ಸ್ಥಳದಲ್ಲಿ ಗುರುದೇವನ ಮೂರ್ತಿಯು ಒಡಮೂಡುವದ ರಲ್ಲಿದೆ. ರತ್ನಾವಳಿಯು ಹೇಳಿದಳು.

ಚನ್ನಾಗಿ ನೋಡು. ತುಳಸೀದಾಸನೆಂದನು.

ಗುರುದೇವನ ಮೂರ್ತಿಯು ಸ್ಪಷ್ಟವಾಗಿ ಕಾಣುತ್ತಿದೆ. ಕೈ ಬಿಡಿರಿ ನಾನು ಗುರುದೇವನಿಗೆ ನಮಸ್ಕರಿಸುವೆನು. ರತ್ನಾವಳಿಯು ಅಂದಳು.

ಈಗ ಏಳುವುದು ಬೇಡ. ಮನಸ್ಸಿನಲ್ಲಿಯೇ ನಮಸ್ಕರಿಸು. ಮತ್ತೆ ನೋಡು.

ಗುರುದೇವನ ಮೂರ್ತಿಯು ಮತ್ತೆ ಮಸುಮಸುಕಾಗ ಹತ್ತಿತು. ಆ ಸ್ಥಳದಲ್ಲಿ ಮತ್ತೆ ಸೀತಾರಾಮರ ಮೂರ್ತಿಗಳು ಕಾಣಹತ್ತಿವೆ. ಸ್ಪಷ್ಟವಾಗುವುದರಲ್ಲಿವೆ. ಪುನಃ ಸೀತಾರಾಮರು ಒಡೆದು ಕಾಣ ಹತ್ತಿದರು. ಎಂತಹ ಸುಂದರ ರೂಪವಿದು! ಎಂತಹ ಪ್ರೇಮಳ ನೋಟವಿದು! ನೋಡಿ ಧನ್ಯಳಾದೆನು!

ಈಗ ಆ ಸ್ಥಳದಲ್ಲಿ ಗುರುದೇವನು ಕಾಣುವದಿಲ್ಲವೆ? ತುಳಸೀದಾಸನು ಕೇಳಿದನು.

ಇಲ್ಲ. ಗುರುದೇವನ ಸಮಸ್ತ ದೇಹವನ್ನು ಸೀತಾರಾಮರು ವ್ಯಾಪಿಸಿಬಿಟ್ಟಿದ್ದಾರೆ.

ಇದೇ ಗುರುದೇವನ ನಿಜಸ್ವರೂಪವು-ಸತ್ಯಸ್ವರೂಪವು. ತುಳಸೀದಾಸನು ಹೇಳಿದನು.

ಇದೇ ನನ್ನ ಸತ್ಯ-ರೂಪವು. ಗುರುವಿನಲ್ಲಿಯೂ ಇಷ್ಟದೇವನಲ್ಲಿಯೂ ಭೇದವಿಲ್ಲ. ಭೇದವಿರುವುದು ಕೇವಲ ತಿಳುವಳಿಕೆಯಲ್ಲಿ! ಹಿಂದೆ ನಿಂತಿದ್ದ ಜಗನ್ನಾಥದಾಸನು ನುಡಿದನು. ಇಬ್ಬರೂ ಎದ್ದು ಬಂದು ಗುರುದೇವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು.

---

## ಸಂಪೂರ್ಣ

ಆನಂದವನದ ಶ್ರೀ ಕೇಶವಾರ್ಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಭ. ಶ. ಕಾಳೆ
ಇವರಿಂದ ಮುದ್ರಿಸಲ್ಪಟ್ಟಿತು.

# ಶ್ರೀ ಶೇಷಾಚಲ ಗ್ರಂಥಮಾಲೆ, ಆನಂದವನ.

೧ ಉದ್ದೇಶ:—ವ್ಯಕ್ತಿ, ಕುಟುಂಬ, ಜಾತಿ, ಸಮಾಜ, ಧರ್ಮ, ದೇಶ, ರಾಷ್ಟ್ರ, ಸಂಪತ್ತಿ, ಅಧಿಕಾರ, ಸ್ವಾತಂತ್ರ್ಯ ಮುಂತಾದ ಎಲ್ಲ ಬಾಬುಗಳಲ್ಲಿ ಆಬಾಲವೃದ್ಧ ಸ್ತ್ರೀ-ಪುರುಷರೂ ದೇಶ ಕಾಲ ಪರಿಸ್ಥಿತಿಗನುರೂಪವಾಗಿ ತಂತಮ್ಮ ಬುದ್ಧಿ ಶಕ್ತಿಗಳಂತೆ ಹೇಗೆ ನಡೆಯಬೇಕು? ತಮ್ಮ ಸ್ವಂತದ ಹಾಗು ತಮ್ಮ ದೇಶದ ಚಾರಿತ್ರ್ಯವನ್ನು ಹೇಗೆ ಸುಧಾರಿಸಿಕೊಳ್ಳಬೇಕು? ಇಹ-ಪರಗಳಲ್ಲಿ ಸುಖ-ಸಮಾಧಾನಗಳನ್ನು ಹೇಗೆ ಹೊಂದಬೇಕು? ಹಳೇ-ಹೊಸ ಸಂಸ್ಕೃತಿಗಳಲ್ಲಿಯ ನ್ಯೂನಾತಿರೇಕಗಳನ್ನು ಕಳೆದು ಅವುಗಳಲ್ಲಿ ಹೇಗೆ ಐಕ್ಯತೆಯನ್ನುಂಟು ಮಾಡಿ ಉಪಯೋಗಿಸಿಕೊಳ್ಳಬೇಕು? ಮುಂತಾದವುಗಳನ್ನು ಸೋಪಪತ್ತಿಕವಾಗಿಯೂ ಸುಲಭ ಹಾಗು ಮಾರ್ಮಿಕ ರೀತಿಯಿಂದಲೂ ಈ ಗ್ರಂಥಮಾಲೆಯ ಪುಸ್ತಕಗಳ ದ್ವಾರಾ ಪ್ರಕಟಿಸಿ, ಲೋಕಸೇವೆಯನ್ನು ಮಾಡುವದು.

೨ ಧೋರಣ:—ಯಾವದೇ ಒಂದೇ ಬಗೆಯ ವಿಷಯ, ಒಂದೇ ಪ್ರಕಾರದ ಒಲವುಗಳನ್ನು ಅನುಸರಿಸದೆ, ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿಸಿ ಈ ಗ್ರಂಥಮಾಲೆಯ ಮುಖಾಂತರ ಜನರಲ್ಲಿ ಪ್ರಕಟಿಸುವದು. ಈ ಗ್ರಂಥಮಾಲೆಯಲ್ಲಿ ಬರೇ ಕಾದಂಬರಿಗಳೇ ಬರುವವೆಂತಲ್ಲ; ಚರಿತ್ರ, ಪುರಾಣ, ನಾಟಕ, ಶಾಸ್ತ್ರೀಯ, ಆಧ್ಯಾತ್ಮಿಕ ವಿಷಯಗಳೂ ಪ್ರಕಟಿಸಲ್ಪಡುವವು; ಆದರೆ ಆ ಆ ವಿಷಯಗಳು ವಾಚಕರಿಗೆ ಸುಲಭವಾಗಿ ತಿಳಿಯುವ ಬಗ್ಗೆಯೂ, ಪುಸ್ತಕ ವಾಚನದಿಂದ ವಾಚಕರಲ್ಲಿ ಒಂದು ಬಗೆಯ ವಿಶೇಷತರದ ಆಂತರಿಕ ಜಾಗೃತಿಯು ಉಂಟಾಗುವ ಬಗ್ಗೆಯೂ ಹೆಚ್ಚಾಗಿ ಪ್ರಯತ್ನಿಸಲ್ಪಡುವವು.

೩ ಬಾಹ್ಯಾಂಗ:—ಗ್ರಂಥಗಳ ಅಂತರಂಗದಂತೆ ಬಾಹ್ಯಾಂಗದ ಸೌಂದರ್ಯದ ಕಡೆಗೂ ಹೆಚ್ಚಾಗಿ ಪ್ರಯತ್ನಿಸಲಾಗುವದು. ಪ್ರಿಂಟಿಂಗ, ಕಾಗದ, ಬಾಯಿಂಡಿಂಗ, ಚಿತ್ರ ಮುಂತಾದವುಗಳನ್ನು ಗ್ರಂಥಮಾಲೆಯ ಆರ್ಥಿಕಸ್ಥಿತಿಗತಿಗನುಸಾರವಾಗಿ ಮನೋಹರವಾಗುವಂತೆ ಯೋಚಿಸುವೆವು.

೪ ಪ್ರಕಾಶನ:—ವರ್ಷದಲ್ಲಿ ಮೂರುಸಾರೆಗಿಂತ ಹೆಚ್ಚು ಸಾರೆ ಗ್ರಂಥಮಾಲೆಯ ಪುಸ್ತಕಗಳು (ಈಗಿನ ಮಾನದಿಂದಂತೂ) ಪ್ರಕಟಿಸಲಾಗಲಿಕ್ಕಿಲ್ಲ. ಪ್ರತಿಸಾರೆಗೆ ಎರಡು ಬೇರೆ ಬೇರೆ ವಿಷಯದ ಸುಂದರ ಪುಸ್ತಕಗಳು ಹೊರಬೀಳುವವು; ಹಾಗು ಅವೆರಡರ ಬೆಲೆಯೂ ಟ. ಖ. ಸಹಿತ ೨ ರೂ ಗೆ ಎಂದೂ ಮೀರಲಾರದು. ಹೊಸ ಪುಸ್ತಕಗಳು ಹೊರಡುವ ಮೊದಲು ಎಲ್ಲ ಕಾಯಂ ಗ್ರಾಹಕರಿಗೂ ಪತ್ರಮುಖಾಂತರ ತಿಳಿಸಿಯೇ ಯೋಗ್ಯ ರಿಯಾಯತಿಯ ಬೆಲೆಗೆ ವ್ಹಿ. ಪಿ. ಮೂಲಕ ಕಳಿಸಲಾಗುವವು.

೫ ಬೇಡಿಕೆ:—ಶ್ರೀ ಶೇಷಾಚಲ ಗ್ರಂಥಮಾಲೆಯ ಕಾಯಂ ಗ್ರಾಹಕರು ಪ್ರತಿಸಾರೆ ಬೇಡಿಕೆಯ ಪತ್ರಗಳನ್ನು ಬರೆಯುವ ಕಾರಣವಿಲ್ಲ. ಎಲ್ಲಕ್ಕೂ ಮೊದಲು ಕಾಯಂ ಗ್ರಾಹಕರೆಂದು ತಿಳಿಸಿದರೆ ತೀರಿತು. ಪುಸ್ತಗಳು ಹೊರಟ ಮೇಲೆ ಯೋಗ್ಯ ಬೆಲೆಗೆ ವ್ಹಿ. ಪಿ. ಮೂಲಕ ಎಲ್ಲರಿಗೂ ಕಳಿಸಲಾಗುವವು. ಆಗ ಮಾತ್ರ ವ್ಹಿ. ಪಿ. ಸ್ವೀಕರಿಸಲೇ ಬೇಕು. ವ್ಹಿ. ಪಿ. ಪರತ ಬಿಟ್ಟವರಿಗೆ ರಿಯಾಯತಿಯ ಬೆಲೆಗೆ ಪುಸ್ತಕಗಳು ಸಿಗಲಾರವು

೬ ವಿಜ್ಞಾಪನೆ:—ಕನ್ನಡ ಭಾಷಾಭಿಮಾನಿಗಳೂ, ದೇಶಾಭಿಮಾನಿಗಳೂ ಈ ಶ್ರೀ ಶೇಷಾಚಲ ಗ್ರಂಥಮಾಲೆಗೆ ತಾವು ಸ್ವತಃ ಕಾಯಂ ಗ್ರಾಹಕರಾಗುವದಲ್ಲದೆ, ತಮ್ಮ ಇಷ್ಟ-ಮಿತ್ರರನ್ನೂ ಕಾಯಂ ಗ್ರಾಹಕವರ್ಗಕ್ಕೆ ಸೇರಿಸಿ, ಗ್ರಂಥಮಾಲೆಯ ಕಾರ್ಯಕಲಾಪಗಳಿಗೆ ನೆರವಾಗಬೇಕು. ಈ ಸದ್ಬುದ್ಧಿಯನ್ನು ಶ್ರೀ ಶೇಷಾಚಲ ಸದ್ಗುರುವು ಸಕಲರಿಗೂ ಕೊಡಲಿ!

ಸಾಧು ಕಿಂಕರ,

ಆನಂದವನ,<br>ತಾ|| ೧೧-೨-೧೯೩೦

ಭಿ. ಪ. ಕಾಳೆ,<br>ವ್ಯಾ. ಶ್ರೀ ಶೇ. ಗ್ರಂಥಮಾಲೆ.